ಲೋಕಾನುಗ್ರಹಿ

ಮುಹಮ್ಮದ್(ಸ)

ಶೈಖ್ ಮುಹಮ್ಮದ್ ಕಾರಕುನ್ನು

ಪರಮ ದಯಾಮಯನೂ ಕರುಣಾಳುವೂ ಆದ ಅಲ್ಲಾಹನ ನಾಮದಿಂದ

ಪ್ರಕಾಶಕರ ಮಾತು

ಪ್ರವಾದಿ ಮುಹಮ್ಮದ್‌ರನ್ನು(ಸ) ಸರ್ವಲೋಕಗಳಿಗೆ ಅನುಗ್ರಹವನ್ನಾಗಿ ಮಾಡಿ ಕಳಿಸಲಾಗಿದೆಯೆಂದು ಪವಿತ್ರ ಕುರ್‌ಆನ್ ಹೇಳುತ್ತದೆ (ಪವಿತ್ರ ಕುರ್‌ಆನ್, 21:107). ಅವರು ಮಾನವರಿಗೆ ಮಾತ್ರ ಅನುಗ್ರಹವಲ್ಲ, ಪ್ರಾಣಿ-ಪಕ್ಷಿಗಳಿಗೂ ಸಸ್ಯ-ಲತಾದಿಗಳಿಗೂ ಅವರು ಅನುಗ್ರಹವಾಗಿದ್ದಾರೆ. ಪ್ರವಾದಿ ಮುಹಮ್ಮದ್‌ರ(ಸ) ಜೀವನದ ವಿವಿಧ ಮಗ್ಗುಲುಗಳ ಕುರಿತು ವಿದ್ವಾಂಸರು, ಸಾಹಿತಿಗಳು, ಕವಿಗಳು ಬೆಳಕು ಚೆಲ್ಲಿದ್ದಾರೆ. ಚೆಲ್ಲುತ್ತಲೂ ಇದ್ದಾರೆ. ಅವರ ಜೀವನ ಚರಿತ್ರೆಯನ್ನು ವಿಸ್ತಾರವಾಗಿಯೂ ಸಂಕ್ಷಿಪ್ತವಾಗಿಯೂ ಬರೆಯಲಾಗಿದೆ. ಈ ಪ್ರಕ್ರಿಯೆ ಈಗಲೂ ನಡೆಯುತ್ತಾ ಇದೆ. ಮುಂದೆ ಕಿಯಾಮತ್‌ನ ವರೆಗೂ ನಡೆಯುತ್ತಾ ಇರುವುದು.

ಭಾರತದ ಎಲ್ಲ ಪ್ರಾಂತೀಯ ಭಾಷೆಗಳಲ್ಲಿಯೂ ಪ್ರವಾದಿ ಮುಹಮ್ಮದ್‌ರ(ಸ) ಜೀವನದ ಕುರಿತು ಸಾಹಿತ್ಯಗಳು ಪ್ರಕಟವಾಗಿದೆ. 'ಲೋಕಾನುಗ್ರಹಿ ಮುಹಮ್ಮದ್(ಸ)' ಎಂಬ ಈ ಕೃತಿಯನ್ನು ಕೇರಳದ ಪ್ರಸಿದ್ಧ ವಿದ್ವಾಂಸರೂ ವಾಗ್ಮಿಯೂ ಆದ ಶೇಖ್ ಮುಹಮ್ಮದ್ ಕಾರಕುನ್ನು ಮಲಯಾಳದಲ್ಲಿ ರಚಿಸಿದ್ದು, ಸಣ್ಣ ಸಣ್ಣ ಅಧ್ಯಾಯಗಳಲ್ಲಿ ಪ್ರವಾದಿ ಜೀವನದ ವಿವಿಧ ಮಗ್ಗುಲುಗಳನ್ನು ಅನಾವರಣಗೊಳಿಸಿದ್ದಾರೆ. ಪ್ರವಾದಿ ವರ್ಯರು(ಸ) ಮಾಡಿದಂತಹ ಸಮಗ್ರ ಸುಧಾರಣೆಯನ್ನು ಲೋಕದಲ್ಲಿ ಯಾವ ನಾಯಕನೂ ಮಾಡಿಲ್ಲ. ಜೀವನದ ಯಾವ ರಂಗವನ್ನೂ ಅವರು ಸಂಸ್ಕರಿಸದೆ ಬಿಟ್ಟಿಲ್ಲ. ಈ ಕೃತಿಯು ವಾಚಕರ ಮನವನ್ನು ಸೂರೆಗೊಳ್ಳುತ್ತದೆ. ತಮ್ಮ ಜೀವನದ ಸಂಸ್ಕರಣೆ ಹಾಗೂ ಸುಧಾರಣೆಯನ್ನು ಬಯಸುವ ಎಲ್ಲರೂ ಓದಲೇಬೇಕಾದ ಕೃತಿಯಿದು. ಸಲೀಮ್ ಬೋಳಂಗಡಿಯವರು ಇದನ್ನು ಸುಂದರವಾಗಿ ಕನ್ನಡಕ್ಕೆ ಅನುವಾದಿಸಿದ್ದಾರೆ. ಕನ್ನಡ ಸಾಹಿತ್ಯ ಲೋಕಕ್ಕೆ ಇದೊಂದು ಹೊಸ ಸೇರ್ಪಡೆಯಾಗಿದ್ದು ಎಲ್ಲರಿಗೂ ಪ್ರಯೋಜನವಾಗಲೆಂದು ಹಾರೈಸುತ್ತೇವೆ.

ಶಾಂತಿ ಪ್ರಕಾಶನ

ಅನುಕ್ರಮಣಿಕೆ

1. ಸಂದೇಶವಾಹಕನ ಉಗಮ

'ಓದಿರಿ' ದೇವದೂತ ಜಿಬ್ರೀಲ್ ಧ್ಯಾನಾಸಕ್ತ ಮುಹಮ್ಮದರೊಂದಿಗೆ ಆದೇಶಿಸಿದರು. ಅವರು ಮಕ್ಕಾ ನಗರದಿಂದ ಉತ್ತರಕ್ಕೆ ಸುಮಾರು ಮೂರು ಕಿ.ಮೀ ದೂರವಿರುವ ನೂರ್ ಬೆಟ್ಟದ 'ಹಿರಾ' ಎಂಬ ಗುಹೆಯಲ್ಲಿ ಧ್ಯಾನ ಮಗ್ನರಾಗಿದ್ದರು. ಹೀಗೆ ನಲವತ್ತು ವರ್ಷ ತುಂಬುವ ವರೆಗೆ ಆ ಗುಹೆಗೆ ಹೋಗಿ ಧ್ಯಾನ ಮಗ್ನರಾಗುವುದು ಅವರಿಗೆ ವಾಡಿಕೆಯಾಯಿತು. ಮಲಿನಗೊಂಡ ಮಕ್ಕಾ ಸಮಾಜದಿಂದ ಬೇಸತ್ತು ಅವರು ಒಂಟಿಯಾಗಿರಲು ಬಯಸಿದ್ದರು. ಕಳೆದ ನಲವತ್ತು ವರ್ಷಗಳ ಕಾಲ ಜತನದಿಂದ ಕಾಪಾಡಿಕೊಂಡು ಬಂದಿದ್ದ ತನ್ನ ಚಾರಿತ್ರ್ಯಕ್ಕೆ ಧಕ್ಕೆ ಬರದಿರಲೆಂಬ ಅದಮ್ಯ ತುಡಿತ ಅವರಲ್ಲಿತ್ತು. ಆ ದಿವಸದ ವರೆಗೆ ಪಾಪದತ್ತ ಅವರು ಸುಳಿದಿರಲಿಲ್ಲ, ಮಕ್ಕಾ ನಗರವು ಮೂಢನಂಬಿಕೆ, ಅನ್ಯಾಯ, ಅಕ್ರಮ, ಅನಾಚಾರ, ಅಶ್ಲೀಲತೆಯ ಆಗರವಾಗಿತ್ತು.

ಅಂದಿನ ಎಲ್ಲಾ ಯುವಕರಂತೆ ಮುಹಮ್ಮದರೂ ಅನಕ್ಷರಸ್ಥರಾಗಿದ್ದರು. ಜಿಬ್ರೀಲ್ ಓದಲು ಆದೇಶಿಸಿದಾಗ ''ನಾನು ಓದು ಬಲ್ಲವನಲ್ಲ'' ಎಂದು ಯಾವುದೇ ಸಂಕೋಚವಿಲ್ಲದೆ ಉತ್ತರಿಸಿದರು.

ಆಗ ಅವರನ್ನೊಮ್ಮೆ ಜಿಬ್ರೀಲರು ಬಲವಾಗಿ ತಬ್ಬಿಕೊಂಡು ಮತ್ತೊಮ್ಮೆ ಓದಲು ಆದೇಶಿಸಿದರು. ಮುಹಮ್ಮದರು(ಸ) ಅದೇ ಉತ್ತರವನ್ನು ಪುನರಾವರ್ತಿಸಿದರು. ಮೂರನೇ ಬಾರಿಯೂ ಓದಲು ಆದೇಶಿಸಿದಾಗ ಅವರು ಬಹಳ ವಿನೀತರಾಗಿ ''ನಾನು ಏನನ್ನು ಓದಬೇಕು'' ಎಂದು ಕೇಳಿದರು.

ತನ್ನ ಮಾತುಗಳನ್ನು ಕೇಳಲು ಮೈಯೆಲ್ಲಾ ಕಿವಿಯಾಗಿಸಿಕೊಂಡ ಮುಹಮ್ಮದರಿಗೆ ಬಹಳ ಸುಲಲಿತ ಸರಳ ಭಾಷೆಯಲ್ಲಿ ಜಿಬ್ರೀಲ್ ಈ ರೀತಿ ಓದಿ ಕೇಳಿಸಿದರು.

''ಓದಿರಿ, ನಿಮ್ಮನ್ನು ಸೃಷ್ಟಿಸಿದ ನಿಮ್ಮ ಪ್ರಭುವಿನ ನಾಮದೊಂದಿಗೆ, ಅವನು ಹೆಪ್ಪುಗಟ್ಟಿದ ರಕ್ತದ ಒಂದು ಪಿಂಡದಿಂದ ಮಾನವನನ್ನು ಸೃಷ್ಟಿಸಿದನು. ಓದಿರಿ ಮತ್ತು ನಿಮ್ಮ ಪ್ರಭು ಬಹಳ ಉದಾರಿ. ಅವನು ಲೇಖನಿಯ ಮೂಲಕ ವಿದ್ಯೆ ಕಲಿಸಿದನು. ಮಾನವನು ತಿಳಿದಿರದಂತಹ

ಜ್ಞಾನವನ್ನು ಅವನಿಗೆ ದಯಪಾಲಿಸಿದನು.'' (ಪವಿತ್ರ ಕುರ್‌ಆನ್, 96:1-5)

ಹಾಗೆಯೇ ಮೊತ್ತ ಮೊದಲ ಬಾರಿಗೆ ಮುಹಮ್ಮದರು(ಸ) ದಿವ್ಯಸಂದೇಶವನ್ನು ಪಡೆದುಕೊಂಡರು. ಕಳೆದ ನಲವತ್ತು ವರ್ಷಗಳ ಕಾಲ ಸಾಮಾನ್ಯ ಮನುಷ್ಯನಾಗಿದ್ದ ಮುಹಮ್ಮದರು(ಸ) ಅಲ್ಲಾಹನ ಅಂತಿಮ ಪ್ರವಾದಿಯಾಗಿ ಈ ಭೂಮಿಗೆ ನಿಯೋಜಿತರಾದರು. ಸಹಧರ್ಮಿಣಿ ಖದೀಜ ಸ್ನೇಹ ಪೂರ್ವಕವಾಗಿ ಕಟ್ಟಿಕೊಟ್ಟ ಆಹಾರದ ಪೊಟ್ಟಣಗಳೊಂದಿಗೆ ಹಿರಾ ಗುಹೆಗೆ ತೆರಳಿದ ಮುಹಮ್ಮದರು(ಸ) ಅಲ್ಲಿ ದಿವ್ಯ ಸಂದೇಶಗಳ ಜ್ಯೋತಿಯನ್ನು ಹೃದಯದಲ್ಲಿ ಬೆಳಗಿಸಿಕೊಂಡು ತುಟಿಯಲ್ಲಿ ಪವಿತ್ರ ವಚನಗಳನ್ನುಚ್ಚರಿಸುತ್ತಾ ಹೊರಬಂದರು.

❖ ❖ ❖

2. ಸಹಧರ್ಮಿಣಿಯ ಉಪಕಾರ

ಬಾಗಿಲು ತಟ್ಟಿದ ಶಬ್ದ ಕೇಳಿದ ಖದೀಜರು ''ಯಾರು'' ಎನ್ನುತ್ತಾ ಬಾಗಿಲು ತೆರೆಯಲು ಬಂದರು. ಹೌದು ತನ್ನ ಪತಿವರ್ಯರು ಹಿರಾ ಗುಹೆಯಿಂದ ಹಿಂದಿರುಗುವ ಸಮಯ ಇನ್ನೂ ಆಗದ ಕಾರಣ ಅವರು ಈ ರೀತಿ ಪ್ರಶ್ನಿಸಿದ್ದರು.

ಇತ್ತೀಚೆಗೆ ತನ್ನ ಪತಿಯಲ್ಲಿ ಉಂಟಾಗುತ್ತಿರುವ ಕೆಲವು ಬದಲಾವಣೆಯನ್ನು ಅವರು ಸೂಕ್ಷ್ಮವಾಗಿ ಗ್ರಹಿಸಿದ್ದರು. ಹಿಂದೆಂದಿಗಿಂತಲೂ ಈಗ ಹೆಚ್ಚಾಗಿ ಏಕಾಂತತೆಯನ್ನೂ ಜನರಿಂದ ದೂರವಿರಲು ಬಯಸುತ್ತಿದ್ದುದನ್ನೂ ಅವರು ಗಮನಿಸಿದ್ದರು. ಯಾಕೆಂದರೆ ಹಿರಾ ಗುಹೆಗೆ ತೆರಳುವಾಗ ಅವರೇ ಆಹಾರದ ಪೊಟ್ಟಣವನ್ನು ಕಟ್ಟಿ ಕೊಡುತ್ತಿದ್ದುದಲ್ಲವೇ.

''ನಾನು ಕಾಸಿಮ್‌ನ ತಂದೆ'' ಎನ್ನುತ್ತಾ ಬೇಗ ಬಾಗಿಲು ತೆರೆಯಲು ಹೇಳಿದರು.

ಪತಿಯ ಮಾತಿನಲ್ಲಿ ಏನೋ ಒಂದು ರೀತಿಯ ಉದ್ವೇಗವನ್ನು ಅವರು ಗಮನಿಸಿದ್ದರು. ಕೂಡಲೇ ಹೋಗಿ ಆತಂಕದಿಂದ ಬಾಗಿಲು ತೆರೆದರು. ತಕ್ಷಣ ಪ್ರವಾದಿವರ್ಯರು(ಸ) ಮನೆಯೊಳಗೆ ಪ್ರವೇಶಿಸಿದರು. ಪ್ರವಾದಿವರ್ಯರ(ಸ) ಮುಖದಲ್ಲಿ ಭಯ, ಕಣ್ಣುಗಳಲ್ಲಿ ತೀಕ್ಷ್ಣ ಭಾವೋದ್ವೇಗ ತುಂಬಿತ್ತು. ವಿಚಿತ್ರ ರೀತಿಯ ಗಾಬರಿ ಅವರನ್ನು ಆವರಿಸಿತ್ತು.

ತನ್ನ ಪತಿಯನ್ನು ಇಷ್ಟೊಂದು ಉದ್ವೇಗ ಗೊಳಿಸಿದ ಕಾರಣವೇನೆಂದು ಅರಿಯುವ ಕುತೂಹಲದಿಂದ 'ಅಬುಲ್ ಕಾಸಿಮ್ ತಮಗೇನಾಯಿತು' ಎಂದು ಕೇಳಿದರು. ಸಹಧರ್ಮಿಣಿಯು ಕುತೂಹಲ ಭರಿತರಾಗಿ ಆತಂಕದಿಂದ ಕೇಳಿದ ಪ್ರಶ್ನೆಗೆ ಪ್ರವಾದಿ

ವರ್ಯರಿಗೆ(ಸ) ತಕ್ಷಣ ಉತ್ತರಿಸಲಾಗಲಿಲ್ಲ. ಹಿರಾ ಗುಹೆಯಲ್ಲಾದ ಘಟನೆಯ ಆಘಾತದಿಂದ ಅವರು ಇನ್ನೂ ಚೇತರಿಸಿಕೊಂಡಿರಲಿಲ್ಲ. ಆದರೂ ಸ್ವಲ್ಪ ಸಮಯ ಬಳಿಕ ಸಾವರಿಸಿಕೊಂಡು ತನ್ನ ಸಹಧರ್ಮಿಣಿಗೆ ನಡೆದ ವೃತ್ತಾಂತವನ್ನೆಲ್ಲಾ ವಿವರಿಸಿದರು. ಗುಹೆಯಲ್ಲಿರುವಾಗ ಮಾನವ ರೂಪದಲ್ಲಿ ದೇವದೂತ ಜಿಬ್ರೀಲ್ ಪ್ರತ್ಯಕ್ಷಗೊಂಡ ತನ್ನೊಂದಿಗೆ ಓದಲು ಆಜ್ಞಾಪಿಸಿದ್ದನ್ನೂ ಅದಕ್ಕೆ ತಾನು ನೀಡಿದ ಉತ್ತರವನ್ನು ವಿವರಿಸಿದರು. ಬಳಿಕ ದೇವದೂತರು ಹೇಳಿಕೊಟ್ಟ ವಚನಗಳನ್ನೂ ಓದಿ ಕೇಳಿಸಿದರು. ಎಲ್ಲವನ್ನೂ ಬಹಳ ಶಾಂತಚಿತ್ತದಿಂದ ಆಲಿಸಿದ ಖದೀಜರು ಈ ರೀತಿ ಹೇಳಿದರ ''ಪ್ರಿಯತಮಾ, ಸಂತೋಷ ಪಡಿರಿ, ಮನಸ್ಸನ್ನು ಗಟ್ಟಿಗೊಳಿಸಿರಿ. ತಮ್ಮ ಆತ್ಮವು ಯಾ ಕೈಯಲ್ಲಿದೆಯೋ ಅವನ ಆಣೆ. ತಾವು ಈ ಜನರ ಸಂದೇಶವಾಹಕರಾಗಿರುತ್ತೀ ಎಂದು ನಾನು ನಿರೀಕ್ಷಿಸುತ್ತೇನೆ. ದೇವನು ನಿಮ್ಮನ್ನು ಖಂಡಿತಾ ಅವಮಾನಿಸಲಾರನು ನಿಮ್ಮನ್ನು ಆತ ಸಂಕಷ್ಟಕ್ಕೀಡು ಮಾಡಲಾರನು. ನೀವು ಕುಟುಂಬ ಸಂಬಂಧವನ್ನು ಬೆಳೆಸುತ್ತೀರಿ. ಸತ್ಯವನ್ನು ಮಾತ್ರ ನುಡಿಯುತ್ತೀರಿ. ಬಡವರಿಗೆ ನೆರವಾಗುತ್ತೀರಿ. ಅತಿಥಿ ಸತ್ಕಾರ ಮಾಡುತ್ತೀರಿ. ಸತ್ಯದ ಗೆಲುವಿಗೆ ಶ್ರಮಿಸುತ್ತೀರಿ. ಯಾವುದೇ ತಪ್ಪನ್ನು ತಾವು ಎಸಗಿಲ್ಲ. ಎಲ್ಲವೂ ಒಳ್ಳೆಯದಕ್ಕಾಗಿದೆ ಎಂಬ ವಿಶ್ವಾಸ ನನಗಿದೆ'' ಎಂದು ಪ್ರವಾದಿ ವರ್ಯರನ್ನು(ಸ) ಸಾಂತ್ವನಪಡಿಸಿ ಧೈರ್ಯ ತುಂಬಿದರು.

❖ ❖ ❖

3. ಪ್ರಕಾಶ ಹರಿದು ಬಂದ ಹಾದಿ

ಪ್ರವಾದಿ ಮುಹಮ್ಮದರು(ಸ) ತನ್ನ ಪತ್ನಿ ಖದೀಜರ ಜೊತೆ ನಮಾಝಿನಲ್ಲಿ ನಿರತರಾಗಿದ್ದರು. ಪ್ರವಾದಿವರ್ಯರು(ಸ) ತಮ್ಮ ಬಳಿಯಲ್ಲಿರುವವರು ಕೇಳಿಸುವಂತ ಮೆಲು ಧ್ವನಿಯಲ್ಲಿ ನಮಾಝಿನಲ್ಲಿ ಕುರ್‌ಆನ್ ಪಠಿಸುತ್ತಿದ್ದರು. ಈರ್ವರೂ ನಮಾಝ್ ಮಾಡುತ್ತಿರುವುದನ್ನು ಬಹಳ ಶ್ರದ್ಧೆಯಿಂದ ಹತ್ತಿರದಲ್ಲಿದ್ದ ಬಾಲಕ ಅಲೀ ನೋಡುತ್ತಿದ್ದರು. ಅಲೀ(ರ) ಪ್ರವಾದಿವರ್ಯರ(ಸ) ಚಿಕ್ಕಪ್ಪ ಅಬೂತಾಲಿಬ್‌ರ ಪುತ್ರ. ಅವರು ಬಾಗುವುದನ್ನು ಹಣೆಯನ್ನು ನೆಲಕ್ಕೆ ತಾಗಿಸಿ ಸಾಷ್ಟಾಂಗವೆರಗುವುದನ್ನು ತದೇಕಚಿತ್ತದಿಂದ ವೀಕ್ಷಿಸುತ್ತಿದ್ದರು.

ತನ್ನ ಚಿಕ್ಕಪ್ಪನ ಪುತ್ರ ಮುಹಮ್ಮದ್‌ರ(ಸ) ಕುರಿತು ಅಲೀಯವರಿಗೆ ವಿಪರೀತ ಪ್ರೀತಿ ಗೌರವವಿತ್ತು. ಕಳೆದ ಕೆಲವಾರು ವರ್ಷಗಳಿಂದ ಅವರು ಜೊತೆಯಾಗಿ ಜೀವಿಸುತ್ತಿದ್ದರು. ಹೀಗೆ ಜೀವಿಸಲು ಪ್ರವಾದಿವರ್ಯರು(ಸ) ಅಲೀಯವರಿಗೆ ಅವಕಾಶ ಒದಗಿಸಿದ್ದರು.

ಅಲೀಯವರಿಗೆ ಅನೇಕ ಮಂದಿ ಸಹೋದರರಿದ್ದರು. ಮಕ್ಕಾ ಭೀಕರ ಬರಗಾಲಕ್ಕೆ ತುತ್ತಾಗಿದ್ದ ಸಂದರ್ಭದಲ್ಲಿ ತನ್ನ ಚಿಕ್ಕಪ್ಪ ಅಬ್ಬಾಸ್‌ರನ್ನು ಭೇಟಿಯಾಗಿ ಪ್ರವಾದಿವರ್ಯರು(ಸ) ಇಂತೆಂದರು. ''ನೋಡಿ, ನಿಮ್ಮ ಸಹೋದರ ಅಬೂತಾಲಿಬ್‌ರಿಗೆ ತುಂಬಾ ಮಕ್ಕಳಿದ್ದಾರೆ. ಅವರು ತುಂಬಾ ದಾರಿದ್ರ್ಯವನ್ನು ಎದುರಿಸುತ್ತಿದ್ದಾರೆ. ಅವರ ಸಮಸ್ಯೆಗಳನ್ನು ಪರಿಹರಿಸಲು ನಮ್ಮಿಂದ ಸಾಧ್ಯವಿದೆ. ಅವರ ಮಕ್ಕಳಲ್ಲಿ ಓರ್ವನ ಸಂರಕ್ಷಣೆ ನಾನು ವಹಿಸುತ್ತೇನೆ. ಮತ್ತೋರ್ವನನ್ನು ನೀವು ಸಂರಕ್ಷಣೆ ಮಾಡಿಕೊಳ್ಳಬೇಕೆಂದರು. ಅದರಂತೆ ಅಲೀಯವರು ಪ್ರವಾದಿ ಮುಹಮ್ಮದ್‌ರ(ಸ) ಬಳಿ ಸೇರಿದರು. ಪ್ರವಾದಿವರ್ಯರೊಂದಿಗೆ(ಸ) ಜೊತೆಯಾಗಿ ಜೀವಿಸಿದ ಅಲೀಯವರು ಪ್ರವಾದಿ ವರ್ಯರ(ಸ) ಅಂತರಂಗವನ್ನೂ ಅರಿತಿದ್ದರು. ಜೀವನದಲ್ಲಿ ಒಮ್ಮೆಯೂ ಸುಳ್ಳು ಹೇಳದ ಪ್ರವಾದಿವರ್ಯರು(ಸ) ಯಾರನ್ನೂ ವಂಚಿಸಲಿಲ್ಲ, ಯಾರ ಹಕ್ಕನ್ನೂ ಕಬಳಿಸಿಲ್ಲ, ಯಾರಿಗೂ ಅನ್ಯಾಯವೆಸಗಿಲ್ಲ. ಇವೆಲ್ಲವನ್ನೂ ಸೂಕ್ಷ್ಮವಾಗಿ ಅರಿತ ಅಲೀಯವರು ಬಹಳ ಏಕಾಗ್ರಚಿತ್ತದಿಂದ ಪ್ರವಾದಿವರ್ಯರು(ಸ) ಏನು ಮಾಡುತ್ತಿದ್ದಾರೆಂದು ಆಕಾಂಕ್ಷೆಯಿಂದ ನಮಾಝನ್ನು ದಿಟ್ಟಿಸುತ್ತಿದ್ದರು. ಅದರೊಂದಿಗೆ ಪ್ರವಾದಿವರ್ಯರು(ಸ) ಮೆಲುದನಿಯಲ್ಲಿ ಉಚ್ಚರಿಸುತ್ತಿರುವ ಕುರ್‌ಆನಿನ ಸೂಕ್ತಗಳು ಅಲೀಯವರನ್ನು ತೀವ್ರವಾಗಿ ಆಕರ್ಷಿಸಿತ್ತು. ಅದಕ್ಕಾಗಿಯೇ ಪ್ರವಾದಿವರ್ಯರು(ಸ) ನಮಾಝ್ ಮುಗಿಸುವ ತನಕ ಕಾದು ನಿಂತರು. ಬಳಿಕ ಪ್ರವಾದಿವರ್ಯರೊಂದಿಗೆ ''ನೀವು ಇದು ವರೆಗೆ ಏನು ಮಾಡುತ್ತಿದ್ದಿರಿ'' ಎಂದು ಕೇಳಿದರು.

ಕೂಡಲೇ ಪ್ರವಾದಿವರ್ಯರು(ಸ) ತಾನು ದೇವನ ಸಂದೇಶವಾಹಕನಾಗಿ ನಿಯೋಜಿತಗೊಂಡದ್ದೂ ತಾನು ನಿರ್ವಹಿಸಿದ ನಮಾಝಿನ ಕುರಿತೂ ಸಂಕ್ಷಿಪ್ತವಾಗಿ ವಿವರಿಸಿದರು. ಒಟ್ಟಿನಲ್ಲಿ ಇಸ್ಲಾಮಿನ ಪರಿಚಯ ಮಾಡಿಸಿದರು. ಎಲ್ಲವನ್ನೂ ಬಹಳ ಗಮನವಿಟ್ಟು ಆಲಿಸಿದ ಆ ಹುಡುಗ ನಿದ್ದೆ ಮಾಡಲೆಂದು ಹೊರಟನು. ಆದರೆ ಆ ರಾತ್ರಿ ಅಲಿಯವರು ನಿದ್ರಿಸಲಿಲ್ಲ, ಮರುದಿನದ ಮುಂಜಾನೆಯ ನಿರೀಕ್ಷೆಯಲ್ಲಿದ್ದರು, ಪ್ರವಾದಿವರ್ಯರ(ಸ) ಸಂದೇಶವು ಅವರನ್ನು ಪ್ರಭಾವಿತಗೊಳಿಸಿತ್ತು. ಬೆಳಗಾದ ಕೂಡಲೇ ನೇರವಾಗಿ ಪ್ರವಾದಿವರ್ಯರ(ಸ) ಬಳಿಗೆ ಸಾಗಿದರು. ತಾನು ಇಸ್ಲಾಮ್ ಸ್ವೀಕರಿಸಿರುವುದಾಗಿ ಸಾರಿದರು. ಆಗ ಅಲಿಯವರಿಗೆ ಹನ್ನೊಂದರ ಹರೆಯ. ಆದರೂ ತನ್ನ ತಂದೆ ತಾಯಿಯ ಅನುಮತಿಗೂ ಕಾಯದೆ ಪ್ರವಾದಿವರ್ಯರ(ಸ) ಹಾದಿಯನ್ನು ಅನುಸರಿಸಿದ್ದರು. ಆ ಬಾಲಕ ಪ್ರವಾದಿವರ್ಯರ(ಸ) ಮೇಲೆ ಅಷ್ಟೊಂದು ನಂಬಿಕೆಯಿರಿಸಿದ್ದ ತಂದೆ ಅಬೂತಾಲಿಬ್‌ರ ಅನುಮತಿ ಪಡೆಯಬಹುದಿತ್ತಲ್ಲಾ ಎಂದು ಕೆಲವರು ಕೇಳಿದಾಗ ಅಲಿಯವರು ''ಅವರೊಂದಿಗೆ ಕೇಳಿ ಅಲ್ಲಾಹನು ನನ್ನನ್ನು ಸೃಷ್ಟಿಸಿಲ್ಲ ತಾನೆ? ಆದ ಕಾರಣ ಅಲ್ಲಾಹನ ಮಾರ್ಗವನ್ನು ಅನುಸರಿಸಲು ಅವರ

ಅರ್ಪಣೆ ಪಡೆಯುವ ಅಗತ್ಯವಿಲ್ಲವೆಂದರು.

ಇಸ್ಲಾಮ್ ಸ್ವೀಕರಿಸಿದ ಮೊತ್ತ ಮೊದಲ ಬಾಲಕ ಎಂಬ ಹೆಗ್ಗಳಿಕೆ ಅಲೀಯವರಿಗಿ ಆದರೆ ಅವರ ತಂದೆ ಅಬೂತಾಲಿಬ್ ತನ್ನ ಮರಣದ ವರೆಗೂ ತ ಆಚಾರ-ವಿಚಾರಗಳಿಂದ ಹೊರಬಂದಿರಲಿಲ್ಲ. ಅವರು ಅದರಲ್ಲೇ ಗಟ್ಟಿಯಾಗಿ ನಿಂತಿ ತಮ್ಮಿಬ್ಬರ ವಿಶ್ವಾಸದ ಕುರಿತು ಅವರಲ್ಲಿ ವೈರುಧ್ಯಗಳಿದ್ದರೂ ಅದು, ಅವರ ನಡುವೆಯಿ ಅಪಾರ ವಾತ್ಸಲ್ಯ ಸಂಬಂಧದ ಮೇಲೆ ಯಾವುದೇ ಪರಿಣಾಮ ಬೀರಿರಲಿಲ್ಲ. ಹಾ ಚಿಕ್ಕಪ್ಪ ಹಾಗೂ ಪುತ್ರ ಸಂಬಂಧವೂ ಸುದೃಢವಾಗಿತ್ತು.

❖ ❖ ❖

4. ಅಲಿಯುವರ ಬೆಂಬಲ ಹಾಗೂ ಕುರೈಶರ ಅಣ

ಬಹಿರಂಗವಾಗಿ ಸಂದೇಶ ಪ್ರಚಾರ ನಡೆಸಬೇಕೆಂದು ದೇವನಿಂದ ಆದೇಶ ಬಂ ಕೂಡಲೇ ಮನೆಯಲ್ಲಿ ಪ್ರವಾದಿವರ್ಯರು(ಸ) ಸತ್ಕಾರ ಕೂಟವೊಂದ ಏರ್ಪಡಿಸಿದರು. ಈ ಸತ್ಕಾರ ಕೂಟಕ್ಕೆ ಆಪ್ತ ಸಂಬಂಧಿಕರನ್ನು ಆಹ್ವಾನಿಸಿದ್ದರು. ಅ ಸಂಬಂಧಿಕರೆಲ್ಲರೂ ಬಂದು ಸೇರಿದರು. ಪ್ರವಾದಿವರ್ಯರು(ಸ) ಅವರ ಮಧ್ಯೆ ಎ ನಿಂತು, ''ನಿಮಗಾಗಿ ನಾನು ತಂದಿರುವುದಕ್ಕಿಂತ ಉತ್ತಮವಾದುದನ್ನು ಜನತೆಂ ಬಳಿಗೆ ತಂದವರು ಯಾರೂ ಇರಲಿಕ್ಕಿಲ್ಲ ಎಂದು ಹೇಳಿದರು.''

'ಇಹಲೋಕ ಹಾಗೂ ಉತ್ತಮವಾದ ಪರಲೋಕವನ್ನು ನಾನು ನಿಮಗಾ ತಂದಿರುವೆನು. ನಿಮ್ಮನ್ನು ಆ ವಿಜಯದ ಹಾದಿಯತ್ತ ಕೊಂಡೊಯ್ಯಲು ದೇವ ನನಗೆ ಆಜ್ಞಾಪಿಸಿರುತ್ತಾನೆ. ಈ ವಿಷಯದಲ್ಲಿ ನನ್ನನ್ನು ಬೆಂಬಲಿಸುವವರು ಯಾರಿದ್ದಾ ಎಂದು ಕೇಳಿದರು.

ಪ್ರವಾದಿವರ್ಯರ(ಸ) ಈ ಬಹಿರಂಗ ಆಹ್ವಾನವನ್ನು ಕೇಳಿ ಸೇರಿದವರೇ ಅದನ್ನು ಅಣಕಿಸುತ್ತಾ ಮೂದಲಿಸುತ್ತಾ ನಿರ್ಲಕ್ಷಿಸಿ ತೆರಳಿದರು. ಆಗ ಅವರೆಲ್ಲರಿಗಿ ವ್ಯತಿರಿಕ್ತವಾಗಿ ಕಾರ್ಯೋನ್ಮುಖವಾದವರು ಅಲೀ ಬಿನ್ ಅಬೂತಾಲಿಬ್‌ರಾಗಿದ್ದಾ ಬಾಲಕನಾಗಿದ್ದ ಅಲೀ ಎದ್ದು ನಿಂತು ಉಚ್ಚ ಸ್ವರದಲ್ಲಿ ಹೇಳಿದರು. ''ದೇವ ಸಂದೇಶವಾಹಕರೇ, ತಮ್ಮ ಬೆಂಬಲಕ್ಕೆ ನಾನಿದ್ದೇನೆ. ತಾವು ಯಾರೊಂದಿಗೆಲ್ಲಾ ಯು ಮಾಡುತ್ತೀರೋ ಅವರ ವಿರುದ್ಧ ನಾನೂ ಯುದ್ಧ ಮಾಡುತ್ತೇನೆ.''

ಅಲೀಯವರ ಉತ್ಸಾಹ ಭರಿತ ಹೇಳಿಕೆಯನ್ನು ಕುರೈಶ್ ನಾಯಕರು ಅಣಕಿಸು ವ್ಯಂಗ್ಯವಾಗಿ ಶಪಿಸಿದರು. ❖

5. ಸಫಾ ಬೆಟ್ಟದಲ್ಲಿ

'ಈ ಬೆಟ್ಟದ ಇನ್ನೊಂದು ಭಾಗದಿಂದ ನಿಮ್ಮನ್ನು ಆಕ್ರಮಿಸಲು ಒಂದು ಸಶಸ್ತ್ರ ೕನೆಯು ಧಾವಿಸುತ್ತಿದೆ ಎಂದು ನಾನು ಹೇಳಿದರೆ ನೀವು ಅದನ್ನು ನಂಬುತ್ತೀರಾ!'' ಎಂದು ಮಕ್ಕಾದ ಸಫಾ ಬೆಟ್ಟದ ಮೇಲೇರಿ ನಿಂತು ಪ್ರವಾದಿವರ್ಯರು(ಸ) ಕೇಳಿದರು. ಅವರ ಮುಂದೆ ಆಗ ಕುರೈಶಿ ಗೋತ್ರದ ಜನರ ಸಮೂಹವೇ ಸೇರಿತ್ತು. ಅವರೆಲ್ಲರನ್ನೂ ಅವರು ಅಲ್ಲಿಗೆ ಕರೆದಿದ್ದರು.

''ನಿಶ್ಚಯವಾಗಿಯೂ ನಿಮ್ಮ ಮೇಲೆ ವಿಶ್ವಾಸವಿರಿಸದೆ ಇರಲು ನಮ್ಮಲ್ಲಿ ಯಾವುದೇ ಕಾರಣವಿಲ್ಲ, ಯಾಕೆಂದರೆ ನೀವು ಇದುವರೆಗೆ ಸುಳ್ಳು ಹೇಳಿರುವುದನ್ನು ನಾವು ಕೇಳಿಯೇ ಇಲ್ಲ, ನೀವು ಅಮೀನ್ ಹಾಗೂ ಸಾದಿಕ್(ಪ್ರಾಮಾಣಿಕ, ಸತ್ಯಸಂಧ) ಆಗಿರುವಿರಿ ಎಂದು ಅವರು ಒಕ್ಕೊರಳಿನಿಂದ ಹೇಳಿದರು. ಪ್ರವಾದಿವರ್ಯರ(ಸ) ಸತ್ಯಸಂಧತೆಯ ಕುರಿತು ಅವರಿಗೆ ಸ್ವಲ್ಪವೂ ಆಶಂಕೆ ಇರಲಿಲ್ಲ. ಸತ್ಯಸಂಧತೆಗೆ ವಿರುದ್ಧವಾಗಿಯೋ ಅಥವಾ ಅಪ್ರಾಮಾಣಿಕವಾಗಿಯೋ ಪ್ರವಾದಿವರ್ಯರು(ಸ) ವರ್ತಿಸಿದ ಒಂದೇ ಒಂದು ಘಟನೆ ಅವರು ಕೇಳಿರುವ, ನೋಡಿರುವ ಉದಾಹರಣೆ ಇರಲಿಲ್ಲ. ಪ್ರಾಮಾಣಿಕ ಎಂಬರ್ಥ ಬರುವ ''ಅಲ್‌ಅಮೀನ್'' ಎಂಬ ಹೆಸರಿನಿಂದ ಅವರು ಅಲ್ಲಿ ಚಿರಪರಿಚಿತರಾಗಿದ್ದರು.

ತನ್ನ ಪ್ರಾಮಾಣಿಕತೆಯ ಬಗ್ಗೆ ಖಾತ್ರಿ ಪಡಿಸಿದ ಬಳಿಕ ಪ್ರವಾದಿವರ್ಯರು(ಸ) ಈ ರೀತಿ ಹೇಳಿದರು. ''ಅಲ್ಲಾಹನಿಂದೊದಗುವ ಅತೀ ಕಠಿಣ ಶಿಕ್ಷೆಯ ಬಗ್ಗೆ ನಾನು ಎಚ್ಚರಿಸುವವನಾಗಿದ್ದೇನೆ. ನನ್ನ ಆಪ್ತ ಬಂಧುಗಳಿಗೆ ಈ ಮುನ್ಸೂಚನೆ ನೀಡುವಂತೆ ನನಗೆ ಅಲ್ಲಾಹನು ಆದೇಶಿಸಿದ್ದಾನೆ. ಆದ್ದರಿಂದ ಅಲ್ಲಾಹನಲ್ಲದೆ ಅನ್ಯ ಆರಾಧ್ಯರಿಲ್ಲ ಎಂದು ಸಾಕ್ಷ್ಯ ವಹಿಸಿರಿ. ನೀವು ಈ ಮಾತನ್ನು ತಿರಸ್ಕರಿಸಿ ಧಿಕ್ಕರಿಸಿದರೆ ನಿಮಗೆ ಈ ಲೋಕದಲ್ಲಿ ಏನಾದರೂ ಅಲ್ಲಾಹನಿಂದ ಕೊಡಿಸಲು ಅಥವಾ ಪರಲೋಕದಲ್ಲಿ ನಿಮಗೇನಾದರೂ ವಿಜಯ ದೊರೆಯಬಹುದೆಂಬ ಖಾತ್ರಿ ನೀಡಲು ನನ್ನಿಂದ ಸಾಧ್ಯವಿಲ್ಲ.

ಇದನ್ನು ಕೇಳಿದ ಕೂಡಲೇ ಪ್ರವಾದಿವರ್ಯರ(ಸ) ಚಿಕ್ಕಪ್ಪ ಅಬೂಲಹಬ್ ಕೆರಳಿ ಕೆಂಡಾಮಂಡಲವಾದನು.

ಆತ ''ನೀನು ನಾಶವಾಗಿ ಹೋಗು. ಇದನ್ನು ಕೇಳಿಸಲು ನಮ್ಮನ್ನು ಇಲ್ಲಿ ಒಟ್ಟು ಸೇರಿಸಿದೆಯಾ'' ಎಂದು ಗದರಿಸಿದ.

ಹಾಗೆಯೇ, ಪ್ರವಾದಿವರ್ಯರ(ಸ) ಬಹಿರಂಗ ಸಂದೇಶ ಪ್ರಚಾರಕ ಆರಂಭದಲ್ಲಿಯೇ ಚಿಕ್ಕಪ್ಪ ಅಬೂಲಹಬ್ ತಡೆಯೊಡ್ಡಿದ್ದ. ಆದರೆ ಸ್ವಲ್ಪವೂ ನಿರಾಶರಾಗದ ಪ್ರವಾದಿವರ್ಯರು(ಸ) ಯಾವುದೇ ಅಳುಕಿಲ್ಲದೆ ತನ್ನ ಜವಾಬ್ದಾರಿಯನ್ನು ನಿಭಾಯಿಸ ತೊಡಗಿದರು.

❖ ❖ ❖

6. ಆಮಿಷಗಳು ವ್ಯರ್ಥವಾದಾಗ

ನಿರಂತರ ಅಕ್ರಮ, ಅನ್ಯಾಯ, ಹಿಂಸೆಯ ಮುಖಾಂತರ ಪ್ರವಾದಿ ಮುಹಮ್ಮದ್(ಸ) ಹಾಗೂ ಅವರ ಸಂಗಾತಿಗಳ ಮನಃಪರಿವರ್ತನೆ ಮಾಡಲು ಸಾಧ್ಯವಿಲ್ಲವೆಂದು ಅರಿತ ಮಕ್ಕಾದ ಮುಶ್ರಿಕರು ಆಮಿಷದ ಮುಖಾಂತರ ಅವರನ್ನು ದಾರಿ ತಪ್ಪಿಸಲು ಪ್ರಯತ್ನಿಸ ತೊಡಗಿದರು. ಅದರಂತೆ ಮಕ್ಕಾದ ಮುಶ್ರಿಕರ ಪ್ರತಿನಿಧಿಯಾಗಿ ಉತ್‌ಬಾ ಬಿನ್ ರಬೀಅ ಪ್ರವಾದಿವರ್ಯರನ್ನು(ಸ) ಭೇಟಿಯಾದನು. ಪ್ರವಾದಿವರ್ಯರನ್ನುದ್ದೇಶಿಸಿ(ಸ) ''ಸಹೋದರ ಪುತ್ರಾ, ನಮ್ಮ ಮಧ್ಯೆ ನಿನಗಿರುವ ಗೌರವಾದರಗಳ ಕುರಿತು ನಿನಗೆ ತಿಳಿದೇ ಇದೆ. ವಂಶದ ದೃಷ್ಟಿಯಿಂದಲೂ ನೀನೊಂದು ಉತ್ತಮ ಗೌರವಾನ್ವಿತ, ಪ್ರತಿಷ್ಠಿತ ಕುಟುಂಬಕ್ಕೆ ಸೇರಿದವನು. ಆದರೆ ಈಗ ನೀನು ಮಾಡುತ್ತಿರುವುದು ನಮ್ಮ ಕುಟುಂಬ ವರ್ಗಗಳಿಗೇ ಅಪಾಯ ತಂದೊಡ್ಡುವಂತಹ ಆತಂಕಕಾರೀ ಕಾರ್ಯವಾಗಿದೆ. ಅದು ಅವರ ನಡುವೆ ಒಡಕಿಗೆ ಕಾರಣವಾಗಿದೆ. ಆದ್ದರಿಂದ ನಾನು ಹೇಳುತ್ತಿರುವುದನ್ನು ಸ್ವಲ್ಪ ಗಮನವಿಟ್ಟು ಕೇಳು. ನಾನು ನಿನಗೆ ಹಿತಕರವಾದ ಕೆಲವು ಸಲಹೆಗಳನ್ನು ನೀಡುತ್ತೇನೆ. ಹೊಸ ಧರ್ಮದ ಮುಖಾಂತರ ಸಂಪತ್ತು ಗಳಿಸುವುದು ನಿನ್ನ ಉದ್ದೇಶವೆಂದಾದರೆ ನೀನು ಅರೇಬಿಯಾದ ಅತಿದೊಡ್ಡ ಶ್ರೀಮಂತನಾಗಿ ಬಿಡುವಷ್ಟು ಸಂಪತ್ತನ್ನು ನಿನಗೆ ಕೊಡಿಸುವ ಹೊಣೆ ನನ್ನದು. ಇನ್ನು ನೀನು ನಾಯಕತ್ವವನ್ನು ಬಯಸುವುದಾದರೆ ನಾವೆಲ್ಲರೂ ಬಹಳ ಸಂತೋಷದಿಂದ ನಿನ್ನನ್ನು ನಮ್ಮ ಸರದಾರನನ್ನಾಗಿ ಆಯ್ಕೆ ಮಾಡುವೆವು. ನಿನ್ನ ಇಚ್ಛೆಗೆ ವಿರುದ್ಧವಾಗಿ ನಾವೆಂದೂ ನಡೆಯಲಾರೆವು. ಇನ್ನು ನೀನು ಅಧಿಕಾರ ಬಯಸುವುದಾದರೆ ನಿನ್ನನ್ನೇ ನಾವು ನಮ್ಮೆಲ್ಲರ ದೊರೆಯನ್ನಾಗಿ ಸ್ವೀಕರಿಸುತ್ತೇವೆ; ಇನ್ನು ಸುಂದರಿಯಾದ ಹೆಣ್ಣೊಬ್ಬಳನ್ನು ವಿವಾಹವಾಗ ಬಯಸುವುದು ನಿನ್ನ ಉದ್ದೇಶವೆಂದಾದರೆ ಅರೇಬಿಯಾದಲ್ಲಿ ಅತ್ಯಂತ ಸುಂದರಿಯೂ ಸ್ಫುರದ್ರೂಪಿಯಾದ ಯುವತಿಯೊಂದಿಗೆ ವಿವಾಹ ಮಾಡಿ ಕೊಡುತ್ತೇವೆ. ಇನ್ನು ನಿನಗೆ ಯಕ್ಷ ಸೋಂಕೇನಾದರೂ ತಗಲಿರುವುದಾದರೆ ಹೇಳು. ಅದನ್ನು ನಿವಾರಿಸಲು ಸಾಧ್ಯವಾಗದಿದ್ದರೆ ಮಂತ್ರವಾದಿಯೊಬ್ಬರನ್ನು ಕರೆಸಿ ಅದನ್ನು

ಓಲಗಿಸುತ್ತೇವೆ. ಅವೆಲ್ಲದರ ಖರ್ಚು ವೆಚ್ಚವನ್ನು ನಾವೇ ಭರಿಸುತ್ತೇವೆ'' ಎಂದು ಕೇಳಿದನು.

ಉತ್ಬಾನ ಆಮಿಷಗಳನ್ನೆಲ್ಲಾ ಗಮನವಿಟ್ಟು ಆಲಿಸಿದ ಪ್ರವಾದಿವರ್ಯರು(ಸ) ಪವಿತ್ರ ಕುರ್‌ಆನಿನ 41ನೇ ಅಧ್ಯಾಯವಾದ ಹಾಮ್ಮೀಮ್ ಅಸ್ಸಜ್‌ದವನ್ನು ಪಠಿಸ ತೊಡಗಿದ್ದರು. ಆತ್ಯಾಕರ್ಷಕವಾದ ಆ ಪವಿತ್ರ ವಚನಗಳನ್ನು ಉತ್‌ಬಾ ಬಹಳ ಶಾಂತಚಿತ್ತದಿಂದ ಆಲಿಸಿದನು. ಬಳಿಕ ಪ್ರವಾದಿವರ್ಯರ(ಸ) ದೌತ್ಯದ ಉದ್ದೇಶ ಅಧಿಕಾರಕ್ಕಾಗಿಯೋ ಹೆಣ್ಣಿಗಾಗಿಯೋ ಅಲ್ಲ ಎಂಬುದು ಆತನಿಗೆ ಮನವರಿಕೆಯಾಯಿತು. ಪ್ರವಾದಿವರ್ಯರ(ಸ) ಕುರ್‌ಆನ್ ಪಠಣಕ್ಕೆ ಆತ ಮಂತ್ರ ಮುಗ್ಧನಾಗಿದ್ದ. ನಿರಾಕರಿಸಲಾಗದ ಸತ್ಯವನ್ನು ಅವರು ಹೇಳುತ್ತಿದ್ದಾರೆಂದೂ ವಿಜಯದ ಹಾದಿಯೆಡೆಗೆ ಅವರು ಜನರನ್ನು ಆಹ್ವಾನಿಸುತ್ತಿದ್ದಾರೆಂದೂ ಉತ್ಬಾನ ಮನದ ಅಂತರಾಳ ಹೇಳಿತು. ಆತ ಪ್ರವಾದಿವರ್ಯರೊಂದಿಗೆ ಮರು ಮಾತಾಡಲಾಗದೆ ಎದ್ದು ನೇರವಾಗಿ ಕುರೈಶರ ಬಳಿಗೆ ಸಾಗಿದ. ಅಲ್ಲಿ ಅವರನ್ನುದ್ದೇಶಿಸಿ ''ಆ ಮುಹಮ್ಮದ್‌ನನ್ನು ಆತನ ಪಾಡಿಗೆ ಬಿಟ್ಟುಬಿಡಿರಿ. ಅರಬರೇ ಅವನನ್ನು ಎದುರಿಸಲಿ. ಒಂದು ವೇಳೆ ಅರಬರು ಅವನ ವಿರುದ್ಧ ಜಯಗಳಿಸಿದರೆ ಅದರೊಂದಿಗೆ ಸಮಸ್ಯೆ ಪರಿಹಾರವಾದಂತೆ ಅಥವಾ ಮುಹಮ್ಮದ್ ಜಯಿಸಿದ್ದೇ ಆದರೆ ಅದರ ಹೆಗ್ಗಳಿಕೆ ಕುರೈಶರಾದ ನಮ್ಮದಲ್ಲವೇ?'' ಎಂದು ಹೇಳಿದನು.

ಆದರೆ ಉತ್ಬಾನ ಅಭಿಪ್ರಾಯ ಪ್ರವಾದಿವರ್ಯರ(ಸ) ಶತ್ರುಗಳನ್ನು ತೃಪ್ತಿ ಪಡಿಸಲಿಲ್ಲ, ಬದಲು ಅವರ ದ್ವೇಷ ಇನ್ನಷ್ಟು ಹೆಚ್ಚಾಯಿತು. ಆದರೂ ಲೌಕಿಕ ಸುಖಾಡಂಬರವನ್ನು ಬಯಸಿ ಪ್ರವಾದಿವರ್ಯರು(ಸ) ಈ ದೌತ್ಯಕ್ಕೆ ಇಳಿದಿಲ್ಲ ಎಂಬ ಸತ್ಯ ಕುರೈಶ್ ಸರದಾರರಿಗೆ ಮನವರಿಕೆಯಾಯಿತು.

❖ ❖ ❖

7. ಯಾಸಿರ್ ಕುಟುಂಬವೇ ಸಹನೆ ವಹಿಸಿರಿ

ವೃದ್ಧರಾದ ಯಾಸಿರ್ ಅವರ ಪತ್ನಿ ಸುಮಯ್ಯ ಹಾಗೂ ಅವರ ಪುತ್ರ ಅಮ್ಮಾರ್ ಎಂಬ ಮೂವರನ್ನು ಹೊಂದಿದ ಚಿಕ್ಕ ಕುಟುಂಬವಾಗಿತ್ತದು. ಅವರು ಮೂವರೂ ಮಕ್‌ಝೂಮ್ ಗೋತ್ರದ ಗುಲಾಮರಾಗಿದ್ದರು.

ಯೌವನದ ಚೈತನ್ಯದ ಪ್ರತೀಕವಾಗಿದ್ದ ಅಮ್ಮಾರ್ ಆ ಕುಟುಂಬದಲ್ಲಿ ಮೊದಲು ಇಸ್ಲಾಮ್ ಸ್ವೀಕರಿಸಿದರು. ಬಳಿಕ ಅವರ ಮುಖಾಂತರ ಅವರ ತಂದೆ ಯಾಸಿರ್

ಹಾಗೂ ತಾಯಿ ಸುಮಯ್ಯ ಮುಸ್ಲಿಮರಾದರು. ಮೂವರೂ ಇಸ್ಲಾಮ್ ಸ್ವೀಕರಿಸಿದ್ದನ್ನು ಕೇಳಿದ ಮಕ್‌ಝೂಮ್ ಗೋತ್ರಜರು ಕೋಪದಿಂದ ಕನಲಿದರು. ಅವರು ಈ ಮೂವರ ಮೇಲೆ ತೀವ್ರತರದ ದೌರ್ಜನ್ಯ ನಡೆಸಿದರು. ಬೆಂಕಿಯ ಕಾವಿನಿಂದ ಕುದಿಯುತ್ತಿದ್ದ ಯುದ್ಧ ಕವಚಗಳನ್ನು ಯಾಸಿರ್‌ರಿಗೆ ತೊಡಿಸಿದರು. ತಲೆಯನ್ನು ನೀರಿನಲ್ಲಿ ಮುಳುಗಿಸಿ ಉಸಿರುಗಟ್ಟಿಸ ತೊಡಗಿದರು. ಸುಮಯ್ಯರನ್ನು ಅಂಗಾತ ಮಲಗಿಸಿ ಅವರ ಎದೆಯ ಮೇಲೆ ಭಾರವಾದ ಕಲ್ಲನ್ನು ಎತ್ತಿ ಇಟ್ಟು ಸುಡು ಮರಳಿನಲ್ಲಿ ಎಳೆದಾಡಿದರು. ಅವರ ಗುಪ್ತಾಂಗಕ್ಕೆ ಕಬ್ಬಿಣದ ಸಲಾಕೆಯಿಂದ ಚುಚ್ಚಿದರು. ಪುತ್ರ ಅಮ್ಮಾರ್‌ರನ್ನೂ ಅವರು ಸುಮ್ಮನೆ ಬಿಡಲಿಲ್ಲ. ತನ್ನ ಅನುಯಾಯಿಗಳು ಕಠಿಣ ತರದ ಹಿಂಸೆ ಅನುಭವಿಸುತ್ತಿರುವಾಗ ಪ್ರವಾದಿವರ್ಯರು(ಸ) ಏನೂ ಮಾಡಲಾಗದೆ ನೋಡುತ್ತಾ ನಿಲ್ಲಬೇಕಾಯಿತು. ಅಲ್ಲಿ ಆ ಮೂವರನ್ನುದ್ದೇಶಿಸುತ್ತಾ ಪ್ರವಾದಿವರ್ಯರು(ಸ) ''ಯಾಸಿರ್ ಕುಟುಂಬವೇ ತಾಳ್ಮೆ ವಹಿಸಿರಿ. ಖಂಡಿತವಾಗಿಯೂ ಸ್ವರ್ಗವು ನಿಮ್ಮ ನೆಲೆಯಾಗಿದೆ.'' ಯಾಸಿರ್ ಹಾಗೂ ಸುಮಯ್ಯರು ಹುತಾತ್ಮರಾಗುವ ಮೂಲಕ ಪ್ರವಾದಿವರ್ಯರ(ಸ) ಮಾತುಗಳು ಕೆಲವೇ ಕ್ಷಣಗಳಲ್ಲಿ ನಿಜವಾಯಿತು.

❖ ❖ ❖

8. ಗುಲಾಮನ ಸಂಕೋಲೆ ಕಳಚಿತು

ಏನದು ನೀನು ಹೇಳುತ್ತಾ ಇದ್ದದ್ದು ಏನು ಎಂದು ಉಮಯ್ಯ ಅಬ್ಬರಿಸಿದ. ಅಂದು ಉಮಯ್ಯ ಕೋಪದಿಂದ ಕೆಂಡಾಮಂಡಲವಾಗಿದ್ದನೆಂದು ಆತನ ಮುಖಭಾವವೇ ಹೇಳುತ್ತಿತ್ತು.

ಉಮಯ್ಯ ಮಕ್ಕಾದ ಪ್ರಸಿದ್ಧ ಶ್ರೀಮಂತರಲ್ಲಿ ಓರ್ವನಾಗಿದ್ದ. ಆತನ 12 ಮಂದಿ ಗುಲಾಮರಲ್ಲಿ ಬಿಲಾಲ್ ಕೂಡಾ ಸೇರಿದ್ದರು.

ಅವರ ಇಸ್ಲಾಮ್ ಸ್ವೀಕಾರದ ಸುದ್ದಿ ಉಮಯ್ಯನನ್ನು ಕೆರಳಿಸಿತ್ತು. ಈ ವಿಚಾರ ಅವನಿಗೆ ದಾರುನ್ನದ್‌ವಾದಲ್ಲಿ ತಿಳಿಯಿತು. ಅದು ಸಾಮಾನ್ಯವಾಗಿ ಪ್ರವಾದಿವರ್ಯರ(ಸ) ವಿರುದ್ಧ ಕುರೈಶರು ಕುತಂತ್ರಗಳನ್ನು ಸಂಚುಗಳನ್ನು ಹೆಣೆಯುತ್ತಿದ್ದ ಸ್ಥಳವಾಗಿತ್ತು. ಬಿಲಾಲ್‌ರ ಇಸ್ಲಾಮ್ ಸ್ವೀಕಾರವನ್ನು ಖಚಿತ ಪಡಿಸಿದ ಬಳಿಕ ಆತ ''ಇಂದು ಆ ನೀಚನ ಇಸ್ಲಾಮನ್ನು ಕೊನೆಗಾಣಿಸದೆ ಸೂರ್ಯ ಮುಳುಗುವುದಿಲ್ಲ'' ಎಂದು ಪ್ರತಿಜ್ಞೆ ಮಾಡಿ ಬಂದಿದ್ದ.

''ನಾನು ದೇವ ವಚನಗಳನ್ನು ನುಡಿಯುತ್ತಿದ್ದೆ'' ಎಂದು ಬಿಲಾಲ್ ಶಾಂತಚಿತ್ತರಾಗಿ

ನುಡಿದರು.

ಏನೋ ಯಾರೋ ಆ ನಿನ್ನ ದೇವ? ಅದು ಮಾತನಾಡಲು ತೊಡಗಿದ್ದು ಯಾವಾಗ?'' ಎಂದು ಗರ್ಜಿಸಿದನು.

ಅದು ದೇವನು ತನ್ನ ದಾಸನೂ ಸಂದೇಶವಾಹಕನೂ ಆದ ಮುಹಮ್ಮದ್‌ರ(ಸ) ಮುಖಾಂತರ ಅವತರಿಸಲ್ಪಟ್ಟ ಪವಿತ್ರ ಗ್ರಂಥದ ವಚನಗಳಾಗಿವೆ'' ಎಂದು ಬಿಲಾಲ್ ನಿಸ್ಸಂಕೋಚವಾಗಿ ಹೇಳಿದರು.

''ಹುಚ್ಚುಚ್ಚು ಮಾತಾಡದಿರು.''

''ನಿಶ್ಚಯವಾಗಿಯೂ ಅವನು ನನ್ನ ಪರಿಪಾಲಕ ಪ್ರಭು'' ಎಂದು ವಿನಯದಿಂದ ದೃಢ ಸ್ವರದಲ್ಲಿ ಹೇಳಿದರು.

''ಯಾರೋ ಆ ನಿನ್ನ ರಕ್ಷಕ ಪರಿಪಾಲಕ.''

''ಆಕಾಶವನ್ನು ಭೂಮಿಯನ್ನು ಅವುಗಳ ಮಧ್ಯೆ ಇರುವ ಎಲ್ಲವನ್ನೂ ಸೃಷ್ಟಿಸಿದ ಮಹಾನನು.''

''ಹಾಗಾದರೆ ನೀನು ನಮ್ಮ ದೇವರುಗಳನ್ನು ಕೈ ಬಿಟ್ಟೆಯಾ! ಹೋಗಿ ಹೋಗಿ ಆತನ ಅನುಯಾಯಿಯಾಗಿ ಬಿಟ್ಟೆಯಾ'' ಎಂದು ಉಮಯ್ಯ ಅಬ್ಬರಿಸಿದ.

''ಅಲ್ಲಾಹನು ನನಗೆ ಸನ್ಮಾರ್ಗ ಸಿದ್ಧಿಯಾಗುವಂತೆ ಮಾಡಿದ'' ಎಂದು ಬಿಲಾಲ್ ಹೇಳಿದರು. ಬಿಲಾಲ್‌ರ ಮಾತು ಮುಗಿಯುವ ಮೊದಲೇ ಚಾಟಿಯನ್ನು ಹಿಡಿದುಕೊಂಡು ಉಮಯ್ಯ ಎದ್ದು ನಿಂತನು. ಬಿಲಾಲ್‌ರ ದೇಹದ ಮೇಲೆ ಆ ಚಾಟಿ ಅನೇಕ ಬಾರಿ ಅಪ್ಪಳಿಸಿತು. ಅವರ ಮುಖ ಬೆನ್ನು ಶರೀರಗಳು ಒಡೆದು ರಕ್ತ ಚಿಮ್ಮಿತು.

ಗುಲಾಮನಿಗೆ ತನಗಿಷ್ಟ ಬಂದ ನಿರ್ಧಾರ ತೆಗೆದುಕೊಳ್ಳಬಾರದೆಂಬುದು ನಿನಗೆ ತಿಳಿದಿಲ್ಲವೇ? ಒಡೆಯನಿಗಿಷ್ಟವಿಲ್ಲದ ಧರ್ಮವನ್ನು ಅನುಸರಿಸಲು ನಿನಗೆ ಅವಕಾಶವಿಲ್ಲ, ನೀನು ನನ್ನ ಅಧೀನದಲ್ಲಿರುವ ಗುಲಾಮನಾಗಿರುವೆ. ಆದ್ದರಿಂದ ನಾನು ಪೂಜಿಸುವ ದೇವನನ್ನು ನೀನು ಅನುಸರಿಸಬೇಕು, ಪೂಜಿಸಬೇಕು. ನಾನು ಬಯಸುವುದನ್ನು ನಿನ್ನಿಂದ ಮಾಡಿಸುವೆನು. ನೀನು ನನ್ನಿಷ್ಟದಂತೆ ನಡೆಯಬೇಕು. ನೀನು ಯಾವುದರ ಮೇಲೆ ವಿಶ್ವಾಸವಿಡಬೇಕೆಂಬುದನ್ನು ತೀರ್ಮಾನಿಸುವವನು ನಾನು. ಅದರಂತೆ ನೀನು ನಡೆಯಬೇಕು'' ಎಂದು ಉಮಯ್ಯ ಘೋಷಿಸಿದನು.

''ನಾನು ನಿಮ್ಮ ಗುಲಾಮನಾಗಿದ್ದೇನೆ ಎಂಬುದರಲ್ಲಿ ಸಂಶಯವಿಲ್ಲ, ನಿಮಗೆ ಏನು ಬೇಕೋ ಅದನ್ನು ನನ್ನಿಂದ ಮಾಡಿಸುತ್ತೀರಿ. ಹಾಗೆಯೇ ನೀವು ಹೇಳಿದ್ದನ್ನು

ನಾನು ಅನುಸರಿಸಬೇಕು ಎಂಬುದು ನನಗೆ ತಿಳಿದಿದೆ. ಆದರೆ ನಿಮಗೆ ನನ್ನ ದೇಹದ ಮೇಲೆ ಮಾತ್ರ ಅವಕಾಶವಿರುವುದು. ನನ್ನ ಆತ್ಮದ ಮೇಲಾಗಲೀ ನನ್ನ ಮನಸ್ಸಿನ ಮೇಲಾಗಲೀ ನಿಮಗೆ ಅಧಿಪತ್ಯ ಸ್ಥಾಪಿಸಲು ಅವಕಾಶವಿಲ್ಲ. ಅಲ್ಲಿ ಏನಿರಬೇಕೆಂಬುದು ಯಾವುದರ ಮೇಲೆ ವಿಶ್ವಾಸವಿಡಬೇಕೆಂದು ನಿರ್ಧರಿಸುವ ಹಕ್ಕು ನನಗಿದೆಯೇ ಹೊರತು ಇನ್ನಾರಿಗೂ ಇಲ್ಲ. ಏನಾದರೂ ಅವಿಶ್ವಾಸವನ್ನು ನನ್ನ ಮನಸ್ಸಿನ ಮೇಲೆ ಬಲವಂತವಾಗಿ ಹೇರಲು ಯಾರಿಂದಲೂ ಸಾಧ್ಯವಿಲ್ಲ. ಯಾರಿಗೂ ಅಧಿಕಾರವೂ ಇಲ್ಲ.''

''ನೀನು ಆಧರ್ಮದಿಂದ ಮರಳಿ ಬರುವುದು ನಿನಗೆ ಕ್ಷೇಮ. ಇಲ್ಲದಿದ್ದರೆ ಆ ಮುಹಮ್ಮದ್(ಸ) ಮಲಿನಗೊಳಿಸಿದ ನಿನ್ನ ಆತ್ಮವನ್ನೂ ಕಳೆದುಕೊಳ್ಳಬೇಕಾದೀತು'' ಎಂದು ಬೆದರಿಸಿದನು.

''ಮುಹಮ್ಮದ್(ಸ) ನನ್ನ ಆತ್ಮವನ್ನು ಸಂಸ್ಕರಿಸಿದ್ದಾರೆಯೇ ಹೊರತು ಮಲಿನಗೊಳಿಸಿಲ್ಲ'' ಎಂದುತ್ತರಿಸಿದರು.

''ಏನು ನೀನು ನನ್ನನ್ನು ಧಿಕ್ಕರಿಸುತ್ತಿರುವೆಯಾ? ನನ್ನ ಆಜ್ಞೆಯನ್ನು ಉಲ್ಲಂಘಿಸುವೆಯಾ?''

''ಸರ್ವಶಕ್ತನಾದ ಅಲ್ಲಾಹನನ್ನು ಅನುಸರಿಸುವಾಗ ಅಗತ್ಯವೆಂದಾದರೆ ತಮ್ಮ ಮಾತುಗಳನ್ನೂ ಉಲ್ಲಂಘಿಸಬೇಕಾಗುತ್ತದೆ.''

''ನಿನ್ನ ಅಧಿಕ ಪ್ರಸಂಗ ನಿಲ್ಲಿಸು, ನೀನು ನಿನ್ನ ಹೊಸ ಧರ್ಮವನ್ನು ತೊರೆಯದಿದ್ದರೆ ನೋಡು ಗಂಭೀರ ಪರಿಣಾಮ ಎದುರಿಸಬೇಕಾಗುವುದು.''

''ನೀವು ನನ್ನನ್ನು ತುಂಡು ತುಂಡು ಮಾಡಿ ಕೊಂದರೂ ನಾನು ಮಾತ್ರ ಆ ಸತ್ಯಧರ್ಮದಿಂದ ಹಿಂಜರಿಯಲಾರೆ. ಸನ್ಮಾರ್ಗ ದೊರೆತ ಬಳಿಕ ದುರ್ಮಾರ್ಗವನ್ನು ಅನುಸರಿಸುವುದು ಸಾಧ್ಯವಿಲ್ಲ'' ಬಿಲಾಲ್ ದೃಢ ಸ್ವರದಲ್ಲಿ ಹೇಳಿದರು. ಬಳಿಕ ಬಿಲಾಲ್ ತೀವ್ರ ತರದ ಹಿಂಸೆಗಳಿಗೆ ಮರ್ದನಗಳಿಗೆ ಗುರಿಯಾದರು. ನಡು ಮಧ್ಯಾಹ್ನದ ಸುಡು ಬಿಸಿಲಿನಲ್ಲಿ ಅಂಗಾತ ಮಲಗಿಸಿ ಎದೆಯ ಮೇಲೆ ಭಾರವಾದ ಕಲ್ಲುಗಳನ್ನಿಟ್ಟು ಕೊರಳಿಗೆ ಹಗ್ಗ ಹಾಕಿ. ಅದು ಹೇಗಿತ್ತೆಂದರೆ ನಾಯಿಯ ಶವವನ್ನು ಎಳೆದು ಕೊಳಚೆ ಗುಂಡಿಗೆ ಎಸೆಯುವಂತೆ ಎಳೆದಾಡಿದರು. ಚಾಟಿಯೇಟಿನಿಂದಲೂ ಜರ್ಝರಿತವಾದ ದೇಹದಲ್ಲಿ ಮುಳ್ಳುಗಳಿಂದ ಚುಚ್ಚಿದ ಗುರುತುಗಳೂ ಕಾಣುತ್ತಿದ್ದವು. ನೋವಿನಿಂದ ಬಿಲಾಲ್‌ರ ಶರೀರವು ಚಡಪಡಿಸುತ್ತಿತ್ತು. ಆಗಲೂ ಅವರ ತುಟಿಯಿಂದ ''ಅಲ್ಲಾಹು ಅಹದ್''(ಅಲ್ಲಾಹನು ಏಕನು) ''ಅಲ್ಲಾಹು ಅಹದ್'' ಎಂಬ ಸ್ವರವು ಕೇಳಿ ಬರುತ್ತಿತ್ತು.

ಉಮಯ್ಯ ಮತ್ತು ಸಂಗಡಿಗರು ಬಿಲಾಲ್‌ರ ಮೇಲೆ ನಾನಾ ರೀತಿಯ ದೌರ್ಜನ್ಯ ವೆಸಗಿದರು. ಸತ್ಯಧರ್ಮವನ್ನು ತೊರೆಯಲು ನಿರಂತರ ಪೀಡಿಸಿದರು. ಆದರೆ ಅವರ ಪ್ರಯತ್ನಗಳೆಲ್ಲವೂ ವ್ಯರ್ಥವಾಗುತ್ತಿತ್ತು. ಬಿಲಾಲ್‌ರು ಎಲ್ಲವನ್ನೂ ಬಹಳ ಧೈರ್ಯದಿಂದ ಎದುರಿಸಿದರು. ಅಸಾಮಾನ್ಯವಾದ ಸಹನೆಯನ್ನು ಪ್ರದರ್ಶಿಸಿದರು. ಅಬೂಬಕರ್‌ರವರು ಅವರನ್ನು ಖರೀದಿಸಿ ಗುಲಾಮಗಿರಿಯಿಂದ ವಿಮೋಚನೆಗೊಳಿಸುವ ವರೆಗೆ ಇದು ನಿರಂತರ ಮುಂದುವರಿದಿತ್ತು. ಎಂತಹ ಮರ್ದನ, ದೌರ್ಜನ್ಯವನ್ನು ನಡೆಸಿದರೂ ತಮ್ಮ ಮಾರ್ಗದಿಂದ ಒಂದಿಂಚೂ ಕದಲದೆ ಸತ್ಯಮಾರ್ಗದಲ್ಲಿ ಅಚಲವಾಗಿ ನಿಂತ ಇಂತಹ ಅನೇಕ ವೀರರನ್ನು ಶೂರರನ್ನು ತಯಾರಿಸಲು ಪ್ರವಾದಿವರ್ಯರಿಗೆ(ಸ) ಸಾಧ್ಯವಾಯಿತು ಎಂಬುದು ಅವರಿಗೆ ದೊರೆತ ಮಹಾ ಯಶಸ್ಸಾಗಿದೆ.

❖ ❖ ❖

9. ಕೆಡುಕನ್ನು ಒಳಿತಿನಿಂದ ತಡೆಯಬಹುದು

ತನ್ನ ಆಪ್ತ ಸಂಬಂಧಿಕರ ಹಾಗೂ ಸಂಗಾತಿಗಳ ಸಂರಕ್ಷಣೆ ಪ್ರವಾದಿವರ್ಯರಿಗಿದ್ದರೂ(ಸ) ವಿರೋಧಿಗಳ ತೀವ್ರತರದ ಉಪಟಳಗಳಿಗೆ ಪ್ರವಾದಿವರ್ಯರು(ಸ) ಗುರಿಯಾದರು. ಅಬೂಲಹಬನ ಪತ್ನಿ ಉಮ್ಮು ಜಮೀಲ್ ಪ್ರವಾದಿವರ್ಯರ(ಸ) ಮನೆಯ ಮುಂದೆ ತ್ಯಾಜ್ಯ ಮಲಿನ ವಸ್ತುಗಳನ್ನು ದಿನವೂ ಹಾಕುತ್ತಿದ್ದಳು. ಅವರು ನಡೆದಾಡುವ ದಾರಿಗೆ ಮುಳ್ಳು ಕಂಟಿಗಳನ್ನು ಹಾಸಲೂ ಅವಳು ಹಿಂಜರಿಯುತ್ತಿರಲಿಲ್ಲ.

ಒಮ್ಮೆ ಪ್ರವಾದಿವರ್ಯರು(ಸ) ನಮಾಝ್‌ನಲ್ಲಿ ಸಾಷ್ಟಾಂಗದಲ್ಲಿ(ಸುಜೂದ್) ನಿರತರಾಗಿದ್ದಾಗ ಅಬೂಜಹಲ್ ವಿಗ್ರಹಗಳಿಗೆ ಅರ್ಪಿಸಲೆಂದು ಕಡಿದ ಒಂಟೆಗಳ ಕರುಳುಗಳನ್ನು ತಂದು ಅವರ ಕೊರಳಿಗೆ ಹಾಕಿದನು. ಅದರ ಭಾರದಿಂದಾಗಿ ಪ್ರವಾದಿವರ್ಯರಿಗೆ(ಸ) ಸುಜೂದ್‌ನಿಂದ ಮೇಲೇಳಲು ಸಾಧ್ಯವಾಗಲಿಲ್ಲ. ಇದನ್ನು ನೋಡಿದ ಮಗಳು ಫಾತಿಮಾ ಆ ಕರುಳುಗಳನ್ನು ಅವರ ಕೊರಳಿನಿಂದ ತೆಗೆದ ಬಳಿಕವೇ ಪ್ರವಾದಿವರ್ಯರು(ಸ) ಸಾಷ್ಟಾಂಗದಿಂದ ಮೇಲೆದ್ದರು. ಇಂತಹ ಅನೇಕ ತರದ ತೀವ್ರ ಆ ಹಿಂಸೆ, ಉಪಟಳಗಳಿಗೆ ಪ್ರವಾದಿವರ್ಯರ(ಸ) ಮತ್ತವರ ಸಂಗಾತಿಗಳ ಉತ್ತರ ಸಹನೆ-ಸಂಯಮವಾಗಿತ್ತು. ಅವರು ಅದರಿಂದ ಕೆರಳುವುದಾಗಲೀ ಪ್ರತೀಕಾರ ಮನೋಭಾವ ತಾಳುವುದಾಗಲೀ ಮಾಡಲಿಲ್ಲ. ಕುರ್‌ಆನಿನ ಸೂಕ್ತ ಕೂಡಾ ಅದನ್ನೇ ಹೇಳುತ್ತಿದೆಯಲ್ಲವೇ?

ಒಳಿತು ಮತ್ತು ಕೆಡುಕು ಎಂದಿಗೂ ಸರಿಸಮಾನವಾಗಲಾರದು. ಕೆಡುಕನ ಒಳಿತಿನ ಮೂಲಕ ನಿವಾರಿಸಿರಿ. ಆಗ ನಿಮ್ಮೊಂದಿಗೆ ಶತ್ರುತ್ವ ಹೊಂದಿದವನೂ ಆತ್ಮೀಯ ಮಿತ್ರನಾಗುವುದನ್ನು ನೀವು ಕಾಣುವಿರಿ. ಈ ಗುಣವು ಸಹನಶೀಲರಿಗಲ್ಲದೆ ಇನ್ನಾರಿಗು ಲಭ್ಯವಾಗುವುದಿಲ್ಲ, ಈ ಸ್ಥಾನವು ಮಹಾ ಅದೃಷ್ಟಶಾಲಿಗಳ ಹೊರತು ಇನ್ನಾರಿಗು ಪ್ರಾಪ್ತವಾಗುವುದಿಲ್ಲ. (ಹಾಮ್ಮೀಮ್ ಅಸ್ಸಜ್ದಾ 34,35

❖ ❖ ❖

10. ಅದೃಶ್ಯ ನೆರವು

ಅಬೂಜಹಲ್ ಪ್ರವಾದಿವರ್ಯ(ಸ) ವಿರೋಧಿಗಳಲ್ಲಿ ಪ್ರಮುಖನಾಗಿದ್ದ, ಒಂದ ದಿನ ತನ್ನ ಸ್ನೇಹಿತರಾದ ಕುರೈಶರನ್ನುದ್ದೇಶಿಸುತ್ತಾ "ಮುಹಮ್ಮದ್ ನಮಾಝಿನ ನಿರತನಾಗಿರುವಾಗ ನಾನು ಆತನ ಮೇಲೆ ಭಾರವಾದ ಬಂಡೆಯನ್ನು ಎತ್ತಿ ಹಾಕುವ ಅದು ಅವನ ತಲೆಯನ್ನು ಛಿದ್ರಗೊಳಿಸುವುದು, ಮತ್ತೆ ನಮಗೆ ಅವನಿಂದ ಕಿರುಕು ಉಂಟಾಗದು.

ಅಬೂಜಹಲ್ ತನ್ನ ಈ ನಿರ್ಧಾರವನ್ನು ಈಡೇರಿಸಲೆಂದು ಭಾರವಾ ಕಲ್ಲೊಂದನ್ನು ಎತ್ತಿಕೊಂಡು ಕಅಬಾದ ಬಳಿಗೆ ಬಂದು ಕಾದು ನಿಂತನು. ಆ ಪ್ರವಾದಿವರ್ಯರು(ಸ) ಅಲ್ಲಿಗೆ ಬಂದರು. ಅವರು ನಮಾಝಿನ ನಿರತನಾಗುತ್ತಿರುವಂತೆ ಬಂಡೆಕಲ್ಲನ್ನು ಎತ್ತಿ ಪ್ರವಾದಿವರ್ಯರ(ಸ) ಬಳಿಗೆ ಸಾಗಿದನು ಏನು ನಡೆಯಬಹುದೆಂಬ ಕುತೂಹಲದಿಂದ ಕುರೈಶರು ಅನತಿ ದೂರದಲ್ಲಿ ನಿಂತ ನೋಡುತ್ತಿದ್ದರು. ಅವರಲ್ಲಿ ಆತಂಕ, ಕುತೂಹಲ ಎರಡೂ ಮನೆ ಮಾಡಿತ್ತು ಪ್ರವಾದಿವರ್ಯರು(ಸ) ಸಾಷ್ಟಾಂಗದಲ್ಲಿ ನಿರತರಾಗಿರುವಂತೆ ಅಬೂಜಹಲ್ ಭಾರವಾದ ಕಲ್ಲನ್ನೆತ್ತಿಕೊಂಡನು. ಒಂದೆರಡು ಅಡಿ ಮುಂದೆ ಹೋಗಿ ಓಲಾಡುತ್ತ ಮತ್ತೆ ಹೆದರಿ ಹಿಂದೆ ಸರಿದ. ಅಬೂಜಹಲ್ ಹೆದರಿ ಕಂಪಿಸುತ್ತಿದ್ದ, ಪ್ರವಾದಿವರ್ಯರ(ಸ ಕಥೆ ಮುಗಿಸುವುದನ್ನು ಪ್ರತ್ಯಕ್ಷ್ಯವಾಗಿ ನೋಡಬೇಕೆಂದು ಉಸಿರು ಬಿಗಿ ಹಿಡಿದ ಕಾಯುತ್ತಿದ್ದ ಕುರೈಶರು ಬೆಚ್ಚಿದರು.

ಅವರು ಇದರಿಂದ ತೀವ್ರ ನಿರಾಶೆ ಅನುಭವಿಸಿದರೂ ಅಬೂಜಹಲ್‌ನ ಅವ ನೋಡಿದಾಗ ಅವರಿಗೆ ನಗು ಮಾತ್ರ ತಡೆದಿರಿಸಲಾಗಲಿಲ್ಲ,

❖ ❖ ❖

11. ದೌತ್ಯದ ಗುರಿ

ಅರಬರಿಗೆ ತೀರಾ ಅಪರಿಚಿತವಾದ ವಿಶೇಷವಾದ ಆದರ್ಶ ವಿಶ್ವಾಸವೊಂದನ್ನು ಪ್ರವಾದಿ ಮುಹಮ್ಮದ್(ಸ) ಮತ್ತವರ ಅನುಚರರು ಅನುಸರಿಸಿದ್ದರು. ಆದ್ದರಿಂದ ಅವರಿಗೆ ಹೊಸತಾದ ಈ ಧರ್ಮದ ಸಂದೇಶ ಪ್ರಚಾರವು ಅವರನ್ನು ರೊಚ್ಚಿಗೆಬ್ಬಿಸಿತ್ತು. ನಮ್ಮ ಕುಲ ದೇವತೆಗಳನ್ನು ನಿಂದಿಸುತ್ತಾ ನಮ್ಮ ಪರಂಪರೆಯನ್ನೇ ಪ್ರಶ್ನಿಸುತ್ತಾ, ನಮ್ಮ ಆಚಾರ-ವಿಚಾರಗಳನ್ನು ಅಂಗೀಕರಿಸದ ಮುಹಮ್ಮದ್ ಮತ್ತವರ ಸಂಗಾತಿಗಳನ್ನು ನಿರ್ಮೂಲನ ಮಾಡಬೇಕೆಂದು ಅವರು ಪಣ ತೊಟ್ಟರು. ಹೊಸ ಧರ್ಮವನ್ನು ಅಳಿಸಿ ಪ್ರವಾದಿವರ್ಯರನ್ನೇ(ಸ) ಮುಗಿಸಲು ಅವರು ತೀವ್ರತರದ ಪ್ರಯತ್ನ ನಡೆಸಿದರು.

ಆದರೆ ಪ್ರವಾದಿ(ಸ) ಮತ್ತವರ ಸಂಗಾತಿಗಳು ವಿರೋಧಿಗಳ ಎಲ್ಲ ದೌರ್ಜನ್ಯಗಳನ್ನೂ ಸಹನೆಯಿಂದಲೇ ಎದುರಿಸಿದರು. ಸಾಧ್ಯವಾದಷ್ಟು ಸಂಯಮ ಪಾಲಿಸಿದರು. ಅದರಿಂದ ಮುಕ್ತಿ ಹೊಂದಲು ಬಯಸಿದರು. ವಿಶೇಷವಾಗಿ ಅವರಲ್ಲಿದ್ದ ಅತೀ ದುರ್ಬಲರು.

ಒಮ್ಮೆ ಪ್ರವಾದಿವರ್ಯರು(ಸ) ಕಅಬಾದ ನೆರಳಿನಲ್ಲಿ ವಿಶ್ರಮಿಸುತ್ತಿದ್ದರು. ಆಗ ಅವರ ಅನುಚರರಲ್ಲಿದ್ದ ಕೆಲವರು ಪ್ರವಾದಿವರ್ಯರೊಂದಿಗೆ(ಸ) ''ತಮ್ಮ ಈ ದಯನೀಯ ಸ್ಥಿತಿಯ ಕುರಿತು ಹೇಳುತ್ತಾ, ಪ್ರವಾದಿಗಳೇ ತಾವು ನಮಗಾಗಿ ಅಲ್ಲಾಹನಲ್ಲಿ ಪ್ರಾರ್ಥಿಸುವುದಿಲ್ಲವೇ?'' ಎಂದು ಕೇಳಿದರು. ಅದಕ್ಕೆ ಪ್ರವಾದಿವರ್ಯರು(ಸ) ನಾನು ಪ್ರಾರ್ಥಿಸುತ್ತೇನೋ ಇಲ್ಲವೋ ಎಂದು ಹೇಳಲು ಹೋಗಲಿಲ್ಲ, ಬದಲಾಗಿ ಅವರ ಉತ್ಸಾಹ, ಆವೇಶ ಪುಟಿದೇಳುವಂತೆ ಮಾಡಿದರು. ಅವರು ಹೇಳಿದರು. ''ನಿಮಗಿಂತ ಹಿಂದೆ ಗತಿಸಿ ಹೋದವರನ್ನು ಗರಗಸದಿಂದ ಸೀಳಿ ಅವರ ದೇಹಗಳನ್ನು ತಲೆಗಳನ್ನು ಕೊಯ್ದು ಬಿಡುತ್ತಿದ್ದರು. ಅವರ ಮಾಂಸದ ಮತ್ತು ಎಲುಬುಗಳ ಮೇಲೆ ಕಬ್ಬಿಣದ ಬಾಚಣಿಕೆಯಿಂದ ಬಾಚಿ ಮಾಂಸಗಳನ್ನು ಎಳೆಯಲಾಗುತ್ತಿತ್ತು. ಆದರೂ ಅವರು ತಮ್ಮ ಧರ್ಮದಿಂದ ಹಿಂಜರಿಯುತ್ತಿರಲಿಲ್ಲ, ಖಂಡಿತವಾಗಿಯೂ ಅಲ್ಲಾಹನು ಈ ಕಾರ್ಯವನ್ನು ಪೂರ್ಣಗೊಳಿಸಿಯೇ ತೀರುವನು. ಒಂದು ದಿನ ಬರಲಿಕ್ಕಿದೆ. ಅಂದು ಸನ್‌ಆದಿಂದ ಹದರ್ ಮೌತ್‌ವರೆಗೆ ಒಬ್ಬ ವ್ಯಕ್ತಿ ನಿರಾತಂಕನಾಗಿ ಪ್ರಯಾಣ ಮಾಡುವನು. ಅಲ್ಲಾಹನ ಹೊರತು ಇನ್ನಾರ ಭಯವೂ ಆತನಿಗೆ ಇರಲಾರದು. ಆದರೆ ನೀವು ಆತುರ ಪಡುತ್ತೀರಿ.'' ಈ ಮೂಲಕ ಪ್ರವಾದಿವರ್ಯರು(ಸ) ಪಸರಿಸುತ್ತಿದ್ದ ಸಂದೇಶವು ಶಾಂತಿಯುತವೂ ಸುಭದ್ರವೂ ಆದ ಸಮಾಜದ, ರಾಷ್ಟ್ರದ ನಿರ್ಮಾಣವಾಗುವುದೆಂಬ ಶುಭ ಮುನ್ಸೂಚನೆಯನ್ನೂ ಅನುಯಾಯಿಗಳಿಗೆ ನೀಡಿದರು. ಜೊತೆಗೆ ಅದರ ಹಾದಿಯು ತುಂಬಾ ಕಠಿಣ

ವಾಗಿರುವುದು ಎಂದೂ ಅದಕ್ಕಾಗಿ ತೀವ್ರ ತ್ಯಾಗ, ಪರಿಶ್ರಮ ನಡೆಸದೆ ಗುರಿ ತಲುಪಲು ಸಾಧ್ಯವಿಲ್ಲ ಎಂದೂ ಹೇಳಿದರು.

❖ ❖ ❖

12. ಅಪಹಾಸ್ಯವನ್ನು ನಿರ್ಲಕ್ಷಿಸಿ ಮುನ್ನಡೆದರು

''ಮುಹಮ್ಮದ್‌ರಿಗೆ ಸಫಾ ಮರ್ವಾ ಬೆಟ್ಟಗಳನ್ನು ಸ್ವರ್ಣದ ಬೆಟ್ಟಗಳನ್ನಾಗಿ ಮಾಡಲು ಸಾಧ್ಯವಿದೆಯಾ? ಕುರ್‌ಆನನ್ನು ಆಕಾಶದಿಂದಲೇ ಗ್ರಂಥ ರೂಪದಲ್ಲಿ ಇಳಿಸದಿರುವುದೇಕೆ? ಜಿಬ್ರೀಲ್ ಎಂಬ ದೇವದೂತರನ್ನು ತೋರಿಸುವಿರಾ? ಮರಣ ಹೊಂದಿದವರನ್ನು ಜೀವಂತ ಗೊಳಿಸುವಿರಾ?- ಪ್ರವಾದಿವರ್ಯರ(ಸ) ಎದುರಾಳಿಗಳು ಇಂತಹ ಅನೇಕ ಅಸಂಬದ್ಧ ಪ್ರಶ್ನೆಗಳನ್ನು ಕೇಳಿ ಅಪಹಾಸ್ಯ ಮಾಡುತ್ತಿದ್ದರು. ನನಗೆ ವಿಶೇಷವಾದ ಅದೃಶ್ಯ ಶಕ್ತಿಯೇನೂ ಇಲ್ಲವೆಂದೂ ನಾನು ಕೇವಲ ದೇವನ ಸಂದೇಶವಾಹಕನೆಂದೂ ಅವರು ವಿನಯದಿಂದ ಹೇಳುತ್ತಿದ್ದರು. ಕುರ್‌ಆನ್ ಅವರಿಗೆ ಈ ರೀತಿ ಹೇಳಲು ಆದೇಶಿಸಿತು.

ಓ ಪೈಗಂಬರರೇ, ಇವರೊಡನೆ ಹೇಳಿರಿ; ''ಸ್ವಂತ ನನ್ನ ಹಿತಾಹಿತಗಳ ಅಧಿಕಾರ ನನಗಿಲ್ಲ, ಅಲ್ಲಾಹ್ ಯಾವುದನ್ನು ಬಯಸುತ್ತಾನೋ ಅದು ಆಗುತ್ತದೆ ಮತ್ತು ನನಗೆ ಪರೋಕ್ಷ (ಗೈಬ್) ಜ್ಞಾನವಿರುತ್ತಿದ್ದರೆ, ನಾನು ಅನೇಕ ಲಾಭಗಳನ್ನು ನನಗಾಗಿ ಒದಗಿಸಿಕೊಳ್ಳುತ್ತಿದ್ದೆ ಮತ್ತು ನನಗೆಂದೂ ಹಾನಿ ತಟ್ಟುತ್ತಿರಲಿಲ್ಲ, ನನ್ನ ಮಾತಿನ ಮೇಲೆ ವಿಶ್ವಾಸವಿಡುವವರಿಗೆ ನಾನು ಕೇವಲ ಮುನ್ನೆಚ್ಚರಿಕೆ ಕೊಡುವವನೂ ಸುವಾರ್ತೆ ನೀಡುವವನೂ ಆಗಿರುತ್ತೇನೆ.'' (7:188)

ವಿರೋಧಿಗಳ ವಿರೋಧಗಳನ್ನು ಪ್ರವಾದಿವರ್ಯರು(ಸ) ಸಂತೋಷದಿಂದ ಸ್ವೀಕರಿಸಿದರು. ಅವರ ಅಪಹಾಸ್ಯಗಳು ಅವರನ್ನು ಕೆರಳಿಸುತ್ತಿರಲಿಲ್ಲ, ಅವರು ಬಹಳ ಶಾಂತ ರೀತಿಯಿಂದ ತನ್ನ ದೌತ್ಯವನ್ನು ನಿರ್ವಹಿಸ ತೊಡಗಿದರು.

❖ ❖ ❖

13. ಉಮರ್‌ರ(ರ) ಇಸ್ಲಾಮ್ ಸ್ವೀಕಾರ

''ಅಲ್ಲಾಹನಾಣೆ! ನಿಮ್ಮ ಭ್ರಷ್ಟ ಚಿತ್ತ ನಿಮ್ಮನ್ನು ವಂಚಿಸಿದೆ. ಮುಹಮ್ಮದ್‌ರನ್ನು(ಸ) ಕೊಂದ ಬಳಿಕ ಅಬ್ದು ಮನಾಫ್ ಗೋತ್ರ ನಿಮ್ಮನ್ನು ಸುಮ್ಮನೆ ಬಿಟ್ಟೀತೆಂದು ಭಾವಿಸಿದ್ದೀರಾ! ಮೊದಲು ನಿಮ್ಮ ಮನೆಯವರನ್ನು ಸರಿಪಡಿಸಿರಿ!'' ಎಂದು ಸಿಡುಕು

ಮೋರೆಯಿಂದ ಅವಸರವಸರವಾಗಿ ಖಡ್ಗ ಹಿಡಿದು ಹೋಗುತ್ತಿದ್ದ ಉಮರ್‌ರನ್ನು(ರ) ತಡೆದು ನಈಮ್ ಬಿನ್ ಅಬ್ದುಲ್ಲಾ ಹೇಳಿದರು.

ಉಮರ್‌ರು(ರ) ಬಹಳ ಕ್ರೋಧದಿಂದ ಪ್ರವಾದಿವರ್ಯರನ್ನು(ಸ) ಈ ಬಾರಿ ಮುಗಿಸಲೇಬೇಕೆಂದು ಪ್ರವಾದಿವರ್ಯರು(ಸ) ಹಾಗೂ ಅನುಚರರು ತಂಗಿದ್ದ ದಾರುಲ್ ಅರ್ಖಮ್‌ನತ್ತ ಹೊರಟಿದ್ದರು. ದಾರಿ ಮಧ್ಯೆ ನಈಮ್‌ರು ಸಿಕ್ಕಿದ್ದರು.

ತನ್ನ ಸಹೋದರಿ ಫಾತಿಮಾ ಹಾಗೂ ಅವರ ಪತಿ ಝೈದ್ ಇಸ್ಲಾಮ್ ಸ್ವೀಕರಿಸಿದ ವಿಚಾರ ಉಮರ್‌ಗೆ(ರ) ತಿಳಿದಿರಲಿಲ್ಲ. ನಈಮ್‌ರಿಂದ ಈಗ ಆ ಸುದ್ದಿ ಕೇಳಿ ಅವರಿಗೆ ಸಿಡಿಲೆರಗಿದಂತಾಯಿತು. ಕೆರಳಿದ ಉಮರ್ ಸಹೋದರಿಯ ಮನೆಯತ್ತ ಧಾವಿಸಿದರು. ಅಲ್ಲಿಗೆ ತಲುಪಿದಾಗ ಅವರೀರ್ವರೂ ಕುರ್‌ಆನ್ ಪಾರಾಯಣದಲ್ಲಿ ನಿರತರಾಗಿದ್ದರು. ಅವರ ಜೊತೆ ಖಬ್ಬಾಬ್(ರ) ಕೂಡಾ ಇದ್ದರು. ಉಮರ್‌ರ(ರ) ಆಗಮನದ ವಿಚಾರ ತಿಳಿದ ಖಬ್ಬಾಬ್‌ರು ಅಲ್ಲಿಂದ ಮನೆಯ ಸಾಮಾನುಗಳ ಹಿಂದೆ ಅಡಗಿ ಕುಳಿತರು.

''ನಾನು ಇಲ್ಲಿ ಕೇಳುತ್ತಿದ್ದ ಶಬ್ದವೇನದು'' ಎಂದು ಕೆರಳಿದ ಉಮರ್(ರ) ಸಿಂಹದಂತೆ ಘರ್ಜಿಸಿದರು.

''ಏನೂ ಇಲ್ಲ, ನಿಮಗೇನೋ ಕೇಳಿದ ಹಾಗೆ ಆಗಿರಬಹುದು.'' ಕುರ್‌ಆನ್ ಸೂಕ್ತಗಳ ಕಾಗದಗಳನ್ನು ಮೆಲ್ಲನೆ ಅಡಗಿಸಿಡುತ್ತಾ ಫಾತಿಮಾರು ಹೇಳಿದರು.

''ನೀವು ಆ ಮುಹಮ್ಮದ್‌ನ(ಸ) ಧರ್ಮವನ್ನು ಸ್ವೀಕರಿಸಿರುವುದಾಗಿ ಸುದ್ದಿ ತಿಳಿಯಿತು. ಸರಿಯಾ? ಎಂದು ಉಚ್ಚ ಸ್ವರದಲ್ಲಿ ಕೇಳಿದರು. ಉತ್ತರಿಸುವ ಮುನ್ನವೇ ಭಾವನ ಮೇಲೆ ಮುಗಿಬಿದ್ದು ಹೊಡೆಯ ತೊಡಗಿದರು. ಝೈದ್‌ರ ಮೇಲೆ ಹಲ್ಲೆ ನಡೆಯುತ್ತಿರುವುದನ್ನು ನೋಡಿದ ಪತ್ನಿ ಫಾತಿಮಾ ಪತಿಯ ರಕ್ಷಣೆಗೆ ಧಾವಿಸಿದರು. ಫಾತಿಮಾರಿಗೂ ಹೊಡೆತಗಳು ಬಿದ್ದವು. ಫಾತಿಮಾರ ತಲೆಗೆ ಗಾಯವಾಗಿ ರಕ್ತ ಒಸರತೊಡಗಿತು. ತಲೆಯಲ್ಲಿನ ಗಾಯದಿಂದ ರಕ್ತ ಸುರಿಯುತ್ತಿದ್ದರೂ ಲೆಕ್ಕಿಸದ ಆ ಮಾತೆ ''ಹೌದು! ನಾವು ಇಸ್ಲಾಮ್ ಧರ್ಮವನ್ನು ಸ್ವೀಕರಿಸಿರುತ್ತೇವೆ. ನೀವು ಏನು ಮಾಡುತ್ತೀರೋ ಮಾಡಿ'' ಎಂದು ಸಿಂಹಿಣಿಯಂತೆ ವೀರಾವೇಶದಿಂದ ನುಡಿದರು.

ಸಹೋದರಿಯ ವೀರಾವೇಶದ ನುಡಿಗಳು ಉಮರ್‌ರ(ರ) ಮನಸ್ಸಿಗೆ ಬಾಣದಂತೆ ನಾಟಿತು. ಒಮ್ಮೆಲೇ ಅವರ ಕೋಪದ ರಭಸವು ಇಳಿಯಿತು. ಸ್ವಲ್ಪ ಹೊತ್ತಿನ ಬಳಿಕ ಶಾಂತಚಿತ್ತರಾಗಿ ''ನೀವು ಓದುತ್ತಿದ್ದುದನ್ನು ನನಗೊಮ್ಮೆ ತೋರಿಸಿ'' ಎಂದು ಹೇಳಿದರು.

ಪ್ರಶ್ನೆಯು ಸದುದ್ದೇಶದಿಂದ ಕೂಡಿದೆಯೇ ಎಂದು ತಿಳಿಯಲು ಫಾತಿಮಾರು ಉಮರ್‌ರೊಂದಿಗೆ(ರ) ಸ್ನಾನ ಮಾಡಿ ಬರಲು ಹೇಳಿದರು. ಕೋಪ ತಣಿಸುವ

ಅತ್ಯುತ್ತಮ ವಿಧಾನ ಕೂಡಾ ಸ್ನಾನ ಆಗಿದೆ. ಅದೂ ಕೂಡಾ ಅವರ ಉದ್ದೇಶವಾಗಿತ್ತು

ಉಮರ್‌ರು(ರ) ಪುಟ್ಟ ಬಾಲಕನಂತೆ ಸಹೋದರಿಯ ಮಾತುಗಳನ್ನು ಪಾಲಿ ಸ್ನಾನ ಮಾಡಿ ಬಂದರು. ಫಾತಿಮಾರು ಕುರ್‌ಆನಿನ ಸೂಕ್ತ ಬರೆದ ಕಾಗದಗಳನ ಅವರಿಗೆ ನೀಡಿದರು. ಅದರಲ್ಲಿ ತಾಹಾ ಸೂರಃದ ಆರಂಭದ ಸೂಕ್ತಗಳಿದ್ದುವು.

ಅವರು ಪಠಿಸಲು ಆರಂಭಿಸುತ್ತಿರುವಂತೆ ಅದರ ಶೈಲಿ ಹಾಗೂ ಅದರ ಸಂದೇಶ ಅವರನ್ನು ತುಂಬಾ ಆಕರ್ಷಿಸಿತು.

''ಆಹಾ! ಎಂತಹ ಸುಂದರ ಪರಿಶುದ್ಧ ವಚನಗಳಿವು'' ಎಂಬ ಉದ್ಗಾ ತಮಗರಿವಿಲ್ಲದೇ ಉಮರ್‌ರಿಂದ(ರ) ಹೊರಬಂತು.

ಅಷ್ಟರಲ್ಲಿ ಅಲ್ಲಿ ಅಡಗಿ ಕೂತಿದ್ದ ಖಬ್ಬಾಬ್ ಎದ್ದು ಹೊರ ಬಂದರು ಉಮರ್‌ರ(ರ) ಮನದಲ್ಲಿ ಬದಲಾವಣೆಯ ಗಾಳಿ ಬೀಸಿರುವುದನ್ನು ಖಚಿತ ಪಡಿ ಸಂತೋಷದಿಂದ ಈ ರೀತಿ ಹೇಳಿದರು, ''ಪ್ರವಾದಿವರ್ಯರು(ಸ) ಅಬುಲ್ ಹಕಮ ಅಥವಾ ಉಮರ್ ಬಿನ್ ಖತ್ತಾಬ್‌ರ ಮೂಲಕ ಇಸ್ಲಾಮಿಗೆ ನೆರವಾಗು ಎಂದು ಅಲ್ಲಾಹನಲ್ಲಿ ಪ್ರಾರ್ಥಿಸುತ್ತಿದ್ದರು.''

ತಮ್ಮ ವಿಚಾರದಲ್ಲಿ ಪ್ರವಾದಿವರ್ಯರ(ಸ) ಪ್ರಾರ್ಥನೆಯನ್ನು ಅಲ್ಲಾಹನು ಸ್ವೀಕರಿಸಿರುವನು ಎಂದು ಭಾಸವಾಗುತ್ತಿದೆ. ಬನ್ನಿ ಉಮರ್(ರ) ಬನ್ನಿ, ಅಲ್ಲಾಹನೆಡೆ ಧಾವಿಸಿರಿ'' ಎಂದು ಖಬ್ಬಾಬ್ ವಿನಂತಿಸಿದರು. ಉಮರ್‌ರು(ರ) ಆಗ ಏನು ಹೇಳಿದರೂ ಅನುಸರಿಸುವ ಸ್ಥಿತಿಯಲ್ಲಿದ್ದರು. ಕಾರಣ ಕುರ್‌ಆನಿನ ಸೂಕ್ತಗಳು ಅವರ ಮನಸ್ಸನ್ನು ಅಷ್ಟೊಂದು ಪ್ರಭಾವಿತಗೊಳಿಸಿತ್ತು.

ಹಾಗೆಯೇ ಖಬ್ಬಾಬ್ ಉಮರ್‌ರನ್ನು(ರ) ಕರೆದುಕೊಂಡು ದಾರುಲ್ ಅರ್ಕಮ್‌ನಲ್ಲಿರುವ ಪ್ರವಾದಿವರ್ಯರ(ಸ) ಸನ್ನಿಧಿಗೆ ಹೊರಟರು. ದೂರದಿಂದ ಉಮರ್(ರ) ಬರುತ್ತಿರುವುದನ್ನು ನೋಡಿದ ಓರ್ವರು ಪ್ರವಾದಿವರ್ಯರಿಗೆ(ಸ) ಸುದ್ದಿ ಮುಟ್ಟಿಸಿದರು. ಇದನ್ನು ಅರಿತ ಪ್ರವಾದಿ ವರ್ಯರ(ಸ) ಚಿಕ್ಕಪ್ಪ ಹಂಝಾ(ರ) ''ಸದುದ್ದೇಶದಿಂದ ಉಮರ್(ರ) ಬಂದಿರುವುದಾದರೆ ಬರಲಿ, ನಾವು ಅವರನ್ನು ಸ್ವಾಗತಿಸುತ್ತೇವೆ. ಇನ್ನು ದುರುದ್ದೇಶದಿಂದ ಆತ ಏನಾದರೂ ಬಂದಿದ್ದರೆ ನಾನು ಈ ಖಡ್ಗದಿಂದ ಆತನ ಕತೆ ಮುಗಿಸುತ್ತೇನೆ'' ಎಂದು ಹೇಳಿದರು.

ಪ್ರವಾದಿವರ್ಯರ(ಸ) ಸನ್ನಿಧಿಗೆ ಹಾಜರಾದ ಉಮರ್‌ರನ್ನು(ರ) ಪ್ರವಾದಿ ವರ್ಯರು(ಸ) ಸ್ವಾಗತಿಸುತ್ತಾ ''ಖತ್ತಾಬ್‌ರ ಪುತ್ರರೇ ತಾವು ಇಲ್ಲಿ ಬಂದಿರುವ ಉದ್ದೇಶವೇನು'' ಎಂದು ಕೇಳಿದರು.

ಅಲ್ಲಾಹನ ಸಂದೇಶವಾಹಕರೇ, ನಾನು ಅಲ್ಲಾಹನಲ್ಲಿಯೂ ಆತನ ಸಂದೇಶವಾಹಕ ಲ್ಲಿಯೂ ಅವರಿಗೆ ಅವತೀರ್ಣಗೊಂಡ ಗ್ರಂಥದ ಮೇಲೂ ವಿಶ್ವಾಸ ತಾಳುತ್ತೇನೆ ನ್ನುತ್ತಾ ಉಮರ್‌ರು(ರ) ತನ್ನ ಇಸ್ಲಾಮ್ ಸ್ವೀಕಾರವನ್ನು ಘೋಷಿಸಿದರು.

❖ ❖ ❖

4. ತಂದೆಯನ್ನು ಮೀರಿಸಿದ ವಾತ್ಸಲ್ಯಮಯಿ ಪ್ರವಾದಿ(ಸ)

ಪ್ರವಾದಿವರ್ಯರು(ಸ) ಒಮ್ಮೆ ತಮ್ಮ ಅನುಚರರೊಂದಿಗೆ ಪ್ರಾರ್ಥನೆಯಲ್ಲಿ ರತರಾಗಿದ್ದರು. ಮುಹಮ್ಮದರು(ಸ) ತಂದ ಹೊಸ ಧರ್ಮದ ಬಗ್ಗೆ ಅಬೂತಾಲಿಬ್‌ರು ಲವರಿಂದ ಕೇಳಿ ಅರಿತಿದ್ದರು. ಆದರೂ ಆ ಕುರಿತು ನೇರವಾಗಿ ಯಾವತ್ತೂ ಪ್ರಶ್ನಿಸಿರಲಿಲ್ಲ.

ಹೀಗಿರುವಾಗ ಒಮ್ಮೆ ಅಬೂತಾಲಿಬ್‌ರು ತನ್ನ ಸೋದರ ಪುತ್ರ ಮುಹಮ್ಮದ್ ರೊಂದಿಗೆ(ಸ) ಇರುತ್ತಿದ್ದ ಪುತ್ರ ಅಲಿಯನ್ನು ಹುಡುಕುತ್ತಾ ಅಲ್ಲಿಗೆ ಬಂದಿದ್ದರು, ಈ ಹೊಸ ಧರ್ಮದಲ್ಲಿ ತನ್ನ ಮಗನೂ ಸೇರಿಕೊಂಡಿದ್ದಾನೆಂಬ ವಿಚಾರ ಅರಿತು ಕೂಡಲೇ ಆತನನ್ನು ತನ್ನೊಂದಿಗೆ ಕರೆದುಕೊಂಡು ಹೋಗಬೇಕೆಂಬ ಉದ್ದೇಶದಿಂದ ಅಲ್ಲಿಗೆ ಬಂದಿದ್ದರು.

''ಮುಹಮ್ಮದ್(ಸ) ಇದೇನಿದು ನಿನ್ನ ಹೊಸ ಧರ್ಮ'' ಎಂದು ಕೇಳಿದರು.

''ಇದು ಪರಮೋಚ್ಚನಾದ ದೇವನ ಧರ್ಮವಾಗಿದೆ'' ಎಂದು ಶಾಂತಚಿತ್ತದಿಂದ ಉತ್ತರಿಸಿದರು. ಸ್ವಲ್ಪ ಕಾಲ ಅಲ್ಲಿ ಮೌನ ಆವರಿಸಿತ್ತು. ಬಳಿಕ ಪ್ರವಾದಿವರ್ಯರು(ಸ) 'ನಮ್ಮ ಪೂರ್ವ ಪಿತ ಇಬ್ರಾಹೀಮರ ಧರ್ಮವಿದು'' ಎಂದರು.

''ಹಾಗಾದರೆ ನೀನು ಯಾರು?'' ಎಂದು ಕುತೂಹಲದಿಂದ ಕೇಳಿದರು.

''ನಾನು ದೇವನಿಂದ ನಿಯೋಜಿಸಲ್ಪಟ್ಟ ಸಂದೇಶವಾಹಕನೂ ಆತನ ದಾಸನೂ ಆಗಿದ್ದೇನೆ'' ಎಂದು ಆತ್ಮವಿಶ್ವಾಸದಿಂದ ಪ್ರವಾದಿ(ಸ) ನುಡಿದರು.

ಅದನ್ನು ಕೇಳಿದಾಗ ವಿಶೇಷ ಭಾವವೇನೂ ಅಬೂತಾಲಿಬ್‌ರಲ್ಲಿ ಗೋಚರವಾಗದಾಗ ಪ್ರವಾದಿವರ್ಯರಲ್ಲಿ(ಸ) ನಿರೀಕ್ಷೆ ಹುಟ್ಟಿತು. ''ತಾವು ನಮ್ಮೊಡನೆ ಸೇರಬೇಕೆಂಬುದು ನಮ್ಮ ಆಗ್ರಹ. ಚಿಕ್ಕಪ್ಪಾ! ಹಾಗೆಯೇ ನಮ್ಮೊಂದಿಗೆ ಸೇರಿರಿ'' ಎಂದು ಕೇಳಿದರು.

ಅಬೂತಾಲಿಬ್‌ರು ಪ್ರವಾದಿವರ್ಯರನ್ನು(ಸ) ತುಂಬಾ ಪ್ರೀತಿಸುತ್ತಿದ್ದರು. ಆದರೂ

ಅವರ ಆಹ್ವಾನವನ್ನು ಸ್ವೀಕರಿಸಲಿಲ್ಲ. ತನ್ನ ಹಳೆಯ ಸಂಪ್ರದಾಯ, ಆಚಾರ-ವಿಚಾರಗಳಿಂದ ದೂರ ಇರಲು ಅವರು ನಿರಾಸಕ್ತರಾಗಿರುವುದೇ ಅವರು ಇಸ್ಲಾಮ್ ಸ್ವೀಕರಿಸದಿರಲು ಪ್ರಮುಖ ಕಾರಣವಾಗಿತ್ತು.

ಅವರು ಇಸ್ಲಾಮಿನ ಆಹ್ವಾನವನ್ನು ನಿರಾಕರಿಸುತ್ತಾ ''ಮುಹಮ್ಮದ್(ಸ) ನಿನ್ನ ಬಗ್ಗೆಯೂ ನಿನ್ನ ಪ್ರಾಮಾಣಿಕತೆಯ ಬಗ್ಗೆಯೂ ನನಗೆ ಚೆನ್ನಾಗಿ ಗೊತ್ತು. ಆದರೆ ನಮ್ಮ ಹಳೆಯ ಧರ್ಮವನ್ನು ನಾನು ಹೇಗೆ ತೊರೆಯಲಿ? ಆದರೆ ನನ್ನಿಂದಾಗುವ ಸಹಾಯವನ್ನು ನಾನು ಮಾಡುತ್ತೇನೆ. ನಾನು ಜೀವಿಸಿರುವ ತನಕ ನಮ್ಮ ಜನರು ನಿನಗೆ ತೊಂದರೆ ಕೊಡದಂತೆ ನಾನು ನಿನ್ನನ್ನು ಕಾಪಾಡುವೆನು. ನಿನಗೆ ಯಾವುದೇ ವಿಪತ್ತು ಬರದಂತೆ ನಾನು ತಡೆಯುವೆನೆಂದು ಮಾತು ಕೊಡುತ್ತಿದ್ದೇನೆ'' ಎಂದರು.

ಬಳಿಕ ತನ್ನ ಆಗಮನದ ವಿಚಾರ ತಿಳಿಸಿದರು. ಪುತ್ರನನ್ನು ಕರೆದು ''ಮಗನೇ ಅಲೀ, ಬಾ ಹೊರಡೋಣ'' ಎಂದರು.

ಅಲಿಯವರು ಏನು ಹೇಳಬೇಕೆಂದು ತೋಚದೆ ಸಂದಿಗ್ಧಾವಸ್ಥೆಯಲ್ಲಿ ಸಿಲುಕಿದರು. ಪ್ರವಾದಿವರ್ಯರ(ಸ) ಆ ಪಾವನ ಸಾಂಗತ್ಯವನ್ನು ತೊರೆದು ಹೋಗುವುದರ ಕುರಿತು ಆ ಬಾಲಕನಿಗೆ ಆಲೋಚಿಸಲೂ ಸಾಧ್ಯವಾಗಲಿಲ್ಲ. ಅವರ ನಡುವಿನ ಬಾಂಧವ್ಯ ಅಷ್ಟೊಂದು ಗಾಢವಾಗಿತ್ತು.

ಕೊನೆಗೆ ತನ್ನಲ್ಲಿದ್ದ ಧೈರ್ಯವನ್ನೆಲ್ಲಾ ಉಪಯೋಗಿಸಿ ''ಅಪ್ಪಾ! ನಿಮ್ಮೊಂದಿಗೆ ಬರಲು ನನಗೆ ತುಂಬಾ ಕಷ್ಟವಾಗುತ್ತಿದೆ. ಅಲ್ಲಾಹನ ಹಾಗೂ ಆತನ ಸಂದೇಶವಾಹಕರ ಸೇವಕನಾಗಿರಲು ನಾನು ಪ್ರತಿಜ್ಞೆ ಕೈಗೊಂಡಿರುತ್ತೇನೆ'' ಎಂದರು.

ಆಗ ಪ್ರವಾದಿವರ್ಯರು(ಸ) ''ನಿನಗೆ ತಂದೆಯೊಡನೆ ಹೋಗಲು ಇಷ್ಟವಿದ್ದರೆ ಹೋಗ ಬಹುದು, ನನ್ನದೇನೂ ಅಡ್ಡಿಯಿಲ್ಲ'' ಎಂದು ಅಲಿಯವರ ಹೆಗಲಿಗೆ ಕೈಯಿಟ್ಟು ಹೇಳಿದರು.

''ಇಲ್ಲ ನಾನು ಹೋಗಲಾರೆ.'' ಅಲಿಯವರ ಮಾತಿನಲ್ಲಿ ದೃಢತೆಯಿತ್ತು.

''ಸರಿ ಹಾಗಾದರೆ ಬೇಡ'' ಸ್ವಲ್ಪ ಅಸಹನೆಯಿಂದಲೇ ಅಬೂತಾಲಿಬ್ ನುಡಿದರು.

ಬಳಿಕ ಪ್ರವಾದಿವರ್ಯರೊಡನೆ, ''ಮುಹಮ್ಮದ್ ನಿನ್ನೊಂದಿಗೆ ಆತ ಇರುವಷ್ಟು ದಿನ ಆತನಿಗೆ ಯಾವುದೇ ವಿಪತ್ತು ಬರದು ಎಂಬ ವಿಶ್ವಾಸ ನನಗಿದೆ. ಹಾಗೆಯೇ ಆತ ದಾರಿ ತಪ್ಪಿ ಹೋಗಲಾರ ಎಂಬ ಭರವಸೆಯೂ ಇದೆ'' ಎಂದು ಹೇಳಿ ಹೊರಟು ಹೋದರು.

❖ ❖ ❖

15. ಆ ದಿಟ್ಟ ಮಾತುಗಳು

ಶತ್ರುಗಳ ಉಪಟಳ, ಆಕ್ರಮಣಗಳಿಂದ ಪ್ರವಾದಿವರ್ಯರನ್ನು(ಸ) ಅವರ ಚಿಕ್ಕಪ್ಪ ಅಬೂತಾಲಿಬ್ ಸಂರಕ್ಷಿಸುತ್ತಿದ್ದರು. ಅವರು ಇಸ್ಲಾಮ್ ಸ್ವೀಕರಿಸದಿದ್ದರೂ ಪ್ರವಾದಿ ವರ್ಯರಿಗೆ(ಸ) ಬೆಂಗಾವಲಾಗಿದ್ದರು. ಇದು ಅವರ ವಿರೋಧಿಗಳಿಗೆ ನುಂಗಲಾರದ ತುತ್ತಾಗಿ ಪರಿಣಮಿಸಿತ್ತು. ಅಬೂತಾಲಿಬ್‌ರನ್ನು ಎದುರು ಹಾಕದಿರಲು ಅವರಿಗೆ ಅನೇಕ ಕಾರಣಗಳಿದ್ದುವು. ಅದಕ್ಕಾಗಿ ಸ್ನೇಹ, ಪ್ರೀತಿ, ಆದರ ತೋರುವುದರ ಮುಖಾಂತರ ಅಬೂತಾಲಿಬ್‌ರನ್ನು ವಶೀಕರಿಸಲು ಪ್ರಯತ್ನಿಸಿದರು. ಆದರೆ ಅದೆಲ್ಲವೂ ನಿಷ್ಫಲವಾಯಿತು. ಅಬೂತಾಲಿಬ್‌ರು ಕೊನೆಯ ವರೆಗೂ ಮುಹಮ್ಮದ್‌ರ(ಸ) ಪರವಾಗಿಯೇ ನಿಂತರು.

ಕೊನೆಗೆ ಅವರು ವಲೀದರ ಪುತ್ರ, ಮುಗೀರರ ಮೊಮ್ಮಗ ಉಮಾರರೊಂದಿಗೆ ಅಬೂತಾಲಿಬ್‌ರ ಸನ್ನಿಧಿಗೆ ಬಂದರು. ಸ್ಫುರದ್ರೂಪಿಯೂ ಚಾಣಾಕ್ಷನೂ ಆದ ಉಮಾರನನ್ನು ಪಡೆದು ಆ ಮುಹಮ್ಮದ್‌ರನ್ನು(ಸ) ನಮ್ಮೊಡನೆ ಕಳುಹಿಸಿ ಎಂದು ಅಬೂತಾಲಿಬ್‌ರೊಂದಿಗೆ ಮನವಿ ಮಾಡಿದರು. ಅವರ ಕೋರಿಕೆಯ ಒಳಾರ್ಥವನ್ನು ಅರಿತ ಅಬೂತಾಲಿಬ್ ಆ ಕೂಡಲೇ ಅವರ ಕೋರಿಕೆಯನ್ನು ಮುಲಾಜಿಲ್ಲದೆ ತಳ್ಳಿದರು.

ಪ್ರವಾದಿವರ್ಯರು(ಸ) ತನ್ನ ಸಂದೇಶ ಪ್ರಚಾರ ಕಾರ್ಯದಲ್ಲಿ ನಿರತರಾದಂತೆಯೇ ಕುರೈಶರ ವಿರೋಧವೂ ಹೆಚ್ಚಾಗ ತೊಡಗಿತು. ಮುಹಮ್ಮದ್‌ರ(ಸ) ಕತೆ ಮುಗಿಸಲು ಹಾಗೂ ಅವರ ಉಪಟಳದಿಂದ ಮುಕ್ತಿ ಹೊಂದಲು ಈ ಅಬೂತಾಲಿಬ್ ತಡೆಯಾಗಿದ್ದಾರೆಂದು ತಿಳಿದ ಕುರೈಶರು ಮತ್ತೊಮ್ಮೆ ಅಬೂತಾಲಿಬ್‌ರನ್ನು ಭೇಟಿಯಾದರು.

ಅಬೂತಾಲಿಬ್‌ರೇ, ತಾವು ನಮ್ಮಲ್ಲಿ ಅತ್ಯಂತ ಹಿರಿಯರೂ ಅತೀ ಹೆಚ್ಚು ಗೌರವವುಳ್ಳ ವ್ಯಕ್ತಿಯಾಗಿದ್ದೀರಿ. ನಾವು ನಿಮ್ಮ ಆ ಸೋದರ ಪುತ್ರನನ್ನು ಸ್ವಲ್ಪ ಹದ್ದುಬಸ್ತಿನಲ್ಲಿಡಲು ನಿಮ್ಮೊಂದಿಗೆ ಅನೇಕ ಬಾರಿ ತಿಳಿಸಿದ್ದೇವೆ. ಆದರೂ ನೀವು ಅದನ್ನು ನಿರ್ಲಕ್ಷಿಸಿದಿರಿ. ನಮ್ಮ ಪೂರ್ವಜರನ್ನೂ ದೇವಿ-ದೇವತೆಗಳನ್ನು ಆತ ಆಕ್ಷೇಪಿಸುತ್ತಾನೆ. ನಮ್ಮ ಮಧ್ಯೆ ನಡೆದು ಬಂದಿರುವ ರೀತಿ-ರಿವಾಜುಗಳ ಬಗ್ಗೆಯೂ ಅಪಹಾಸ್ಯಕರ ಆಕ್ಷೇಪವೆತ್ತುತ್ತಿದ್ದಾನೆ. ಇನ್ನು ನಮ್ಮಿಂದ ಇದನ್ನು ಸಹಿಸಲು ಸಾಧ್ಯವಿಲ್ಲ, ಒಂದೋ ನೀವು ಅವನನ್ನು ತಡೆಯಬೇಕು. ಇಲ್ಲದಿದ್ದಲ್ಲಿ ನಿಮ್ಮೊಂದಿಗೂ ಅವನೊಂದಿಗೂ ನಾವು ಯುದ್ಧ ಹೂಡುವೆವು. ಯಾವುದಾದರೊಂದು ಗುಂಪು ನಾಶವಾಗುವ ವರೆಗೆ!

ಅನೇಕ ವರ್ಷಗಳಿಂದ ಜೊತೆಯಾಗಿ ಜೀವಿಸಿದ್ದ ಆತ್ಮೀಯರ ವಿರೋಧದ ಮಾತುಗಳು ಅಬೂತಾಲಿಬ್‌ರನ್ನು ಚಿಂತಾಕ್ರಾಂತರನ್ನಾಗಿಸಿತು. ಯಾವ ಕಾರಣಕ್ಕೂ ಪ್ರವಾದಿವರ್ಯರನ್ನು(ಸ) ಕೈಬಿಡಲು ಅವರು ಸಿದ್ಧರಿರಲಿಲ್ಲ. ಕೊನೆಗೆ ಪ್ರವಾದಿವರ್ಯರನ್ನು(ಸ) ಕರೆದು ಕುರೈಶರು ತಿಳಿಸಿದ ವಿಚಾರಗಳನ್ನು ಅವರ ಮುಂದಿಟ್ಟರು. ಬಳಿಕ ''ನೀನು ನನ್ನನ್ನು ಕಾಪಾಡಬೇಕು, ನಿನ್ನನ್ನು ಸ್ವಯಂ ರಕ್ಷಿಸಿಕೊಳ್ಳಬೇಕು. ನನಗೆ ಹೊರಲಾರದ ಒಂದು ಭಾರವನ್ನು ಹೊರಿಸಬೇಡಪ್ಪಾ'' ಎಂದು ಕೇಳಿದರು. ಈ ಉತ್ತರವನ್ನು ಎಂದಿಗೂ ಪ್ರವಾದಿವರ್ಯರು(ಸ) ನಿರೀಕ್ಷಿಸಿರಲಿಲ್ಲ. ತನ್ನ ಚಿಕ್ಕಪ್ಪ ತನ್ನನ್ನು ಕೈಬಿಡುವರೆಂದು ಅವರು ಯೋಚಿಸಿಯೇ ಇರಲಿಲ್ಲ. ಆದ್ದರಿಂದ ಅವರು ಒಮ್ಮೆಗೇ ಕಂಪಿಸಿದರು. ಆದರೆ ಕೂಡಲೇ ಧೈರ್ಯವನ್ನು ತಂದುಕೊಂಡರು. ಚಿಕ್ಕಪ್ಪ ತನ್ನನ್ನು ತೊರೆದರೆ ನನ್ನ ನೆರವಿಗೆ ಯಾರೂ ಬರಲಾರರು ಎಂಬ ಅರಿವಿದ್ದೂ ಉಚ್ಚ ಧ್ವನಿಯಲ್ಲಿ ಈ ರೀತಿ ಹೇಳಿದರು, ''ಸೂರ್ಯನನ್ನು ಬಲಗೈಯಲ್ಲಿ, ಚಂದ್ರನನ್ನು ಎಡಗೈಯಲ್ಲಿ ಕೊಟ್ಟರೂ ನಾನು ನನ್ನ ಈ ದೌತ್ಯದಿಂದ ಹಿಂಜರಿಯಲಾರೆ. ಅಲ್ಲಾಹನು ನನ್ನನ್ನು ಈ ದೌತ್ಯದಲ್ಲಿ ವಿಜಯಗೊಳಿಸಬೇಕು ಅಥವಾ ಈ ಮಾರ್ಗದಲ್ಲಿ ನಾನು ಹುತಾತ್ಮನಾಗಬೇಕು. ಅಲ್ಲಿಯ ವರೆಗೂ ಹಿಂದೆ ಸರಿಯಲಾರೆ.''

ಸೋದರ ಪುತ್ರನ ಆತ್ಮಸ್ಥೈರ್ಯದ ಮಾತುಗಳಿಂದ ಅಬೂತಾಲಿಬ್ ಪ್ರಭಾವಿತರಾದರು. ಅವರು ಪ್ರವಾದಿ ಮುಹಮ್ಮದ್‌ರೊಂದಿಗೆ(ಸ) ಕರುಣಾ ಪೂರಿತ ದೃಷ್ಟಿ ಬೀರಿ, ''ಮಗನೇ, ನೀನು ಹೋಗು. ನಿನಗೇನು ಹೇಳಲಿಕ್ಕಿದೆಯೋ ಅವೆಲ್ಲವನ್ನೂ ಹೇಳು. ನಿನಗೆ ಇಷ್ಟವಿಲ್ಲದ ಯಾವುದಕ್ಕೂ ನಾನು ನಿನ್ನನ್ನು ಬಿಟ್ಟು ಕೊಡಲಾರೆ'' ಎಂದು ಹೇಳಿದರು.

❖ ❖ ❖

16. ಬೆತ್ತ ಕೊಟ್ಟು ಏಟು ತಿಂದ ಅಬೂಜಹಲ್

ಅಬೂಜಹಲನು ಪ್ರವಾದಿವರ್ಯರನ್ನು ಹೊಡೆದು ಬೈದು ಅಪಹಾಸ್ಯಗೈದ ವಿಚಾರ ಅಬ್ದುಲ್ ಮುತ್ತಲಿಬ್‌ರ ಪುತ್ರ ಹಂಝಾರ ಕಿವಿಗೆ ಬಿತ್ತು. ಅವರು ಪ್ರವಾದಿವರ್ಯರ(ಸ) ಚಿಕ್ಕಪ್ಪನೂ ಸ್ತನಪಾನ ಸಂಬಂಧಿಯೂ ಆಗಿದ್ದರು. ಹಂಝಾರು ಅಲ್ಲಿಯ ತನಕ ಇಸ್ಲಾಮ್ ಸ್ವೀಕರಿಸಿರಲಿಲ್ಲ. ವೀರ, ಧೀರ, ಶೂರ, ಪರಾಕ್ರಮಿಯೂ ಆದ ಹಂಝಾ ಇಸ್ಲಾಮ್ ಸ್ವೀಕರಿಸಬೇಕೆಂಬುದು ಪ್ರವಾದಿವರ್ಯರ(ಸ) ಹಂಬಲವಾಗಿತ್ತು. ಇಂತಹ ಧೈರ್ಯಶಾಲಿಯು ಆಗ ಇಸ್ಲಾಮಿಗೆ ಅಗತ್ಯವಿತ್ತು. ವಿರೋಧದ ಅಲೆಯನ್ನು ಸ್ವಲ್ಪ ಮಟ್ಟಿಗಾದರೂ ತಣ್ಣಗಾಗಿಸಬಹುದು ಎಂಬುದು

ಪ್ರವಾದಿವರ್ಯರ(ಸ) ಬಯಕೆಯಾಗಿತ್ತು. ಅದಕ್ಕಾಗಿಯೇ ಅವರು ಅನೇಕ ಬಾರಿ ಹಂಝರಿಗೆ ಇಸ್ಲಾಮಿನ ಸಂದೇಶವನ್ನು ನೀಡಿ ಸ್ವೀಕರಿಸಲು ಪ್ರೇರೇಪಿಸಿದ್ದರು. ಆದರೆ ಏನಾದರೊಂದು ಕಾರಣ ಹೇಳಿ ಅವರು ತಪ್ಪಿಸುತ್ತಿದ್ದರು. ಆದರೆ ಇತರರಂತೆ ವಿರೋಧಿಗಳ ಜೊತೆ ಸೇರಿ ಕಿರುಕುಳ ನೀಡುವುದು ಅಥವಾ ಮರ್ದಿಸುವ ಕಾರ್ಯದಿಂದ ದೂರವಿದ್ದರು.

ಹಂಝಾ ಎಂದಿನಂತೆ ಬೇಟೆಯಾಡಿ ಹಿಂದಿರುಗಿ ಬರುವಾಗ ಪ್ರವಾದಿವರ್ಯರ(ಸ) ಮೇಲೆ ಅಬೂಜಹಲ್ ಮಾಡಿದ ಆಕ್ರಮಣದ ಕುರಿತು ತಿಳಿದರು. ಹಂಝರು ಬೇಟೆಯಾಡುವುದರಲ್ಲಿ ನಿಪುಣರಾಗಿದ್ದರು. ಅಬೂಜಹಲನು ಪ್ರವಾದಿವರ್ಯರ(ಸ) ಮೇಲೆ ಕ್ರೂರವಾಗಿ ಅಕ್ರಮಿಸಿ ಅಪಹಾಸ್ಯಗೈದಾಗ ಅವರು ಏನೊಂದೂ ಪ್ರತಿಕ್ರಿಯೆ ನೀಡದೆ ಸಹನೆಯಿಂದ ಶಾಂತಚಿತ್ತರಾಗಿ ಹೋದರೆಂಬ ವಿಚಾರ ತಿಳಿದು ಅವರ ಕೋಪ ಇನ್ನಷ್ಟು ಉಕ್ಕೇರಿತು. ಪ್ರವಾದಿವರ್ಯರೊಂದಿಗಿನ(ಸ) ಅನುಕಂಪದಿಂದ, ಅಬೂಜಹಲನ ವಿರುದ್ಧ ಸಿಡಿಮಿಡಿಗೊಂಡರು.

ಸಾಮಾನ್ಯವಾಗಿ ಅವರು ಬೇಟೆಯಾಡಿ ಬಂದ ತಕ್ಷಣ ಕಅಬಾಕ್ಕೆ ಪ್ರದಕ್ಷಿಣೆ ಹಾಕಿಯೇ ಮನೆ ಸೇರುತ್ತಿದ್ದರು. ಅಂದು ಕೂಡಾ ಅದನ್ನು ಮಾಡಲು ಮರೆಯಲಿಲ್ಲ, ಆದರೂ ಎದುರು ಸಿಕ್ಕಿದವರೊಂದಿಗೆಲ್ಲಾ ಕುಶಲ ವಿಚಾರಿಸುತ್ತಾ ಸಾಗುತ್ತಿದ್ದರು. ಅಂದು ಮಾತ್ರ ಯಾರೊಂದಿಗೂ ಮಾತಿಗೆ ನಿಲ್ಲದೆ ನೇರವಾಗಿ ಕಅಬಾದತ್ತ ಧಾವಿಸಿದರು. ಅಲ್ಲಿ ನಿಂತುಕೊಂಡಿದ್ದ ಅಬೂಜಹಲ್‌ನ ಬಳಿಗೆ ತೆರಳಿ ತನ್ನಲ್ಲಿದ್ದ ಬಿಲ್ಲಿನಿಂದ ಆತನ ತಲೆಗೆ ಬಲವಾಗಿ ಒಂದೇಟು ನೀಡಿದರು. ಇನ್ನು ಮುಂದೆ ಮುಹಮ್ಮದನ(ಸ) ಮೈಮುಟ್ಟಿದರೆ ನಿನ್ನನ್ನು ಸುಮ್ಮನೆ ಬಿಡಲಾರೆ ಎಂಬ ಎಚ್ಚರಿಕೆಯನ್ನೂ ನೀಡಿದರು. ಕಅಬಾದ ಪರಿಸರದಲ್ಲಿದ್ದ ಮಖ್‌ಝೂಮ್ ಗೋತ್ರಕ್ಕೆ ಸೇರಿದ ಕೆಲವರು ಅಬೂಜಹಲನ ನೆರವಿಗೆ ಧಾವಿಸಿದರೂ ಅಬೂಜಹಲ್ ತಡೆದನು. ಯಾಕೆಂದರೆ ಅದರಿಂದ ತುಂಬಾ ಹಾನಿ ಎದುರಿಸಬೇಕಾದೀತೆಂಬ ಸತ್ಯ ಆತನಿಗೆ ತಿಳಿದಿತ್ತು.

ಕೆಲ ಕಾಲದಿಂದ ತನ್ನ ಹೃದಯದಲ್ಲಿ ಅಡಗಿಸಿಟ್ಟಿದ ಬಯಕೆಯನ್ನು ಬಹಿರಂಗ ಪಡಿಸಲು ಇದು ಸಕಾಲ ಎಂಬುದು ಹಂಝರಿಗೆ ಮನವರಿಕೆಯಾಯಿತು. ಅದರಂತೆ ಅವರು ಇಸ್ಲಾಮ್ ಸ್ವೀಕರಿಸಿರುವುದಾಗಿಯೂ ಮುಹಮ್ಮದರ(ಸ) ಹಾದಿಯನ್ನು ಅನುಸರಿಸುವುದಾಗಿಯೂ ಘೋಷಿಸಿದರು. ಆದರೆ ಇದು ಅಬೂಜಹಲನ ಪಾಲಿಗೆ ಬಿಲ್ಲಿನ ಹೊಡೆತಕ್ಕಿಂತ ದೊಡ್ಡ ಮಟ್ಟದ ಪ್ರಹಾರವಾಗಿತ್ತು.

❖ ❖ ❖

17. ಜ್ಯೋತಿಯನ್ನು ತಿರಸ್ಕರಿಸಿದ ನತದೃಷ್ಟರು

ಅಬೂಜಹಲ್, ಅಬೂಸುಫ್‌ಯಾನ್ ಹಾಗೂ ಅಖ್‌ನಸ್ ಪ್ರವಾ ವರ್ಯರನ್ನು(ಸ) ಅತೀ ಹೆಚ್ಚು ವಿರೋಧಿಸುವವರಾಗಿದ್ದರು. ಇಸ್ಲಾಮಿನ ಪ್ರಬ ವಿಮರ್ಶಕರೂ ಕುರ್‌ಆನನ್ನು ಯಾರೂ ಆಲಿಸಬಾರದೆಂದು ಜನರೊಂದಿಗೆ ನಿರಂತ ಆದೇಶಿಸುತ್ತಿದ್ದರು. ಆದರೂ ಜನರು ಕುರ್‌ಆನಿನ ಮಾಧುರ್ಯಕ್ಕೆ ಆಕರ್ಷಿತರಾ ಇಸ್ಲಾಮ್ ಸ್ವೀಕರಿಸುತ್ತಲೇ ಇದ್ದರು. ಇದರ ರಹಸ್ಯ ಏನಿರಬಹುದೆಂಬ ಕುತೂಹಲ ಈ ಮೂವರಿಗೂ ಮೂಡಿತ್ತು. ಅದಕ್ಕಾಗಿ ಅವರು ರಹಸ್ಯವಾಗಿ ಕದ್ದುಮುಚ್ಚಿ ಅಡಗಿ ನಿಂತ ಪರಸ್ಪರ ಯಾರಿಗೂ ಹೇಳದೆ ಕುರ್‌ಆನ್ ಆಲಿಸಲು ನಿರ್ಧರಿಸಿದರು. ರಾತ್ರಿಯ ಅಂತಿಮ ಜಾವದಲ್ಲಿ ಪ್ರವಾದಿವರ್ಯರು(ಸ) ಕುರ್‌ಆನ್ ಪಾರಾಯ ಮಾಡುತ್ತಿದ್ದುದರ, ಪ್ರಾರ್ಥಿಸುತ್ತಿದ್ದುದರ ಬಗ್ಗೆ ಅವರು ಕೇಳಿ ತಿಳಿದುಕೊಂಡಿದ್ದರು ಹಾಗೆಯೇ ಚಂದ್ರನಿಲ್ಲದ ಒಂದು ರಾತ್ರಿ ಅಬೂಜಹಲ್‌ನು ಪ್ರವಾದಿವರ್ಯರ(ಸ ಮನೆಯ ಸಮೀಪ ಅಡಗಿ ನಿಂತು ಕುರ್‌ಆನನ್ನು ಆಲಿಸತೊಡಗಿದ. ಅದೇ ರಾತ್ರಿ ಅದೇ ಮನೆಯ ಮತ್ತೊಂದು ಮಗ್ಗುಲಲ್ಲಿ ಅಬೂಸುಫ್‌ಯಾನ್ ಕೂಡಾ ಇದೆ ಉದ್ದೇಶದಿಂದ ಬಂದು ಕುರ್‌ಆನ್ ಆಲಿಸ ತೊಡಗಿದರು. ಮತ್ತೊಂದೆಡೆ ಅಖ್ನಸ ಕೂಡಾ ಅಡಗಿ ನಿಂತು ಆಲಿಸುತ್ತಿದ್ದ. ಕುರ್‌ಆನಿನ ಮಾಧುರ್ಯಕ್ಕೆ ಸೋತ ಮೂವರು ಪರಸ್ಪರ ಎದುರಾಗಲಿಲ್ಲ. ಅರುಣೋದಯಕ್ಕಿಂತ ಸ್ವಲ್ಪ ಮುಂಚೆ ಪ್ರವಾದಿವರ್ಯರು(ಸ ಪ್ರಾರ್ಥನೆಯಿಂದ ವಿರಮಿಸಿದರು. ಆಗ ಅಲ್ಲಿಂದ ಹಿಂತಿರುಗುವ ವೇಳೆ ಮೂವರು ಎದುರು ಬದುರಾದರು. ಅವರ ರಹಸ್ಯ ಬಹಿರಂಗವಾಗಿ ಪರಸ್ಪರ ನಿಂದಿಸ ತೊಡಗಿದರು ಆದರೆ ಮೂವರೂ ತಪ್ಪಿತಸ್ಥರಾದ್ದರಿಂದ ಅದರಲ್ಲಿ ಯಾವುದೇ ವಿಶೇಷವಿರಲಿಲ್ಲ ಎಂದು ಅರಿತ ಆ ಮೂವರೂ ''ಮುಹಮ್ಮದರ(ಸ) ವಚನಗಳನ್ನು ಕೇಳಲೇಬಾರದೆಂದು ಜನರಿಗೆ ಆದೇಶಿಸುವ ನಾವೇ ಅದನ್ನು ಕೇಳುವುದಾ? ಜನರಿಗೆ ಇದು ತಿಳಿದರ ಅಪಾಯ ಖಚಿತ. ಅವರೆಲ್ಲರೂ ಮುಹಮ್ಮದರೊಂದಿಗೆ(ಸ) ಸೇರುವರು, ನಾವ ಬಲಹೀನರಾಗುವೆವು. ಆದ ಕಾರಣ ಇನ್ನು ಮುಂದೆ ಇದರ ಪುನರಾವರ್ತನೆಯಾಗಬಾರದು'' ಎಂದು ಹೇಳುತ್ತಾ ಪರಸ್ಪರ ಬೀಳ್ಕೊಟ್ಟರು.

ಆದರೆ ಅವರಿಗೆ ಹಿಂದಿನ ರಾತ್ರಿ ಆದ ಅನುಭವವನ್ನು ನಿಯಂತ್ರಿಸಲಾಗಲಿಲ್ಲ ಕುರ್‌ಆನ್ ಆಲಿಸಲು ಅವರ ಕಿವಿಗಳು ಹಂಬಲಿಸುತ್ತಿತ್ತು. ಹೃದಯಗಳ ತುಡಿತ ಹೆಚ್ಚಾಯಿತು. ಇಂದು ನಾನು ಮಾತ್ರ ಇರುವುದು, ಬೇರೆ ಯಾರೂ ಬರಲಿಕ್ಕಿಲ್ಲ ಎಂದು ಬಗೆದು ಮೂವರೂ ಪ್ರತ್ಯೇಕವಾಗಿ ಪ್ರವಾದಿವರ್ಯರ(ಸ) ಮನೆಯ ಸಮೀಪ

ತೆರಳಿ ಕುರ್‌ಆನ್ ಆಲಿಸ ತೊಡಗಿದರು. ಬಳಿಕ ಅಲ್ಲಿಂದ ಹಿಂತೆರಳುವಾಗ ಹಿಂದಿನಂತೆ ಪರಸ್ಪರ ಎದುರಾದರು. ಅಂದು ಕೂಡಾ ಹಿಂದಿನ ದಿನ ಕೈಗೊಂಡ ಪ್ರತಿಜ್ಞೆಯನ್ನೇ ಕೈಗೊಂಡರು. ಆದರೆ ಮೂರನೆಯ ದಿನವೂ ಇದರ ಪುನರಾವರ್ತನೆಯಾಯಿತು. ಕೊನೆಗೆ ನಾವು ನಿರಂತರ ಸೋಲುಣ್ಣುತ್ತಿದ್ದೇವೆ ಎಂಬ ಭಾವನೆಯು ಅವರ ಅಹಂಕಾರವನ್ನು ಬಡಿದೆಬ್ಬಿಸಿತು. ಹಾಗೆಯೇ ಅವರು ಕುರ್‌ಆನ್ ಆಲಿಸುವುದನ್ನು ನಿಲ್ಲಿಸಿದರು.

ಅಖ್‌ನಸ್ ಕೆಲದಿನಗಳ ಬಳಿಕ ಅಬೂಜಹಲ್‌ನೊಂದಿಗೆ ''ಅಂದು ನಾವು ಆ ಮುಹಮ್ಮದ್‌ರಿಂದ ಕೇಳಿದ ಆ ವಚನಗಳ ಕುರಿತು ನೀನು ಏನು ಹೇಳಬಯಸುವೆ'' ಎಂದು ಕೇಳಿದ. ನಾವು ಮತ್ತು ಅಬ್ದುಮನಾಫ್ ಗೋತ್ರಗಳ ನಡುವೆ ಪರಸ್ಪರ ಮೇಲ್ಮೆಗಾಗಿ ಸ್ಪರ್ಧೆಯಿತ್ತು. ಅವರು ಜನರಿಗೆ ಊಟ ನೀಡಿದರು. ನಾವೂ ಅದನ್ನು ನೀಡಿದೆವು. ಅವರು ಜನರಿಗಾಗಿ ಹಲವು ತ್ಯಾಗ ಸಹಿಸಿದರು. ನಾವೂ ಹಲವು ತ್ಯಾಗಗಳನ್ನು ಮಾಡಿದೆವು. ಅವರು ದುರ್ಬಲರಿಗೆ ನೆರವಾದರು, ನಾವೂ ನೆರವಾದೆವು. ಅನೇಕ ದಾನ-ಧರ್ಮಗಳನ್ನು ನಾವೂ ಮಾಡಿದೆವು. ನಮಗೂ ಅವರಿಗೂ ವಾಹನ ಸವಾರಿಯಲ್ಲಿಯೂ ಸ್ಪರ್ಧೆಯಿತ್ತು. ಎರಡೂ ಗೋತ್ರಗಳು ಅಖಾಡದಲ್ಲಿರುವ ಕುದುರೆಗಳಂತೆ ಗೆಲ್ಲಲು ಶ್ರಮಿಸುತ್ತಿದ್ದೆವು. ಆದರೆ ಈಗ ಅವರು ನಮ್ಮಲ್ಲಿ ಓರ್ವ ಸಂದೇಶವಾಹಕನಿದ್ದಾನೆ. ಅವನಿಗೆ ದಿವ್ಯ ಸಂದೇಶಗಳು ಲಭಿಸುತ್ತಿವೆ ಎಂದು ಹೇಳುತ್ತಿದ್ದಾರೆ. ಅದನ್ನು ನಾವು ಸಹಿಸುವುದಾದರೂ ಹೇಗೆ? ಇಲ್ಲ ಸಾಧ್ಯವಿಲ್ಲ, ನಾವು ಅವನನ್ನು ಅಂಗೀಕರಿಸಲಾರೆವು. ಅವನಲ್ಲಿ ವಿಶ್ವಾಸವನ್ನೂ ತಾಳಲಾರೆವು'' ಎಂದು ಹೇಳಿದನು.

❖ ❖ ❖

18. ಅಂಧ ಸಹಾಬಿಯ ಪರವಾಗಿ ಅವತರಿಸಿದ ಕುರ್‌ಆನಿನ ವಚನಗಳು

ವಲೀದ್ ಬಿನ್ ಮುಗೀರ ಕುರೈಶರ ಪ್ರಮುಖ ಸರದಾರನಾಗಿದ್ದರು. ಮಕ್ಕಾದಲ್ಲಿರುವ ಪ್ರತಿಷ್ಠಿತರಲ್ಲಿ ಓರ್ವರೂ ಅತ್ಯಂತ ಗೌರವಾರ್ಹವುಳ್ಳ ವ್ಯಕ್ತಿಯೂ ಆಗಿದ್ದರು. ಅವರು ತೆಗೆದುಕೊಳ್ಳುವ ನಿರ್ಧಾರಗಳಿಗೆ ಕುರೈಶರು ಪ್ರಾಮುಖ್ಯತೆ ನೀಡುತ್ತಿದ್ದರು. ಆದ್ದರಿಂದ ಸಹಜವಾಗಿಯೇ ಪ್ರವಾದಿವರ್ಯರಲ್ಲಿ(ಸ) ವಲೀದ್ ಇಸ್ಲಾಮ್ ಸ್ವೀಕರಿಸಬೇಕೆಂಬ ಬಯಕೆಯಿತ್ತು. ಅವರು ಇಸ್ಲಾಮ್ ಸೀಕರಿಸಿದರೆ ಇಸ್ಲಾಮ್ ಪ್ರಬಲಗೊಳ್ಳುವುದು ಮತ್ತು ವಿರೋಧಗಳು ಕಡಿಮೆಯಾಗಬಹುದೆಂದು

ನಿರೀಕ್ಷೆ ಪ್ರವಾದಿವರ್ಯರಲ್ಲಿತ್ತು. ಕುರೈಶರ ಅಕ್ರಮ ಮರ್ದನಗಳಿಗೆ ತೆರೆ ಬೀಳಬಹುದೆಂಬ ಯೋಚನೆಯಿಂದ ವಲೀದ್ ಬಿನ್ ಮುಗೀರರನ್ನು ಪ್ರವಾದಿವರ್ಯರು(ಸ) ಮಾತುಕತೆಗೆ ಆಹ್ವಾನಿಸಿದ್ದರು. ಹೀಗೆ ವಲೀದ್‌ರ ಜೊತೆ ಗಂಭೀರ ಮಾತುಕತೆಯಲ್ಲಿ ನಿರತರಾಗಿರುವಾಗ ಅಬ್ದುಲ್ಲಾ ಬಿನ್ ಉಮ್ಮು ಮಕ್ತೂಮ್ ಎಂಬ ಅಂಧ ಸಹಾಬಿಯ ಪ್ರವೇಶವಾಗುತ್ತದೆ.

ಅವರು ಮಧ್ಯ ಬಂದು ಪ್ರವಾದಿವರ್ಯರೊಂದಿಗೆ ಕುರ್‌ಆನಿನ ವಚನಗಳನ್ನು ಓದಿ ಕೇಳಿಸುವಂತೆ ವಿನಂತಿಸಿದರು. ಗಂಭೀರ ಮಾತುಕತೆಯಲ್ಲಿ ನಿರತರಾಗಿದ್ದ ಪ್ರವಾದಿವರ್ಯರು(ಸ) ಅತ್ತ ಗಮನಹರಿಸದಾದರು. ಆಗ ಅಂಧ ಸಹಾಬಿಯು ತನ್ನ ವಿನಂತಿಯನ್ನು ಪುನರಾವರ್ತಿಸಿದರು. ಆದರೆ ಪ್ರವಾದಿವರ್ಯರು(ಸ) ಮಾತ್ರ ಅತ್ತ ಗಮನಹರಿಸಲಿಲ್ಲ. ಪ್ರವಾದಿವರ್ಯರ(ಸ) ಮುಖದಲ್ಲಿ ಸ್ವಲ್ಪ ನಿರ್ಲಕ್ಷ್ಯ ಭಾವ ಮೂಡಿತು. ಆದರೆ ಇದೊಂದೂ ಆ ಕಣ್ಣು ಕಾಣದ ಸಹಾಬಿಗೆ ತಿಳಿದಿರಲಿಲ್ಲ, ಒಂದು ವೇಳೆ ತಿಳಿದರೂ ಅವರು ಅದನ್ನು ಗಂಭೀರವಾಗಿ ಪರಿಗಣಿಸುತ್ತಿರಲಿಲ್ಲ, ಪ್ರವಾದಿವರ್ಯರು(ಸ) ಏನೋ ತುರ್ತು ಕಾರ್ಯದಲ್ಲಿದ್ದಾರೆಂದು ನಿರ್ಲಕ್ಷಿಸುತ್ತಿದ್ದರು. ಈ ಜಗತ್ತಿನ ಅಂತಿಮ ಸಂದೇಶವಾಹಕರೂ ವಿಶ್ವಗುರುವೂ ಲೋಕನಾಯಕನೂ ಆದ ಪ್ರವಾದಿ ಮುಹಮ್ಮದ್‌ರಿಂದ(ಸ) ಇಂತಹದ್ದೊಂದು ವರ್ತನೆಯಾಗುವುದನ್ನು ಅಲ್ಲಾಹನು ಇಷ್ಟಪಡಲಿಲ್ಲ. ಅಂಧನಾದ ಆ ಸಹಾಬಿವರ್ಯರು ನಿರ್ಲಕ್ಷಿತನಾಗಿರುವುದಕ್ಕೆ ಅಲ್ಲಾಹನು ಅದೇ ಪ್ರವಾದಿಯ ಮುಖಾಂತರ ಕುರ್‌ಆನಿನ ಸೂಕ್ತಗಳನ್ನು ಅವತೀರ್ಣಗೊಳಿಸಿದನು.

''ಅವರು ಮುಖ ಸಿಂಡರಿಸಿಕೊಂಡರು ಮತ್ತು ನಿರ್ಲಕ್ಷಿಸಿದರು. ಅವರ ಬಳಿಗೆ ''ಅಂಧನು'' ಬಂದುದಕ್ಕಾಗಿ ನಿಮಗೇನು ಗೊತ್ತು ಅವನು ಸ್ವತಃ ಸಂಸ್ಕರಿಸಿಕೊಳ್ಳಬಹುದು ಅಥವಾ ಉಪದೇಶಕ್ಕೆ ಗಮನ ಕೊಡಬಹುದು. ಆ ಉಪದೇಶವು ಅವನ ಪಾಲಿಗೆ ಫಲಕಾರಿಯಾಗಲೂ ಬಹುದು. ಯಾರು ನಿರ್ಲಕ್ಷ್ಯ ತಾಳುತ್ತಾರೋ ಅವರ ಕಡೆಗೆ ನೀವು ಗಮನ ಹರಿಸುತ್ತೀರಿ, ಅವನು ತನ್ನನ್ನು ಸಂಸ್ಕರಿಸಿಕೊಳ್ಳದಿದ್ದರೆ, ನಿಮ್ಮ ಮೇಲೆ ಅವನ ಹೊಣೆ ಏನಿದೆ. ತಾನಾಗಿಯೇ ನಿಮ್ಮ ಬಳಿಗೆ ಧಾವಿಸಿ ಬರುವವನು ಮತ್ತು (ಅಲ್ಲಾಹನನ್ನು) ಭಯ ಪಡುತ್ತಿರುವವನು, ಅವನನ್ನು ನೀವು ಕಡೆಗಣಿಸುತ್ತೀರಿ, ಖಂಡಿತ ಅಲ್ಲ, ಇದೊಂದು ಉಪದೇಶವಾಗಿರುತ್ತದೆ. ಇಷ್ಟವಿದ್ದವನು ಇದನ್ನು ಸ್ವೀಕರಿಸಲಿ, ಇದು ಗೌರವಾನ್ವಿತವಾದ ಉನ್ನತ ಮಟ್ಟದ, ಪಾವನವಾದ ಹೊತ್ತಗೆಗಳಲ್ಲಿ ಲಿಖಿತವಾಗಿದೆ.'' (ಅಬಸ: 1-14)

ಇಲ್ಲಿ ಕುರ್‌ಆನ್ ವಚನಗಳು ಅವತೀರ್ಣಗೊಂಡಿರುವುದು ಓರ್ವ ಸಾಮಾನ್ಯ ಅಂಧ ಸಹಾಬಿಯ ಪರವಾಗಿದೆ. ಅದು ಪ್ರವಾದಿವರ್ಯರ(ಸ) ವರ್ತನೆಯನ್ನು ಆಕ್ಷೇಪಿಸಿ

ಪ್ರವಾದಿ ವರ್ಯರ(ಸ) ಮುಖಾಂತರವೇ ಅವತರಿಸಲಾಯಿತು. ಅದರಂತೆ ಅಂಥ ಸಹಾಬಿಯ ಘಟನೆ ಪವಿತ್ರ ಗ್ರಂಥದಲ್ಲಿ ಲಿಖಿತಗೊಂಡು ಈ ಜಗತ್ತಿನಲ್ಲಿ ಅವರಂತೆ ನಿರ್ಲಕ್ಷಿಸಲ್ಪಡುತ್ತಿರುವವರಿಗೆ ಎಚ್ಚರಿಕೆ ನೀಡುವುದರೊಂದಿಗೆ ಇತಿಹಾಸದಲ್ಲಿ ಇಬ್ನು ಉಮ್ಮು ಮಕ್ತೂಮ್ ಅಮರರಾದರು.

❖ ❖ ❖

19. ಮರ್ದಿತನ ಹಕ್ಕನ್ನು ತೆಗೆದು ಕೊಟ್ಟ ಪ್ರವಾದಿ(ಸ)

ಇರಶ್ ಗೋತ್ರದ ಇಬ್ನುಲ್ ಗೌಸ್ ತನ್ನ ಒಂಟೆಯನ್ನು ಮಾರಲು ಮಕ್ಕಾಕ್ಕೆ ಬಂದಿದ್ದರು. ಮಕ್ಕಾದ ಮಾರುಕಟ್ಟೆಯಲ್ಲಿ ಒಂಟೆಯನ್ನು ಪ್ರದರ್ಶಿಸಿದರು. ಆ ಒಂಟೆಯನ್ನು ನೋಡಿ ಅಬೂಜಹಲ್‌ಗೆ ತುಂಬಾ ಸಂತೋಷವಾಯಿತು. ಆತ ಅದನ್ನು ಖರೀದಿಸಿದ. ಆದರೆ ಹಣ ಕೊಡಲಿಲ್ಲ, ಇದರಿಂದ ತೀವ್ರವಾಗಿ ನೊಂದ ಅವರು ಮಕ್ಕಾದ ಪ್ರಮುಖರೊಂದಿಗೆ ಅಬೂಜಹಲ್‌ನ ವಿರುದ್ಧ ದೂರು ನೀಡಿದರು. ಆದರೆ ಅವರ ಶ್ರಮವೆಲ್ಲವೂ ವ್ಯರ್ಥವಾಯಿತು. ಯಾರೂ ಅವರ ನೆರವಿಗೆ ಧಾವಿಸಲಿಲ್ಲ.

ಹೀಗೆ ಒಮ್ಮೆ ಇಬ್ನುಲ್‌ಗೌಸ್ ಕಅಬಾ ಭವನದ ಬಳಿ ಬಂದರು. ಅಲ್ಲಿ ಕುರೈಶರ ಕೆಲ ಸರದಾರರು ಹರಟೆ ಹೊಡೆಯುತ್ತಿದ್ದರು. ಅವರ ಬಳಿ ಹೋಗಿ ತನಗೆ ಅಬೂಜಹಲ್ ನಿಂದಾದ ಅನ್ಯಾಯದ ಬಗ್ಗೆ ವಿವರಿಸಿ ನನಗೆ ಸಹಾಯ ಮಾಡಿರಿ ಎಂದು ನಿವೇದಿಸುತ್ತಾರೆ. ಇದನ್ನೆಲ್ಲಾ ಕೇಳಿಸಿಕೊಂಡ ಅವರು ಅಲ್ಲಿಯೇ ಪ್ರಾರ್ಥನೆಯಲ್ಲಿ ನಿರತರಾಗಿದ್ದ ಪ್ರವಾದಿ ವರ್ಯರತ್ತ(ಸ) ಬೆರಳು ತೋರಿಸಿ, 'ನೋಡಿ ಆ ವ್ಯಕ್ತಿ ನಿಮ್ಮ ಹಣವನ್ನು ತೆಗೆಸಿಕೊಡುವರು' ಎಂದು ಹೇಳಿದರು. ನಿಜವಾಗಿ ಅವರು ಪ್ರವಾದಿವರ್ಯರನ್ನು(ಸ) ಅಣಕಿಸಲು ಈ ರೀತಿ ಹೇಳಿದ್ದರು. ಅಬೂಜಹಲ್ ಪ್ರವಾದಿವರ್ಯರನ್ನು(ಸ) ಕಠಿಣವಾಗಿ ವಿರೋಧಿಸುತ್ತಿದ್ದ, ಆತ ಎಂತಹ ಕುಕೃತ್ಯಕ್ಕೂ ಹೇಸದವನಾಗಿದ್ದ, ಆದ್ದರಿಂದ ಪ್ರವಾದಿವರ್ಯರೊಂದಿಗೆ(ಸ) ಈತ ದೂರಿತ್ತರೆ ಅವರು ಖಂಡಿತ ಹೋಗಲಿಕ್ಕಿಲ್ಲ ಎಂಬುದು ಅವರ ಊಹೆಯಾಗಿತ್ತು. ಅವನಲ್ಲಿ ಹಣ ಕೇಳುವ ಧೈರ್ಯ ಅವರು ತೋರಿಸಲಾರರೆಂದೇ ಅವರು ಭಾವಿಸಿದ್ದರು.

ಕುರೈಶರ ಮಾತು ಕೇಳಿದ ಇಬ್ನುಲ್ ಗೌಸ್ ಪ್ರವಾದಿವರ್ಯರ(ಸ) ಬಳಿಗೆ ಸಾಗಿ ನಡೆದ ಘಟನೆಯನ್ನು ವಿವರಿಸಿದರು. ''ನಾನು ಎಷ್ಟು ಬಾರಿ ಕೇಳಿದರೂ ಆತ ಹಣ ಕೊಡುತ್ತಿಲ್ಲ, ನಾನಾದರೋ ತುಂಬಾ ಬಡವನಾಗಿರುವೆನು. ಆದ್ದರಿಂದ ದಯವಿಟ್ಟು ನನ್ನ ಹಣವನ್ನು ತೆಗೆಸಿ ಕೊಡುತ್ತೀರಾ? ಎಂದು ಬಿನ್ನವಿಸಿದರು.

ಪ್ರವಾದಿವರ್ಯರು(ಸ) ಆತನಿಂದ ಘಟನೆಯ ಕುರಿತು ವಿವರವಾಗಿ ಅರಿತರು, ಅವರು ನೀಡಿದ ದೂರು ನ್ಯಾಯೋಚಿತವೆಂದು ಪ್ರವಾದಿವರ್ಯರಿಗೆ ಮನವರಿಕೆಯಾಯಿತು, ಕೂಡಲೇ ಆತನಿಗೆ ಹಣವನ್ನು ತೆಗೆದುಕೊಡಲು ನಿರ್ಧರಿಸಿದರು. ಇಬ್ನುಲ್ ಗೌಸ್‌ರೊಂದಿಗೆ ''ಬನ್ನಿ ನಾನು ನಿಮ್ಮ ಹಣ ತೆಗೆಸಿಕೊಡುತ್ತೇನೆ'' ಎಂದು ಹೇಳಿ ಅಬೂಜಹಲ್‌ನ ಮನೆಯತ್ತ ಹೊರಟರು.

ಇದನ್ನು ನೋಡಿದ ಆ ಕುರೈಶರ ಭಾವ ಬದಲಾಯಿತು. ಪ್ರವಾದಿವರ್ಯರನ್ನು ಅಣಕಿಸುತ್ತಿದ್ದ ಅವರು ಸ್ತಬ್ಧರಾದರು. ಯಾಕೆಂದರೆ ಅವರು ಇದನ್ನು ಊಹಿಸಿಯೇ ಇರಲಿಲ್ಲ. ಮರ್ದಿತನ ಮೊರೆ ಹಾಗೂ ದೇವನ ನಡುವೆ ಯಾವುದೇ ಅಡೆ ತಡೆಯಿರುವುದಿಲ್ಲ ಎಂದು ಕಲಿಸಿದ ವಿಶ್ವ ಗುರು, ಇಬ್ನುಲ್ ಗೌಸ್‌ರ ನಿವೇದನೆಯನ್ನು ನಿರಾಕರಿಸಿಯಾರೇ?

ಮುಹಮ್ಮದ್ ಹೇಳಿದರೂ ಅಬೂಜಹಲ್ ಅದನ್ನು ಕಿವಿಗೆ ಹಾಕಿಕೊಳ್ಳಲಾರ ಎಂದು ಆ ಕುರೈಶರು ತಮ್ಮನ್ನೇ ಸಮಾಧಾನ ಪಡಿಸಿದರು. ಆದರೂ ಅಲ್ಲಿ ನಡೆಯುತ್ತಿದ್ದ ವಿಚಾರದ ಕುರಿತು ಅರಿಯಲು ಪ್ರವಾದಿವರ್ಯರ(ಸ) ಹಿಂದೆಯೇ ಓರ್ವನನ್ನು ಕಳುಹಿಸಿದರು. ಪ್ರವಾದಿವರ್ಯರು(ಸ) ಹಾಗೂ ಇಬ್ನುಲ್ ಗೌಸ್ ಅಬೂಜಹಲ್‌ನ ಮನೆಗೆ ತಲುಪಿ ಬಾಗಿಲು ಬಡಿದರು. ಕೂಡಲೇ ಅಬೂಜಹಲ್ ಉಚ್ಚ ಸ್ವರದಲ್ಲಿ ''ಯಾರದು ಬಾಗಿಲು ಬಡಿಯುತ್ತಿರುವುದೆಂದು ಕೇಳಿದ. ''ಇದು ನಾನು ಮುಹಮ್ಮದ್. ಇಲ್ಲಿ ಬನ್ನಿ.'' ಕೂಡಲೇ ಅಬೂಜಹಲ್ ವಿನೀತ ಬಾಲಕನಂತೆ ಪ್ರವಾದಿವರ್ಯರ(ಸ) ಮುಂದೆ ಹಾಜರಾದ. ಪ್ರವಾದಿವರ್ಯರ(ಸ) ಮುಖ ಭಾವದಲ್ಲಿ ಗಂಭೀರತೆಯನ್ನು ಕಂಡು ಅಬೂಜಹಲ್ ಹೆದರಿ ಗಡಗಡ ನಡುಗತೊಡಗಿದ.

''ಈ ಬಡ ವ್ಯಕ್ತಿಯ ಹಣವನ್ನು ಈ ಕೂಡಲೇ ಕೊಟ್ಟುಬಿಡಿ'' ಎಂದು ಪ್ರವಾದಿವರ್ಯರು(ಸ) ಆದೇಶಿಸಿದರು.

''ಸರಿ ಈಗಲೇ ಕೊಡುತ್ತೇನೆ'' ಎನ್ನುತ್ತಾ ಮನೆಯೊಳಗೆ ಹೋಗಿ ತಡಮಾಡದೆ ಹಣದ ಗಂಟಿನೊಂದಿಗೆ ಮರಳಿದ. ಆಗಲೂ ಆತನ ಕೈಗಳು ನಡುಗುತ್ತಿತ್ತು. ಅಬೂಜಹಲ್ ಒಂಟೆಯ ಬೆಲೆಯನ್ನು ಇಬ್ನುಲ್ ಗೌಸ್‌ಗೆ ನೀಡಿದ.

ತನ್ನ ಹಣ ಮರಳಿ ಸಿಕ್ಕಿದಾಗ ಇಬ್ನುಲ್ ಗೌಸ್ ಹರ್ಷಚಿತ್ತರಾದರು. ಆತ ತನ್ನನ್ನು ಪ್ರವಾದಿವರ್ಯರ(ಸ) ಬಳಿಗೆ ಕಳುಹಿಸಿದ ಕಅಬಾದ ಬಳಿ ಇದ್ದ ಕುರೈಶ್ ಸರದಾರರ ಬಳಿ ಸಾಗಿದರು. ಬಳಿಕ ನಡೆದುದೆಲ್ಲವನ್ನೂ ವಿವರಿಸಿದರು. ಆದರೆ ಅವರು ನಂಬಲು ಸಿದ್ಧರಿರಲಿಲ್ಲ. ಸ್ವಲ್ಪ ಸಮಯದ ಬಳಿಕ ಅವರು ಕಳುಹಿಸಿದ ದೂತನ ಆಗಮನವಾಯಿತು.

ಂತ ನಿರಾಶಾಭಾವದಿಂದ "ನೋಡಿ ಆ ಮುಹಮ್ಮದ್(ಸ) ಹಣ ನೀಡಬೇಕೆಂದು ಕೇಳಿದ ತಕ್ಷಣ ಮರು ಮಾತನಾಡದೆ, ಆ ಪುಕ್ಕಲು ಮುದುಕ ಎಲ್ಲವನ್ನೂ ತಂದು ೀಡಿದ" ಎಂದು ಹೇಳಿದ.

❖ ❖ ❖

20. ಕುರ್‌ಆನ್ ವಚನಗಳೂ ಪರ್ಶಿಯನ್ ಪುರಾಣಗಳೂ

ವಿಶ್ವಗುರು ಪ್ರವಾದಿ ಮುಹಮ್ಮದ್‌ರ(ಸ) ನಾಲಗೆಯಿಂದ ಹೊರಬಂದ ಪವಿತ್ರ ವಚನಗಳು ಸಮಾಜವನ್ನು ಆಕರ್ಷಿಸಿತ್ತು. ಇದು ಇಸ್ಲಾಮಿನ ವಿರೋಧಿಗಳಿಗೆ ಸಹ್ಯವಾಗಲಿಲ್ಲ. ಇದನ್ನು ಅಣಕಿಸಲು ಅವರು ಮಾಡಿದ ಪ್ರಯತ್ನಗಳೆಲ್ಲಾ ವಿಫಲವಾದವು. ಅನ್ಯಾಯ, ಹಿಂಸೆ, ಮರ್ದನಗಳು ಮಿತಿ ಮೀರಿದರೂ ಇಸ್ಲಾಮಿನ ಬೆಳವಣಿಗೆಯ ಮೇಲೆ ಯಾವುದೇ ಪರಿಣಾಮ ಬೀರಲಿಲ್ಲ. ಪ್ರವಾದಿವರ್ಯರನ್ನು ಕವಿಯೆಂದೂ ಮಾಟಗಾರನೆಂದೂ ಹುಚ್ಚನೆಂದೂ ಅವರು ಮಾಡಿದ ಅಪಪ್ರಚಾರಗಳೂ ಫಲಿಸಲಿಲ್ಲ. ವಿರೋಧಿಗಳು ಎಷ್ಟು ಶ್ರಮಿಸಿದರೂ ಇಸ್ಲಾಮ್ ಸ್ವೀಕರಿಸುವವರ ಸಂಖ್ಯೆ ವರ್ಧಿಸುತ್ತಲೇ ಇತ್ತು. ವಿರೋಧಿಗಳು ಏನು ಮಾಡಬೇಕೆಂದು ತೋಚದೆ ಅಸಹಾಯಕತೆಯಿಂದ ಚಡಪಡಿಸಿದರು. ಕೊನೆಗೆ ಅವರೆಲ್ಲರೂ ಸೇರಿ ಹಾರಿಸ್‌ರ ಪುತ್ರ ನಳರ್‌ನನ್ನು ಆಯ್ಕೆ ಮಾಡಿ ಇಸ್ಲಾಮಿನ ವಿರುದ್ಧ ಛೂ ಬಿಟ್ಟರು. ಆತ ಕುರೈಶರಲ್ಲಿಯೇ ಅತೀ ಚಾಣಾಕ್ಷನಾಗಿದ್ದ. ಆತ ಅನೇಕ ಕಾಲ ಹಿರಾದಲ್ಲಿ ವಾಸವಾಗಿದ್ದ. ಆಗ ಪರ್ಶಿಯನ್ ಚಕ್ರವರ್ತಿಗಳ ಇತಿಹಾಸದ ಬಗ್ಗೆ ಆತ ಅಧ್ಯಯನ ಮಾಡಿದ್ದ. ಜೊತೆಗೆ ಅವರ ಆರಾಧನಾ ಕ್ರಮಗಳ ಕುರಿತೂ ಆಚಾರ-ವಿಚಾರಗಳ ಕುರಿತೂ ಆತ ಅರಿತಿದ್ದ. ಇವನ ಜ್ಞಾನವನ್ನೆಲ್ಲಾ ಉಪಯೋಗಿಸಿ ಕುರ್‌ಆನನ್ನು ಎದುರಿಸಲು ಕುರೈಶರು ತಂತ್ರ ಹೆಣೆದಿದ್ದರು. ಹಾಗೆಯೇ ಅವರು ನಳರ್‌ನನ್ನು ಪ್ರವಾದಿವರ್ಯರೆಡೆಗೆ(ಸ) ಕಳುಹಿಸಿದರು.

ಪ್ರವಾದಿವರ್ಯರು(ಸ) ಕುರ್‌ಆನಿನ ಸೂಕ್ತಗಳನ್ನು ಪಠಿಸುತ್ತಿದ್ದರು. ಕೂಡಲೇ ನಳರ್ ತನಗೆ ತಿಳಿದ ಪರ್ಶಿಯನ್ ಇತಿಹಾಸದ ಕಥೆಗಳನ್ನು ಉತ್ತಮ ರೀತಿಯಲ್ಲಿ ಸುಂದರವಾಗಿ ವಿವರಿಸ ತೊಡಗಿದನು. ಪ್ರವಾದಿವರ್ಯರು(ಸ) ಜನರೊಂದಿಗೆ ವೈಯಕ್ತಿಕವಾಗಿಯೂ ಹಾಗೂ ಸಣ್ಣ ಸಣ್ಣ ಗುಂಪಿನೊಂದಿಗೂ ನಡೆಸುತ್ತಿದ್ದ ಹ್ರಸ್ವ ಭಾಷಣಗಳನ್ನು ಈ ರೀತಿಯಲ್ಲಿ ಸೋಲಿಸಲು ನಳರ್ ಪರಮಾವಧಿ ಶ್ರಮಿಸಿದ. ತನ್ನ ಕಥೆ ಇತಿಹಾಸವನ್ನು ವಿವರಿಸಿದ ಬಳಿಕ ಆತ ಈ ರೀತಿ ಕೇಳುತ್ತಿದ್ದ, "ನನ್ನ ವಚನಗಳಿಗಿಂತ

ಮುಹಮ್ಮದರ(ಸ) ವಚನಗಳು ಶ್ರೇಷ್ಠವೆನ್ನಲು ಕಾರಣವೇನು? ನಾನು ಹೇಳುತ್ತಿರುವಂತಹ ಕಥೆಗಳಲ್ಲವೇ ಅವರೂ ಹೇಳುತ್ತಿರುವುದು.''

ಆದರೆ ಜನರು ಕುರೈಶರ ಮೇಲಿನ ಭಯದಿಂದ ನಳರ್‌ನ ಮಾತುಗಳನ್ನು ಆಲಿಸುತ್ತಿದ್ದರು. ಪ್ರವಾದಿವರ್ಯರ(ಸ) ಕುರ್‌ಆನ್ ವಚನಗಳನ್ನೂ ಸ್ವಇಚ್ಛೆಯಿಂದ ಕೇಳಿಸಿ ಕೊಳ್ಳುತ್ತಿದ್ದರು. ಆದರೆ ನಳರ್‌ನ ಮಾತುಗಳನ್ನು ಕೇಳಿಸಿಕೊಳ್ಳದಿದ್ದರೆ ಬರಲಿರುವ ಅನಾಹುತಗಳನ್ನೂ ಕುರ್‌ಆನನ್ನು ಕೇಳಿಸಿಕೊಂಡರೆ ಸಿಗುವ ಹಿಂಸೆ ದೌರ್ಜನ್ಯಗಳನ್ನೂ ಜ್ಞಾಪಿಸಿ ಅವರು ಭಯಪಡುತ್ತಿದ್ದರು. ಆ ಕಾರಣದಿಂದಲೇ ನಳರ್‌ನ ಕಥೆ ಪರ್ಶಿಯನ್ ಪುರಾಣಗಳು ಜನರ ಮನ ಸೆಳೆಯಲು ವಿಫಲವಾಯಿತು. ಆದರೆ ಪ್ರವಾದಿವರ್ಯರು(ಸ) ಓದಿದ ಕುರ್‌ಆನಿನ ವಚನಗಳು ಎದುರಾಳಿಗಳಲ್ಲೂ ಕುತೂಹಲವನ್ನೂ ಹುಟ್ಟಿಸುತ್ತಿತ್ತು.

❖ ❖ ❖

21. ವಿಫಲವಾದ ತಂತ್ರಗಳು

ಮಕ್ಕಾಗೆ ಆಗಮಿಸುವ ವಿದೇಶಿಗಳನ್ನು ಕುರೈಶರು ಮನವೊಲಿಸಲು ಪ್ರಯತ್ನಿಸುತ್ತಿದ್ದರು. ಪ್ರವಾದಿವರ್ಯರನ್ನು(ಸ) ಭೇಟಿಯಾಗುವುದರಿಂದ, ಅವರ ಕುರ್‌ಆನ್ ವಚನ ಕೇಳುವುದರಿಂದ ತಡೆಯಲು ಅವರು ತೀವ್ರ ಪ್ರಯತ್ನ ನಡೆಸುತ್ತಿದ್ದರು. ಹೀಗಿರುವಾಗ ಒಮ್ಮೆ ಯಮನ್‌ನಿಂದ ಮಕ್ಕಾಗೆ ಆಗಮಿಸಿದ ಅಮ್ರ್‌ರ ಮಗ ತುಫೈಲ್‌ರನ್ನು ಅವರು ಸಮೀಪಿಸಿದರು. ಅವರು ಅಲ್ಲಿನ ಪ್ರಸಿದ್ಧ ಕವಿಯೂ ಗಾಯಕನೂ ಆಗಿದ್ದರು. ಕುರೈಶರು ತುಫೈಲ್‌ರೊಡನೆ ಕುಶಲೋಪರಿ ವಿಚಾರಿಸುತ್ತಾ, ''ನಮ್ಮೂರಿನಲ್ಲಿ ಓರ್ವ ವ್ಯಕ್ತಿ ನಾನು ಪ್ರವಾದಿ ಎಂದು ಹೇಳಿಕೊಳ್ಳುತ್ತಿದ್ದಾನೆ. ಈ ವಿಷಯ ತಮ್ಮ ಅರಿವಿಗೆ ಬಂದಿರಬಹುದು. ಆತ ಎಂತಹವರನ್ನೂ ವಶೀಕರಣ ಮಾಡುತ್ತಾನೆ. ಅವನ ಮಾತುಗಳು ಎಂತಹವರನ್ನೂ ಆಕರ್ಷಿಸುವಂತಿರುತ್ತದೆ. ಅವನ ಮಾತು ಕೇಳಿದರೆ ಮತ್ತೆ ಅವನು ಹೋದಂತೆಯೇ. ಮತ್ತವನಿಂದ ಪಾರಾಗುವುದು ಕಷ್ಟ. ಹಾಗೆಯೇ ಅನೇಕರು ಇಲ್ಲಿ ಆತನ ಮೋಡಿಗೆ ಮರುಳಾಗಿ ತಾವು ಹಿಂದೆ ಅನುಸರಿಸುತ್ತಿದ್ದ ಮತವನ್ನು ನಿಂದಿಸುತ್ತಾರೆ. ಮಾತ್ರವಲ್ಲ, ಈಗ ನಮ್ಮ ಕುಟುಂಬದಲ್ಲಿಯೂ ಒಡಕು ಸೃಷ್ಟಿಸುತ್ತಿದ್ದಾನೆ. ಮಕ್ಕಳನ್ನು ತಂದೆ-ತಾಯಿಯರಿಂದಲೂ ಪತಿಯನ್ನು ಪತ್ನಿಯರಿಂದಲೂ ದೂರ ಮಾಡುತ್ತಿದ್ದಾನೆ. ಆ ಕಾರಣದಿಂದ ತಾವು ಅವನನ್ನು ಭೇಟಿಯಾಗಬೇಡಿ. ಅವನ ಮಾತುಗಳನ್ನು ಕೇಳಬಾರದು. ಏನಾದರೂ

ಅನಾಹುತ ಸಂಭವಿಸದಿರಲೆಂದು ತಮಗಾಗಿ ಈ ಮುನ್ನೆಚ್ಚರಿಕೆಯನ್ನು ನೀಡುತ್ತಿದ್ದೇವೆ ಎಂದು ಹೇಳಿದರು.

ಕುರೈಶರ ಈ ಮಾತುಗಳನ್ನು ಆಲಿಸಿದ ತುಫೈಲ್ ನೇರವಾಗಿ ಕಅಬಾದೆಡೆಗೆ ಸಾಗುತ್ತಾರೆ. ಆಗ ಪ್ರವಾದಿವರ್ಯರು(ಸ) ನಮಾಝಿನಲ್ಲಿ ನಿರತರಾಗಿದ್ದರು ಮತ್ತು ಸುತ್ತಮುತ್ತಲಿರುವವರು ಕೇಳಿಸುವಷ್ಟು ಉಚ್ಚ ಸ್ವರದಲ್ಲಿ ಕುರ್‌ಆನ್ ಪಠಿಸುತ್ತಿದ್ದರು. ಒಂದು ಕ್ಷಣ ತುಫೈಲ್‌ರ ಕಿವಿಯನ್ನೂ ಅದು ಪ್ರವೇಶಿಸಿತು. ಎಷ್ಟೇ ನಿಯಂತ್ರಿಸಲು ಶ್ರಮಿಸಿದರೂ ಅವರಿಗೆ ಅದನ್ನು ನಿಯಂತ್ರಿಸಲು ಸಾಧ್ಯವಾಗದೆ ಆಕರ್ಷಿತವಾಗಿ ಅವರಲ್ಲಿ ಕಂಪನ ಸೃಷ್ಟಿಸಿತು. ಮನಸ್ಸು ಆರ್ದ್ರವಾಯಿತು. ಕುರ್‌ಆನಿನ ವಚನಗಳ ಅರ್ಥ ಮಾಧುರ್ಯವು ಅವರ ಅಂತರಾಳವನ್ನು ಪ್ರವೇಶಿಸುತ್ತಿತ್ತು. ಪ್ರವಾದಿವರ್ಯರ(ಸ) ನಮಾಝ್ ಮುಗಿಯುವ ವರೆಗೂ ಕುರ್‌ಆನಿನ ಸ್ವರ ಮಾಧುರ್ಯವನ್ನು ಆಲಿಸಿದರು. ನಮಾಝ್ ಮುಗಿಸಿ ಮನೆಯತ್ತ ಹೊರಟ ಪ್ರವಾದಿವರ್ಯರನ್ನು(ಸ) ತುಫೈಲ್ ಹಿಂಬಾಲಿಸಿದರು. ಮನೆಗೆ ತಲುಪಿದ ಕೂಡಲೇ ನಡೆದುದೆಲ್ಲವನ್ನೂ ಪ್ರವಾದಿವರ್ಯರ(ಸ) ಮುಂದೆ ವಿವರಿಸಿದರು. ಸಂದರ್ಭವನ್ನು ಅರ್ಥೈಸಿಕೊಂಡ ಪ್ರವಾದಿವರ್ಯರು(ಸ) ಕುರ್‌ಆನಿನ ಕೆಲವು ಸೂಕ್ತಗಳನ್ನು ಓದಿ ಕೇಳಿಸಿದರು. ಎಲ್ಲವನ್ನು ಗಮನವಿಟ್ಟು ಆಲಿಸಿದ ತುಫೈಲ್ ಈ ರೀತಿ ಹೇಳಿದರು, ''ಅಲ್ಲಾಹನಾಣೆ! ಅವನು ಎಲ್ಲವನ್ನೂ ಬಲ್ಲವನು, ಎಲ್ಲರ ಮೇಲೆ ಸಾಮರ್ಥ್ಯವಿರುವವನೂ ಆಗಿದ್ದಾನಲ್ಲವೇ. ನಾನು ಇದುವರೆಗೆ ಕೇಳಿಸಿದ ವಚನಗಳಿಗೆ ಸರಿಸಾಟಿಯಾದ ವಚನಗಳು ಅರಬಿ ಸಾಹಿತ್ಯದಲ್ಲಿ ಕಾಣಸಿಗದು. ನಿಶ್ಚಯವಾಗಿಯೂ ಇದು ಅತ್ಯುತ್ಕೃಷ್ಟವಾದ ವಚನಗಳಾಗಿವೆ. ಇಂಥದ್ದೊಂದು ವಚನಗಳನ್ನು ಈ ಹಿಂದೆ ನಾನೆಲ್ಲಿಯೂ ಕೇಳಿಲ್ಲ, ಅಲ್ಲಾಹನಾಣೆ! ಇದು ಮನುಷ್ಯ ನಿರ್ಮಿತ ವಚನವಲ್ಲ, ಓರ್ವ ಮನುಷ್ಯನಿಗೆ ಇಂತಹ ವಚನ ರಚಿಸಲು ಸಾಧ್ಯವಿಲ್ಲ, ಆದ್ದರಿಂದ ಖಂಡಿತವಾಗಿಯೂ ಇದು ದೇವ ವಚನಗಳಾಗಿವೆ.

ಅರಬಿ ಸಾಹಿತ್ಯ ಲೋಕದ ಮೇರು ವ್ಯಕ್ತಿತ್ವವೊಂದು ಕುರ್‌ಆನಿನ ವಚನಗಳಿಗೆ ಮಾರು ಹೋಗಿ ಅದರ ಮುಂದೆ ಸರ್ವವನ್ನೂ ಸಮರ್ಪಿಸಿದರು. ತಮ್ಮ ಎಲ್ಲಾ ಪ್ರಯತ್ನಗಳು ವಿಫಲವಾಗುತ್ತಿರುವುದನ್ನು ನೋಡಿದ ಕುರೈಶರು ನಿರಾಶೆಯಿಂದ ಕನಲಿದರು. ಯಾಕೆಂದರೆ ತುಫೈಲ್ ಅಷ್ಟೊಂದು ಸುಪ್ರಸಿದ್ಧರೂ ಜನಪ್ರಿಯರೂ ಆದ ವ್ಯಕ್ತಿಯಾಗಿದ್ದರು. ಅದೇ ರೀತಿ ಮಕ್ಕಾ ಪ್ರವೇಶಿಸುವ ವಿದೇಶಿಯರನ್ನು ವಂಚಿಸುವುದು ಮಹಾವಂಚನೆಯಾಗಿತ್ತು. ಅದು ಅನಾಹುತಗಳನ್ನು ಮೈಮೇಲೆ ಎಳೆದುಕೊಂಡಂತಾಗಿತ್ತು.

❖ ❖ ❖

22. ದಾರಿ ತಪ್ಪಿಸಿದ ಗೆಳೆಯ

ಉಕ್‌ಬಾ ಮಕ್ಕಾದ ಪ್ರತಿಷ್ಠಿತರಲ್ಲಿ ಓರ್ವನಾಗಿದ್ದ. ಅತೀ ಶ್ರೀಮಂತನಾಗಿ ಅವನು, ತಾನು ಏನನ್ನೂ ಮಾಡಬಲ್ಲೆನೆಂಬ ದುರಹಂಕಾರಿಯಾಗಿದ್ದ. ತನಗೆ ಇಸ್ಲಾಮ ಸತ್ಯ ಎಂಬುದು ಮನವರಿಕೆಯಾಗಿದ್ದರೂ ತನ್ನ ದುರಹಂಕಾರದಿಂದ ಇಸ್ಲಾಮ ಸ್ವೀಕರಿಸಲು ನಿರಾಕರಿಸಿದ್ದ.

ಒಮ್ಮೆ ಉಕ್‌ಬಾ ಒಂದು ಸತ್ಕಾರ ಕೂಟವೊಂದನ್ನು ಏರ್ಪಡಿಸಿದ್ದ. ಆ ಸತ್ಕಾರ ಊರ ಪ್ರಮುಖರನ್ನು ಆಹ್ವಾನಿಸಿದ್ದ. ಪ್ರವಾದಿವರ್ಯರನ್ನು(ಸ) ನಿರ್ಲಕ್ಷಿಸಲು ಸಾಧ್ಯವಾಗದ ಕಾರಣ ಅವರನ್ನೂ ಆಹ್ವಾನಿಸಿದ್ದನು.

ಪ್ರವಾದಿವರ್ಯರ(ಸ) ಸಂದೇಶವನ್ನು ಮನಃಪೂರ್ವಕ ಆಲಿಸಿದ ಉಕ್‌ಬಾ ಇಸ್ಲಾಮ್ ಸ್ವೀಕರಿಸಲು ಸನ್ನದ್ಧನಾದ. ಆದರೆ ಘಟನೆಯ ಸ್ಥಳದಲ್ಲಿ ಪ್ರತ್ಯಕ್ಷದರ್ಶಿಯಾದ ಸ್ನೇಹಿತ ಉಬಯ್ಯನಿಗೆ ಇದು ಹಿಡಿಸಲಿಲ್ಲ. ಆತ ಉಕ್‌ಬಾನ ಆಪ್ತ ಮಿತ್ರನಾಗಿದ್ದ ಹಾಗೆಯೇ ಪ್ರವಾದಿವರ್ಯರ(ಸ) ವಿರೋಧಿಗಳಲ್ಲಿ ಮುಂಚೂಣಿಯಲ್ಲಿದ್ದ. ಉಬಯ್ ಕೂಡಲೇ ತನ್ನ ಮಿತ್ರ ಉಕ್‌ಬಾನನ್ನು ತೀವ್ರವಾಗಿ ವಿಮರ್ಶಿಸಿ ಖಂಡಿಸಿದನು. ಕೊನೆಗೆ ಉಕ್‌ಬಾ ಪಶ್ಚಾತ್ತಾಪ ಪಟ್ಟವನಂತೆ, ''ನಾನು ಆಹ್ವಾನಿಸಿದ ಓರ್ವ ಅತಿಥಿಯ ಮೇಲಿನ ಗೌರವದಿಂದ ಇಸ್ಲಾಮ್ ಸ್ವೀಕರಿಸಿದೆ'' ಎಂದನು.

ಇದರಿಂದ ಉಬಯ್ಯನಿಗೆ ತೃಪ್ತಿಯಾಗಲಿಲ್ಲ. ಇದಕ್ಕೆ ಪ್ರಾಯಶ್ಚಿತ್ತವಾಗಿ ''ನೀನು ಪ್ರವಾದಿ ವರ್ಯರ(ಸ) ಭುಜಕ್ಕೆ ತುಳಿಯಬೇಕು ಮತ್ತು ಅವರ ಮುಖಕ್ಕೆ ಕ್ಯಾಕರಿಸಿ ಉಗಿಯಬೇಕು. ಅದರ ಹೊರತು ನನ್ನ ಹಾಗೂ ನಿನ್ನ ನಡುವೆ ಯಾವುದೇ ಗೆಳೆತನವಿರದು'' ಎಂದನು.

ಉಬಯ್ಯ್‌ನ ಕೋರಿಕೆಯನ್ನು ಉಕ್‌ಬಾನಿಗೆ ನಿರಾಕರಿಸಲಾಗಲಿಲ್ಲ. ತುಂಬಿದ ಜನರ ನಡುವೆ ಆತ ಪ್ರವಾದಿವರ್ಯರ(ಸ) ಪಾವನ ಮುಖಕ್ಕೆ ಕ್ಯಾಕರಿಸಿ ಉಗುಳಿದನು. ಕೆಡುಕನ್ನು ಒಳಿತಿನಿಂದಲೇ ತಡೆಯಿರಿ. ಅದು ಮಹಾ ಸೌಭಾಗ್ಯವಂತರ ಹಾದಿ ಸಹನೆ ವಹಿಸುವುದರಲ್ಲಿದೆ ಎಂಬ ಕುರ್‌ಆನಿನ ಸಂದೇಶವನ್ನು ಶಿರಸಾ ಪಾಲಿಸಿದ ಪ್ರವಾದಿವರ್ಯರು(ಸ) ತಾಳ್ಮೆ, ಸಹನೆಯಿಂದ ಮುಖವನ್ನು ಒರೆಸುತ್ತಾ ಮುಂದೆ ಸಾಗಿದರು. ಅವರು ಅದಕ್ಕೆ ಕೋಪ ಪ್ರಕಟಿಸುವುದಾಗಲೀ ಮುಖ ಸಿಂಡರಿಸುವುದಾಗಲೀ ಮಾಡಲಿಲ್ಲ. ಆಗಲೂ ಅವರ ಮುಖದಲ್ಲಿ ಆ ದುಷ್ಟರ ಬಗ್ಗೆ ಅನುಕಂಪವಿತ್ತು. ಈ ಕೃತ್ಯದಿಂದ ಅವರು ಕೆಟ್ಟ ಪರಿಣಾಮ ಎದುರಿಸಬೇಕಾಗಬಹುದೆಂಬ ಪ್ರವಾದಿವರ್ಯರ(ಸ) ಆತಂಕ ನಿಜವಾಯಿತು. ಉಕ್‌ಬಾನ ನಿರೀಕ್ಷೆಯಲ್ಲಿದ್ದ ಪರಲೋಕದ ಕುರಿತು ಅಲ್ಲಾಹನು

ನ್ನ ದಿವ್ಯ ಗ್ರಂಥದಲ್ಲಿ ವಿವರಿಸಿದನು. ''ಆ ದಿನ ಆ ಅಕ್ರಮಿಯು ತನ್ನ ಕೈ ಬೆರಳನ್ನು ಚ್ಚಿಕೊಳ್ಳುವನು ಮತ್ತು ಅಕಟ! ನಾನು ಪ್ರವಾದಿ ವರ್ಯರೊಂದಿಗೆ(ಸ) ಸಹಕರಿಸುತ್ತಿದ್ದರೆ! ಯ್ಯೋ ನನ್ನ ದುರ್ದೆಸೆಯೇ. ಅಕಟ! ನಾನು ಆ ವ್ಯಕ್ತಿಯನ್ನು ಮಿತ್ರನನ್ನಾಗಿ ಮಾಡಿಕೊಳ್ಳದಿರುತ್ತಿದ್ದರೆ. ಅವನ ದುರ್ಬೋಧನೆಗೆ ಮರುಳಾಗಿ ನನ್ನ ಬಳಿ ಬಂದಿದ್ದ ದ್ಬೋಧನೆಯನ್ನು ನಾನು ಸ್ವೀಕರಿಸಲಿಲ್ಲ, ಶೈತಾನನು ಮಾನವನ ಪಾಲಿಗೆ ಮಹಾ ಘಾತಕನಾಗಿಬಿಟ್ಟನು'' ಎಂದು ಹೇಳುವನು. (ಅಲ್ ಫುರ್ಕಾನ್: 27,28,29)

❖ ❖ ❖

23. ಪವಿತ್ರ ವಚನಗಳ ಉಗಮಕ್ಕೆ ಕಾರಣವಾದ ಕಣ್ಣೀರು

ಪ್ರವಾದಿವರ್ಯರು(ಸ) ಒಂದೆಡೆ ವಿಶ್ರಾಂತಿಯಲ್ಲಿದ್ದರು. ಜೊತೆಯಲ್ಲಿ ಉಮರ್ ಫಾರೂಕ್ ಮುಂತಾದ ಅನುಚರರೂ ಇದ್ದರು. ಆಗ ಗ್ರಾಮೀಣ ಅರಬನೋರ್ವನ ಆಗಮನವಾಯಿತು. ಅವರು ಪ್ರವಾದಿವರ್ಯರ(ಸ) ಬಳಿ ಮಾತುಕತೆಯಲ್ಲಿ ನಿರತರಾದರು. ಈ ಮಾತುಕತೆಯ ಮಧ್ಯೆ ತನ್ನ ಗತಕಾಲದ ಅನುಭವವೊಂದನ್ನು ವಿವರಿಸತೊಡಗಿದರು. ಅವರು ಹೆಣ್ಮಕ್ಕಳು ಜನಿಸಿದರೆ ಅವಮಾನವೆಂದು ಭಾವಿಸಿದ ಗೋತ್ರದವರಾಗಿದ್ದರು. ಆದಕ್ಕಾಗಿ ಅವರು ತಮಗೆ ಹುಟ್ಟಿದ ಹೆಣ್ಮಕ್ಕಳನ್ನು ಜೀವಂತ ಹೂಳುತ್ತಿದ್ದರು. ಅವರು ಕೂಡ ಇಂತಹ ಕ್ರೂರ ಕೃತ್ಯದಲ್ಲಿ ಭಾಗಿಯಾಗಿದ್ದರು. ಆ ಘಟನೆಯನ್ನು ಅವರು ಪ್ರವಾದಿವರ್ಯರ(ಸ) ಮುಂದೆ ವಿವರಿಸಿದರು. ಅವರಿಗೆ ಓರ್ವ ಮಗಳಿದ್ದಳು. ಅವರು ಅವಳನ್ನು ಅತಿಯಾಗಿ ಪ್ರೀತಿಸುತ್ತಿದ್ದರು. ಆದರೂ ಅವರಿಗೆ ಸಮಾಜದಿಂದ ಕೇಳಿಬಂದ ಅವಮಾನವನ್ನು ಸಹಿಸಲಾಗಲಿಲ್ಲ, ಜೊತೆಗೆ ತಮ್ಮ ಆತ್ಮೀಯರೆನಿಸಿಕೊಂಡವರು ಈ ಅವಮಾನದಿಂದ ಮುಕ್ತಿ ಪಡೆಯಲು ಪ್ರೇರೇಪಿಸುತ್ತಿದ್ದರು. ಕೊನೆಗೆ ಅವರು ಕೂಡಾ ಗೆಳೆಯರ ಆಗ್ರಹದಂತೆ ಅವಳನ್ನು ಹೂಳಲು ನಿರ್ಧರಿಸಿದರು.

ಒಂದು ದಿನ ಅವಳನ್ನು ಸ್ನಾನ ಮಾಡಿಸಿ ಹೊಸ ವಸ್ತ್ರಗಳನ್ನು ಅವಳಿಗೆ ತೊಡಿಸಿದರು. ಅವಳಿಗೆ ಬೇಕಾದ ಆಹಾರವನ್ನೂ ನೀಡಿದರು. ಆ ಮುಗ್ಧ ಮಗುವಿಗೆ ಆಗಲೂ ಇದು ನನ್ನ ಕೊನೆಯ ಆಹಾರವೆಂಬುದರ ಅರಿವಿರಲಿಲ್ಲ, ಅವಳು ತನ್ನ ತಂದೆಯ ಕೈ ಹಿಡಿದು ಹೊರಡಲು ಅನುವಾದಳು. ಸ್ವಲ್ಪ ದೂರ ಸಾಗಿದಾಗ ನಿರ್ಜನ ಪ್ರದೇಶವೊಂದರ ಬಳಿ ನಿಲ್ಲಿಸಿದರು. ಆ ಗ್ರಾಮೀಣ ಅರಬ ತನ್ನ ಮಗಳನ್ನು

ಸಮೀಪದಲ್ಲಿ ನಿಲ್ಲಿಸಿ ಹೊಂಡ ಅಗೆಯಲು ಪ್ರಾರಂಭಿಸಿದನು. ಅಗೆಯುತ್ತಿರುವಾ ಆತನ ಗಡ್ಡಗಳಲ್ಲಿ ಅಂಟಿಕೊಂಡ ಮಣ್ಣನ್ನು ಆ ಪುಟ್ಟ ಬಾಲಕಿ ತನ್ನ ಕೋಮಲ ಕೈಯಿಂದ ಒರೆಸಿ ತೆಗೆಯುತ್ತಿದ್ದಳು. ಆದರೆ ಇದ್ಯಾವುದೂ ಆತನ ನಿರ್ಧಾರವನು ಬದಲಿಸುವುದಕ್ಕೆ ಸಾಧ್ಯವಾಗಲಿಲ್ಲ.

ಹೊಂಡ ಅಗೆದು ಸಂಪೂರ್ಣವಾದಾಗ ಆಕೆಯನ್ನೆತ್ತಿ ಆ ಹೊಂಡದೊಳಕ್ಕೆ ಹಾಕಿದನು ಆ ಬಾಲಕಿ ಜೋರಾಗಿ ಅಳ ತೊಡಗಿದಳು. ಆಗ ಅವಳು ತನ್ನ ತಂದೆಯನ್ನೇ ಕರೆಯುತ್ತಿದ್ದಳು. ಆದರೂ ಆತ ತನ್ನ ಅಚಲ ನಿರ್ಧಾರದಲ್ಲಿಯೇ ಲೀನವಾಗಿದ್ದ, ಕೊನೆಗೆ ಮರಳನ್ನು ಬಾಚಿ ತೆಗೆದು ಅವಳ ಬಾಯಿಗೆ ಮಣ್ಣು ತುರುಕಿದನು. ಅವಳು ನಿಶ್ಶಬ್ದಳಾದಳು, ನಿಶ್ಚಲಳಾದಳು. ಬಳಿಕ ಮಣ್ಣು ಹಾಕಿ ಅವಳನ್ನು ಹೂತು ಬಿಟ್ಟನು. ಪ್ರವಾದಿವರ್ಯರೊಂದಿಗೆ(ಸ) ಆತ ಈ ಘಟನೆ ವಿವರಿಸುವಾಗ ಆತನಲ್ಲಿ ಯಾವುದೇ ಭಾವನೆ ಪ್ರಕಟವಾಗಿರಲಿಲ್ಲ, ಕಾರಣ ಅವನಿಗದು ಸಾಮಾನ್ಯವಾಗಿತ್ತು. ಅದು ಅನೇಕ ಹೆಣ್ಮಕ್ಕಳನ್ನು ಜೀವಂತ ಹೂತು ಹಾಕಿದ ಸಮಾಜವಾಗಿತ್ತು.

ಆದರೆ ಗ್ರಾಮೀಣ ಹೇಳಿದ ಘಟನೆಯನ್ನು ಕೇಳಿದ ಪ್ರವಾದಿವರ್ಯರನ್ನು(ಸ) ಗದ್ಗದಿತರನ್ನಾಗಿಸಿತು. ಅವರ ಕಣ್ಣುಗಳು ತುಂಬಿದವು. ಕಣ್ಣಿಂದ ಹರಿದ ನೀರು ಅವರ ಗಡ್ಡಗಳಲ್ಲಿ ಹರಿದು ನೆಲಕ್ಕೆ ತೊಟ್ಟಿಕ್ಕಿತು. ಕೆಲವೇ ಸಮಯದಲ್ಲಿ ಈ ದುಃಖವನ್ನು ನೋವನ್ನು ವಿಶ್ವ ಸಿಂಹಾಸನವು ಸ್ವೀಕರಿಸಿತು. ಎಲ್ಲಿಯೇ ಆಗಲಿ, ಯಾವುದೇ ಆಗಲಿ ಕ್ರೂರವಾಗಿ, ಅನ್ಯಾಯವಾಗಿ ಕೊಲೆಗೈಯಲ್ಪಡುವ ಹಸುಳೆಗಳಿಗಾಗಿ ಪ್ರವಾದಿವರ್ಯರ(ಸ) ಕಣ್ಣೀರ ಹನಿಗಳಿಗೆ ಉತ್ತರವಾಗಿ ದೇವರು ಕುರ್‌ಆನ್ ಸೂಕ್ತಗಳನ್ನು ಅವತರಿಸಿದನು. ಹಸುಳೆಗಳನ್ನು ಕೊಲ್ಲುವ ಕ್ರೂರ ಕೃತ್ಯ ಗೈಯುವವರಿಗೆ ತಾಕೀತಾಗಿ ಅವತೀರ್ಣಗೊಳಿಸಿದನು. ''ಜೀವಂತ ಹೂಳಲ್ಪಟ್ಟ ಹೆಣ್ಣು ಮಗು ವಿನೊಡನೆ ಯಾವ ತಪ್ಪಿಗಾಗಿ ಅವಳನ್ನು ಕೊಲ್ಲಲಾಯಿತೆಂದು ಕೇಳಲಾಗುವಾಗ.''(ಅತ್ತಕ್‌ವೀರ್: 8,9)

❖ ❖ ❖

24. ಅದ್ದಾಸ್‌ರ ಇಸ್ಲಾಮ್ ಸ್ವೀಕಾರ

ಪ್ರವಾದಿತ್ವದ ಹತ್ತನೇ ವರ್ಷ. ಇಸ್ಲಾಮಿನ ಸಂದೇಶ ಸಾರಲು ತಾಯಿಫ್‌ಗೆ ಹೋದ ಪ್ರವಾದಿವರ್ಯರನ್ನು(ಸ) ಅಲ್ಲಿನ ಜನರು ತಿರಸ್ಕರಿಸಿ ಅಟ್ಟಿದರು. ಅಲ್ಲಿಂದ ಬಂದ ಪ್ರವಾದಿವರ್ಯರು(ಸ) ಉತ್‌ಬಾ ಹಾಗೂ ಶೈಬಾನ ತೋಟದಲ್ಲಿ ವಿಶ್ರಾಂತಿ ಪಡೆಯುತ್ತಿದ್ದರು. ಪ್ರವಾದಿವರ್ಯರ(ಸ) ದೇಹಕ್ಕೂ ಮನಸ್ಸಿಗೂ ತೀವ್ರ ಆಘಾತವಾಗಿದ್ದ

ಸಂದರ್ಭವದು. ಅವರು ತುಂಬಾ ದಣಿದಿದ್ದರು. ಆದರೂ ನಿರಾಶರಾಗಿರಲಿಲ್ಲ. ಒಂದು ಮರದ ಬುಡದಲ್ಲಿ ಕೂತು ಅಲ್ಲಾಹನೊಡನೆ ಈ ರೀತಿ ಪ್ರಾರ್ಥಿಸಿದರು. ''ಓ ಅಲ್ಲಾಹ್, ನಾನು ನನ್ನ ಅಸಹಾಯಕತೆ, ಬಲ ಹೀನತೆ ಮತ್ತು ಜನರಿಂದ ನನಗಾದ ಅವಮಾನದ ಬಗ್ಗೆ ನಿನ್ನಲ್ಲಿಯೇ ಮೊರೆಯಿಡುತ್ತೇನೆ. ಓ ದಯಾಮಯರಲ್ಲಿ ಶ್ರೇಷ್ಠ ದಯಾಮಯನೇ! ನೀನು ಎಲ್ಲ ಬಲಹೀನರ ಪ್ರಭುವಾಗಿರುವೆ. ನನ್ನ ಪ್ರಭುವೂ ನೀನೇ ಆಗಿರುವೆ. ನನ್ನನ್ನು ನೀನು ಯಾರ ವಶಕ್ಕೆ ಒಪ್ಪಿಸಿರುವೆ? ನನ್ನೊಂದಿಗೆ ಕಠಿಣವಾಗಿ ವರ್ತಿಸುವ ಅಪರಿಚಿತರ ವಶಕ್ಕೆ ಒಪ್ಪಿಸುವೆಯಾ? ನೀನು ನನ್ನಲ್ಲಿ ಕುಪಿತನಾಗಿರದಿದ್ದರೆ ನನಗೆ ಯಾವ ಸಂಕಷ್ಟದ ಪರಿವೆಯೂ ಇಲ್ಲ. ನಿನ್ನ ಕಡೆಯಿಂದ ಕ್ಷೇಮವು ಲಭಿಸಿದರೆ ಅದರಲ್ಲಿ ನನ್ನ ಪಾಲಿಗೆ ಹೆಚ್ಚು ಶ್ರೇಯಸ್ಸು ಇದೆ. ನಾನು ಅಂಧಕಾರದಲ್ಲಿ ಬೆಳಕಾಗಿರುವ ಮತ್ತು ಇಹ ಪರಲೋಕಗಳ ವ್ಯವಹಾರಗಳನ್ನು ಸುಗಮಗೊಳಿಸುವ ನಿನ್ನ ಜ್ಯೋತಿಯ ಆಶ್ರಯ ಯಾಚಿಸುತ್ತೇನೆ.'' ನಿನ್ನ ಕ್ರೋಧ ನನ್ನ ಮೇಲೆ ಎರಗುವುದರಿಂದ ನನ್ನನ್ನು ರಕ್ಷಿಸು, ನಿನ್ನ ಶಾಪಕ್ಕೆ ಗುರಿಯಾಗುವುದರಿಂದ ನನ್ನನ್ನು ಕಾಪಾಡು. ನಾನು ನಿನ್ನ ಇಚ್ಛೆಯಲ್ಲಿ ಸಂತೃಪ್ತನಾಗಿರುವಂತೆ ಮಾಡು. ನೀನೂ ನನ್ನಿಂದ ಸಂತೃಪ್ತನಾಗು. ನಿನ್ನ ಹೊರತು ಯಾರಲ್ಲಿಯೂ ಯಾವುದೇ ಶಕ್ತಿ ಸಾಮರ್ಥ್ಯಗಳಿಲ್ಲ.

ಪ್ರವಾದಿವರ್ಯರ(ಸ) ಮುಖದಲ್ಲಿ ದಣಿವು ಮತ್ತು ಹಸಿವಿನ ತೀವ್ರತೆಯ ಲಕ್ಷಣಗಳು ಗೋಚರವಾಗತೊಡಗಿತ್ತು. ಇದನ್ನು ಕಂಡ ಶೈಬ ಹಾಗೂ ಉತ್‌ಬಾರಿಗೆ ಪ್ರವಾದಿವರ್ಯರ(ಸ) ಮೇಲೆ ಅನುಕಂಪ ಮೂಡಿತು. ಅವರೀರ್ವರೂ ಇಸ್ಲಾಮಿನ ಪರಮ ವೈರಿಗಳಾಗಿದ್ದರು. ಆದರೂ ಪ್ರವಾದಿವರ್ಯರೊಂದಿಗಿನ ವ್ಯಕ್ತಿ ಸಂಬಂಧವನ್ನು ಕಡಿದಿರಲಿಲ್ಲ. ಅವರು ತಮ್ಮ ಸೇವಕ ಅದ್ದಾಸ್‌ನ ಜೊತೆ ತೋಟದಲ್ಲಿನ ದ್ರಾಕ್ಷಿಗಳನ್ನು ಕಿತ್ತು ಕಳುಹಿಸಿಕೊಟ್ಟರು. ಅದ್ದಾಸ್ ನೀಡಿದ ದ್ರಾಕ್ಷಿಯ ಗೊಂಚಲನ್ನು ಪ್ರವಾದಿ(ಅ) 'ಬಿಸ್ಮಿಲ್ಲಾಹ್'(ಪರಮ ದಯಾಮಯನಾದ ಅಲ್ಲಾಹನ ನಾಮದಿಂದ) ಎನ್ನುತ್ತಾ ತಿನ್ನ ತೊಡಗಿದರು. ಇದನ್ನು ನೋಡಿದ ಅದ್ದಾಸ್ ''ಈ ನಾಡಿನಲ್ಲಿ ಈ ವಚನವನ್ನು ಯಾರೂ ಹೇಳುವುದಿಲ್ಲವಲ್ಲ, ಎಂದು ಆಶ್ಚರ್ಯ ವ್ಯಕ್ತಪಡಿಸಿದರು.''

ಆಗ ಪ್ರವಾದಿವರ್ಯರು(ಸ) ಕೇಳಿದರು, ''ನೀವು ಯಾವ ಊರಿನವರು?''

''ನನ್ನ ಊರಿನ ಹೆಸರು ನೈನವಾ'' ಎಂದು ಅದ್ದಾಸ್ ಉತ್ತರಿಸಿದರು.

''ಹಾಗಾದರೆ ನನ್ನ ಸಹೋದರ ಯೂನುಸ್ ಎಂಬ ಪ್ರವಾದಿಯ(ಅ) ಊರಿನವರು ಅಲ್ಲವೇ?'' ಎಂದು ಕೇಳಿದಾಗ ಆತ ಇನ್ನೂ ಆಶ್ಚರ್ಯ ಚಕಿತನಾದ.

''ಯೂನುಸ್‌ರ ಕುರಿತು ನಿಮಗೆ ಹೇಗೆ ಗೊತ್ತು'' ಎಂದು ಆತ ಮತ್ತೆ ಪ್ರಶ್ನಿಸಿದ

ಆಗ ಪ್ರವಾದಿವರ್ಯರು(ಸ) ''ಯೂನುಸ್ ಅಲ್ಲಾಹನ ಪ್ರವಾದಿಯಾಗಿದ್ದಾರೆ ನಾನು ಕೂಡಾ ಪ್ರವಾದಿಯಾಗಿದ್ದೇನೆ'' ಎಂದು ಉತ್ತರಿಸಿದರು.

ಅದ್ದಾಸ್‌ರ ಇಸ್ಲಾಮ್ ಸ್ವೀಕಾರದೊಂದಿಗೆ ಈ ಸಂಭಾಷಣೆ ಮುಕ್ತಾಯವಾಯಿತು

❖ ❖ ❖

25. ವೈರಿಗಳಿಗಾಗಿ ಪ್ರಾರ್ಥಿಸಿದ ಮಹಾನಾಯಕ

ಪ್ರವಾದಿವರ್ಯರ(ಸ) ಜೀವನದಲ್ಲಿ ಅತ್ಯಂತ ದುಃಖದಾಯಕ ದಿನ ಯಾವುದೆಂದು ಯಾರಾದರೂ ಕೇಳಿದರೆ ತಕ್ಷಣ ನೆನಪಾಗುವುದು ಉಹುದ್ ರಣಾಂಗಣವಾಗಿದೆ. ಪ್ರವಾದಿವರ್ಯರಿಗೆ(ಸ) ಶತ್ರುಗಳ ದಾಳಿಯಿಂದಾಗಿ ಜೀವನದಲ್ಲಿ ಒಮ್ಮೆ ಮಾತ್ರ ಗಾಯವಾಗಿತ್ತು. ಅದು ಉಹುದ್‌ನ ರಣಾಂಗಣದಲ್ಲಾಗಿತ್ತು. ಅಲ್ಲಿ ಪ್ರವಾದಿವರ್ಯರ(ಸ) ಹಲ್ಲು ಮುರಿದಿತ್ತು. ಅವರ ದೇಹದಲ್ಲಿಯೂ ಗಾಯಗಳಾಗಿತ್ತು ತನ್ನ ಅತ್ಯಂತ ಪ್ರೀತಿ ಪಾತ್ರ ಚಿಕ್ಕಪ್ಪ ಹಂಝ ಹಾಗೂ ಆಪ್ತ ಅನುಯಾಯಿ ಮಿಸ್‌ಅಬ್ ಬಿನ್ ಉಮೈರ್ ಮುಂತಾದ ಅನೇಕ ಅತಿರಥ ಮಹಾರಥರು ಅಂದು ಹುತಾತ್ಮರಾಗಿದ್ದರು.

ಪ್ರವಾದಿವರ್ಯರ(ಸ) ಪ್ರಿಯ ಪತ್ನಿ ಹ. ಆಯಿಷಾರ(ರ) ಪ್ರಕಾರ ಪ್ರವಾದಿವರ್ಯರು(ಸ) ಅತ್ಯಂತ ಹೆಚ್ಚು ದುಃಖಿತರಾಗಿರುವುದು ಉಹುದ್‌ನ ದಿನದಲ್ಲಾಗಿತ್ತು. ಆ ಕುರಿತು ಅವರು ಒಮ್ಮೆ ಪ್ರವಾದಿವರ್ಯರೊಂದಿಗೆ(ಸ) ''ಪ್ರಿಯರೇ ತಮ್ಮ ಜೀವನದಲ್ಲಿ ಉಹುದ್‌ಗಿಂತಲೂ ದುಃಖಿತರಾದ ಬೇರಾವುದೇ ದಿವಸವಿದೆಯೇ ಎಂದು ಕೇಳಿದರು. ಹೌದು. ಅದು ತಾಯಿಫ್‌ನ ಪೇಟೆಯಲ್ಲಿ ಇಸ್ಲಾಮಿನ ಪ್ರಚಾರದ ಸಂದರ್ಭದಲ್ಲಾಗಿದ್ದ ಘಟನೆ. ಅಂದು ನಾನು ಅವರಲ್ಲಿ ಆಶ್ರಯಕ್ಕಾಗಿ ಕೋರಿದಾಗ ಅವರು ನಿರಾಕರಿಸಿದರು. ಆಗ ನನಗಾದ ಯಾತನೆ, ದುಃಖಕ್ಕೆ ಸಮಾನವಾದ ಘಟನೆ ಇನ್ನೊಂದಿಲ್ಲ ಎಂದರು.

ಪ್ರವಾದಿತ್ವ ದೊರೆತ ಹತ್ತು ವರ್ಷದಲ್ಲಿ ಅತ್ಯಂತ ಪ್ರೀತಿಯ ಪತ್ನಿ ಖದೀಜ ಹಾಗೂ ಚಿಕ್ಕಪ್ಪ ಅಬೂತಾಲಿಬ್ ಇಹಲೋಕ ತ್ಯಜಿಸಿದರು. ಅವರೀರ್ವರು ಪ್ರವಾದಿವರ್ಯರಿಗೆ(ಸ) ಆಶ್ರಯ, ನೆರಳು ಎಲ್ಲವೂ ಆಗಿದ್ದರು. ಪ್ರವಾದಿವರ್ಯರ(ಸ) ಸಂಕಷ್ಟದ ಪರಿಸ್ಥಿತಿಯಲ್ಲಿ ಹೆಗಲು ಕೊಟ್ಟು ಸಹಕರಿಸಿದರು. ಸಹಾಯಕಿಯ ಸಹಕಾರ, ಸಹಧರ್ಮಿಣಿಯ ಪ್ರೀತಿ–ವಾತ್ಸಲ್ಯದೊಂದಿಗೆ ಪ್ರವಾದಿವರ್ಯರಿಗೆ(ಸ) ಸದಾ ಸಾಂತ್ವನ

ಮತ್ತು ನೆಮ್ಮದಿಯನ್ನು ಖದೀಜರು ನೀಡಿದ್ದರು. ಶತ್ರುಗಳ ಕೀಟಲೆಗಳಿಂದಲೂ ಉಪಟಳಗಳಿಂದಲೂ ಚಿಕ್ಕಪ್ಪ ಅಬೂತಾಲಿಬ್ ಕಾಪಾಡಿದ್ದರು. ಈರ್ವರೂ ಅಗಲಿದ ವರ್ಷವನ್ನು 'ದುಃಖದ ವರ್ಷ' ಎಂದು ಇತಿಹಾಸದಲ್ಲಿ ವರ್ಣಿಸಲಾಗಿದೆ. ಈ ಈರ್ವರ ಅಗಲಿಕೆಯು ಪ್ರವಾದಿವರ್ಯರನ್ನು(ಸ) ತುಂಬಾ ಘಾಸಿಗೊಳಿಸಿತ್ತು. ಇಲ್ಲಿಂದ ಹೋಗಿ ಬೇರೆಲ್ಲಾದರೂ ಸ್ವಲ್ಪ ಕಾಲ ಇರೋಣ ಎಂದು ಭಾವಿಸಿ ತಾಯಿಫ್‌ಗೆ ಹೊರಡಲು ನಿರ್ಧರಿಸಿದ್ದರು.

ತಾಯಿಫ್ ಎಂಬುದು ಮಕ್ಕಾನಗರದಿಂದ ಸುಮಾರು 70 ಕಿ.ಮೀ. ದೂರದ ನಗರವಾಗಿತ್ತು. ಅಲ್ಲಿ ಪ್ರವಾದಿವರ್ಯರ(ಸ) ಆಪ್ತರೂ ರಕ್ತ ಸಂಬಂಧಿಗಳೂ ಇದ್ದರು. ಅವರ ಬಾಲ್ಯಾವಸ್ಥೆಯಲ್ಲಿ ಮೊಲೆ ಹಾಲುಣಿಸಿದ ಹಲೀಮಾರ ಕುಟುಂಬದವರು ಕೂಡಾ ತಾಯಿಫ್‌ನ ಪರಿಸರದವರಾಗಿದ್ದರು. ಈ ಎಲ್ಲ ಕಾರಣಗಳಿಂದ ಅಲ್ಲಿನ ಜನರು ನನ್ನನ್ನು ಕೈ ಬಿಡಲಾರರು ಎಂಬ ಆತ್ಮವಿಶ್ವಾಸ ಪ್ರವಾದಿವರ್ಯರಲ್ಲಿತ್ತು(ಸ). ಹೀಗೆ ಪ್ರವಾದಿತ್ವದ ಹತ್ತನೇ ವರ್ಷದ ಶವ್ವಾಲ್‌ನ ಕೊನೆಯ ವಾರದಲ್ಲಿ ತಾಯಿಫ್‌ಗೆ ಹೊರಟರು. ಗಿರಿಶಿಖರಗಳಿಂದಾವೃತವಾದ ಆ ಪ್ರದೇಶದ ಹಾದಿ ಬಹಳ ಕಠಿಣವಾಗಿತ್ತು. ಕಲ್ಲುಮುಳ್ಳುಗಳಿಂದಾವೃತವಾಗಿದ್ದ ಆ ಹಾದಿಯಲ್ಲಿ ಕಾಲ್ನಡಿಗೆಯಲ್ಲಿಯೇ ಸಾಗಿದ ಪ್ರವಾದಿವರ್ಯರು(ಸ) ಹಾಗೂ ಅವರ ಸಂಗಾತಿ ಬಹಳ ದಣಿದಿದ್ದರು. ಆದರೆ ಅದ್ಯಾವುದನ್ನೂ ಲೆಕ್ಕಿಸದೆ ಪ್ರವಾದಿವರ್ಯರು(ಸ) ತಾನು ಉದ್ದೇಶಿಸಿದ ಮೂವರನ್ನು ಭೇಟಿಯಾಗಲು ಸಾಗುತ್ತಿದ್ದರು. ಅದು ಅಮ್ರ್‌ನ ಪುತ್ರರಾದ ಅಬ್ದ್ ಯಾಲೀಲ್, ಮಸ್‌ಊದ್ ಮತ್ತು ಹಬೀಬ್ ಎಂಬವರಾಗಿದ್ದರು.

ಅವರನ್ನು ಭೇಟಿ ಮಾಡಿದ ಪ್ರವಾದಿವರ್ಯರು(ಸ) ಅಲ್ಲಾಹನ ಸಂದೇಶವನ್ನು ಅವರ ಮುಂದಿಟ್ಟರು ಹಾಗೂ ತನಗೆ ಆಶ್ರಯ ನೀಡಲು ಮನವಿ ಮಾಡಿದರು. ಅವರು ಅವರ ಮನವಿಯನ್ನು ತಿರಸ್ಕರಿಸಿದರು. ಪ್ರವಾದಿವರ್ಯರನ್ನು(ಸ) ತೀವ್ರವಾಗಿ ಆಕ್ಷೇಪಿಸಿ ಒರಟುತನದಿಂದ ವರ್ತಿಸಿದರು. ಬೀದಿ ಪುಂಡರಿಂದ ಕಲ್ಲುಗಳನ್ನೆಸೆಯಲಾಯಿತು. ಆಗ ಪ್ರವಾದಿವರ್ಯರ(ಸ) ಮೇಲೆ ಕಲ್ಲುಗಳನ್ನೆಸೆದಾಗ ಝೈದ್ ಬಿನ್ ಹಾರಿಸ್(ರ) ಸ್ವತಃ ಕೈಗಳಿಂದ ತಡೆದಿದ್ದರು. ಕೂಡಲೇ ಅಲ್ಲಿಂದ ನಿರ್ಗಮಿಸಲು ನಿರ್ಧರಿಸಿದರು.

ಈ ಉತ್ತರಗಳನ್ನು ಕೇಳಿದ ಬಳಿಕ ಪ್ರವಾದಿವರ್ಯರಿಗೆ(ಸ) ಅವರಲ್ಲಿ ಯಾವುದೇ ಒಳಿತಿನ ನಿರೀಕ್ಷೆ ಬಾಕಿ ಉಳಿಯಲಿಲ್ಲ. ಅವರು ಹೊರಡಲು ಅನುವಾಗುತ್ತಾ "ತಾನು ಇಲ್ಲಿಗೆ ಬಂದಿರುವುದನ್ನೂ ನಿಮ್ಮೊಡನೆ ಆಶ್ರಯಕ್ಕಾಗಿ ಯಾಚಿಸಿದುದನ್ನೂ ಮಕ್ಕಾದ ಕುರೈಶರಿಗೆ ತಿಳಿಸಬೇಡಿರಿ. ನಿಮ್ಮ ಮಟ್ಟಿಗೇ ಇದು ಸೀಮಿತವಾಗಿರಿಸಿರಿ. ಅದು

ರಹಸ್ಯವಾಗಿಯೇ ಇರಲಿ ಎಂದೂ ವಿನಂತಿಸಿ ಕೊಂಡರು. ಆದರೆ ಅದನ್ನೂ ಅವರು ತಿರಸ್ಕರಿಸಿದರು. ಅವರು ಮಕ್ಕಾದ ಕುರೈಶರಿಗೆ ವಿಷಯವನ್ನೆಲ್ಲಾ ತಿಳಿಸಿದರು. ಅಷ್ಟು ಮಾತ್ರವಲ್ಲ, ಅವರ ಸುತ್ತಲೂ ಪುಂಡ ಪೋಕರಿಗಳನ್ನು ಸೇರಿಸಿ ಕೇಕೆ ಹಾಕುತ್ತಾ, ಶೀ ಹಾಕುತ್ತಾ ಗೇಲಿ ಮಾಡ ತೊಡಗಿದರು.

ಘಾಸಿಗೊಂಡು ಭಾರವಾದ ಹೃದಯದಿಂದ ಪ್ರವಾದಿವರ್ಯರು(ಸ) ಅಲ್ಲಿಂದ ಮರಳಿದರು. ಅಗಾಧವಾದ ದಣಿವಿನಿಂದ ಬಳಲಿದ ಅವರು ಉತ್‌ಬಾ ಹಾಗೂ ಶೈಬಾರ ತೋಟದ ಮರದ ಬುಡದಲ್ಲಿ ವಿಶ್ರಾಂತಿ ಪಡೆಯುತ್ತಿದ್ದರು. ಸ್ವಲ್ಪ ಹೊತ್ತಿನ ವಿಶ್ರಾಂತಿಯ ಬಳಿಕ ತನ್ನ ಎರಡೂ ಕೈಗಳನ್ನೆತ್ತಿಕೊಂಡು ಜಗತ್ತಿನ ಸೃಷ್ಟಿಕರ್ತನಾದ ಅಲ್ಲಾಹನಲ್ಲಿ ಸುದೀರ್ಘವಾಗಿ ಪ್ರಾರ್ಥಿಸಿದರು. ತನ್ನನ್ನು ಈ ಸಂಕಷ್ಟದಿಂದ ಪಾರುಗೊಳಿಸಲು ಅಲ್ಲಾಹನಲ್ಲಿ ಮೊರೆಯಿಟ್ಟರು.

ತಕ್ಷಣ ದೇವದೂತರು ಪ್ರವಾದಿವರ್ಯರ(ಸ) ಮುಂದೆ ಪ್ರತ್ಯಕ್ಷರಾದರು. ಪ್ರವಾದಿವರ್ಯರನ್ನು(ಸ) ಅವಮಾನಿಸಿದ ಅಕ್ರಮಿಗಳ ವಿರುದ್ಧ ಪ್ರತೀಕಾರಗೈಯಲು ಮತ್ತು ಅವರಿಗೆ ಶಿಕ್ಷೆ ನೀಡಲು ಪ್ರವಾದಿವರ್ಯರಲ್ಲಿ(ಸ) ಅನುಮತಿ ಕೇಳಿದರು.

ಆದರೆ ಕರುಣೆಯ ವಾಹಕರಾಗಿದ್ದ ಪ್ರವಾದಿವರ್ಯರು(ಸ) ಅದನ್ನು ಒಪ್ಪದೆ ನಿರಾಕರಿಸಿದರು. ಬಳಿಕ ಅಲ್ಲಾಹನಲ್ಲಿ ''ಅಲ್ಲಾಹನೇ ನನ್ನ ಜನತೆಯನ್ನು ನೀನು ಸನ್ಮಾರ್ಗದ ಹಾದಿಯಲ್ಲಿ ನಡೆಯುವಂತೆ ಮಾಡು. ಅವರು ತಮಗರಿವಿಲ್ಲದೇ ಈ ರೀತಿ ವರ್ತಿಸಿದ್ದಾರೆ. ಅವರನ್ನು ನೀನು ಕ್ಷಮಿಸು'' ಎಂದು ಪ್ರಾರ್ಥಿಸಿದರು.

❖ ❖ ❖

26. ಪ್ರತ್ಯುಪಕಾರ ಸದುಪಯೋಗ ಪಡಿಸದಾದರು

ಬದ್ರ್ ಯುದ್ಧವು ಪ್ರವಾದಿವರ್ಯರು(ಸ) ನೇತೃತ್ವ ವಹಿಸಿದ ಪ್ರಪ್ರಥಮ ಯುದ್ಧವಾಗಿದೆ. ಯುದ್ಧ ಮಾಡಲೇ ಬೇಕಾದ ಅನಿವಾರ್ಯ ಪರಿಸ್ಥಿತಿ ನಿರ್ಮಾಣವಾದಾಗ ಪ್ರವಾದಿವರ್ಯರಿಗೆ(ಸ) ಯುದ್ಧ ಮಾಡದೆ ಅನ್ಯ ದಾರಿಯಿರಲಿಲ್ಲ. ಮಕ್ಕಾ ಮುಶ್ರಿಕರು ಪ್ರವಾದಿವರ್ಯರನ್ನು(ಸ) ಮತ್ತವರ ಸಂಗಾತಿಗಳನ್ನು ಅವರ ಹುಟ್ಟೂರಾದ ಮಕ್ಕಾದಲ್ಲಿ ನೆಮ್ಮದಿಯಿಂದ ಜೀವಿಸಲು ಬಿಡಲಿಲ್ಲ, ಕೊನೆಗೆ ವಿಧಿಯಿಲ್ಲದೆ ಮದೀನಾದಲ್ಲಿ ಹೋಗಿ ಜೀವಿಸಬೇಕಾಯಿತು. ಆದರೆ ಅಲ್ಲಿಯೂ ಇಸ್ಲಾಮಿನ ವೈರಿಗಳು ಇವರನ್ನು ಸ್ವಸ್ಥವಾಗಿ ಜೀವಿಸಲು ಬಿಡಲಿಲ್ಲ, ಸಾಕಷ್ಟು ಕಿರುಕುಳ, ಉಪಟಳಗಳನ್ನು ನೀಡಿ ಇಸ್ಲಾಮನ್ನು ಕೊನೆಗಾಣಿಸಲು ಸರ್ವ ಪ್ರಯತ್ನ ನಡೆಸಿದರು. ಆಗ ಅವರಿಗೆ

ಒಂದು ಹಂತದಲ್ಲಿ ಪ್ರತಿರೋಧಿಸಿ ಮುನ್ನಡೆಯಬೇಕಾದ ಪರಿಸ್ಥಿತಿ ಎದುರಾಯಿತು. ಉಳಿದೆಲ್ಲಾ ಪ್ರಯತ್ನಗಳು ವಿಫಲವಾದಾಗ ಯುದ್ಧ ಮಾಡಲೇಬೇಕಾಯಿತು. ಈ ಮಹತ್ತರವಾದ ನಿರ್ಣಯ ತೆಗೆಯಲು ಅವರು ಅನೇಕ ಗಂಭೀರ ಸಮಾಲೋಚನೆಗಳನ್ನು ನಡೆಸಿದ್ದರು.

ಯುದ್ಧರಂಗದಲ್ಲಿ ಪಾಲಿಸಬೇಕಾದ ನಿಯಮಗಳನ್ನು ತನ್ನ ಸಂಗಾತಿಗಳಿಗೆ ತಿಳಿಸಿದರು. ಜೊತೆಗೊಂದು ಆದೇಶವನ್ನೂ ನೀಡಿದರು. ''ಎದುರಾಳಿಗಳ ನಡುವೆ ಮುತ್‌ಇಮ್ ಏನಾದರೂ ಎದುರಾದರೆ ಆತನನ್ನು ವಧಿಸಬೇಡಿರಿ'' ಎಂಬುದೇ ಆ ಆದೇಶವಾಗಿತ್ತು.

ಯುದ್ಧವು ಆರಂಭವಾಯಿತು. ಎರಡೂ ವಿಭಾಗಗಳ ನಡುವೆ ಘೋರ ಯುದ್ಧ ನಡೆಯುತ್ತದೆ. ಈ ಹೋರಾಟದ ನಡುವೆ ಪ್ರವಾದಿವರ್ಯರ(ಸ) ಅನುಚರರ ಕಣ್ಣಿಗೆ ಮುತ್‌ಇಮ್ ಬೀಳುತ್ತಾರೆ. ಕೂಡಲೇ ಅವರನ್ನು ಕರೆದು, 'ಪ್ರವಾದಿವರ್ಯರು(ಸ) ನಿಮ್ಮನ್ನು ವಧಿಸಬಾರದೆಂದು ಹೇಳಿ ನಿಮಗೆ ಆಶ್ರಯ ನೀಡಿದ್ದಾರೆ' ಎಂದರು.

''ಹಾಗಾದರೆ ನನ್ನ ಸಂಗಡಿಗರಿಗೂ ಆಶ್ರಯವಿದೆಯಾ?'' ಎಂದು ಆತ ಪ್ರಶ್ನಿಸಿದನು.

ಇಲ್ಲ, ಯುದ್ಧರಂಗದಲ್ಲಿ ಹೋರಾಟ ಮುಗಿಯುವ ತನಕ ಅವರ ವಿರುದ್ಧ ಹೋರಾಡದೆ ನಿರ್ವಾಹವಿಲ್ಲ ಎಂದರು. ''ಹಾಗಾದರೆ ಅವರಂತೆ ನಾನು ನಿಮ್ಮ ವಿರುದ್ಧ ಹೋರಾಡುವೆ'' ಎಂದು ಹೇಳಿದ. ಹಾಗೆಯೇ ಹೋರಾಟ ಮುಂದುವರಿದು ಪರಸ್ಪರ ಶಸ್ತ್ರಾಸ್ತ್ರ ಪ್ರಯೋಗಿಸಿದರು. ಕೊನೆಗೆ ಮುತ್‌ಇಮ್ ರಣಭೂಮಿಯಲ್ಲಿ ಗಾಯಗೊಂಡು ನೆಲಕ್ಕುರುಳಿ ಪ್ರಾಣಬಿಟ್ಟನು.''

ಯುದ್ಧದಲ್ಲಿ ಪ್ರವಾದಿವರ್ಯರು(ಸ) ಹಾಗೂ ಅವರ ಸಂಗಾತಿಗಳು ವಿಜಯ ದುಂದುಭಿ ಮೊಳಗಿಸಿದರು. ನಿಜವಾಗಿ ಇಸ್ಲಾಮಿನ ವೈರಿಗಳು ಮುಸ್ಲಿಮರಿಗಿಂತ ಶಸ್ತ್ರಾಸ್ತ್ರದಲ್ಲಿಯೂ ದೈಹಿಕವಾಗಿಯೂ ಪ್ರಬಲರಾಗಿದ್ದರು. ಆದರೂ ಅವರು ದಯನೀಯವಾಗಿ ಸೋಲುಂಡರು. ವೀರ, ಶೂರ ಎಂದೆಲ್ಲಾ ಹೇಳಿಕೊಂಡವರು ನೆಲಕ್ಕುರುಳಿದ್ದರು. ಹಾಗೆಯೇ ಅನೇಕ ಪ್ರಮುಖರು ಸೆರೆಯಾಳುಗಳಾದರು. ಯುದ್ಧ ಕೈದಿಗಳನ್ನು ಏನು ಮಾಡಬೇಕೆಂಬುದರ ಕುರಿತು ಚರ್ಚೆ ನಡೆಯುತ್ತಿರುವಾಗ ಪ್ರವಾದಿವರ್ಯರು(ಸ) ''ಅದಿಯ್ಯ್‌ನ ಪುತ್ರ ಮುತ್‌ಇಮ್ ಏನಾದರೂ ಜೀವಿಸಿದ್ದು ಈ ಕೈದಿಗಳ ಕುರಿತು ದಯೆ ತೋರಿಸಬೇಕೆಂದು ಮನವಿ ಮಾಡಿದ್ದಾದರೆ ಅವರ ಮಾತಿಗೆ ಗೌರವ ಕೊಟ್ಟು ಈ ಕೈದಿಗಳನ್ನೆಲ್ಲಾ ಬಿಡುಗಡೆಗೊಳಿಸುತ್ತಿದ್ದೆ'' ಎಂದರು.

ಪ್ರವಾದಿವರ್ಯರು(ಸ) ಈ ರೀತಿ ಹೇಳಿದುದರ ಕಾರಣ ಅಲ್ಲಿದ್ದ ಅನುಚರರಿಗೆಲ್ಲಾ ತಿಳಿದಿತ್ತು. ಅದು ಕೃತಜ್ಞತೆಯ ಪ್ರತೀಕಾರವಾಗಿ ಹೃದಯದಿಂದ ಹೊರಟ ಉದ್ಗಾರವಾಗಿತ್ತು. ಪ್ರವಾದಿವರ್ಯರು(ಸ) ಇಸ್ಲಾಮೀ ಸಂದೇಶ ಪ್ರಚಾರದಲ್ಲಿ ನಿರತರಾಗಿದ್ದಾಗ ಶತ್ರುಗಳಿಂದ ತೀವ್ರ ಸಂಕಷ್ಟಗಳನ್ನು ಎದುರಿಸಬೇಕಾಯಿತು. ಪ್ರವಾದಿವರ್ಯರದ್ದು(ಸ) ಆಗ ಬಹಳ ಸಣ್ಣ ತಂಡವಾಗಿತ್ತು. ತಮ್ಮ ಸಮುದಾಯದೊಳಗೆ ಇವರು ಬಂಡುಕೋರರಂತಿದ್ದರು. ಮಾತ್ರವಲ್ಲ, ಸಮುದಾಯದ ನಡುವೆ ಒಡಕುಂಟು ಮಾಡುವವರು ಎಂಬ ಭಾವನೆ ಅವರಲ್ಲಿತ್ತು. ತಮ್ಮ ಕುಲದೇವತೆಗಳನ್ನು ಆರಾಧಿಸದೆ ನಿಂದಿಸುತ್ತಿರುವವರು, ನಮ್ಮ ಪರಂಪರೆಯನ್ನೇ ಭಗ್ನಗೊಳಿಸಿ ದವರು, ನಮ್ಮ ಹಿರಿಯರ ದಾರಿಯನ್ನು ಅನುಸರಿಸದೇ ಇದ್ದವರು ಹೀಗೆ ನಾನಾ ತರದ ತಪ್ಪು ಕಲ್ಪನೆಗಳಿಗೆ ಅವರು ಬಲಿಯಾಗಿದ್ದರು. ಈ ಕಾರಣದಿಂದ ಪ್ರವಾದಿ(ಸ) ಮತ್ತವರ ಅನುಯಾಯಿ ಗಳಿಗೆ ಏನೇ ಕಿರುಕುಳ ಕೊಟ್ಟರೂ ಅದು ಸಾಲದು ಎಂಬ ಮನೋಭಾವ ಅವರಲ್ಲಿತ್ತು. ಆದಕ್ಕಾಗಿ ಪ್ರವಾದಿ(ಸ) ಮತ್ತವರ ಸಂಗಾತಿಗಳನ್ನು ಕ್ರೂರವಾಗಿ ಮರ್ದಿಸಿದರು. ಅವರು ನಾನಾತರದ ದೌರ್ಜನ್ಯಗಳಿಗೆ ಗುರಿಯಾದರು. ಹೊಸ ಧರ್ಮವನ್ನು ನಿರ್ಮೂಲನ ಗೊಳಿಸಲು ಶತ ಪ್ರಯತ್ನ ನಡೆಸಿದ್ದರು. ಪ್ರವಾದಿವರ್ಯರನ್ನು(ಸ) ಮುಗಿಸಲು ಕೂಡಾ ಅವರು ಹಿಂಜರಿಯಲಿಲ್ಲ,

ಪ್ರವಾದಿತ್ವದ ಪ್ರಥಮ ಹತ್ತು ವರ್ಷ ಅವರ ಚಿಕ್ಕಪ್ಪ ಅಬೂತಾಲಿಬ್‌ರ ಸಂರಕ್ಷಣೆ ಯಲ್ಲಿದ್ದರು. ಜೊತೆಗೆ ಆಧಾರವಾಗಿ ಪತ್ನಿ ಖದೀಜರೂ ಇದ್ದರು. ಹತ್ತನೇ ವರ್ಷದಲ್ಲಿ ಅಬೂ ತಾಲಿಬ್‌ರು ಇಹಲೋಕ ತ್ಯಜಿಸಿದರು. ಜೊತೆಗೆ ಆಧಾರ ಸ್ಥಂಭದಂತಿದ್ದ ಪ್ರಿಯ ಪತ್ನಿ ಖದೀಜರು ನಿಧನರಾದರು. ಈ ಇಬ್ಬರ ವಿಯೋಗದಿಂದ ಪ್ರವಾದಿವರ್ಯರು(ಸ) ಬಹಳ ದುಃಖಿತರಾಗಿದ್ದರು. ಅದು ಅವರನ್ನು ಬಹಳವಾಗಿ ಕಾಡಿತ್ತು. ಇಸ್ಲಾಮಿನ ವೈರಿಗಳು ಇದನ್ನು ಸಾಕಷ್ಟು ಸದುಪಯೋಗ ಪಡಿಸಿಕೊಂಡರು. ಈ ಕಾರಣದಿಂದಲೇ ಪ್ರವಾದಿವರ್ಯರು(ಸ) ಹೊಸ ಆಶ್ರಯದ ಅನ್ವೇಷಣೆಯಲ್ಲಿ ತಾಯಿಫ್‌ಗೆ ತೆರಳಿದ್ದರು. ಅಲ್ಲಿ ಅವರಿಗೆ ಬಹಳಷ್ಟು ಆಪ್ತ ರಕ್ತಸಂಬಂಧಿಗಳಿದ್ದರು. ಆದರೆ ಅವರೆಲ್ಲರೂ ಪ್ರವಾದಿವರ್ಯರಿಗೆ ಆಶ್ರಯ ನೀಡಲು ನಿರಾಕರಿಸಿದರು. ಅವರನ್ನು ಅವಮಾನಿಸಿ ದ್ರೋಹವೆಸಗಿದರು. ಅದರಿಂದ ಅವರು ತುಂಬಾ ನೊಂದರು. ದೈಹಿಕವಾಗಿಯೂ ಮಾನಸಿಕವಾಗಿಯೂ ತೀವ್ರ ಆಘಾತಕ್ಕೊಳಗಾದರು. ಆದರೂ ನಿರಾಶರಾಗಲಿಲ್ಲ, ಯಾಕೆಂದರೆ ಅಲ್ಲಾಹನ ಮೇಲೆ ಭರವಸೆಯಿಡುವವರಿಗೆ ನಿರಾಶೆ ಎಂಬುದೇ ಉದ್ಭವವಾಗದು. ಹಾಗೆಯೇ ನಿರೀಕ್ಷೆಯಿಂದ ಅಖ್‌ನಸ್ ಬಿನ್ ಶರೀಕ್‌ರೊಂದಿಗೆ ಆಶ್ರಯ ಕೇಳಿದರು. ಆದರೆ ಅವರೂ ನಿರ್ಲಕ್ಷಿಸಿದರು. ಬಳಿಕ ಚಿಕ್ಕಪ್ಪ ಅಬೂತಾಲಿಬ್‌ರ

ಹಿತ ಮುತ್‌ಇಮ್ ಬಿನ್ ಅದಿಯ್ಯ್‌ರ ಬಳಿ ತೆರಳಿದರು. ಅವರು ಆಶ್ರಯ ಡಲು ಒಪ್ಪಿಕೊಂಡು ತನ್ನ ಮನೆಗೆ ಆಹ್ವಾನಿಸಿದರು. ಹಾಗೆಯೇ ಅವರು ಮುತ್‌ಇಮ್‌ನ ಮನೆಯಲ್ಲಿ ಒಂದು ರಾತ್ರಿ ಕಳೆದರು. ಮರುದಿನ ಮುಂಜಾನೆ ಮುತ್‌ಇಮ್ ತನ್ನ 6 ಮಂದಿ ಪುತ್ರರೊಂದಿಗೆ ಖಡ್ಗವನ್ನು ಹಿಡಿದು ಕಅಬಾದತ್ತ ತೆರಳಿ ಮುಹಮ್ಮದ್‌ರಿಗೆ(ಸ) ಆಶ್ರಯ ನೀಡಿರುವುದಾಗಿ ಬಹಿರಂಗವಾಗಿ ಘೋಷಿಸಿದರು.

ಮುತ್‌ಇಮ್ ಹಾಗೂ ಮಕ್ಕಳ ಸಂರಕ್ಷಣೆಯಲ್ಲಿ ಪ್ರವಾದಿವರ್ಯರಿಗೆ(ಸ) ಆರಾಧನೆ, ಪ್ರಾರ್ಥನೆ ನಡೆಸಲು ಯಾವುದೇ ತೊಂದರೆಯಾಗಲಿಲ್ಲ. ಬಳಿಕ ಹಿಜ್‌ರಾದ ವರೆಗೆ 3 ವರ್ಷಗಳ ಕಾಲ ಮಕ್ಕಾದಲ್ಲಿ ಮುತ್‌ಇಮ್‌ರ ಸಂರಕ್ಷಣೆಯಲ್ಲಿ ಕಾಲ ಕಳೆದರು. ಆದರೆ ಮುತ್‌ಇಮ್ ತನ್ನ ಹಳೆಯ ಆಚಾರ ವಿಚಾರಗಳಲ್ಲಿಯೇ ಮುಳುಗಿ ಬಹುದೇವಾರಾಧನೆಯಲ್ಲಿಯೇ ಇದ್ದರು. ಮಾತ್ರವಲ್ಲ, ಹಿಜ್‌ರಾ 2ನೇ ವರ್ಷ ಪ್ರವಾದಿವರ್ಯರು(ಸ) ಹಾಗೂ ಅವರ ಸಂಗಾತಿಗಳ ವಿರುದ್ಧ ಬದ್ರ್‌ನಲ್ಲಿ ಯುದ್ಧಕ್ಕಾಗಿ ಶತ್ರುಗಳು ಸಂಘಟಿತರಾದಾಗ ಅವರೊಂದಿಗೆ ಸೇರಿದರು. ಮುತ್‌ಇಮ್‌ನೊಡನೆ ಪ್ರವಾದಿವರ್ಯರು(ಸ) ಉದಾರತೆ ತೋರಲು ಇದೇ ಕಾರಣವಾಗಿತ್ತು. ಆದರೆ ಅದನ್ನು ಆತ ನಿರ್ಲಕ್ಷಿಸಿದ್ದರೂ ಪ್ರವಾದಿವರ್ಯರು(ಸ) ತಮ್ಮ ಕರ್ತವ್ಯವನ್ನು ಪೂರೈಸಿದ್ದರು. ಆ ಮೂಲಕ ಕೃತಜ್ಞತೆ, ಪ್ರತ್ಯುಪಕಾರ ಮಾಡಲು ಯಾವುದೇ ಜಾತಿ-ಧರ್ಮ-ಭೇದ ಗೋಡೆಗಳು ಅಡ್ಡಿಯಾಗದು ಎಂಬುದನ್ನು ನಿರೂಪಿಸಿದರು.

ಹಾಗೆಯೇ ಪ್ರವಾದಿವರ್ಯರ(ಸ) ಕುರಿತು ಅನೇಕ ಕವನ ರಚಿಸುತ್ತಾ ಹಾಡುತ್ತಿದ್ದ ಹಸ್ಸಾನ್ ಬಿನ್ ಸಾಬಿತ್‌ರು ಒಮ್ಮೆ ಮುತ್‌ಇಮ್‌ನ ಕುರಿತು ಶೋಕಗಾನ ಹಾಡಲು ಪ್ರವಾದಿ ವರ್ಯರೊಂದಿಗೆ(ಸ) ಅನುಮತಿ ಕೇಳಿದ್ದರು. ಆಗ ಅವರು ಅದಕ್ಕೆ ಅನುಮತಿಸಿ ಹಸ್ಸಾನ್‌ರ ಮುಖಾಂತರ ಆಲಿಸಿದ್ದರು. ತಮ್ಮ ವಿರುದ್ಧ ಯುದ್ಧ ಮಾಡಿ ಹತ್ಯೆಯಾದ ಶತ್ರು ಸೇನೆ ಯವನಿಗಾಗಿ ಶೋಕ ಗೀತೆ ರಚಿಸಿ ಹಾಡಿ ಇತಿಹಾಸದಲ್ಲಿ ಹಸ್ಸಾನ್ ಬಿನ್ ಸಾಬಿತ್ ದಾಖಲಾದರು.

❖ ❖ ❖

27. ಗೆದ್ದಲು ಮಾಡಿದ ಸೇವೆ

ಪ್ರವಾದಿವರ್ಯರು(ಸ) ಮತ್ತವರ ಸಂಗಾತಿಗಳ ವಿರುದ್ಧ ಶತ್ರುಗಳು ಬಹಿಷ್ಕಾರ ಹಾಗೂ ದಿಗ್ಬಂಧನ ಹೇರಿದರು. ಇದಕ್ಕೆ ಅಬೂಜಹಲ್ ನೇತೃತ್ವ ವಹಿಸಿದ್ದನು. ಮುಸ್ಲಿಮರು ಇದರಿಂದ ತೀವ್ರ ದಾರಿದ್ರ್ಯವನ್ನು ಅನುಭವಿಸಬೇಕಾಯಿತು. ಕೊನೆಗೆ

ಹಸಿ ಎಲೆಗಳನ್ನು ತಿಂದು ಹಸಿವು ತಣಿಸಬೇಕಾದ ಪರಿಸ್ಥಿತಿಯೂ ಉದ್ಭವವಾಯಿತು ಇಂತಹ ಸಂಕಷ್ಟದ ಸಂದರ್ಭದಲ್ಲಿ ಕೆಲ ಹಿತಾಕಾಂಕ್ಷಿಗಳು ಅವರಿಗೆ ರಹಸ್ಯವಾ ಆಹಾರ ಸರಬರಾಜು ಮಾಡುತ್ತಿದ್ದರು. ಅಂತಹವರಲ್ಲಿ ಹಿಶಾಮ್ ಬಿನ್ ಅಮ್ರ್ ಪ್ರಮುಖರಾಗಿದ್ದಾರೆ.

ಅತೀ ಕಠಿಣ ಪರಿಸ್ಥಿತಿಯಲ್ಲಿಯೂ ಮುಹಮ್ಮದ್(ಸ) ಮತ್ತು ಸಂಗಡಿಗರು ಅತೀವ ಸಂಯಮ ಪಾಲಿಸಿದರು. ಅವರ ಈ ಅಮೋಘವಾದ ಸಹನೆ ಮತ್ತು ತ್ಯಾಗವನ್ನು ಕಂಡು ಶತ್ರು ಪಾಳೆಯದಲ್ಲಿನ ಅನೇಕರು ನೊಂದುಕೊಂಡಿದ್ದರು. ಅದರಲ್ಲಿ ಕೆಲವರಂತೂ ರಹಸ್ಯವಾಗಿ ಅನುಕಂಪ ವ್ಯಕ್ತ ಪಡಿಸಿದ್ದರು. ಕೆಲವರ ಇಸ್ಲಾಮ್ ಸ್ವೀಕಾರಕ್ಕೂ ಇದು ಹೇತುವಾಯಿತು.

ಈ ಬಹಿಷ್ಕಾರ, ದಿಗ್ಬಂಧನಗಳು ನಿರಂತರ ಮೂರು ವರ್ಷಗಳ ಕಾಲ ಮುಂದುವರಿದಾಗ ಅವರಲ್ಲಿದ್ದ ಕೆಲವರು ಇದರ ವಿರುದ್ಧ ರಂಗಕ್ಕಿಳಿದರು, ಹಿಶಾಮ್ ಬಿನ್ ಅಮ್ರ್ ಹಾಗೂ ಝುಹೈರ್ ಬಿನ್ ಉಮಯ್ಯ ಮುಂತಾದವರು ಕುರೈಶರು ವಿಧಿಸಿದ್ದ ಬಹಿಷ್ಕಾರದ ವಿರುದ್ಧ ರಂಗಕ್ಕಿಳಿದರು. ಝುಹೈರ್ ಬಿನ್ ಉಮಯ್ಯ ಕುರೈಶಿ ನೇತಾರರೊಡನೆ ''ಮಕ್ಕಾ ನಿವಾಸಿಗಳೇ! ನಾವು ತಿನ್ನುಣ್ಣುತ್ತಿರುವಾಗ ಮತ್ತು ಬಟ್ಟೆ ಬರೆಗಳನ್ನು ಧರಿಸುತ್ತಿರುವಾಗ ನಮ್ಮ ಬಂಧುಗಳಾದ ಹಾಶಿಮ್ ಮನೆತನದವರು ಹಸಿವಿನಿಂದ ನರಳುತ್ತಿರುವುದು ನಮಗೆ ಶೋಭೆಯೇ? ಅನ್ಯಾಯದಿಂದೊಡಗೂಡಿದ ಈ ದಸ್ತಾವೇಜನ್ನು ಹರಿದು ಹಾಕುವ ತನಕ ನಾನು ಸುಮ್ಮನಿರಲಾರೆ'' ಎಂದು ಶಪಥ ಮಾಡುತ್ತಾರೆ.

ಇದರಿಂದ ಕ್ರುದ್ಧನಾದ ಅಬೂಜಹಲ್, ''ಈ ಕರಾರು ಪತ್ರ ಮಾಡಿದ್ದು ರದ್ದುಗೊಳಿಸ ಲಿಕ್ಕಲ್ಲ, ಯಾರಿಗೂ ಅದನ್ನು ರದ್ದುಗೊಳಿಸಲು ಸಾಧ್ಯವಿಲ್ಲ'' ಎಂದು ಹೇಳಿದನು. ಆದರೆ ಹಿಶಾಮ್ ಮತ್ತವರ ಸಂಗಡಿಗರು ಅದಕ್ಕೆ ಸೊಪ್ಪು ಹಾಕಲಿಲ್ಲ, ಕರಾರನ್ನು ರದ್ದುಗೊಳಿಸುವ ಪ್ರತಿಜ್ಞೆಗೈದರು. ಕಅಬಾದ ಬಳಿ ಬಹಿರಂಗವಾಗಿ ಈ ದಸ್ತಾವೇಜನ್ನು ಹರಿದು ಹಾಕುವುದಾಗಿ ಘೋಷಿಸಿದರು. ಹಾಗೆಯೇ ಕರಾರು ಪತ್ರ ತೆಗೆಯಲೆಂದು ಮುಂದಾದಾಗ ಆ ಕರಾರು ಪತ್ರದಲ್ಲಿ ''ಅಲ್ಲಾಹನ ನಾಮದಿಂದ'' ಎಂಬ ಪದವನ್ನು ಹೊರತು ಪಡಿಸಿ ಉಳಿದೆಲ್ಲಾ ಭಾಗ ಗಳನ್ನೂ ಗೆದ್ದಲು ತಿಂದು ಹಾಕಿತ್ತು. ಹಾಗೆಯೇ ಅಬೂತಾಲಿಬ್ ಕಣಿವೆಯಲ್ಲಿ ಬಹಿಷ್ಕಾರ ಕ್ಕೊಳಗಾದ ಪ್ರವಾದಿವರ್ಯರು(ಸ) ಮತ್ತವರ ಅನುಯಾಯಿಗಳಿಗೆ ಗೆದ್ದಲು ತನ್ನದೇ ಆದ ರೀತಿಯಲ್ಲಿ ನೆರವು ನೀಡಿತ್ತು.

❖ ❖ ❖

28. ಪ್ರಥಮ ಅಕಬಾ ಒಪ್ಪಂದ

ಪ್ರವಾದಿತ್ವದ ಹತ್ತನೇ ವರ್ಷದಲ್ಲಿ ಯಸ್ರಿಬ್ ನಿವಾಸಿಗಳಾದ ಖಝ್ರಜ್ ಗೋತ್ರಜರು ಮಕ್ಕಾಗೆ ಆಗಮಿಸಿದಾಗ ಪ್ರವಾದಿವರ್ಯರು(ಸ) ಅವರ ಮುಂದೆ ಇಸ್ಲಾಮಿನ ಸಂದೇಶವನ್ನು ಇಟ್ಟರು. ಆ ತಂಡದಲ್ಲಿ ಒಟ್ಟು 6 ಮಂದಿ ಇದ್ದರು. ಯಹೂದಿಗಳ ಮಧ್ಯೆ ಜೀವಿಸುತ್ತಿದ್ದ ಇವರು ಹೊಸ ಪ್ರವಾದಿಯೋರ್ವರ(ಸ) ಆಗಮನದ ಕುರಿತು ತುಂಬಾ ಕೇಳಿ ತಿಳಿದುಕೊಂಡಿದ್ದರು. ಯಹೂದಿಗಳು ಪ್ರವಾದಿಗಳ ಆಗಮನದ ನಿರೀಕ್ಷೆಯಲ್ಲಿದ್ದರು. ಏಕೆಂದರೆ ಅದು ತನ್ನ ಜನಾಂಗದ ಮೂಲಕ ಬರಬೇಕೆಂದು ಆ ಮೂಲಕ ವಿಶ್ವದಲ್ಲಿ ಮೇಧಾವಿತ್ವವನ್ನು ಗಳಿಸಲು ಅವರು ಬಯಸಿದ್ದರು. ಈ ಕುರಿತು ಅರಿತಿದ್ದ ಖಝ್ರಜ್ ಗೋತ್ರಜರಿಗೆ ಪ್ರವಾದಿವರ್ಯರ(ಸ) ಕುರಿತು ವಿಶ್ವಾಸ ತಾಳಲು ಹೆಚ್ಚು ಕಷ್ಟವಾಗಲಿಲ್ಲ.

ಮುಂದೆ ಮದೀನವಾಗಿ ಬದಲಾದ ಯಸ್ರಿಬ್‌ನಲ್ಲಿ ಇವರ ಮುಖಾಂತರ ಇಸ್ಲಾಮ್ ಪ್ರಸಾರವಾಯಿತು. ಹಾಗೆಯೇ ಇಸ್ಲಾಮ್ ಸ್ವೀಕರಿಸಿದ 12 ಮಂದಿ ಪ್ರವಾದಿವರ್ಯರನ್ನು(ಸ) ಭೇಟಿ ಮಾಡಿ ಅವರೊಂದಿಗೆ ಒಂದು ಒಪ್ಪಂದ ಮಾಡಿಕೊಂಡರು.

''ಅಲ್ಲಾಹನಲ್ಲಿ ಯಾರನ್ನೂ ಭಾಗಿದಾರರನ್ನಾಗಿ ಮಾಡಲಾರೆವು. ಕಳ್ಳತನ ಮಾಡಲಾರೆವು, ವ್ಯಭಿಚಾರವೆಸಗಲಾರೆವು. ನಮ್ಮ ಮಕ್ಕಳನ್ನು ಕೊಲ್ಲಲಾರೆವು. ಯಾರ ಮೇಲೆಯೂ ಸುಳ್ಳಾರೋಪ ಹೊರಿಸಲಾರೆವು. ಎಲ್ಲಾ ಒಳಿತಿನ ಕಾರ್ಯದಲ್ಲೂ ಮುಹಮ್ಮದ್‌ರನ್ನು(ಸ) ಅನುಸರಿಸುವೆವು.'' ಇವೆಲ್ಲವೂ ಆ ಕರಾರು ಪತ್ರದಲ್ಲಿ ಸೇರಿಕೊಂಡಿತ್ತು. ''ಈ ವಚನಗಳನ್ನು ನೀವು ಪಾಲಿಸಿದರೆ ನಿಮಗೆ ಸ್ವರ್ಗದ ವಾಗ್ದಾನ ನೀಡುತ್ತೇನೆಂದು ಪ್ರವಾದಿವರ್ಯರು(ಸ) ಹೇಳಿದರು. ನಿಮ್ಮ ಪೈಕಿ ಯಾರಾದರೂ ನಿಷಿದ್ಧ ಕಾರ್ಯವೆಸಗಿದರೆ ಅವನ ವ್ಯವಹಾರವು ಅಲ್ಲಾಹನ ವಶದಲ್ಲಿದೆ. ಅವನು ಬಯಸಿದರೆ ಶಿಕ್ಷಿಸಲೂಬಹುದು, ಕ್ಷಮಿಸಲೂಬಹುದು ಎಂದೂ ಅವರು ಎಚ್ಚರಿಸಿದರು. ಪ್ರವಾದಿವರ್ಯರೊಂದಿಗೆ(ಸ) ಮಾಡಿದ ಈ ಕರಾರು ಪ್ರಥಮ ಅಕಬಾ ಒಪ್ಪಂದವೆಂದೇ ಇತಿಹಾಸದಲ್ಲಿ ಪ್ರಸಿದ್ಧವಾಗಿದೆ.

❖ ❖ ❖

29. ಎರಡನೇ ಅಕಬಾ ಒಪ್ಪಂದ

ಪ್ರವಾದಿವರ್ಯರ(ಸ) ಹಿಜ್‌ರಾ ಯಾತ್ರೆಯ ಮುಖಾಂತರ ''ಯಸ್ರಿಬ್' ಮದೀನ ಆಗಿ ಪರಿವರ್ತಿತವಾಯಿತು. ಅಲ್ಲಿಂದ ಹಜ್ಜ್‌ಗೆ ಆಗಮಿಸಿದ ತಂಡದೊಂದಿ ಪ್ರವಾದಿ ವರ್ಯರು(ಸ) ಒಂದು ಒಪ್ಪಂದವನ್ನೇರ್ಪಡಿಸಿದರು. ಆ ತಂಡದಲ್ಲಿ ಈರ್ವರ ಮಹಿಳೆಯರ ಸಹಿತ 75 ಮಂದಿ ಇದ್ದರು. ಹಜ್ಜ್ ಕರ್ಮ ನಿರ್ವಹಿಸಿದ ಬಳಿಕ ಎರಡನೆ ದಿವಸ ಮಧ್ಯರಾತ್ರಿ ರಹಸ್ಯವಾಗಿ ಅಕಬಾದಲ್ಲಿ ಬಂದು ಸೇರುವಂತೆ ಅವರಲ್ಲಿ ವಿನಂತಿಸಿದರು ಈ ತಂಡದವರ ಹೊರತು ಇನ್ನಾರಿಗೂ ಈ ವಿಷಯ ತಿಳಿಯ ಬಾರದೆಂದು ಪ್ರತ್ಯೇಕವಾ ಎಚ್ಚರಿಸಿದರು.

ಈ ಹಿಂದೆ ನಿರ್ಧರಿಸಿದಂತೆ ಅವರೆಲ್ಲರೂ ಅಕಬಾದಲ್ಲಿ ಸೇರಿದರು. ಚಿಕ್ಕಪ್ಪ ಅಬ್ಬಾಸ್‌ರ ಜೊತೆಯಲ್ಲಿ ಪ್ರವಾದಿವರ್ಯರು(ಸ) ಅಲ್ಲಿಗೆ ಆಗಮಿಸಿದರು. ಆಗ ಅಬ್ಬಾಸ್‌ರು ಇಸ್ಲಾಮ್ ಸ್ವೀಕರಿಸಿರಲಿಲ್ಲ, ಅವರೆಲ್ಲರೂ ಸೇರಿ ಪರಸ್ಪರ ಕುಶಲೋಪರಿ ನಡೆಸಿದ ಬಳಿಕ ಅಬ್ಬಾಸ್‌ರು ಈ ರೀತಿ ಹೇಳಿದರು.

''ಖಝ್ರಜ್ ಗೋತ್ರಜರೇ, ನೀವು ಮುಹಮ್ಮದ್‌ರನ್ನು(ಸ) ನಿಮ್ಮಲ್ಲಿಗೆ ಕರೆಯುತ್ತಿರುವಿರಿ. ಮುಹಮ್ಮದ್‌ರು(ಸ) ನಮ್ಮ ಕುಟುಂಬ ಮತ್ತು ಬಂಧುಬಳಗದವರ ಮಧ್ಯೆ ಅತ್ಯಂತ ಸುರಕ್ಷಿತರಾಗಿರುವರು. ನಮ್ಮ ಪೈಕಿ ಅವರ ಧರ್ಮವನ್ನು ಸ್ವೀಕರಿಸಿದವರೂ ಸ್ವೀಕರಿಸದೆ ಇರುವವರೂ ಕುಲ ಗೋತ್ರದವರನ್ನು ನಾವು ಬೆಂಬಲಿಸುತ್ತಿರುವೆವು. ಆದರೆ ಮುಹಮ್ಮದ್(ಸ) ನಮ್ಮೆಲ್ಲರನ್ನೂ ಬಿಟ್ಟು ನಿಮ್ಮಲ್ಲಿಗೇ ಹೋಗ ಬಯಸುತ್ತಾರೆ. ನಿಮ್ಮಲ್ಲಿ ಇಡೀ ಅರೇಬಿಯಾದ ವೈರವನ್ನು ಯಶಸ್ವಿಯಾಗಿ ಎದುರಿಸುವಷ್ಟು ಧೈರ್ಯ, ಸ್ಥೈರ್ಯ, ಶಕ್ತಿ ಮತ್ತು ಯುದ್ಧ ಕುಶಲತೆ ಇದೆಯೋ ಇಲ್ಲವೋ ಎಂಬುದನ್ನು ಈಗಲೇ ತೀರ್ಮಾನಿಸಿರಿ.

ಚೆನ್ನಾಗಿ ಯೋಚಿಸಿ ನಿರ್ಧರಿಸಿರಿ. ಒಂದು ವೇಳೆ ಅವರು ನಿಮ್ಮೊಂದಿಗೆ ಸೇರಿದ ಬಳಿಕ ನೀವು ಅವರನ್ನು ಕೈ ಬಿಟ್ಟು ಶತ್ರುಗಳಿಗೆ ಒಪ್ಪಿಸುವುದು ನಿಮ್ಮ ಉದ್ದೇಶವೆಂದಾದರೆ ಅದನ್ನು ಈಗಲೇ ತಿಳಿಸಬೇಕು ಮತ್ತು ಈಗಲೇ ಬಿಟ್ಟು ಬಿಡುವುದು ನಿಮಗೆ ಉತ್ತಮ'' ಎಂದು ಹೇಳಿದರು.

ಅಬ್ಬಾಸ್‌ರ ಮಾತುಗಳನ್ನು ಗಮನವಿಟ್ಟು ಆಲಿಸಿದ ಯಸ್ರಿಬ್‌ನ ತಂಡವು ''ನೀವು ಹೇಳುವುದೆಲ್ಲವನ್ನೂ ನಾವು ಆಲಿಸಿದೆವು. ಆದ್ದರಿಂದ ಅಲ್ಲಾಹನ ಪ್ರವಾದಿಗಳೇ(ಸ) ಇನ್ನು ತಮಗಿಷ್ಟವಿರುವುದನ್ನು ಆರಿಸಿ'' ಎಂದು ಹೇಳಿದರು.

ಪ್ರವಾದಿವರ್ಯರು(ಸ) ಅವರ ವಿಶ್ವಾಸ ವರ್ಧನೆಗಾಗಿ ಕೆಲವು ಕುರ್‌ಆನ್ ಸೂಕ್ತಗಳನ್ನು ಪಠಿಸಿದರು. ಬಳಿಕ ಅವರೊಂದಿಗೆ ನೀವು ನಿಮ್ಮ ಪತ್ನಿ ಮಕ್ಕಳನ್ನು ಸಂರಕ್ಷಿಸುವಂತಹ ಸಂರಕ್ಷಣೆಯನ್ನು ನಾನು ನಿಮ್ಮೊಂದಿಗೆ ಬಯಸುತ್ತೇನೆ ಎಂದು ಹೇಳಿದರು.

''ಅಲ್ಲಾಹನ ಪ್ರವಾದಿಗಳೇ(ಸ) ನಿಮ್ಮನ್ನು ಸಂದೇಶವಾಹಕನಾಗಿ ನಿಯೋಜಿಸಿದವನ ಆಣೆ. ನಾವು ನಿಮಗೆ ಸಂರಕ್ಷಣೆ ನೀಡುತ್ತೇವೆಂದು ಇದೋ ಪ್ರತಿಜ್ಞೆ ಮಾಡುತ್ತಿದ್ದೇವೆ. ನಾವು ಖಡ್ಗ ಮತ್ತು ಯುದ್ಧದ ನೆರಳಲ್ಲಿಯೇ ಬೆಳೆದವರಾಗಿದ್ದೇವೆ. ಇದು ತಲೆ ತಲಾಂತರದಿಂದ ಪರಂಪರಾನುಗತವಾಗಿ ಬಂದದ್ದು ಎಂದು ಯಸ್ರಿಬ್‌ನ ತಂಡದ ಪ್ರಮುಖರಾದ ಬರಾಅ್ ಬಿನ್ ಮಅ್‌ರೂರ್ ಹೇಳಿದರು. ಅವರ ಮಾತು ಮುಗಿಯುವ ಮೊದಲೇ ''ಅಲ್ಲಾಹನ ದೂತರೇ! ನಾವು ಯಹೂದಿಗಳೊಂದಿಗೆ ಕೆಲವು ಒಪ್ಪಂದಗಳನ್ನು ಮಾಡಿಕೊಂಡಿದ್ದೇವೆ. ನಾವು ಅವೆಲ್ಲವನ್ನೂ ದುರ್ಬಲಗೊಳಿಸಿದ ಬಳಿಕ ಅಲ್ಲಾಹನು ತಮಗೆ ವಿಜಯ ದಯಪಾಲಿಸಿದಾಗ ತಮ್ಮ ಈ ದೌತ್ಯವನ್ನು ಆ ಜನತೆ ಅಂಗೀಕರಿಸಿದರೆ ತಾವು ನಮ್ಮನ್ನು ತೊರೆದು ಅವರೊಂದಿಗೆ ಹೋಗುವಿರಾ?'' ಎಂದು ಅಬುಲ್ ಹೈಥಮ್ ಕೇಳಿದರು.

''ಇಲ್ಲ ಸಾಧ್ಯವಿಲ್ಲ, ನಿಮ್ಮ ರಕ್ತವು ನನ್ನ ರಕ್ತದಂತೆ. ನೀವು ನಾಶವಾದರೆ ನಾನೂ ನಾಶವಾದಂತೆ, ನೀವು ನನ್ನವರು ನಾನು ನಿಮ್ಮವನಾಗಿರುವೆ. ನೀವು ಯುದ್ಧ ಮಾಡುವವರ ಜೊತೆ ನಾನೂ ಯುದ್ಧ ಮಾಡುವೆನು. ನೀವು ಯಾರೊಂದಿಗಾದರೂ ಒಪ್ಪಂದ ಮಾಡಿದರೆ ನಾನೂ ಒಪ್ಪಂದದಲ್ಲಿ ಏರ್ಪಡುವೆ'' ಎಂದು ಪ್ರವಾದಿಗಳು(ಸ) ಹೇಳಿದರು.

ಪ್ರವಾದಿವರ್ಯರ(ಸ) ಮಾತುಗಳಿಂದ ಯಸ್ರಿಬ್ ನಿವಾಸಿಗಳು ಪುಳಕಿತಗೊಂಡರು. ಅವರು ಒಪ್ಪಂದಕ್ಕಾಗಿ ಮುಂದೆ ಬಂದರು. ಆಗ ಅಬ್ಬಾಸ್ ಬಿನ್ ಉಬಾದ ಮಧ್ಯೆ ಪ್ರವೇಶಿಸಿ ''ಖಝ್ರಜ್ ಗೋತ್ರಜರೇ ಸ್ವಲ್ಪ ನಿಲ್ಲಿರಿ. ನೀವು ಈ ವ್ಯಕ್ತಿಯೊಂದಿಗೆ ಮಾಡುತ್ತಿರುವ ಒಪ್ಪಂದದ ಕುರಿತು ಗಂಭೀರವಾಗಿ ಚಿಂತಿಸಿದ್ದೀರಾ? ಬಲಿಷ್ಠರಾದ ಅರೇಬಿಯಾದ ವೈರವನ್ನು ಕಟ್ಟಿಕೊಳ್ಳುವ ಒಪ್ಪಂದದಲ್ಲಿ ನಾವು ಏರ್ಪಡುತ್ತಿದ್ದೇವೆ. ನಿಮ್ಮ ಸೊತ್ತು-ವಿತ್ತಗಳೂ ನಾಶವಾದಾಗ, ನಿಮ್ಮ ನಾಯಕರ ಪ್ರಾಣ ಹಾನಿಯಾದಾಗ ಈ ವ್ಯಕ್ತಿಯನ್ನು ತೊರೆಯೋಣವೆಂದು ಭಾವಿಸಿದ್ದರೆ ಈಗಲೇ ಮುಕ್ತ ಮನಸ್ಸಿನಿಂದ ಹೇಳಿಬಿಡಿರಿ. ಸ್ಪಷ್ಟವಾಗಿ ಇವರ ಕೊಡುಗೆಯನ್ನು ನಿರಾಕರಿಸಿ ಬಿಡಿರಿ. ಆದರೆ ತಿಳಿಯಿರಿ, ಅದು ಇಹದಲ್ಲಿಯೂ ಪರದಲ್ಲಿಯೂ ಅವಮಾನಕ್ಕೆ

ಕಾರಣವಾಗುವುದು. ಸೊತ್ತು-ವಿತ್ತಗಳು ನಾಶವಾದರೂ ನಮ್ಮ ನಾಯಕರನ್ನು ಹತ್ಯೆ ಮಾಡಿದರೂ ನೀವು ಮಾಡಿದ ಈ ಒಪ್ಪಂದಗಳಿಗೆ ಬದ್ಧರೆಂಬ ಖಾತ್ರಿಯಿದ್ದರೆ ಮಾತ್ರ ಈ ವ್ಯಕ್ತಿಯನ್ನು ಸ್ವೀಕರಿಸಿರಿ. ಅಲ್ಲಾಹನಾಣೆ! ಅದು ಇಹದಲ್ಲಿಯೂ ಪರದಲ್ಲಿಯೂ ಶ್ರೇಷ್ಠವಾಗಿರುವುದು'' ಎಂದು ಹೇಳಿದರು.

''ನಮ್ಮ ಸೊತ್ತು-ವಿತ್ತಗಳಿಗೆ ಹಾನಿ ಸಂಭವಿಸಿದರೂ ಚಿಂತೆಯಿಲ್ಲ, ಖಂಡಿತವಾಗಿಯೂ ನಾವು ಅವರನ್ನು ಸ್ವೀಕರಿಸುತ್ತೇವೆ. ಅಲ್ಲಾಹನ ದೂತರೇ, ಈ ಒಪ್ಪಂದ ನಾವು ಪಾಲಿಸಿದರೆ ನಮಗೇನು ಸಿಗುವುದು?'' ಎಂದು ಏಕಕಂಠದಲ್ಲಿ ಕೇಳಿದರು.

''ನಿಮಗೆ ಅನಶ್ವರವಾದ ಸ್ವರ್ಗ ಸಿಗುವುದು'' ಎಂದು ಪ್ರವಾದಿವರ್ಯರು(ಸ) ವಚನ ನೀಡಿದರು.

ಇದು ಕೇಳಿದ ತಕ್ಷಣ ತಮ್ಮೆರಡೂ ಕೈಗಳನ್ನು ಚಾಚಿದರು. ಪ್ರವಾದಿವರ್ಯರೂ(ಸ) ಚಾಚಿದರು. ಒಪ್ಪಂದವೇರ್ಪಟ್ಟ ಬಳಿಕ ಪ್ರವಾದಿವರ್ಯರು(ಸ) ''ತಮ್ಮ ಜನತೆಯ ಕರ್ಮಗಳಿಗೆ ತಾವು ಹೊಣೆಗಾರರಾಗಿದ್ದೀರಿ. ಮರ್ಯಮರ(ಅ) ಪುತ್ರ ಈಸಾರ(ಅ) ಶಿಷ್ಯಂದಿರು ಆ ಜನತೆಯ ಜವಾಬ್ದಾರಿಕೆಯನ್ನು ವಹಿಸಿದಂತೆ ನನ್ನ ಈ ಜನತೆಯ ಹೊಣೆಗಾರಿಕೆಯನ್ನು ನಾನು ವಹಿಸಿಕೊಳ್ಳುತ್ತಿದ್ದೇನೆ'' ಎಂದು ಹೇಳಿದರು. ಆಗ ಅವರು ''ಸುಖದಲ್ಲೂ ದುಃಖದಲ್ಲೂ ಸೌಭಾಗ್ಯದಲ್ಲಿಯೂ ದೌರ್ಭಾಗ್ಯದಲ್ಲಿಯೂ ನಾವು ಆಲಿಸುವವರೂ ಅನುಸರಿಸುವವರೂ ಆಗುವೆವೆಂದು ನಾವು ಪ್ರತಿಜ್ಞೆ ಮಾಡುತ್ತಿದ್ದೇವೆ. ನಾವು ಎಲ್ಲಿದ್ದರೂ ಹೇಗಿದ್ದರೂ ಸತ್ಯ ಮಾತ್ರ ನುಡಿಯುವೆವೆಂದೂ ಅಲ್ಲಾಹನ ಧರ್ಮದ ವಿಚಾರದಲ್ಲಿ ಯಾರ ಆಕ್ಷೇಪದ ಬಗ್ಗೆಯೂ ನಾವು ಭಯ ಪಡಲಾರೆವು ಎಂದೂ ಪ್ರತಿಜ್ಞೆ ಕೈಗೊಳ್ಳುತ್ತಿದ್ದೇವೆಂದು ಅವರೆಲ್ಲರೂ ಒಕ್ಕೊರಳಿನಿಂದ ಹೇಳಿದರು.

ಈ ರೀತಿ ಪ್ರವಾದಿವರ್ಯರ(ಸ) ಹಾಗೂ ಅನುಯಾಯಿಗಳ ಹಿಜ್‌ರಾ ಯಾತ್ರೆಗೆ ಮುನ್ನುಡಿಯಾಗಿ ಎರಡನೇ ಅಕಬಾ ಒಪ್ಪಂದ ಜಾರಿಗೆ ಬಂತು.

❖ ❖ ❖

30. ವಿಫಲಗೊಂಡ ಗೂಢ ತಂತ್ರ

ಪ್ರತಿಯೊಂದು ಪ್ರಭಾತದ ಉದಯವಾದಂತೆ ಮುಸ್ಲಿಮರ ಸಂಖ್ಯೆ ಕಡಿಮೆಯಾಗುತ್ತಾ ಬರುತ್ತಿತ್ತು. ಅವರು ಊರು ತೊರೆದು ಹೋಗುತ್ತಿದ್ದಾರೆಂಬುದು ಕುರೈಶರ ಅರಿವಿಗೆ ಬಂತು. ಈ ಯಾತ್ರೆ ಯಸ್ರಿಬ್‌ಗೆ ಆಗಿರಬಹುದೆಂದು ಅವರು

ಊಹಿಸಿದ್ದರು. ಪ್ರವಾದಿ ವರ್ಯರು(ಸ) ಹಾಗೂ ಅವರ ಜೊತೆ ಮಾಡಿದ ಒಪ್ಪಂದದ ಕುರಿತು ತಾವು ಕೇಳಿ ತಿಳಿದ ವಿಚಾರ ಸರಿಯೆಂದು ಅವರು ಭಾವಿಸಿದರು. ಆ ಕುರಿತು ಸೂಚನೆ ದೊರೆತ ತಕ್ಷಣ ಅವರು ಯಸ್ರಿಬ್ ನಿವಾಸಿಗಳನ್ನು ಭೇಟಿ ಮಾಡಿ, ''ನಿಮ್ಮೊಂದಿಗೆ ಯುದ್ಧ ಮಾಡಲು ನಮಗೆ ಉದ್ದೇಶವೇನೂ ಇಲ್ಲ, ಮತ್ಯಾಕೆ ನೀವು ನಮ್ಮೊಂದಿಗೆ ಯುದ್ಧ ಮಾಡಲು ಆ ಮುಹಮ್ಮದ್(ಸ) ಜೊತೆ ಒಪ್ಪಂದ ಮಾಡಿಕೊಂಡಿರುವುದು?'' ಎಂದು ಕೇಳಿದರು.

ಆದರೆ ಕುರೈಶರು ಭೇಟಿ ಮಾಡಿ ವಿಚಾರಿಸಿರುವುದು ಪ್ರವಾದಿವರ್ಯರೊಂದಿಗೆ(ಸ) ಒಪ್ಪಂದ ಮಾಡಿಕೊಂಡವರ ಜೊತೆಯಾಗಿರಲಿಲ್ಲ, ಆದ್ದರಿಂದ ಅವರು ಅದನ್ನು ಸಂಪೂರ್ಣವಾಗಿ ನಿಷೇಧಿಸಿದರು. ಈ ಸಂಭಾಷಣೆ ಆಲಿಸಿದ ಮುಸ್ಲಿಮರು ಏನೂ ಅರಿಯದವರಂತೆ ಮೌನದಿಂದ ಇದ್ದರು.

ಮುಸ್ಲಿಮರು ಊರು ತೊರೆದಿರುವುದರಿಂದ ಅವರ ಕಾಟ ತಪ್ಪಿತಲ್ಲ ಎಂಬ ಸಂತೋಷ ಕುರೈಶರಲ್ಲಿ ಉಂಟಾಗಲಿಲ್ಲ, ಬದಲಾಗಿ ಅವರು ಇನ್ನಷ್ಟು ಶಕ್ತಿ ಗಳಿಸಿ ಬಲಿಷ್ಠರಾಗಿ ಹಿಂದಿರುಗಿ ಬರುತ್ತಾರೆಂಬ ಭೀತಿ, ಆತಂಕ ಅವರನ್ನು ಕಾಡಿತು. ಆದ ಕಾರಣ ಈ ಹಿಜ್‌ರಾ ಯಾತ್ರೆ ತಡೆಯಲು ಅವರು ಸಾಕಷ್ಟು ಶ್ರಮಿಸಿದರು. ದಂಪತಿಗಳು ಜೊತೆಯಾಗಿ ಯಾತ್ರೆ ಹೊರಟಾಗ ಮಹಿಳೆಯರನ್ನು ತಡೆದರು. ತಮ್ಮನ್ನು ಧಿಕ್ಕರಿಸಿದವರನ್ನು ಕ್ರೂರವಾಗಿ ಹಿಂಸಿಸಿದರು.

ಇನ್ನೇನು ಮಾಡುವುದೆಂಬ ಚಿಂತೆ ಕುರೈಶರನ್ನು ಕಾಡಿತು. ಕೊನೆಗೆ ಪ್ರವಾದಿವರ್ಯರನ್ನು(ಸ) ಮುಗಿಸದೆ ವಿಧಿಯಿಲ್ಲ ಎಂಬ ಭಾವನೆ ಅವರಲ್ಲಿ ಮೂಡಿತು. ಒಂದು ವೇಳೆ ಮುಹಮ್ಮದರನ್ನು(ಸ) ಕೊಂದರೆ ಹಾಶಿಮ್ ಹಾಗೂ ಮುತ್ತಲಿಬ್ ಮನೆತನಗಳು ಪ್ರತೀಕಾರಕ್ಕಿಳಿಯಬಹುದೆಂಬ ಭಯವೂ ಕಾಡಿತು. ಇದನ್ನು ಹೊರತುಪಡಿಸಿ ಬೇರೆ ಏನಾದರೂ ಉಪಾಯವಿದೆಯೇ ಎಂದು ಚಿಂತಿಸತೊಡಗಿದರು. ಕೆಲವರು ಪ್ರವಾದಿವರ್ಯರನ್ನು(ಸ) ಕೊಲ್ಲದೆ ಸಂಕೋಲೆಗಳಲ್ಲಿ ಬಂಧಿಸಿ ಸೆರೆಮನೆಯಲ್ಲಿಡೋಣ ಎಂಬ ಸಲಹೆಯನ್ನೂ ನೀಡಿದರು. ಹೀಗೆ ಅನೇಕ ಅಭಿಪ್ರಾಯಗಳು ಆ ಸಮಾಲೋಚನಾ ಸಭೆಯಲ್ಲಿ ಬಂತು.

ಕೊನೆಗೊಂದು ತೀರ್ಮಾನಕ್ಕೆ ಅವರು ಬಂದರು. ಪ್ರತಿಯೊಂದು ಗೋತ್ರದಿಂದ ಧೈರ್ಯವುಳ್ಳ ದೃಢಕಾಯ ಯುವಕರನ್ನು ಆರಿಸಿ ಅವರಿಗೆಲ್ಲಾ ಒಂದೊಂದು ಖಡ್ಗ ನೀಡೋಣ. ಅವರೆಲ್ಲರೂ ಸೇರಿ ಪ್ರವಾದಿಯನ್ನು ಆಕ್ರಮಿಸಿ ಕೊಲ್ಲಲಿ. ಆಗ ಎಲ್ಲ ಗೋತ್ರಗಳೂ ಅಪರಾಧದಲ್ಲಿ ಸಮಾನ ಪಾಲಾಗುವುದು. ಎಲ್ಲಾ ಗೋತ್ರಗಳೊಂದಿಗೆ

ಒಂದಾಗಿ ಪ್ರತೀಕಾರ ಪಡೆಯಲು ಮುಹಮ್ಮದರ(ಸ) ಜನರಿಗೆ ಸಾಧ್ಯವಾಗದು. ಅವರು ಏನಾದರೂ ಪರಿಹಾರ ಧನ ಪಡೆದು ಸುಮ್ಮನಾಗಬಹುದು. ಈ ಮೂಲಕ ಕುರೈಶರ ಈ ಒಕ್ಕೂಟಗಳ ಮಧ್ಯೆ ಕಂದರ ಮೂಡಿಸಿ ಭಿನ್ನತೆ ಸೃಷ್ಟಿಸಿದ ಮುಹಮ್ಮದರ(ಸ) ಕಾಟ ಕೊನೆಗೊಳ್ಳುವುದು ಎಂಬುದಾಗಿತ್ತು ಆ ತೀರ್ಮಾನ.

ಪ್ರವಾದಿವರ್ಯರು(ಸ) ಶತ್ರುಗಳ ಗೂಢಾಲೋಚನೆಯ ಕುರಿತು ಅರಿತಿದ್ದರೂ ಅವರು ಮಕ್ಕಾ ತೊರೆಯಲು ಆತುರ ಪಡಲಿಲ್ಲ. ತಮ್ಮ ಅನುಚರರೆಲ್ಲರೂ ಹೋದ ಬಳಿಕ ಅಲ್ಲಾಹನ ಅನುಮತಿಯಂತೆ ಹೊರಡಲು ಅನುವಾಗುವ ಮುನ್ನಾ ದಿನ ರಾತ್ರಿ ಶತ್ರುಗಳು ಅವರ ಮನೆಯನ್ನು ಸುತ್ತುವರಿದರು. ಅವರು ಆಗಮಿಸಿದಾಗ ಪ್ರವಾದಿವರ್ಯರು(ಸ) ನಿದ್ರಿಸುತ್ತಿದ್ದರು. ಎಚ್ಚರವಾಗುವ ತನಕ ಕಾಯೋಣ ಎಂದು ಮನೆಯನ್ನು ಸುತ್ತುವರಿದರು. ಆದರೆ ಅವರಿಗರಿವಿಲ್ಲದಂತೆ ಅಲ್ಲಾಹನ ಅನುಗ್ರಹದಿಂದ ಪ್ರವಾದಿವರ್ಯರು(ಸ) ಅಲ್ಲಿಂದ ಪಾರಾದರು. ಈ ಮೂಲಕ ಶತ್ರುಗಳ ಕುಟಿಲ, ಗೂಢ ತಂತ್ರಗಳು ವಿಫಲಗೊಂಡವು.

❖ ❖ ❖

31. ಅಮೋಘವಾದ ಸತ್ಯ ಸಂಧತೆ

ತನ್ನ ಪ್ರವಾದಿತ್ವದ ಬಳಿಕದ ಹದಿಮೂರು ವರ್ಷಗಳ ಕಾಲ ನಿರಂತರ ಮಕ್ಕಾದಲ್ಲಿ ಇಸ್ಲಾಮಿನ ಪ್ರಚಾರದಲ್ಲಿ ಪ್ರವಾದಿವರ್ಯರು(ಸ) ನಿರತರಾದರು. ಅಲ್ಲಿರುವವರಲ್ಲಿ ಸಣ್ಣ ಒಂದು ವಿಭಾಗವು ಇಸ್ಲಾಮನ್ನು ಅಂಗೀಕರಿಸಿ ಅನುಸರಿಸಿತು. ಆದರೆ ಹೆಚ್ಚಿನವರು ಅದನ್ನು ತಿರಸ್ಕರಿಸಿದ್ದರು. ಅವರು ಇಸ್ಲಾಮನ್ನು ಧಿಕ್ಕರಿಸುವುದರೊಂದಿಗೆ ಪ್ರವಾದಿವರ್ಯರನ್ನು(ಸ) ಮತ್ತವರ ಸಂಗಾತಿಗಳನ್ನು ತೀವ್ರವಾಗಿ ಹಿಂಸಿಸಿ ಕೀಟಲೆ ಕಿರುಕುಳ ನೀಡಿದರು. ಹೀಗೆ ಇಸ್ಲಾಮನ್ನು ವಿರೋಧಿಸಿದವರು ಊರ ಪ್ರಮುಖರೂ ಶ್ರೀಮಂತರೂ ಆಗಿದ್ದರು. ಆದ್ದರಿಂದ ಮಕ್ಕಾ ನಗರವನ್ನು ಸಂಪೂರ್ಣ ಇಸ್ಲಾಮೀ ಆಡಳಿತ ವ್ಯವಸ್ಥೆಯ ಅಧೀನಕ್ಕೆ ತರುವುದು ತುಂಬಾ ತ್ರಾಸದಾಯಕ ವಿಚಾರವಾಗಿತ್ತು.

ಇಂತಹ ಪ್ರತಿಕೂಲ ಅವಸ್ಥೆಯನ್ನು ಅರಿತ ಪ್ರವಾದಿವರ್ಯರು(ಸ) ಇಸ್ಲಾಮೀ ಪ್ರಚಾರಕ್ಕೆ ಫಲವತ್ತಾದ ಹೊಸ ಪ್ರದೇಶದ ಅನ್ವೇಷಣೆಯಲ್ಲಿದ್ದರು. ಮಕ್ಕಾದಲ್ಲಿ ತನ್ನ ಜವಾಬ್ದಾರಿ ಪೂರ್ಣಗೊಂಡಿದೆ. ಸಹೃದಯಿಗಳು ಸತ್ಯಧರ್ಮದತ್ತ ವಾಲಿದರು. ತಮಗಿರುವ ಸಾಮರ್ಥ್ಯಗಳನ್ನು ವ್ಯರ್ಥಗೊಳಿಸುವುದು ಅರ್ಥ ಶೂನ್ಯವಲ್ಲವೇ? ವಿಗ್ರಹರಾಧನೆಯ ಸಂಸ್ಕೃತಿಯು ಸತ್ಯವಿಶ್ವಾಸಿಗಳ ವಿಶಿಷ್ಟ ವ್ಯಕ್ತಿತ್ವವನ್ನು ಬಾಧಿಸದಂತಹ

ಒಂದು ಹೊಸ ಸಂವಿಧಾನದ ಅಗತ್ಯ ಅಲ್ಲಿ ಕಂಡು ಬಂತು. ಅದಕ್ಕೆ ಹೊಸ ರಾಷ್ಟ್ರ ಹಾಗೂ ಹೊಸ ಆಡಳಿತದ ಅಗತ್ಯವಿತ್ತು. ಖುರೈಶರ ಕೀಟಲೆ ಕಿರುಕುಳಗಳಿಗೆ ಅಂತ್ಯ ಹಾಡಬೇಕು. ಒಂದು ಘನ ಉದ್ದೇಶವು ಈಡೇರಬೇಕೆಂದಾದರೆ ಮಕ್ಕಾ ತೊರೆಯದೆ ನಿರ್ವಾಹವಿಲ್ಲದಂತಹ ಪರಿಸ್ಥಿತಿ ನಿರ್ಮಾಣವಾಯಿತು. ದೇವ ನಿರ್ಣಯದಂತೆ ಅವರು ಮಕ್ಕಾವನ್ನು ತೊರೆದ ಬಳಿಕ ಸೂಕ್ತ ಸ್ಥಳವಾಗಿ ಮದೀನವನ್ನು ಆರಿಸಿದರು. ಆಗ ಅದು ಯಸ್ರಿಬ್ ಎಂಬ ಹೆಸರಿನಿಂದ ಕರೆಯಲ್ಪಡುತ್ತಿತ್ತು.

ಹಾಗೆಯೇ ಪ್ರವಾದಿವರ್ಯರು(ಸ) ತಮ್ಮ ಸಂಗಾತಿಗಳಿಗೆ ಯಾತ್ರೆಗೆ ಅನುಮತಿ ನೀಡಿದರು. ಬಹಳ ರಹಸ್ಯವಾಗಿಯೂ ಏಕಾಂತವಾಗಿಯೂ ಯಾತ್ರೆ ಕೈಗೊಂಡರು. ಹೀಗೆ ಯಾತ್ರೆ ಹೋದಂತೆ ಮುಸ್ಲಿಮರ ಸಂಖ್ಯೆಯಲ್ಲಿ ಗಣನೀಯ ಇಳಿಕೆ ಕಂಡುಬಂತು. ಸಾವಿನಿಂದಲೋ ಅಥವಾ ಧರ್ಮ ತೊರೆದೋ ಸಂಖ್ಯೆಯಲ್ಲಿ ಕಡಿಮೆಯಾಗುತ್ತಿರಲಿಲ್ಲ. ಇದರಿಂದ ಖುರೈಶರು ಆತಂಕಿತರಾದರು. ತಲೆ ತಲಾಂತರಗಳಿಂದ ತಮಗೆ ಲಭಿಸಿದವುಗಳನ್ನು ತಾವು ಕಷ್ಟಪಟ್ಟು ಸಂಪಾದಿಸಿದವುಗಳನ್ನೆಲ್ಲಾ ತ್ಯಜಿಸಿ ಊರು ತೊರೆಯುತ್ತಿರುವ ಇವರ ಕಾಟ ತಪ್ಪಿತಲ್ಲ ಎಂಬ ಸಂತೃಪ್ತಿಯೂ ಅವರಲ್ಲಿ ಮೂಡಲಿಲ್ಲ. ಎಂತಹ ಸಂದಿಗ್ಧತೆಯನ್ನೂ ಎದುರಿಸಲು ಸಿದ್ಧವಾಗಿ ತನ್ನ ಊರು, ಸೊತ್ತು, ಸಂತಾನ, ಮನೆಗಳನ್ನು ತೊರೆದು ಬರಿಗೈಯೊಂದಿಗೆ ಮಕ್ಕಾಗೆ ವಿದಾಯ ಹೇಳುತ್ತಿರುವ ಈ ದೃಢವಿಶ್ವಾಸಿಗಳು ಮುಂದೊಂದು ದಿನ ಬಲಿಷ್ಠರಾಗಿ ಹಿಂತಿರುಗುವರೆಂಬ ಭೀತಿ ಅವರನ್ನು ಕಾಡಿತ್ತು. ಅದಕ್ಕಾಗಿ ದಾರುನ್ನದ್‌ವಾದಲ್ಲಿ ಸಭೆ ಸೇರಿದರು. ಈ ಬಾರಿಯೂ ಪ್ರವಾದಿವರ್ಯರನ್ನು(ಸ) ಮುಗಿಸುವ ನಿರ್ಧಾರಕ್ಕೆ ಬಂದರು. ಪ್ರವಾದಿವರ್ಯರು(ಸ) ಹಿಜ್‌ರಾ ಯಾತ್ರೆಗೆ ಹೊರಡಲು ಸಿದ್ಧರಾದರು. ಜೊತೆಗೆ ಆಪ್ತ ಸಂಗಾತಿ ಅಬೂಬಕರ್‌ರವರೂ ಹೊರಡಲು ಅನುವಾದರು. ಮನೆಯಲ್ಲಿದ್ದ ಅಲೀಯವರನ್ನು ಕರೆದು ತನ್ನ ಹಾಸಿಗೆಯಲ್ಲಿ ಮಲಗುವಂತೆ ಪ್ರವಾದಿವರ್ಯರು(ಸ) ಹೇಳಿದರು. ಬಳಿಕ ಕೆಲವು ಚಿನ್ನ ಹಾಗೂ ಬೆಳ್ಳಿಯ ವಸ್ತುಗಳನ್ನು ಅಲಿಯವರ ಮುಂದಿಟ್ಟರು. ಅದು ಮಕ್ಕಾದ ಬಹುದೇವಾರಾಧಕರು ಅವರ ಬಳಿ ಜೋಪಾನವಾಗಿಡಲು ನೀಡಿದವುಗಳಾಗಿತ್ತು. ಅವೆಲ್ಲವುಗಳನ್ನು ಅದರ ವಾರೀಸುದಾರರಿಗೆ ಮರಳಿಸುವ ಜವಾಬ್ದಾರಿಯನ್ನು ಅಲೀಯವರಿಗೆ ವಹಿಸಿಕೊಟ್ಟರು.

ಅವೆಲ್ಲದರ ವಾರಿಸುದಾರರು ಬೇರೆ ಯಾರೋ ಆಗಿರಲಿಲ್ಲ, ಅದು ಪ್ರವಾದಿ ವರ್ಯರು(ಸ) ಮತ್ತವರ ಸಂಗಾತಿಗಳನ್ನು ಅತಿ ಕ್ರೂರವಾಗಿ ಪೀಡಿಸಿ ದೌರ್ಜನ್ಯವೆಸಗಿದವರು, ಬಹಿಷ್ಕಾರದಿಂದ ಅವರನ್ನು ನರಳುವಂತೆ ಮಾಡಿದವರು,

ಕೊನೆಗೆ ಪ್ರವಾದಿವರ್ಯರು(ಸ) ಊರನ್ನೇ ತೊರೆದು ಹೋಗುವ ಪರಿಸ್ಥಿತಿ ನಿರ್ಮಾಣ ಮಾಡಿದವರು, ಸಾಲದಕ್ಕೆ ಅವರ ಮನೆಯನ್ನು ಸುತ್ತುವರಿದು ವಧಿಸಲು ಸಂಚು ಹೂಡಿದ ಧೂರ್ತರಾಗಿದ್ದರು. ಇವರೆಲ್ಲರೂ ತಮ್ಮ ಸಂಪತ್ತನ್ನು ಸಂರಕ್ಷಿಸಲು ಅತ್ಯಂತ ಸೂಕ್ತ ವ್ಯಕ್ತಿ ಪ್ರವಾದಿ ಮುಹಮ್ಮದರೆಂದೇ(ಸ) ಬಗೆದಿದ್ದರು. ಅವರಿಗೆ ಅಲ್ ಅಮೀನ್‌ರ ಪ್ರಾಮಾಣಿಕತೆಯ ಬಗ್ಗೆ ಸಂಪೂರ್ಣ ವಿಶ್ವಾಸವಿತ್ತು. ಆ ಮಧ್ಯರಾತ್ರಿಯಲ್ಲಿಯೂ ಊರು ತೊರೆಯಲು ಸಿದ್ಧರಾಗುವಾಗಲೂ ಅವರ ಹಣ ಸಂಪತ್ತುಗಳನ್ನು ಮರಳಿ ಒಪ್ಪಿಸಲು ಅವರು ಮರೆಯಲಿಲ್ಲ. ಈ ಘಟನೆಯನ್ನು ವಿವರಿಸುತ್ತಾ ಇಮಾಮುದ್ದೀನ್ ಖಲೀಲ್ ಈ ರೀತಿ ಬರೆದಿದ್ದಾರೆ. ಧರ್ಮದ ಮೂಲಭೂತ ತತ್ವಗಳನ್ನು ಪಾಲಿಸುವ ಮಹತ್ತರವಾದ ಸಂದೇಶ ಹಿಜ್‌ರಾ ಯಾತ್ರೆಯಲ್ಲಿ ಅಡಗಿದೆ. ಅದಕ್ಕಾಗಿ ವಿಜಯದ ಹಾದಿಯಲ್ಲಿ ಯಶಸ್ವಿಯಾಗಿ ಹಿಜ್‌ರಾ ನಡೆಸುವುದು ಪ್ರಾಮುಖ್ಯವಾಗಿದೆ. ಜೊತೆಗೆ ಇದನ್ನೂ ಸೇರಿಸಬಹುದು ಪ್ರವಾದಿವರ್ಯರ(ಸ) ಬಳಿ ನಿಕ್ಷೇಪಿಸಲಾದ ಸಂಪತ್ತು ತನಗೆ ದೌರ್ಜನ್ಯವೆಸಗಿ ತನ್ನನ್ನು ಹೊಡೆದಟ್ಟಿಸಿದವರದ್ದಾಗಿತ್ತು. ಅದನ್ನು ಮರಳಿ ನೀಡದೆ ಮದೀನಕ್ಕೆ ಜೊತೆಯಲ್ಲಿ ಕೊಂಡು ಹೋಗಬಹುದಾಗಿತ್ತು. ಅಲ್ಲಿ ತಾನು ಸ್ಥಾಪಿಸಲು ಬಯಸುವ ಹೊಸ ಇಸ್ಲಾಮೀ ರಾಷ್ಟ್ರಕ್ಕೊಂದು ಭದ್ರ ಬುನಾದಿ ಹಾಕಲು ಆ ಹಣವನ್ನು ಉಪಯೋಗಿಸಬಹುದಿತ್ತು. ಆಧುನಿಕ ಕ್ರಾಂತಿಕಾರಿ ಸಂಘಟನೆಗಳ ನಿಲುವುಗಳ ಕುರಿತು ತುಲನೆ ಮಾಡಿದರೆ ಅದು ಅನ್ಯಾಯ ಅಥವಾ ಅಕ್ರಮ ಆಗಲಾರದು. ಕ್ರಾಂತಿಯ ಉದ್ದೇಶ ಮಾತ್ರ ಅವರಿಗಿರುವುದು.

''ಆದರೆ ಇಸ್ಲಾಮಿನ ಹಾಗೂ ಪ್ರವಾದಿವರ್ಯರ(ಸ) ನಿಲುವು ಅದಕ್ಕೆ ತದ್ವಿರುದ್ಧವಾಗಿತ್ತು. ಎಂತಹ ಸಂದಿಗ್ಧ ಪರಿಸ್ಥಿತಿಯಲ್ಲಿಯೂ ಧಾರ್ಮಿಕ ಮೌಲ್ಯಗಳನ್ನು ಕಾಪಾಡಬೇಕು. ಆದರೆ ಪ್ರತಿಕೂಲ ಪರಿಸ್ಥಿತಿಗಳಲ್ಲಿ ಧಾರ್ಮಿಕ ಮೌಲ್ಯಗಳನ್ನು ನಿರ್ಲಕ್ಷಿಸಿ ಕಾಲಕ್ಕನುಗುಣವಾಗಿ ಹೊಂದಿಕೊಂಡರೆ ಭೌತಿಕ ಸಂಘಟನೆಗಳಿಗೂ ಇಸ್ಲಾಮೀ ಸಂಘಟನೆಗಳಿಗೂ ಏನು ವ್ಯತ್ಯಾಸವಿದೆ? ಪ್ರವಾದಿವರ್ಯರು(ಸ) ತಮ್ಮಲ್ಲಿ ವಹಿಸಿಕೊಟ್ಟ ಸಂಪತ್ತುಗಳನ್ನು ಅದರ ವಾರೀಸುದಾರರಿಗೆ ಮರಳಿ ಒಪ್ಪಿಸದೆ ಒಂದು ವೇಳೆ ಯಾತ್ರೆ ಕೈಗೊಂಡಿದ್ದರೆ ಮಕ್ಕಾದ ಮುಶ್ರಿಕರ ಪ್ರತಿಕ್ರಿಯೆ ಹೇಗಿರಬಹುದು ಎಂಬುದನ್ನು ಸ್ವಲ್ಪ ಯೋಚಿಸಿರಿ. ರೋಷಾಗ್ನಿಯಲ್ಲಿ ಮುಳುಗಿದ ಅವರು, ನೋಡಿ ಪ್ರಾಮಾಣಿಕವಾಗಿದ್ದಾತ ಈಗ ಕಳ್ಳನಾದ. ಅವನಿಗೆ ಬೇಕಾಗಿರುವುದು ಹಣವಾಗಿದೆ ಎಂಬುದನ್ನು ನಾವು ಈ ಮೊದಲೇ ತಿಳಿಸಲಿಲ್ಲವೇ ಎನ್ನುವ ಮೂಲಕ ಮಾತಿನ ಬೆಂಕಿಯ ಉಂಡೆಗಳನ್ನು ಎಸೆಯುತ್ತಿದ್ದರು.

❖ ❖ ❖

32. ಹಿಜ್‌ರಾ ಹೊರಟ ಪ್ರವಾದಿ(ಸ)

ಪ್ರವಾದಿವರ್ಯರು(ಸ) ನಿರಂತರ ಹದಿಮೂರು ವರ್ಷಗಳ ಕಾಲ ತನ್ನ ಜನ್ಮ ನಾಡು ಮಕ್ಕಾದಲ್ಲಿ ಇಸ್ಲಾಮಿನ ಪ್ರಚಾರ ಮಾಡಿದರು. ಆಪ್ತರನ್ನೂ ತಮ್ಮಿಂದ ದೂರವಿರುವವರನ್ನೂ ಸನ್ಮಾರ್ಗದೆಡೆಗೆ ಆಹ್ವಾನಿಸಿದರು. ಅವರ ಶಬ್ದ ಕೇಳದವರು ಅಲ್ಲಿ ಯಾರೂ ಇರಲಿಲ್ಲ. ಪ್ರತಿಯೊಬ್ಬರನ್ನೂ ಹತ್ತರಿಂದ ಇಪ್ಪತ್ತು ಬಾರಿ ಭೇಟಿ ಮಾಡಿ ಇಸ್ಲಾಮನ್ನು ಪರಿಚಯಿಸಿದರು. ಅದರಂತೆ ಸಹೃದಯಿಗಳು ಇಸ್ಲಾಮ್ ಸ್ವೀಕರಿಸಿದರು. ಉಳಿದವರು ಸತ್ಯನಿಷೇಧದಲ್ಲಿ ಮುಳುಗಿದರು. ಆದ್ದರಿಂದ ಇನ್ನು ಮಕ್ಕಾದಲ್ಲಿ ಕೂತು ಕಾಲಹರಣ ಮಾಡುವುದರಲ್ಲಿ ಅರ್ಥವಿಲ್ಲ, ಅಂದರೆ ಇನ್ನು ವ್ಯರ್ಥ ಶ್ರಮ ಪಡಬೇಕಾಗಬಹುದು. ಯಸ್ರಿಬ್‌ನವರೊಂದಿಗೆ ಅಕಬಾದಲ್ಲಿ ಮಾಡಿದ ಒಪ್ಪಂದವು ಹೊಸ ಇತಿಹಾಸದ ಉದಯಕ್ಕೆ ನಾಂದಿಯಾಯಿತು. ಅದರೊಂದಿಗೇ ಶತ್ರುಗಳ ಕಠಿಣ ದೌರ್ಜನ್ಯಗಳಿಂದ ಪಾರಾಗುವ ಅವಕಾಶವೂ ಲಭ್ಯವಾಯಿತು. ತನ್ನ ಅನುಚರರೆಲ್ಲರೂ ಯಾತ್ರೆ ಹೋಗಿರುವುದನ್ನು ಪ್ರವಾದಿವರ್ಯರು(ಸ) ಖಚಿತ ಪಡಿಸಿಕೊಂಡರು. ಇನ್ನು ತಾನು ಹಾಗೂ ಯಾತ್ರೆಯ ಸಂಗಾತಿ ಅಬೂಬಕರ್ ಮತ್ತು ತಾನು ವಹಿಸಿಕೊಟ್ಟ ಜವಾಬ್ದಾರಿಕೆಗಳನ್ನು ಈಡೇರಿಸುವ ಹಂಬಲದಲ್ಲಿರುವ ಅಲಿ(ರ) ಮಾತ್ರ ಅಲ್ಲಿ ಉಳಿದಿದ್ದರು.

ಪ್ರವಾದಿವರ್ಯರು(ಸ) ತನ್ನ ಯಾತ್ರೆಗೆ ಬೇಕಾದ ವಾಹನ ಸರಕುಗಳನ್ನು ಸಿದ್ಧಪಡಿಸಲು ತನ್ನ ಆಪ್ತ ಸಂಗಾತಿ ಅಬೂಬಕರ್ ಸಿದ್ದೀಕ್‌ರಿಗೆ ವಹಿಸಿದರು. ಆ ಮೂಲಕ ಯಸ್ರಿಬ್ ತಲುಪಲು ಬೇಕಾಗುವ ರಕ್ಷಣೆ ಮತ್ತಿತರ ಸಿದ್ಧತೆಗಳನ್ನು ಮಾಡಿಕೊಂಡರು. ಈ ಸಂದರ್ಭದಲ್ಲಿ ಪ್ರವಾದಿವರ್ಯರನ್ನು(ಸ) ವಧಿಸಲು ಶತ್ರುಗಳು ಸಂಚು ಹೂಡಿದ್ದರು. ಆ ಸಂಚಿನಿಂದ ಬಹಳ ಅದ್ಭುತವಾಗಿ ಪಾರಾದ ಪ್ರವಾದಿವರ್ಯರು(ಸ) ನೇರವಾಗಿ ಅಬೂಬಕರ್‌ರ ಮನೆಗೆ ತಲುಪಿದರು. ತನ್ನ ಹಾಸಿಗೆಯಲ್ಲಿ ಹಸಿರು ಚಾದರವನ್ನು ಹೊದ್ದುಕೊಂಡು ಮಲಗಲು ಅಲೀಯವರಿಗೆ(ರ) ಹೇಳಿ ಪ್ರವಾದಿವರ್ಯರು(ಸ) ಅಲ್ಲಿಂದ ತೆರಳಿದ್ದರು. ಪ್ರವಾದಿವರ್ಯರನ್ನು(ಸ) ವಧಿಸಲು ಬಂದವರಿಗೆ ಪ್ರವಾದಿವರ್ಯರು(ಸ) ನಿದ್ರಿಸುತ್ತಿದ್ದಾರೆಂಬ ಭಾವನೆ ಮೂಡುವ ಉದ್ದೇಶದಿಂದ ಹೀಗೆ ಮಾಡಲಾಗಿತ್ತು.

ಪ್ರವಾದಿವರ್ಯರು(ಸ) ಅಬೂಬಕರ್ ಸಿದ್ದೀಕ್‌ರೊಡನೆ(ರ) ಮನೆಯ ಹಿಂಬಾಗಿಲಿನಿಂದ ಹೊರಬಂದರು. ಅವರು ಯಸ್ರಿಬ್‌ನ ಭಾಗಕ್ಕೆ ಪ್ರಯಾಣಿಸುವ ಬದಲು ಅದರ ವಿರುದ್ಧ ದಕ್ಷಿಣದತ್ತ ಹೊರಟರು. ಇದು ಅವರನ್ನು ಹುಡುಕುತ್ತಿದ್ದ

ಶತ್ರುಗಳ ಕಣ್ತಪ್ಪಿಸಲು ಮಾಡಿದ ತಂತ್ರವಾಗಿತ್ತು. ಈರ್ವರೂ ಮಕ್ಕಾದ ದಕ್ಷಿಣಕ್ಕಿರುವ ಬೆಟ್ಟದ ತಪ್ಪಲಲ್ಲಿರುವ 'ಸೌರ್' ಎಂಬ ಗುಹೆಯನ್ನು ತಲುಪಿದರು. ಶತ್ರುಗಳ ಹುಡುಕಾಟ ಮುಗಿಯುವ ತನಕ ಅಲ್ಲಿಯೇ ತಂಗಲು ನಿರ್ಧರಿಸಿದ್ದರು. ಅಲ್ಲಿಗೆ ಆಹಾರ ತಲುಪಿಸಲು ಅಬೂಬಕರ್‌ರ ಪುತ್ರಿ ಅಸ್ಮಾರಿಗೆ ವಹಿಸಿ ಕೊಡಲಾಗಿತ್ತು. ಹಾಲು ಕುಡಿಯಲಿಕ್ಕಾಗಿ ಅಲ್ಲಿಗೆ ಆಡು ಮೇಯಿಸಿ ಬರಲು ಆಮಿರ್ ಬಿನ್ ಫುಹೈರಾರನ್ನು ನೇಮಿಸಿದರು. ಶತ್ರುಗಳ ಗೂಢ ತಂತ್ರಗಳ ಕುರಿತು ರಹಸ್ಯವಾಗಿ ಸುದ್ದಿ ತಲುಪಿಸಲು ಪುತ್ರ ಅಬ್ದುಲ್ಲಾರನ್ನು ಅಬೂಬಕರ್ ನೇಮಿಸಿದರು. ಗುಹೆಯ ಬಳಿ ತೆರಳಿದ ಹೆಜ್ಜೆಯ ಗುರುತುಗಳು ಗೋಚರಿಸದಂತೆ ಅತ್ತ ಆಡುಗಳನ್ನು ಮೇಯಿಸಲು ಸೂಚಿಸಲಾಗಿತ್ತು. ಬಹಳ ಯುಕ್ತಿಯಿಂದ ಸುವ್ಯವಸ್ಥಿತವಾಗಿ ಬಹಳ ತಂತ್ರಗಾರಿಕೆಯಿಂದ ಪ್ರವಾದಿವರ್ಯರು(ಸ) ತನ್ನ ಕಾರ್ಯವನ್ನು ನಿರ್ವಹಿಸಿದರು. ಜೊತೆಗೆ ಸಹಾಯಕ್ಕಾಗಿ ನಿರಂತರವಾಗಿ ಅಲ್ಲಾಹನಲ್ಲಿ ಪ್ರಾರ್ಥಿಸುತ್ತಿದ್ದರು. ಹೀಗೆ ಎರಡೂ ಸೇರಿದಾಗ ದಿವ್ಯ ಸಹಾಯಗಳು ಬಂದೊದಗಿತು. ಶತ್ರುಗಳು ಗುಹೆಯ ಸಮೀಪ ಬಂದರೂ ಅವರ ಕಣ್ಣಿಗೆ ಬೀಳಲಿಲ್ಲ.

ಮೂರು ದಿವಸ ಅಲ್ಲಿ ತಂಗಿದ್ದ ಬಳಿಕ ಅಲ್ಲಿಂದ ಈರ್ವರೂ ಹೊರ ಬಂದರು. ಆಗ ಅಸ್ಮಾ(ರ) ಆಹಾರದ ಪೊಟ್ಟಣದೊಂದಿಗೆ ಅಲ್ಲಿಗೆ ಆಗಮಿಸಿದ್ದರು. ಅಬೂಬಕರ್‌ರ ನಿರ್ದೇಶನದಂತೆ ಅಬ್ದುಲ್ಲಾ ಬಿನ್ ಉಬೈದ್ ಕೂಡಾ ಪ್ರಯಾಣಿಸಲು ಒಂಟೆಯನ್ನು ಅಲ್ಲಿಗೆ ತಲುಪಿಸಿದರು. ಯಸ್ರಿಬ್‌ಗೆ ಹೋಗುವ ರಹಸ್ಯ ಮಾರ್ಗದ ಬಗ್ಗೆ ಅರಿವಿದ್ದ ಅವರು ಆಗ ಇಸ್ಲಾಮ್ ಸ್ವೀಕರಿಸಿರಲಿಲ್ಲ. ಆದರೂ ಅತ್ಯಂತ ರಹಸ್ಯವಾದ ಯಾತ್ರೆಗೆ ಪ್ರವಾದಿವರ್ಯರು(ಸ) ಅವರನ್ನೇ ಆರಿಸಿದ್ದರು.

❖ ❖ ❖

33. ಭಯ ಪಡದಿರಿ ಅಲ್ಲಾಹನು ನಮ್ಮೊಂದಿಗಿದ್ದಾನೆ

ಹಿಜ್‌ರಾ ಯಾತ್ರೆ ಎಂಬುದು ಶತ್ರುಗಳ ಕಿರುಕುಳದಿಂದ ಉದ್ರೇಕಿತರಾಗಿ ದುಡುಕಿನಿಂದ ತೆಗೆದುಕೊಂಡ ನಿರ್ಧಾರವಾಗಿರಲಿಲ್ಲ. ಅದು ಗಹನವಾಗಿ ಚಿಂತಿಸಿ ಸಮಾಲೋಚಿಸಿ ವ್ಯವಸ್ಥಿತವಾಗಿ ತೆಗೆದುಕೊಂಡ ನಿರ್ಧಾರವಾಗಿತ್ತು. ಈ ಐತಿಹಾಸಿಕ ಯಾತ್ರೆಗೆ ಮೊದಲ ಸಾಕ್ಷಿಯಾದದ್ದು ಸೌರ್ ಗುಹೆಯಾಗಿತ್ತು. ಮನೆ ಬಿಟ್ಟು ತೆರಳಿ ಪ್ರವಾದಿವರ್ಯರು(ಸ) ಅಬೂಬಕರ್ ಸಿದ್ದೀಕ್‌ರ ಜೊತೆ ಮೂರು ದಿನ ಅಲ್ಲಿ

ಂಗಿದ್ದರು. ಅದು ಶತ್ರುಗಳ ಹಿಡಿತದಿಂದ ತಪ್ಪಿಸಲು ಸೃಷ್ಟಿಕರ್ತನು ಒದಗಿಸಿದ ರಕ್ಷಣಾ ಣವಾಗಿತ್ತು.

ಇದು ಮಕ್ಕಾದಿಂದ ಮೂರು ಕಿ.ಮೀ. ದೂರದಲ್ಲಿದೆ. ಅಬ್ದು ಮನಾಫರ ಪುತ್ರ ೌರ್ ಅಲ್ಲಿ ಹುಟ್ಟಿದ ಕಾರಣ ಆ ಗುಹೆಗೆ ಈ ಹೆಸರು ಬಂದಿದೆ. ಸೌರ್ ಗುಹೆಗೆ ರಳುವ ಹಾದಿಯ ಎರಡೂ ಬದಿಯಲ್ಲಿ ಪರ್ವತಗಳಿವೆ. ಸೌರ್ ಬೆಟ್ಟದ ತಪ್ಪಲಲ್ಲಿ ುಹಾ ಬಂಡೆ ಕಲ್ಲೊಂದಿದೆ. ಅದರ ಒಳಗಡೆ ಟೊಳ್ಳಾದುದರಿಂದ ಅಲ್ಲಿ ವಿಶಾಲವಾದ ುಹೆಯೊಂದಿದೆ. ಅದರ ಉತ್ತರ ಹಾಗೂ ಪಶ್ಚಿಮದಲ್ಲಿ ಎರಡು ಕವಲು ದ್ವಾರಗಳಿವೆ. ಅದರ ಪಶ್ಚಿಮ ಭಾಗದಲ್ಲಿರುವ ಕವಲು ದ್ವಾರದ ಮುಖಾಂತರ ಪ್ರವಾದಿವರ್ಯರು(ಸ) ುತ್ತು ಅಬೂಬಕರ್ ಸಿದ್ದೀಕ್‌ರು ಪ್ರವೇಶಿಸಿದರು.

ಪ್ರವಾದಿವರ್ಯರನ್ನು(ಸ) ವಧಿಸಲೆಂದು ಅವರ ಮನೆಯನ್ನು ಸುತ್ತುವರಿದು ಾತ್ರಿ ಯಿಡೀ ಕಾದು ಮುಂಜಾನೆ ಪ್ರವಾದಿವರ್ಯರ(ಸ) ಹಾಸಿಗೆಯನ್ನು ನೋಡಿದಾಗ ಅಲ್ಲಿ ಅಲೀಯವರು ಮಲಗಿದ್ದುದನ್ನು ಕಂಡು ತೀವ್ರ ನಿರಾಶರಾದರು. ಅದರಿಂದ ುಪಿತಗೊಂಡ ಅವರು ಕೂಡಲೇ ನಾಲ್ಕು ಕಡೆ ಪ್ರವಾದಿವರ್ಯರನ್ನು(ಸ) ಹುಡುಕುತ್ತಾ ಹೊರಟರು. ಅದರಲ್ಲೊಂದು ತಂಡವು ಸೌರ್ ಗುಹೆಯ ಮುಂಭಾಗದತ್ತ ಹೋಯಿತು. ಅವರ ಕಾಲ ಸಪ್ಪಳ ಹಾಗೂ ಗುಸುಗುಸು ಮಾತುಕತೆಯು ದೇವಕೀರ್ತನೆಯಲ್ಲಿಯೂ ಪ್ರಾರ್ಥನೆಯಲ್ಲಿಯೂ ನಿರತರಾಗಿದ್ದ ಪ್ರವಾದಿವರ್ಯರು(ಸ) ಹಾಗೂ ಅಬೂಬಕರ್‌ರ ಿವಿಗೆ ಕೇಳಿಸಿತು. ಇದರಿಂದ ಅಬೂಬಕರ್‌ರವರು ತೀರಾ ಕಳವಳಗೊಂಡರು. ತಮ್ಮ ಜೀವಕ್ಕಿಂತ ಹೆಚ್ಚು ಪ್ರೀತಿಸುವ ಪ್ರವಾದಿವರ್ಯರ(ಸ) ಕುರಿತು ಅವರಿಗೆ ಆತಂಕವಿತ್ತು. ಆಗ ಅವರು ಭಯ ವಿಹ್ವಲಗೊಂಡು ಆತಂಕಿತರಾಗಿ, 'ಅವರು ಸ್ವಲ್ಪ ಇಣುಕಿದರೆ ಸಾಕು, ಅವರ ಕಣ್ಣಿಗೆ ನಾವು ಬೀಳುವುದು ಖಚಿತ' ಎಂದು ಹೇಳಿದರು. ಪ್ರವಾದಿವರ್ಯರು(ಸ) ಅವರನ್ನು ಸಂತೈಸುತ್ತಾ ''ಮೂರನೆಯವನಾಗಿ ಅಲ್ಲಾಹನು ನಮ್ಮೊಂದಿಗಿರುವಾಗ ನಮ್ಮಿಬ್ಬರ ಬಗ್ಗೆ ತಮಗೆ ಆತಂಕವೇಕೆ?'' ಶತ್ರುಗಳು ಸಮೀಪದಲ್ಲಿರುವಾಗಲೂ ಪ್ರವಾದಿವರ್ಯರು(ಸ) ತೋರಿದ ಅಸಾಧಾರಣ ಮನೋದಾರ್ಢ್ಯತೆ ಮತ್ತು ಸ್ಥೈರ್ಯಯನ್ನು ನೋಡಿ ಅಬೂಬಕರ್ ಸಿದ್ದೀಕ್‌ರು ಸಂತೃಪ್ತರಾದರು.

ಗುಹೆಯ ದ್ವಾರದ ಬಳಿ ಬಂದ ಶತ್ರುಗಳು ಬಹಳ ಸೂಕ್ಷ್ಮವಾಗಿ ಅಲ್ಲಿ ಪರಿಶೀಲಿಸಿದಾಗ ಜೇಡರ ಬಲೆ ಹಾಗೂ ಪಾರಿವಾಳದ ಗೂಡು ಕಂಡು ಬಂತು. ಆದ್ದರಿಂದ ಇಲ್ಲಿ ಯಾರೂ ಇರಲು ಸಾಧ್ಯವಿಲ್ಲವೆಂದು ಬಗೆದು ಅಲ್ಲಿಂದ ತೆರಳಿದರು. ಗುಹೆಯೊಳಗೆ ಹೋಗಿ ತಪಾಸಣೆ ನಡೆಸೋಣವೆಂದು ತಂಡದಲ್ಲಿ ಓರ್ವರು ಹೇಳಿದಾಗ,

ಉಳಿದವರು ತಿರಸ್ಕರಿಸಿ ಈ ರೀತಿ ಹೇಳಿದರು. ''ಮುಹಮ್ಮದರ(ಸ) ಪ್ರಾಯವನ ಮೀರಿದ ಜೇಡರ ಬಲೆ ಹಾಗೂ ಪಾರಿವಾಳದ ಗೂಡು ಇರುವುದರಿಂದ ಅ ಯಾರೂ ಉಳಕೊಳ್ಳಲು ಸಾಧ್ಯವೇ ಇಲ್ಲ''

ಶತ್ರುಗಳ ಈ ಸಂಭಾಷಣೆಯನ್ನು ಆಲಿಸುತ್ತಿದ್ದ ಪ್ರವಾದಿವರ್ಯರು(ಸ) ಮತ್ತವ ಸಂಗಾತಿ ನಿಟ್ಟುಸಿರು ಬಿಟ್ಟರು. ಕೂಡಲೇ ಪ್ರವಾದಿವರ್ಯರು(ಸ) ದೇವನನ ಸ್ತುತಿಸಿದರು.

''ಸರ್ವಸ್ತುತಿಗಳೂ ಸರ್ವಲೋಕ ಪಾಲಕನಿಗೆ. ಅಲ್ಲಾಹನು ಮಹಾನನು.''

ಈ ಘಟನೆಯನ್ನು ಕುರ್‌ಆನ್ ಈ ರೀತಿ ವಿವರಿಸುತ್ತದೆ. ಸತ್ಯನಿಷೇಧಿಗಳು ಅವರನ್ನು ಹೊರ ಹಾಕಿದ ಸಂದರ್ಭದಲ್ಲಿ ಅಲ್ಲಾಹನು ಅವರಿಗೆ ನೆರವಾಗಿದ್ದಾನೆ. ಅವರೀರ್ವರ ಪೈಕಿ ಎರಡನೆಯವರಾಗಿದ್ದಾಗ, ಈರ್ವರೂ ಗುಹೆಯೊಳಗಿದ್ದಾಗ ಅವರು ತಮ್ಮ ಸಂಗಾತಿಯೊಡನೆ ''ಖೇದಗೊಳ್ಳಬೇಡಿರಿ. ಅಲ್ಲಾಹನು ನಮ್ಮ ಜೊತೆಗಿದ್ದಾನೆ'' ಎಂದು ಹೇಳಿದರು. ಆಗ ಅಲ್ಲಾಹನು ಅವರ ಮೇಲೆ ಮನಶ್ಶಾಂತಿಯನ್ನು ಇಳಿಸಿದನು.'' (ಅತ್ತೌಬಾ–40)

❖ ❖ ❖

34. ಸುರಾಕಾನ ಕುದುರೆ ಮಂಡಿಯೂರಿತು

ಪ್ರವಾದಿವರ್ಯರನ್ನು(ಸ) ಸೆರೆ ಹಿಡಿಯಲು ವಿಫಲರಾದ ಕುರೈಶಿ ನೇತಾರರು ಕೋಪದಿಂದ ಕೆಂಡವಾದರು. ಕೆರಳಿದ ಅವರು ಪ್ರವಾದಿವರ್ಯರ(ಸ) ತಲೆಯನ್ನು ತಂದವರಿಗೆ ನೂರು ಒಂಟೆಗಳನ್ನು ನೀಡುತ್ತೇವೆಂದು ಬಹುಮಾನ ಘೋಷಿಸಿದರು. ಇದರಿಂದ ಆಕರ್ಷಿತಗೊಂಡ ಅನೇಕರು ಪ್ರವಾದಿವರ್ಯರನ್ನು(ಸ) ಹುಡುಕಲು ಹೊರಟರು. ಸೌರ್ ಗುಹೆಯಿಂದ ಪ್ರಯಾಣ ಹೊರಟ ಪ್ರವಾದಿವರ್ಯರು(ಸ) ಹಾಗೂ ಅಬೂಬಕರ್‌ರನ್ನು ಎರಡನೆಯ ದಿನ ಮುದ್‌ಲಜ್ ವಂಶಜನಾದ ಓರ್ವನು ನೋಡಿದನು. ಆತ ತಕ್ಷಣ ಓಡಿ ಕುರೈಶರಿಗೆ ವಿವರ ತಿಳಿಸಿದನು. ಆಗ ಅಲ್ಲಿ ಅದೇ ವಂಶಕ್ಕೆ ಸೇರಿದ ಸುರಾಕಾ ಬಿನ್ ಮಾಲಿಕ್ ಮುಂತಾದವರು ಇದ್ದರು. ಇವರು ಬೇರೆ ಯಾರನ್ನೋ ನೋಡಿರಬಹುದೆಂದು ಹೇಳಿ ಸುರಾಕಾ ಬಿನ್ ಮಾಲಿಕ್ ಅಲ್ಲಿದ್ದವರ ಗಮನವನ್ನು ಬೇರೆಡೆಗೆ ತಿರುಗಿಸಿ ಬಳಿಕ ಕಾಲಹರಣ ಮಾಡದೆ ಅತೀ ವೇಗವಾಗಿ ಓಡುವ ಕುದುರೆಯೊಂದನ್ನು ಏರಿ ಪ್ರವಾದಿವರ್ಯರನ್ನು(ಸ) ಹುಡುಕುತ್ತಾ ಹೊರಟರು. ಶಸ್ತ್ರ ಸಜ್ಜಿತನಾದ ಸುರಾಕಾರ ಮನಸಿನಲ್ಲಿ ನೂರು ಒಂಟೆಗಳು ಓಡಾಡುತ್ತಿತ್ತು.

ಸುರಾಕಾರ ಕುದುರೆ ಅನೇಕ ಬಾರಿ ಮುಗ್ಗರಿಸಿ ಬಿದ್ದರೂ ಅದನ್ನು ಲೆಕ್ಕಿಸದೆ ಪ್ರಯಾಣ ಮುಂದುವರಿಸಿದರು. ಸ್ವಲ್ಪ ದೂರ ಹೋದ ಬಳಿಕ ಆತನಿಗೆ ಪ್ರವಾದಿವರ್ಯರು(ಸ) ಹಾಗೂ ಅಬೂಬಕರ್‌ರು(ರ) ದೂರದಲ್ಲಿ ಗೋಚರಿಸಿದಂತಾಯಿತು. ಸಮಯ ಸಂಜೆಯ ಅಂತ್ಯದಲ್ಲಿದ್ದ ಕಾರಣ ಕುದುರೆಯ ವೇಗವನ್ನು ಇನ್ನಷ್ಟು ಹೆಚ್ಚಿಸಿದರು. ಅದು ಪ್ರವಾದಿವರ್ಯರ(ಸ) ಬಳಿ ತಲುಪಿದಾಗ ಕುದುರೆಯ ಕಾಲುಗಳು ಮರಳಿನಲ್ಲಿ ಹೂತು ಹೋದವು. ಸುರಾಕಾ ತಬ್ಬಿಬ್ಬಾದರು. ಎರಡು ಮೂರು ಬಾರಿ ಇದರ ಪುನರಾವರ್ತನೆ ಯಾದಾಗ ಅವರು ಗಲಿಬಿಲಿಗೊಂಡರು. ನಿರಾಶನಾದ ಅವರು ತನ್ನ ನಿರ್ಧಾರವನ್ನು ಬದಲಿಸಿದರು. 'ನಾನೋರ್ವ ಅಭಯ ಯಾಚಿಸುವವನಂತೆ ಮುಹಮ್ಮದ್(ಸ) ಹಾಗೂ ಅಬೂಬಕರ್‌ರನ್ನು(ರ) ಭೇಟಿಯಾದೆ ಎಂದು ಕುರೈಶರಿಗೆ ಮನದಟ್ಟು ಮಾಡಿದರೆ ಸಾಕೆಂಬ ನಿರ್ಧಾರಕ್ಕೆ ಬಂದರು. ಆದರಂತೆ ನನಗೊಂದು ಅಭಯ ಪತ್ರವನ್ನು ಕೊಟ್ಟುಬಿಡಿ ಎಂದು ಪ್ರವಾದಿವರ್ಯರೊಂದಿಗೆ(ಸ) ವಿನಂತಿಸಿದರು. ಪ್ರವಾದಿವರ್ಯರ(ಸ) ನಿರ್ದೇಶನದಂತೆ ಅಬೂಬಕರ್‌ರವರು(ರ) ಕಲ್ಲಿನಲ್ಲಿ ಬರೆದು ಕೊಟ್ಟರು. ಸುರಾಕಾ ಅದನ್ನು ಪಡೆದು ಹೋಗಲು ಅನುವಾದಾಗ ಅವರನ್ನು ತಡೆದು ಈ ರೀತಿ ಕೇಳಿದರು ''ಸುರಾಕಾ ನೀವು ಕಿಸ್ರಾ(ಇರಾನಿನ ದೊರೆ)ರ ಕಂಕಣ ಧರಿಸುವಾಗ ನಿಮಗೆ ಹೇಗೆನಿಸಬಹುದು?''

ಸುರಾಕಾರಿಗೆ ಏನೆಂದು ಹೇಳಬೇಕೆಂದೇ ತೋಚಲಿಲ್ಲ. ಯಾರೂ ಸಹಾಯಕರಿಲ್ಲದೆ ಹೊರಹಾಕಲ್ಪಟ್ಟ ಮುಹಮ್ಮದ್(ಸ) ಮಹಾಚಕ್ರವರ್ತಿಯ ಸ್ವರ್ಣದ ಬಳೆಗಳನ್ನು ದಾನ ಮಾಡುವ ಮಾತನಾಡುತ್ತಿದ್ದಾರೆ. ಎಂತಹ ಮೂರ್ಖತನ ಎಂದು ಅವರು ಮನದೊಳಗೆ ನಗುತ್ತಾರೆ. ಸಿಗಬಹುದಾದ ನೂರು ಒಂಟೆಗಳು ನಷ್ಟವಾಯಿತಲ್ಲಾ ಎಂಬ ಕೊರಗಿನೊಂದಿಗೆ ಸುರಾಕಾ ಮಕ್ಕಾದತ್ತ ಪಯಣಿಸಿದರು.

ಕೆಲವು ವರ್ಷಗಳ ಬಳಿಕ ದ್ವಿತೀಯ ಖಲೀಫ ಉಮರುಲ್ ಫಾರೂಕ್‌ರ ಆಡಳಿತದ ಸಂದರ್ಭದಲ್ಲಿ ಸೀಝರನ ಸಾಮ್ರಾಜ್ಯ ಉರುಳಿತು. ಅವರ ಅರಮನೆ ಮತ್ತು ಬೆಲೆ ಬಾಳುವ ವಸ್ತುಗಳು ಖಲೀಫರ ಅಧೀನಕ್ಕೊಳಪಟ್ಟಿತು. ಅದರಲ್ಲಿ ಸೀಝರನ ಸ್ವರ್ಣದ ಕಡಗ(ಬಳೆ)ಗಳೂ. ಸೇರಿದ್ದವು. ಆ ವಸ್ತುಗಳೆಲ್ಲವನ್ನೂ ಮದೀನಾಕ್ಕೆ ಬಂದ ತಕ್ಷಣ ಉಮರುಲ್ ಫಾರೂಕ್‌ರು ಸುರಾಕಾರನ್ನು ಕರೆದರು. ಆ ಬಳೆಗಳನ್ನು ಅವರ ಕೈಗಳಿಗೆ ತೊಡಿಸಿದರು. ಆದರಂತೆ ಪ್ರವಾದಿ ವರ್ಯರು(ಸ) ಕೆಲವಾರು ವರ್ಷಗಳ ಹಿಂದೆ ಆಡಿದ ನುಡಿ ಮುತ್ತುಗಳು ನಿಜವಾಯಿತು.

❖ ❖ ❖

35. ಅಬೂ ಅಯ್ಯೂಬ್‌ರ ಮನೆಯಲ್ಲಿ

ಮದೀನಾ ತಲುಪಿದ ಪ್ರವಾದಿವರ್ಯರನ್ನು(ಸ) ಅತಿಥಿಯಾಗಿ ಸ್ವೀಕರಿ ಮನೆಯಲ್ಲಿ ಸತ್ಕರಿಸಲು ಅಲ್ಲಿದ್ದ ಸತ್ಯವಿಶ್ವಾಸಿಗಳಲ್ಲಿ ಪ್ರತಿಯೊಬ್ಬರೂ ನಾಮುಂ ತಾಮುಂದು ಎಂದು ಆಹ್ವಾನಿಸಿ ಒತ್ತಾಯಿಸುತ್ತಿದ್ದರು. ಪ್ರವಾದಿವರ್ಯರಿಗೆ(ಸ) ಆ ಯಾರನ್ನೂ ತಿರಸ್ಕರಿಸದಂತಹ ಪರಿಸ್ಥಿತಿ ಉದ್ಭವವಾಗಿತ್ತು. ಆಗಲೂ ಅದಕ್ಕಾಗಿ ದೇವ ಆದೇಶಕ್ಕೆ ಕಾದರು. ಯಾರ ಮನೆಯ ಮುಂದೆ ನನ್ನ ಒಂಟೆ ಮೊಣಕಾಲೂರುವುದೋ ಆ ಮನೆಯಲ್ಲಿ ತಂಗುವುದಾಗಿ ತಿಳಿಸಿದರು.

ಕೊನೆಗೆ ಆ ಸೌಭಾಗ್ಯವು ಅಬೂ ಅಯ್ಯೂಬುಲ್ ಅನ್ಸಾರಿ ಎಂ ಸಹಾಬಿವರ್ಯರಿಗೆ ಲಭಿಸಿತು. ಮನೆಯ ಮಾಳಿಗೆಯ ಬದಲು ಕೆಲ ಅಂತಸ್ತಿನ ತಂಗಲು ಅವರು ಬಯಸಿದ್ದರು. ಇದರಿಂದ ಅಬೂ ಅಯ್ಯೂಬ್‌ರು ತೀ ಕಳವಳಕ್ಕೀಡಾದರು. ಯಾಕೆಂದರೆ ಮೇಲಂತಸ್ತಿನಲ್ಲಿ ತಾನು ಮತ್ತು ತನ್ನ ಕುಟುಂಬದವ ಇರುವಾಗ ಕೆಳಗೆ ಪ್ರವಾದಿವರ್ಯರು(ಸ) ವಾಸಿಸುವುದೇ ಎಂಬ ಆತಂಕ ಅವರ ಕಾಡಿತ್ತು. ಆ ಕುರಿತು ಪ್ರವಾದಿವರ್ಯರನ್ನು(ಸ) ವಿಚಾರಿಸಿದರು. ಆದರೆ ಜನರ ಹೆಚ್ಚಾಗಿ ಸಂಪರ್ಕಿಸಲು ಕೆಳಗೆ ಹೆಚ್ಚು ಅನುಕೂಲವಾಗುತ್ತದೆ. ಆ ಕಾರಣದಿಂದ ಕೆ ಅಂತಸ್ತನ್ನೇ ಆಯ್ದುಕೊಂಡೆ ಎಂದರು.

ಒಮ್ಮೆ ಅಬೂ ಅಯ್ಯೂಬ್‌ರ ಮನೆಯಲ್ಲಿ ಪಾತ್ರೆ ಕೆಳಕ್ಕೆ ಬಿದ್ದು ನೀರು ನೆಲದ ಹರಿದಾಡಿತು. ಅದು ಹರಿದು ಎಲ್ಲಿ ಪ್ರವಾದಿವರ್ಯರ(ಸ) ದೇಹದ ಮೇ ಬೀಳುವುದೋ ಎಂಬ ಆತಂಕ ಅಬೂ ಅಯ್ಯೂಬ್ ಮತ್ತವರ ಪತ್ನಿಯನ್ನು ಕಾಡಿತ ಅವರೀರ್ವರೂ ತಡಮಾಡದೆ ತಾವು ಹೊದ್ದುಕೊಂಡಿದ್ದ ಚಾದರದಿಂದ ನೀರ ಒರೆಸಿ ತೆಗೆದರು. ಅದು ಬಹಳ ಚಳಿಗಾಲದ ಸಮಯವಾಗಿತ್ತು. ಕೊರೆವ ಚಳಿಂ ಆ ರಾತ್ರಿಯನ್ನು ದಂಪತಿಗಳು ಚಾದರ ರಹಿತವಾಗಿ ಕಳೆದರು.

❖ ❖ ❖

36. ಯಸ್ರಿಬ್ ಮದೀನವಾಯ್ತು

''ಓ ಬನೀ ಕೀಲರೇ ಅದೋ ಅಲ್ಲಿ ನಿಮ್ಮ ಸರದಾರರು ಬರುತ್ತಿದ್ದಾರೆ'' ಎಂ ಯಹೂದಿಯೊಬ್ಬನು ಕೂಗಿ ಹೇಳುತ್ತಿದ್ದನು. ಪ್ರವಾದಿವರ್ಯರ(ಸ) ಆಗಮನ ನಿರೀಕ್ಷೆಯಲ್ಲಿರುವವರಲ್ಲಿ ಅವರೂ ಸೇರಿದ್ದರು.

ತೀವ್ರವಾದ ಬಿಸಿಲಿನ ಧಗೆ, ಸುಡು ಮರಳಿನಲ್ಲಿ ಬೆಟ್ಟ, ಹೊಂಡಗಳನ್ನು ದಾಟಿ ತಿಹಾಮ ಮರುಭೂಮಿಯನ್ನು ಹಾದು ಪ್ರವಾದಿವರ್ಯರು(ಸ) ಮತ್ತವರ ಸಂಗಾತಿಗಳು ಯಸ್ರಿಬನ್ನು ಗುರಿಯಾಗಿಸಿಕೊಂಡು ಧಾವಿಸುತ್ತಿದ್ದಾರೆ. ಸೂರ್ಯನ ತಾಪದಿಂದ ರಕ್ಷಿಸಿಕೊಳ್ಳಲು ಯಾವುದೇ ನೆರಳಿನ ಆಶ್ರಯ ಅಲ್ಲಿರಲಿಲ್ಲ. ಅಲ್ಲಾಹನ ಸಂಪ್ರೀತಿಯನ್ನು ಬಯಸಿ ಎಲ್ಲವನ್ನೂ ಸಹಿಸಿ ರಾತ್ರಿ ಹಗಲೆನ್ನದೆ ಅವರು ಪ್ರಯಾಣಿಸಿದ್ದರು. ಹೀಗೆ ನಿರಂತರ ಏಳು ದಿನಗಳ ಕಾಲ ಒಂಟೆಯಲ್ಲಿ ಪ್ರಯಾಣಿಸಿ ಝುಹೀಮ್ ಗೋತ್ರ ನಿವಾಸಿಗಳ ಬಳಿಗೆ ಸಾಗಿದರು. ಅಲ್ಲಿ ಆ ಗೋತ್ರದ ನಾಯಕ ಅವರೆಲ್ಲರನ್ನೂ ಹಾರ್ದಿಕವಾಗಿ ಬರಮಾಡಿಕೊಂಡರು.

ಯಸ್ರಿಬ್‌ನಲ್ಲಿಂದ ಅನತಿ ದೂರದಲ್ಲಿರುವ ಕುಬಾಗೆ ತಲುಪಿದ ಪ್ರವಾದಿವರ್ಯರು(ಸ) ನಾಲ್ಕು ದಿನ ಅಲ್ಲಿ ತಂಗಿದರು. ಅಲ್ಲಿ ಮಸೀದಿಯೊಂದನ್ನು ನಿರ್ಮಿಸಿದರು. ಈ ಮಧ್ಯೆ ಮಕ್ಕಾದಲ್ಲಿ ಪ್ರವಾದಿವರ್ಯರ(ಸ) ಬಳಿ ಅಡವಿಟ್ಟಿದ್ದ ಸಂಪತ್ತುಗಳನ್ನೆಲ್ಲಾ ವಿತರಿಸಿದ ಬಳಿಕ ಅಲಿಯವರೂ ಅಲ್ಲಿಗೆ ತಲುಪಿದರು.

ಕುಬಾದಿಂದ ಯಸ್ರಿಬ್‌ಗೆ ಹೊರಟ ಪ್ರವಾದಿವರ್ಯರ(ಸ) ಆಗಮನದ ಶುಭ ಸುದ್ದಿಯಿಂದ ಪುಳಕಿತರಾದ ಯಸ್ರಿಬ್ ನಿವಾಸಿಗಳು ಪ್ರವಾದಿವರ್ಯರನ್ನು(ಸ) ಸ್ವಾಗತಿಸಲು ಸಿದ್ಧರಾದರು. ಅವರು ತಮ್ಮ ಮನೆಗಳಿಂದ ಪ್ರವಾದಿವರ್ಯರು(ಸ) ಬರುವ ಸ್ಥಳಕ್ಕೆ ಆಹ್ಲಾದಭರಿತರಾಗಿ ಹೊರಟು ಸೇರುತ್ತಾರೆ. ದೇವನನ್ನು ಸ್ಮರಿಸಿ ಸ್ತುತಿಸ್ತೋತ್ರಗೈಯುತ್ತಾ ಹರ್ಷೋಲ್ಲಾಸಗಳಿಂದ ಅವರು ಪ್ರವಾದಿವರ್ಯರ(ಸ) ಆಗಮನದ ನಿರೀಕ್ಷೆಯಲ್ಲಿ ಸೇರಿದ್ದಾರೆ. ವಿವಿಧ ಗೋತ್ರದ ಪ್ರಮುಖರು ತಮ್ಮ ತಮ್ಮ ಮನೆಯ ಅತಿಥಿಯಾಗಬೇಕೆಂದು ಪ್ರವಾದಿ ವರ್ಯರೊಡನೆ(ಸ) ವಿನಂತಿಸುತ್ತಿದ್ದಾರೆ. ಅವರ ಹೃದಯಂಗಮ ಸ್ವಾಗತಕ್ಕೆ ಮುಗುಳ್ನಗುತ್ತಾ ಪ್ರವಾದಿವರ್ಯರು(ಸ) ಕೃತಜ್ಞತೆ ಅರ್ಪಿಸುತ್ತಾರೆ. ಬಳಿಕ ''ಒಂಟೆಯನ್ನು ಬಿಟ್ಟು ಬಿಡಿರಿ ಅದು ಅಲ್ಲಾಹನ ಆಜ್ಞೆಯನ್ನು ಅನುಸರಿಸುವುದು'' ಎಂದರು.

ಒಂಟೆಯು ಮೆಲ್ಲನೆ ಮುಂದೆ ಸಾಗುತ್ತಿತ್ತು. ಪ್ರವಾದಿವರ್ಯರ(ಸ) ಗುಣಗಾನ ಮಾಡುತ್ತಾ ತಮ್ಮ ಮನೆಯ ಹೊರಾಂಗಣದಲ್ಲಿ ಮಹಿಳೆಯರು ಹಾಡುತ್ತಿದ್ದಾರೆ. ಪ್ರವಾದಿವರ್ಯರೂ(ಸ) ಸಂತೋಷ ಭರಿತರಾಗುತ್ತಾರೆ. ಬಾಲಕಿಯರು ದಫ್ ಬಾರಿಸಿ ಹಾಡುತ್ತಾ ಪ್ರವಾದಿವರ್ಯರ(ಸ) ಗುಣಗಾನ ಮಾಡುತ್ತಿದ್ದಾರೆ.

''ನಾವು ನಜ್ಜಾರ್ ಗೋತ್ರದ ಬಾಲಕಿಯರು. ಮುಹಮ್ಮದ್(ಸ) ನಮಗೆ ಎಷ್ಟೊಂದು ಉತ್ತಮ ನೆರೆಯವರು.''

ಆ ಒಂಟೆಯು ತಮ್ಮ ಮನೆಯ ಬಾಗಿಲ ಬಳಿ ನಿಲ್ಲಲಿ ಎಂದು ಪ್ರತಿಯೊಬ್ಬರೂ ಆಗ್ರಹಿಸುತ್ತಿದ್ದರು. ಕೊನೆಗೆ ಅದು ಇಬ್ಬರು ಅನಾಥ ಬಾಲಕರಿರುವ ಮನೆಯ ಅಂಗಳದಲ್ಲಿ ನಿಂತಿತು. ಅದು ಮುಆದ್ ಬಿನ್ ಅಫ್‌ರಾಅ್‌ನ ಸಂರಕ್ಷಣೆಯಲ್ಲಿರುವ ಸಹ್‌ಲ ಹಾಗೂ ಸುಹೈಲ್ ಎಂಬ ಅನಾಥ ಬಾಲಕರ ಸ್ಥಳವಾಗಿತ್ತು. ಪ್ರವಾದಿವರ್ಯರು(ಸ) ಅದಕ್ಕೆ ತಕ್ಕ ಬೆಲೆ ನೀಡಿ ಆ ಸ್ಥಳವನ್ನು ಖರೀದಿಸಿದರು. ಅಲ್ಲಿ ಒಂದು ಮಸೀದಿ ನಿರ್ಮಿಸಿ ಹತ್ತಿರದಲ್ಲಿ ತನಗೂ ತನ್ನ ಕುಟುಂಬಕ್ಕೂ ವಾಸಿಸಲು ಒಂದು ಸಣ್ಣ ಮನೆ ಮಾಡಲು ನಿರ್ಧರಿಸಿದರು. ಪ್ರವಾದಿ ವರ್ಯರ(ಸ) ಆಗಮನದೊಂದಿಗೆ ಯಸ್ರಿಬ್ ನಗರವು ಮದೀನತುನ್ನಬಿಯಾಗಿ ಪರಿವರ್ತನೆಯಾಯಿತು. ಅಂದಿನಿಂದ ಇಂದಿನ ವರೆಗೂ ಅದು ''ಮದೀನಾ'' ಎಂದೇ ಹೆಸರುವಾಸಿಯಾಗಿದೆ.

❖ ❖ ❖

37. ಅಸಾಮಾನ್ಯ ಸಹೋದರತೆ

ಮಕ್ಕಾದಿಂದ ಹಿಜ್‌ರಾ ಬಂದು ಮದೀನಾ ಸೇರಿದ ಸತ್ಯವಿಶ್ವಾಸಿಗಳು ಹಾಗೂ ಮದೀನ ನಿವಾಸಿಗಳಾದ ಸತ್ಯವಿಶ್ವಾಸಿಗಳ ನಡುವೆ ಸಹೋದರತೆಯ ಸಂಬಂಧವನ್ನು ಪ್ರವಾದಿವರ್ಯರು(ಸ) ಸ್ಥಾಪಿಸಿದರು. ಮಕ್ಕಾದಿಂದ ಬಂದವರಿಗೆ ವಲಸಿಗರು ಎಂಬರ್ಥ ಬರುವಂತೆ ಮುಹಾಜಿರ್‌ಗಳೆಂದು ಹೆಸರಿಟ್ಟರು. ಅದೇ ರೀತಿ ಮದೀನ ನಿವಾಸಿಗಳು ಇವರ ಸಹಾಯಕರು ಎಂಬರ್ಥ ಬರುವಂತೆ ಅನ್ಸಾರಿಗಳೆಂದೂ ಹೆಸರಿಸಿದರು. ಮಾನವ ಇತಿಹಾಸದಲ್ಲಿ ಎಲ್ಲಿಯೂ ಕಾಣದ ಹೃದಯ ಬಂಧವನ್ನು ಆ ಎರಡೂ ವಿಭಾಗಗಳ ಮಧ್ಯೆ ಪ್ರವಾದಿವರ್ಯರು(ಸ) ಸ್ಥಾಪಿಸಿದರು. ಅನ್ಸಾರರು ತಮ್ಮ ಸೊತ್ತು ವಿತ್ತ ಮನೆ ಹೀಗೆ ಎಲ್ಲವನ್ನೂ ಮುಹಾಜಿರ್‌ಗಳೊಂದಿಗೆ ಪರಸ್ಪರ ಹಂಚಿಕೊಳ್ಳಲು ನಿರ್ಧರಿಸಿದರು. ಹಾಗೆಯೇ ಅವರು ಪ್ರವಾದಿವರ್ಯರ(ಸ) ಮುಂದೆ ತೆರಳಿ ತಮ್ಮ ಸಂಪತ್ತುಗಳನ್ನು ಮುಹಾಜಿರ್‌ಗಳೊಂದಿಗೆ ಸಮಪಾಲು ಮಾಡಿರಿ ಎಂದು ಹೇಳುತ್ತಿದ್ದರು. ಮುಹಾಜಿರರು ತಮ್ಮ ಮನೆಗಳಲ್ಲಿ ತಂಗಬೇಕೆಂದು ಅವರು ಆಹ್ವಾನಿಸಿದರು. ಹೀಗೆ ಅವರು ತೀವ್ರವಾಗಿ ಒತ್ತಡ ಹೇರಿದಾಗ ಚೀಟಿ ಹಾಕಿ ಆರಿಸಿ ಅತಿಥೇಯರ ಮನೆಗಳನ್ನು ಆರಿಸಲಾಯಿತು.

ಮುಹಾಜಿರರು ಖರ್ಜೂರದ ತೋಟಗಳಲ್ಲಿ ಅನ್ಸಾರರಿಗೆ ನೆರವಾದರು. ಅನ್ಸಾರರು ಇಳುವರಿಯಲ್ಲಿ ಅವರಿಗೂ ಪಾಲು ನೀಡಿದರು. ಈ ಎರಡೂ ವಿಭಾಗಗಳ ನಡುವಿನ ಗಾಢ ಸಂಬಂಧವು ಅತ್ಯಂತ ಸುದೃಢವಾಗಿತ್ತು. ಈ ಸುದೃಢ ಸಂಬಂಧ

ಕೆಳಿಸಲು ಪ್ರೇರಕವಾದುದರಲ್ಲಿ ಹೆಚ್ಚಿನ ಕೀರ್ತಿ ಅನ್ಸಾರರಿಗೆ ಸಲ್ಲಬೇಕು. ಆ ಕಾರಣದಿಂದ ಅವರ ಉದಾತ್ತ ಗುಣವನ್ನು ಪವಿತ್ರ ಕುರ್‌ಆನಿನಲ್ಲಿ ಈ ರೀತಿ ಪ್ರಶಂಸಿಸಿ ಪ್ರಸ್ತಾಪಿಸಲಾಗಿದೆ.

''ಇವರು ಹಿಜ್ರತ್ ಮಾಡಿ ತಮ್ಮ ಬಳಿಗೆ ಬಂದವರನ್ನು ಪ್ರೀತಿಸುತ್ತಾರೆ. ಅವರಿಗೆ ನೀಡಲ್ಪಟ್ಟುದರ ಕುರಿತು ಇವರು ಯಾವುದೇ ಆಶೆಯನ್ನು ತಮ್ಮ ಮನಸ್ಸಿನಲ್ಲಿ ಇಟ್ಟುಕೊಳ್ಳುವುದಿಲ್ಲ. ಸ್ವತಃ ತಮಗೆ ಅಗತ್ಯವಿದ್ದರೂ ಇತರರಿಗೆ ತಮ್ಮ ಮೇಲೆ ಪ್ರಾಶಸ್ತ್ಯ ನೀಡುತ್ತಾರೆ. ವಾಸ್ತವದಲ್ಲಿ ಯಾರು ತಮ್ಮ ಮನಸ್ಸಿನ ಸಂಕುಚಿತತೆಯಿಂದ ರಕ್ಷಿಸಲ್ಪಟ್ಟರೋ ಅವರೇ ವಿಜಯಿಗಳು!'' (ಅಲ್ ಹಶ್ರ್:9)

ತಾವು ಅನುಭವಿಸಿದ ಅತಿ ಮಹತ್ತರವಾದ ಸಹೋದರತೆಯ ಸಂಬಂಧದ ಕುರಿತು ಮುಹಾಜಿರರು ಈ ರೀತಿ ಹೇಳಿದ್ದಾರೆಂದು ಅನಸ್ ಬಿನ್ ಮಾಲಿಕ್ ಈ ರೀತಿ ವರದಿ ಮಾಡಿದ್ದಾರೆ.

''ಅಲ್ಲಾಹನ ಸಂದೇಶವಾಹಕರೇ, ನಾವು ಬಂದು ತಲುಪಿದ ಈ ಸಮುದಾಯದವರಂತೆ ಉತ್ತಮವಾಗಿ ವ್ಯವಹರಿಸುವವರನ್ನು ನಾವು ಇದುವರೆಗೆ ಎಲ್ಲಿಯೂ ಕಂಡಿಲ್ಲ. ಅವರ ಕೆಲಸ ಕಾರ್ಯದ ಸಂದರ್ಭದಲ್ಲಿ ಕೂಡಾ ಅವರಿಗೆ ನೆರವಾಗಲು ಅನುಮತಿಸುವುದಿಲ್ಲ. ಹೀಗಿದ್ದರೂ ಅವರು ಅದರ ಇಳುವರಿಯಲ್ಲಿ ತಮಗೆ ಪಾಲು ನೀಡುತ್ತಿದ್ದರು.''

❖ ❖ ❖

38. ಪ್ರವಾದಿವರ್ಯರ(ಸ) ನಿರೀಕ್ಷೆ

ಅಬ್ದುಲ್ಲಾ ಬಿನ್ ಸಲಾಮ್ ಎಂಬವರು ಗೌರವಾನ್ವಿತರಾದ ಯಹೂದಿ ವಿದ್ವಾಂಸರೂ ಪುರೋಹಿತರೂ ಆಗಿದ್ದರು. ಇತರ ಯಹೂದಿ ನಾಯಕರಂತೆ ಅವರೂ ಹೊಸ ಪ್ರವಾದಿಯ(ಸ) ಆಗಮನದ ನಿರೀಕ್ಷೆಯಲ್ಲಿದ್ದರು. ಅವರು ಒಮ್ಮೆ ಖರ್ಜೂರದ ತೋಟವೊಂದರಲ್ಲಿ ಕೆಲಸ ಮಾಡುತ್ತಿದ್ದಾಗ ಓರ್ವನು ಬಂದು ಪ್ರವಾದಿವರ್ಯರ(ಸ) ಆಗಮನದ ಸುದ್ದಿ ತಿಳಿಸಿದನು. ಪ್ರವಾದಿವರ್ಯರು(ಸ) ಮದೀನಾಕ್ಕೆ ಸಮೀಪವಿರುವ ಕುಬಾಕ್ಕೆ ಆಗ ತಾನೇ ತಲುಪಿದ್ದರು. ಅಬ್ದುಲ್ಲರ ಜೊತೆ ಅವರ ಪಿತೃ ಸಹೋದರಿ ಖಾಲಿದ ಬಿನ್ತಿ ಹಾರಿಸ್ ಕೂಡಾ ಇದ್ದರು. ಖರ್ಜೂರ ಮರದ ಮೇಲಿದ್ದ ಅವರು ಪ್ರವಾದಿಯವರ್ಯರ(ಸ) ಆಗಮನದ ವಿಚಾರ ತಿಳಿದು ಅಲ್ಲಾಹನನ್ನು ಸ್ತುತಿಸಿದರು. ಇದು ಪಿತೃ ಸಹೋದರಿ ಖಾಲಿದಾರಿಗೆ ಹಿಡಿಸಲಿಲ್ಲ. ಮೂಸಾರೇ(ಅ) ಬಂದಷ್ಟು ತಾವು

ಸಂತೋಷ ವ್ಯಕ್ತ ಪಡಿಸುತ್ತೀರಲ್ಲಾ? ಎಂದು ಅವರನ್ನು ಆಕ್ಷೇಪಿಸಿದರು.

''ಅತ್ತೇ ಅಲ್ಲಾಹನಾಣೆ! ಅಲ್ಲಿ ಬಂದಿರುವವರು ಮೂಸಾರ(ಅ) ಸಹೋದರರಾಗಿದ್ದಾರೆ. ಮೂಸಾರ(ಅ) ಧರ್ಮದೊಂದಿಗೆ ಅವರನ್ನು ನಿಯೋಜಿಸಲಾಗಿದೆ'' ಎಂದು ಅಬ್ದುಲ್ಲಾ ಬಿನ್ ಸಲಾಮ್ ಉತ್ತರಿಸಿದರು.

ಮಗನೇ ನಾವು ನಿರೀಕ್ಷಿಸುತ್ತಿದ್ದ ಆ ಪ್ರವಾದಿ(ಸ) ಇವರಾಗಿದ್ದಾರೆಯೇ? ಎಂದು ಕುತೂಹಲದಿಂದ ಕೇಳಿದರು.

''ಹೌದು ಅತ್ತೆ!''

''ಹಾಗಾದರೆ ನೀನು ಸರಿಯಾದುದನ್ನೇ ಮಾಡಿದೆ'' ಎಂದವರು ಹೇಳಿದರು.

ತೋಟದಿಂದ ಮರಳಿದ ಅವರು ನೇರವಾಗಿ ಪ್ರವಾದಿವರ್ಯರ(ಸ) ಬಳಿಗೆ ತೆರಳಿ ಇಸ್ಲಾಮ್ ಸ್ವೀಕರಿಸಿದರು. ನಂತರ ಪ್ರವಾದಿವರ್ಯರೊಂದಿಗೆ(ಸ) ಈ ರೀತಿ ಹೇಳಿದರು ''ಪ್ರವಾದಿವರ್ಯರೇ ಈ ಯಹೂದಿಗಳು ಮಹಾ ಸುಳ್ಳುಗಾರರಾಗಿದ್ದಾರೆ. ಆದ್ದರಿಂದ ನಾನು ಇಸ್ಲಾಮ್ ಸ್ವೀಕರಿಸಿದ ವಿಚಾರ ಅವರಿಗೆ ತಿಳಿಸದೆ ನನ್ನ ಬಗ್ಗೆ ಅವರಲ್ಲಿ ವಿಚಾರಿಸಿರಿ, ನಾನು ಇಸ್ಲಾಮ್ ಸ್ವೀಕರಿಸಿದ ವಿಚಾರ ಅವರು ಅರಿತರೆ ನನ್ನ ಕುರಿತು ಅವರು ಸುಳ್ಳಾಡುವರು.''

ಅವರ ಈ ಕೋರಿಕೆಯನ್ನು ಮನ್ನಿಸಿದ ಪ್ರವಾದಿವರ್ಯರು(ಸ) ಯಹೂದಿಗಳನ್ನು ಸಂಪರ್ಕಿಸಿ ಅಬ್ದುಲ್ಲಾ ಬಿನ್ ಸಲಾಮ್‌ರ ಕುರಿತು ವಿಚಾರಿಸಿದರು. ಅವರೆಲ್ಲರೂ ''ಅವರು ನಮ್ಮ ನಾಯಕನಾಗಿದ್ದಾರೆ. ಅವರು ನಮ್ಮ ನಾಯಕನ ಪುತ್ರನೂ ಹೌದು. ನಮ್ಮಲ್ಲಿನ ಮಹಾ ವಿದ್ವಾಂಸರೂ ಪುರೋಹಿತರೂ ಆಗಿದ್ದಾರೆ'' ಎಂದು ಒಕ್ಕೊರಲಿನಿಂದ ಹೇಳಿದರು.

ಈ ಸುಸಂದರ್ಭಕ್ಕಾಗಿ ಕಾದು ಕುಳಿತ ಅಬ್ದುಲ್ಲಾ ಬಿನ್ ಸಲಾಮ್ ಮುಂದೆ ಬಂದು ಅವರಿಗೆ ಪ್ರವಾದಿವರ್ಯರ(ಸ) ಕುರಿತು ಪರಿಚಯ ಮಾಡಿಸಿ ಇಸ್ಲಾಮ್ ಸ್ವೀಕರಿಸಲು ಅವರೊಂದಿಗೆ ಆಜ್ಞಾಪಿಸಿದರು.

ಇದರಿಂದ ಯಹೂದಿಗಳು ಅತ್ಯಂತ ಕುಪಿತರಾದರು. ಅವರು ಅಬ್ದುಲ್ಲಾ ಬಿನ್ ಸಲಾಮ್‌ರನ್ನು ನಿಂದಿಸ ತೊಡಗಿದರು ಮತ್ತು ತೀಕ್ಷ್ಣವಾಗಿ ಅವರನ್ನು ಆಕ್ಷೇಪಿಸಿ ವಿಮರ್ಶಿಸಿದರು.

❖ ❖ ❖

39. ದುಅಫುರ್‌ನ ಮನಃ ಪರಿವರ್ತನೆ

ಪ್ರವಾದಿ(ಸ) ಮತ್ತವರ ಸಂಗಾತಿಗಳು ಮದೀನಕ್ಕೆ ಬಂದು ಎರಡು ವರ್ಷಗಳಾದವು. ಬಳಿಕ 15 ದಿನಗಳಾದಾಗ ''ದುಅಮರ್'' ಎಂಬ ಪ್ರದೇಶದ ಒಂದೆರಡು ಗೋತ್ರಗಳು ದುಅಫುರ್ ಬಿನ್ ಹಾರಿಸ್‌ರ ನೇತೃತ್ವದಲ್ಲಿ ಯುದ್ಧಕ್ಕೆ ಸಿದ್ಧತೆ ನಡೆಸುತ್ತಿರುವ ವಿವರ ಪ್ರವಾದಿವರ್ಯರಿಗೆ(ಸ) ತಿಳಿಯಿತು. ಪ್ರವಾದಿವರ್ಯರು(ಸ) ನಾನೂರ ಐವತ್ತು ಜನರೊಂದಿಗೆ ಅಲ್ಲಿಗೆ ಹೊರಟರು.

ಪ್ರವಾದಿವರ್ಯರು(ಸ) ಹಾಗೂ ಅನುಚರರು ಯುದ್ಧಕ್ಕೆ ಬರುತ್ತಿದ್ದಾರೆಂಬ ವಿಚಾರ ಅರಿತ ದುಅಫುರ್ ಹಾಗೂ ತಂಡವು ಹೆದರಿ ಬೆಟ್ಟ ಗುಡ್ಡಗಳಿಗೆ ಪಲಾಯನ ಮಾಡಿದರು. ಪ್ರವಾದಿವರ್ಯರು(ಸ) ಅಲ್ಲಿ ಠಿಕಾಣಿ ಹೂಡಿದರು. ಪ್ರವಾದಿವರ್ಯರು(ಸ) ನೈಸರ್ಗಿಕ ಅವಶ್ಯಕತೆ ಪೂರ್ತೀಕರಿಸಲು ಅನುಯಾಯಿಗಳಿಗಿಂತ ಸ್ವಲ್ಪ ದೂರದ ಕಣಿವೆಗೆ ಹೋದರು. ಭಾರೀ ಮಳೆ ಸುರಿದ ಕಾರಣ ಪ್ರವಾಧಿವರ್ಯರ(ಸ) ಬಟ್ಟೆಯು ಒದ್ದೆಯಾಯಿತು. ಅದನ್ನು ಒಣಗಿಸಲೆಂದು ಬಿಸಿಲಿಗೆ ಹಾಸಿದ ಬಳಿಕ ಒಂದು ಮರದ ನೆರಳಿನಲ್ಲಿ ವಿಶ್ರಾಂತಿಗಾಗಿ ಮಲಗಿದರು. ಬೆಟ್ಟಗುಡ್ಡಗಳಲ್ಲಿ ಅಡಗಿ ಕುಳಿತ ಶತ್ರುಗಳು ಇವೆಲ್ಲವನ್ನೂ ನೋಡುತ್ತಿದ್ದರು. ಅವರು ತಮ್ಮ ನೇತಾರ ದುಅಫುರ್‌ನೊಂದಿಗೆ, ''ನೋಡಿ, ಮುಹಮ್ಮದ್(ಸ) ನಮಗೊಂದು ಸುವರ್ಣಾವಕಾಶ ಒದಗಿಸಿ ಕೊಟ್ಟಿದ್ದಾರೆ. ಅವರೀಗ ಏಕಾಂಗಿಯಾಗಿದ್ದಾರೆ. ಅನುಯಾಯಿಗಳು ಸ್ವಲ್ಪ ದೂರದಲ್ಲಿದ್ದಾರೆ. ತಾವೀಗ ಮುಹಮ್ಮದರನ್ನು(ಸ) ಕೊಂದು ಮುಗಿಸಿ ತಪ್ಪಿಸಿಕೊಳ್ಳುವ ವರೆಗೆ ಅವರಿಗೆ ಈ ವಿಚಾರ ತಿಳಿಯಲಿಕ್ಕಿಲ್ಲ'' ಎಂದು ಹೇಳಿದರು.

ಇದನ್ನು ಕೇಳಿ ಆವೇಶ ಭರಿತನಾದ ಆತ ಹರಿತವಾದ ಖಡ್ಗವೊಂದನ್ನು ತೆಗೆದು ಪ್ರವಾದಿವರ್ಯರ(ಸ) ಬಳಿಗೆ ಸಾಗಿದನು. ಪ್ರವಾದಿವರ್ಯರ(ಸ) ತಲೆಯ ಭಾಗಕ್ಕೆ ಖಡ್ಗವನ್ನೆತ್ತಿ ಹಿಡಿದು ''ನಿನ್ನನ್ನು ಈಗ ನನ್ನಿಂದ ಕಾಪಾಡುವವರು ಯಾರು?'' ಎಂದು ಕೇಳಿದ.

ಪ್ರವಾದಿವರ್ಯರು(ಸ) ಆತನೊಂದಿಗೆ ಜೀವಕ್ಕಾಗಿ ಅಂಗಲಾಚುವರೆಂದು ಆತ ಬಗೆದಿದ್ದ. ಆದರೆ ಪ್ರವಾದಿವರ್ಯರು(ಸ) ಸ್ವಲ್ಪವೂ ವಿಚಲಿತರಾಗಲಿಲ್ಲ. ಅಚಂಚಲ ಚಿತ್ತರಾಗಿ ''ಅಲ್ಲಾಹ್'' ಎಂದುತ್ತರಿಸಿದರು.

ಇದನ್ನು ಕೇಳಿದ ದುಅಫುರ್ ಕಂಗಾಲಾಗಿ ಹೆದರಿ ಕಂಪಿಸತೊಡಗಿದ. ಆತನ

ಕೈಯಲ್ಲಿದ್ದ ಖಡ್ಗವೂ ಜಾರಿ ಕೆಳಗೆ ಬಿತ್ತು. ತಕ್ಷಣ ಅದನ್ನೆತ್ತಿ ಪ್ರವಾದಿವರ್ಯರು(ಸ) ಆತನ ಕಡೆಗೆ ಖಡ್ಗ ಹಿಡಿದು ಈಗ ನಿನ್ನನ್ನು ನನ್ನಿಂದ ಕಾಪಾಡುವವರು ಯಾರೆಂದು ಕೇಳಿದರು.

''ತಾವಲ್ಲದೆ ಇನ್ನಾರಿಂದಲೂ ನನ್ನನ್ನು ಕಾಪಾಡಲಾಗದು'' ಎಂದು ಆತ ಅಸಹಾಯಕತೆಯಿಂದ ಹೇಳಿದ.

''ಆದರೆ ನಾನು ಈಗ ನಿನ್ನನ್ನು ಕಾಪಾಡಿದ್ದೇನೆ'' ಎನ್ನುತ್ತಾ ಅವನನ್ನು ಕ್ಷಮಿಸಿದರು ಮತ್ತು ಖಡ್ಗವನ್ನು ಆತನಿಗೇ ನೀಡಿದರು. ಅದರೊಂದಿಗೆ ನಡೆಯುತ್ತಾ ಮರಳಿದ ದುಅಪುರ್ ಸ್ವಲ್ಪ ದೂರ ಹೋದ ಬಳಿಕ ಹಿಂತಿರುಗಿ ಬಂದು ಇಸ್ಲಾಮ್ ಸ್ವೀಕರಿಸಿದರು. ತನ್ನನ್ನು ಕೊಲ್ಲಲು ಬಂದ ಕೊಲೆಪಾತಕಿ ಅವರ ಅನುಯಾಯಿಯಾಗಿ ಬದಲಾದರು. ಪ್ರವಾದಿವರ್ಯರು(ಸ) ಕೂಡಲೇ ಅಗತ್ಯವಾದ ಕೆಲವು ಉಪದೇಶಗಳನ್ನು ಅವರಿಗೆ ನೀಡಿದರು.

ಸನ್ಮಾರ್ಗ ಸಿದ್ಧಿಸಿದ ಬಳಿಕ ಹೊಸ ಮನುಷ್ಯನಾಗಿ ಬದಲಾದ ದುಅಪುರ್ ತನ್ನ ಅನುಚರರೊಡನೆ ತೆರಳಿ ಅವರನ್ನು ಇಸ್ಲಾಮ್ ಸ್ವೀಕರಿಸುವಂತೆ ವಿನಂತಿಸಿದರು. ಪ್ರವಾದಿವರ್ಯರ(ಸ) ಅಸಾಮಾನ್ಯವಾದ ಧೀರತೆ ಹಾಗೂ ಸರ್ವವನ್ನೂ ಅಲ್ಲಾಹನಿಗೆ ಸಮರ್ಪಿಸಿ ಆತನಲ್ಲಿಯೇ ಭರವಸೆಯಿರಿಸಿದ ವಿಶ್ವಾಸ ದಾರ್ಢ್ಯತೆಯು ಈ ವಿಜಯಕ್ಕೆ ಹೇತುವಾಯಿತು.

❖ ❖ ❖

40. ಹೊಡೆತಕ್ಕೆ ಪ್ರತಿಯಾಗಿ ಚುಂಬನ

ಬದ್ರ್ ಯುದ್ಧ ಮಾನವೇತಿಹಾಸದಲ್ಲಿ ಅತೀ ಶ್ರೇಷ್ಠ ಯುದ್ಧವಾಗಿದೆ. ಕೆಲವೇ ಗಂಟೆಗಳ ಕಾಲ ನಡೆದ ಈ ಯುದ್ಧದಲ್ಲಿ ಎರಡೂ ಪಂಗಡಗಳಿಂದ ಪ್ರಾಣ ಹಾನಿಗೊಳಗಾದವರ ಸಂಖ್ಯೆ ನೂರನ್ನೂ ದಾಟಿರಲಿಲ್ಲ. ಆದರೂ ಆ ಯುದ್ಧವು ಇತಿಹಾಸದಲ್ಲಿ ಅಜರಾಮರವಾಗಿದೆ. ಮದೀನಾದಲ್ಲಿ ಸ್ಥಾಪನೆಗೊಂಡ ಇಸ್ಲಾಮೀ ರಾಷ್ಟ್ರದ ಮತ್ತು ಸಮಾಜದ ಭದ್ರತೆಗೆ ಆ ಯುದ್ಧವು ತಳಹದಿಯನ್ನು ಹಾಕಿತು. ಹೀಗೆ ಬದ್ರ್ ಯುದ್ಧವು ಇಸ್ಲಾಮೀ ಇತಿಹಾಸದಲ್ಲಿ ಇಸ್ಲಾಮೀ ಸಂಸ್ಕೃತಿ ಮತ್ತು ನಾಗರಿಕತೆಗೆ ನಾಂದಿಯಾಯಿತು. ಕಳೆದ ಹದಿನಾಲ್ಕು ಶತಮಾನಗಳಿಂದ ಅದು ಕೋಟ್ಯಾಂತರ ಜನರ ಮನಗೆದ್ದಿದೆ, ಗೆಲ್ಲುತ್ತಿದೆ. ಎರಡೂ ಪಂಗಡಗಳಿಂದ ಒಟ್ಟು ಕೇವಲ ಸಾವಿರದ ನಾಲ್ನೂರು ಮಂದಿಯಷ್ಟು ಮಾತ್ರ ಭಾಗವಹಿಸಿದ ಈ ಯುದ್ಧವು, ಜಗತ್ತಿನ

ಇತಿಹಾಸದಲ್ಲಿ ಮಹಾವಿಸ್ಮಯವಾಗಿ ದಾಖಲಾಯಿತು. ಸನ್ಮಾರ್ಗದ ಹಾದಿಯಲ್ಲಿ ಅಚಂಚಲ ಚಿತ್ತರಾಗಿ ಮುಂದುವರಿದ ಪ್ರವಾದಿ ಮುಹಮ್ಮದ್(ಸ) ಮತ್ತವರ ಅನುಯಾಯಿಗಳು ತಮಗಿಂತ ಮೂರು ಪಟ್ಟು ಹೆಚ್ಚಿರುವ ದಾಳಿಕೋರರಿಗೆ ಸೋಲುಣಿಸುವುದರೊಂದಿಗೆ ಇತಿಹಾಸದ ಪುಟ ಸೇರಿತು.

ಪ್ರವಾದಿವರ್ಯರು(ಸ) ಸಂಗಾತಿಗಳನ್ನು ಸಾಲಾಗಿ ನಿಲ್ಲಿಸಿ ಪರಿಶೀಲಿಸುತ್ತಿದ್ದರು. ಅದರ ಪಂಕ್ತಿಗಳನ್ನು ಸರಿಪಡಿಸುತ್ತಿದ್ದರು. ಓರ್ವರು ಪಂಕ್ತಿಯಿಂದ ಸ್ವಲ್ಪ ಮುಂದೆ ನಿಂತಿದ್ದುದನ್ನು ಪ್ರವಾದಿವರ್ಯರು(ಸ) ನೋಡಿದರು. ಅಲ್ಲಿ ನಿಂತವರು ಸವಾದ್ ಬಿನ್ ಗಝಿಯ್ಯ್ ಎಂಬ ಸೈನಿಕರಾಗಿದ್ದರು. ತನ್ನಲ್ಲಿರುವ ಬೆತ್ತದಿಂದ ಪ್ರವಾದಿವರ್ಯರು(ಸ) ಆವರಿಗೆ ಕುಟ್ಟುತ್ತಾ ಸರಿಯಾಗಿ ನಿಲ್ಲುವಂತೆ ಹೇಳಿದರು.

ಪ್ರವಾದಿವರ್ಯರ(ಸ) ಈ ಕೃತ್ಯದಿಂದ ಅಸಂತೃಪ್ತರಾದಂತೆ ಕಂಡುಬಂದ ಸವಾದ್‌ರು ಪ್ರವಾದಿವರ್ಯರನ್ನುದ್ದೇಶಿಸಿ(ಸ) ಅಲ್ಲಾಹನ ಪ್ರವಾದಿಗಳೇ ತಾವು ನನಗೆ ಬೆತ್ತದಿಂದ ಕುಟ್ಟಿದ್ದರಿಂದ ತುಂಬಾ ನೋವಾಗಿದೆ. ತಾವು ಸತ್ಯನ್ಯಾಯದ ವಾಹಕರಲ್ಲವೇ, ಅದಕ್ಕಾಗಿ ನಿಯೋಜಿತರಾದವರಲ್ಲವೇ? ಆದರೆ ತಾವೀಗ ನನ್ನೊಂದಿಗೆ ಅನ್ಯಾಯದಿಂದ ವರ್ತಿಸಿದ್ದೀರಿ. ಆದ್ದರಿಂದ ನನಗೆ ಅದಕ್ಕೆ ಪ್ರತೀಕಾರ ಮಾಡಲೇಬೇಕು ಎಂದು ಹೇಳಿದರು.

ಯುದ್ಧರಂಗದಲ್ಲಿ ಇಂತಹ ಕ್ಷುಲ್ಲಕ ವಿಷಯಗಳ ಕುರಿತು ಪ್ರಶ್ನಿಸಬಾರದು ಮತ್ತು ದೂರು ಕೊಡಬಾರದು ಎಂದು ವಾದಿಸಿ ಇದನ್ನು ಪ್ರವಾದಿವರ್ಯರಿಗೆ(ಸ) ತಳ್ಳಿಹಾಕಬಹುದಾಗಿತ್ತು. ಆದರೆ ಆಗ ಅವರು ತಳೆದ ನಿರ್ಧಾರ ವ್ಯತ್ಯಸ್ತವಾಗಿತ್ತು. ಅದ್ಭುತವಾಗಿತ್ತು. ಅವರು ತನ್ನ ನಿಲುವಂಗಿಯನ್ನು ಎತ್ತಿ ಹೊಟ್ಟೆಯನ್ನು ತೋರಿಸುತ್ತಾ ''ಸವಾದ್, ನಿನ್ನ ಪ್ರತೀಕಾರ ತೀರಿಸು. ನಿನ್ನ ಹೊಟ್ಟೆಯ ಮೇಲೆ ಹೊಡೆದು ನೋಯಿಸಿದಂತೆ ಈ ಹೊಟ್ಟೆಯ ಮೇಲೆ ಹೊಡೆದು ಪ್ರತೀಕಾರ ಮಾಡು'' ಎಂದರು.

ಪ್ರವಾದಿವರ್ಯರು(ಸ) ತನ್ನ ಬಳಿಯಲ್ಲಿದ್ದ ಖರ್ಜೂರದ ಗೆಲ್ಲೊಂದನ್ನು ಸವಾದ್‌ರಿಗೆ ನೀಡಿದರು. ಅವರು ಆ ಬೆತ್ತವನ್ನು ಹಿಡಿದಾಗ ಅನುಚರರೆಲ್ಲರೂ ಆತಂಕಿತರಾದರು. ಅಲ್ಲಾಹನ ಅಂತಿಮ ಸಂದೇಶವಾಹಕರೂ ನ್ಯಾಯಾಧೀಶರೂ ನ್ಯಾಯಪಾಲಕರೂ ಆದ ಪ್ರವಾದಿ ಮುಹಮ್ಮದ್‌ರೊಂದಿಗೆ(ಸ) ಸಾಮಾನ್ಯ ಅನುಚರನೊಬ್ಬ ಪ್ರತೀಕಾರ ತೀರಿಸುವುದೇ ಎಂದು ಅವರು ಬೆರಗುಗಣ್ಣಿನಿಂದ ನೋಡುತ್ತಿದ್ದರು.

ಸವಾದ್ ತನ್ನ ಕೈಯಲಿದ್ದ ಬೆತ್ತವನ್ನೆಸೆಯುತ್ತಾ ಪ್ರವಾದಿವರ್ಯರನ್ನು(ಸ)

ಆಲಿಂಗಿಸಿದರು. ಬಳಿಕ ಪ್ರವಾದಿವರ್ಯರ(ಸ) ಹೊಟ್ಟೆಯನ್ನು ಚುಂಬಿಸುತ್ತಾ ಈ ರೀ ಹೇಳಿದರು ''ಇನ್ನು ಇಲ್ಲಿ ಏನು ನಡೆಯುತ್ತದೆ ಎಂಬುದರ ಕುರಿತು ನಿಮ ತಿಳಿದಿದೆಯಲ್ಲವೇ? ಅದಕ್ಕಿಂತ ಮೊದಲು ನನ್ನ ಈ ಪ್ರತೀಕಾರ ಚುಂಬನ ಮೂಲಕವಾಗಲಿ ಎಂಬುದು ನನ್ನ ಮಹಾಬಯಕೆಯಾಗಿತ್ತು.

❖ ❖ ❖

41. ಅಂಧಕಾರದಿಂದ ಪ್ರಕಾಶದೆಡೆಗೆ

ಪ್ರವಾದಿವರ್ಯರ(ಸ) ಪುತ್ರಿ ಝೈನಬ್‌ರ ಪತಿ ಅಬುಲ್ ಆಸ್, ಬದ್ ಯುದ್ಧದಲ್ಲಿ ಖೈದಿಯಾಗಿ ಸೆರೆಸಿಕ್ಕರು. ಇತರ ಬಂಧಿತರೊಂದಿಗೆ ಅವರೂ ಬಂಧಮುಕ್ತಗೊಂಡರು. ಪತ್ನಿ ಝೈನಬ್‌ರನ್ನು ಸುರಕ್ಷಿತವಾಗಿ ಪ್ರವಾದಿವರ್ಯರೊಡನೆ(ಸ ಕಳುಹಿಸಬೇಕೆಂಬ ಶರತ್ತಿನಲ್ಲಿ ಬಿಡುಗಡೆ ಮಾಡಲಾಗಿತ್ತು. ಮಕ್ಕಾದಿಂದ ರಕ್ಷಣೆಗಾ ಬರುವ ಮಗಳನ್ನು ಕರೆದುಕೊಂಡು ಬರಲು ಪ್ರವಾದಿವರ್ಯರು(ಸ) ಝೈದ್ ಬಿನ್ ಹಾರಿಸ ಹಾಗೂ ಇನ್ನೋರ್ವರನ್ನು ತನ್‌ಈಮ್‌ನ ಸಮೀಪವಿರುವ ಯಅ್‌ಓಜ್‌ಕಣಿವೆ ಕಳುಹಿಸಿದ್ದರು.

ಝೈನಬ್‌ರವರು ಪ್ರಯಾಣದ ಸಿದ್ಧತೆಯಲ್ಲಿರುವಾಗ ಉತ್ಬಾರ ಪುತ್ರಿ ಹಿಂದ್ ಆರ್ಥಿಕ ನೆರವು ಹಾಗೂ ಪ್ರಯಾಣದ ಸಾಮಗ್ರಿಗಳನ್ನು ನೀಡುವ ವಾಗ್ದಾನ ನೀಡಿದರೂ ಅದನ್ನು ಅವರು ತಿರಸ್ಕರಿಸಿದ್ದರು. ನಿಗದಿತ ಸಮಯವಾದಾಗ ತನ್ನ ಪತಿಯ ಸಹೋದರ ಕಿನಾನರ ಜೊತೆ ಪ್ರಯಾಣ ಹೊರಟರು. ಝೈನಬ್‌ರು ಒಂಟೆಯ ಮೇಲಿನ ಪಲ್ಲಕ್ಕಿಯಲ್ಲಿದ್ದರು. ಆದರೂ ವಿಚಾರ ಹೇಗೋ ಕುರೈಶಿ ನೇತಾರರಿಗೆ ತಿಳಿಯಿತು. ಅವರು ದಾರಿ ಮಧ್ಯೆ ಅವರನ್ನು ತಡೆದರು. ಅವರನ್ನು ತಡೆಯಲು ಮೊದಲು ಅಲ್ಲಿಗೆ ಹಬ್ಬಾರ್ ಬಿನ್ ಅಸ್‌ವದ್ ಬಂದಿದ್ದ, ಆತ ಇಬ್ಬರನ್ನೂ ಕೊಲ್ಲುವುದಾಗಿ ಬೆದರಿಸಿದ. ಹಬ್ಬಾರ್ ಹೋಗಿ ಝೈನಬ್‌ರ ಮೇಲೆ ದೈಹಿಕ ಕಿರುಕುಳ ನೀಡಲು ಸಿದ್ಧನಾದಾಗ ಅಬೂಸುಫ್‌ಯಾನ್‌ರ ನೇತೃತ್ವದಲ್ಲಿ ಕುರೈಶರ ಒಂದು ತಂಡವು ಅಲ್ಲಿಗೆ ತಲುಪಿತು. ಅಬೂ ಸುಫ್‌ಯಾನ್, ಕಿನಾನರನ್ನು ಕರೆದು ''ನಮಗೆ ಉಂಟಾದ ನಾಶ ನಷ್ಟದ ಕುರಿತು ನಿನಗೆ ತಿಳಿದಿದೆಯಲ್ಲವೇ? ಹೀಗಿದ್ದೂ ನೀನು ಪ್ರವಾದಿಯ ಪುತ್ರಿಯನ್ನು ಹಾಡುಹಗಲೇ ಬಹಿರಂಗವಾಗಿ ಇಲ್ಲಿಂದ ತಪ್ಪಿಸಿಕೊಂಡು ಹೋಗಲು ಅನುವು ಮಾಡಿ ಕೊಡುತ್ತಿದ್ದೀಯಲ್ಲಾ! ಆದರೆ ನಾವು ಅದಕ್ಕೆ ಅನುಮತಿಸಲಾರೆವು. ಇದು ನಮ್ಮನ್ನು ಅವಹೇಳನ ಮಾಡುವುದಕ್ಕೂ ನಿಂದಿಸುವುದಕ್ಕೂ ಸಮಾನವಾಗಿದೆ. ಆದರೂ ನಾವು ಈಕೆಗೆ ಯಾವುದೇ ರೀತಿಯ

ಹೊಂದರೆ ನೀಡಲಾರೆವು ಮತ್ತು ಬಂದಿಯಾಗಿಯೂ ಮಾಡಲಾರೆವು. ಪ್ರತೀಕಾರ ತೂಡುವುದು ನಮ್ಮ ಉದ್ದೇಶವಲ್ಲ. ಆದ್ದರಿಂದ ಈಕೆಯನ್ನು ಅವಳ ಮನೆಗೆ ಕರೆದು ಹೊಂಡು ಹೋಗು. ಅಗತ್ಯವೆಂದಾದರೆ ನಾವು ತಡೆಹಿಡಿದ ವಿಚಾರ ಬಹಿರಂಗವಾದ ಬಳಿಕ ರಾತೋರಾತ್ರಿ ಯಾರೂ ಅರಿಯದಂತೆ ನೀವು ತಪ್ಪಿಸಿಕೊಳ್ಳಿರಿ'' ಎಂದು ಹೇಳಿದರು.

ಕಿನಾನರಿಗೆ ಅಬೂಸುಫ್‌ಯಾನ್‌ರ ಮಾತು ಪಾಲಿಸದೆ ಅನ್ಯ ದಾರಿಯಿರಲಿಲ್ಲ. ಹಾಗೆ ಅವರು ಪ್ರಯಾಣವನ್ನು ಅರ್ಧಕ್ಕೆ ನಿಲ್ಲಿಸಿ ಹಿಂತೆರಳಿದರು. ಬಳಿಕ ರಾತ್ರಿಯಾದಾಗ ಅಲ್ಲಿನ ಗಲಭೆ ಗೊಂದಲಗಳು ತಣಿದಾಗ ಮಧ್ಯರಾತ್ರಿ ಝೈನಬ್‌ರನ್ನು ಝೈದ್ ಬಿನ್ ಹಾರಿಸ ಹಾಗೂ ಸಹಾಯಕನಿಗೆ ಒಪ್ಪಿಸಿದರು. ಝೈನಬ್‌ರಿಗೆ ತನ್ನ ಪತಿಯಿಂದ ದೂರವಿರುವುದು ಬಹಳ ತ್ರಾಸದಾಯಕ ವಿಚಾರವಾಗಿತ್ತು. ಆದರೂ ಸತ್ಯಧರ್ಮದ ಮೇಲಿನ ಪ್ರೀತಿ ಹಾಗೂ ಕಾಳಜಿಯ ಮುಂದೆ ಅವೆಲ್ಲವೂ ನಗಣ್ಯವಾಗಿತ್ತು. ಆದ್ದರಿಂದ ಅವರ ಪ್ರಯಾಣವು ಪತಿಯಿಂದ ತಂದೆಯೊಡನೆ ಎನ್ನುವುದಕ್ಕಿಂತ ದುರ್ಮಾರ್ಗದಿಂದ ಸನ್ಮಾರ್ಗದೆಡೆಗೆ, ಇರುಳಿನಿಂದ ಪ್ರಕಾಶದೆಡೆಗಿನ ಪ್ರಯಾಣವಾಗಿತ್ತು. ಸತ್ಯದ ಮುಂದೆ ಉಳಿದೆಲ್ಲವೂ ತೃಣ ಎಂಬ ಅವರ ಮನೋದಾರ್ಢ್ಯತೆಯ ಮುಂದೆ ಇತರ ಎಲ್ಲಾ ಆಸೆ-ಆಕಾಂಕ್ಷೆಗಳು ಪರಾಜಯ ಹೊಂದಿತ್ತು. ಅಂತಹ ಒಂದು ಮಹತ್ತರ ಸಂದೇಶವನ್ನು ಈ ಯಾತ್ರೆ ನೀಡಿತ್ತು.

❖ ❖ ❖

42. ಶತ್ರು ಹೇಳಿದ ಸಾಕ್ಷಿ

ಪ್ರವಾದಿವರ್ಯರು(ಸ) ರೋಮ್ ಚಕ್ರವರ್ತಿ ಹರ್ಕ್ಯುಲಸ್‌ಗೆ ಇಸ್ಲಾಮಿನ ಸಂದೇಶವನ್ನೊಳಗೊಂಡ ಪತ್ರವೊಂದನ್ನು ರವಾನಿಸಿದರು. ಪತ್ರ ದೊರೆತ ಕೂಡಲೇ ಮಕ್ಕಾದಿಂದ ಬಂದವರು ಇಲ್ಲಿ ಯಾರಾದರೂ ಇದ್ದಾರೆಯೇ? ಎಂದು ಹುಡುಕಲು ಹೇಳಿದರು. ಆಗ ವ್ಯಾಪಾರ ನಿಮಿತ್ತ ಬಂದಿದ್ದ ಅಬೂಸುಫ್‌ಯಾನ್ ಅಲ್ಲಿದ್ದರು. ಆಗ ಅಬೂಸುಫ್‌ಯಾನ್ ಪ್ರವಾದಿವರ್ಯರ(ಸ) ಪರಮ ವೈರಿಯಾಗಿದ್ದರು.

ಹರ್ಕ್ಯುಲಸನ ಆಹ್ವಾನದಂತೆ ಅರಮನೆಗೆ ಬಂದ ಅಬೂ ಸುಫ್‌ಯಾನ್‌ರೊಂದಿಗೆ ಉಭಯ ಕುಶಲೋಪರಿ ವಿಚಾರಿಸಿದ ಬಳಿಕ, ''ನಿಮ್ಮ ಊರಲ್ಲಿ ಪ್ರವಾದಿ ಎಂದು ಹೇಳಿಕೊಂಡು ಮುಹಮ್ಮದ್(ಸ) ಎಂಬ ವ್ಯಕ್ತಿ ಇದ್ದಾರೆಯೇ?'' ಎಂದು ಕೇಳಿದನು.

ಹೌದೆಂದು ಅಬೂಸುಫ್‌ಯಾನ್ ತಲೆಯಾಡಿಸಿದರು.

''ಅವರು ಕುಲೀನ ಕುಟುಂಬದಿಂದ ಬಂದವರೇ?''

''ಹೌದು.''

''ಅವರು ಕುಟುಂಬದಲ್ಲಿ ಬೇರೆ ಯಾರಾದರೂ ಈ ಹಿಂದೆ ಪ್ರವಾದಿ ವಾದದೊಂದಿಗೆ ಬಂದಿದ್ದರೇ?''

''ಇಲ್ಲ.''

''ಅವರ ಕುಟುಂಬಸ್ಥರಲ್ಲಿ ಯಾರಾದರೂ ದೊರೆಗಳಿದ್ದರೆ?''

''ಇಲ್ಲ.''

''ಮುಹಮ್ಮದ್‌ರ(ಸ) ಅನುಯಾಯಿಗಳು ಬಡವರೋ ಶ್ರೀಮಂತರೋ?''

''ಕಡು ಬಡವರೂ ದುರ್ಬಲರೂ ಆಗಿದ್ದಾರೆ.''

''ಅವರ ಅನುಯಾಯಿಗಳ ಸಂಖ್ಯೆಯಲ್ಲಿ ದಿನೇ ದಿನೇ ಹೆಚ್ಚಾಗುತ್ತಿದೆಯೇ ಕಡಿಮೆಯಾಗುತ್ತಿದೆಯೇ?''

ಪ್ರತೀದಿನ ಅನುಯಾಯಿಗಳ ಸಂಖ್ಯೆಯಲ್ಲಿ ಹೆಚ್ಚಳವಾಗುತ್ತಿದೆ.''

''ಅವರು ಎಂದಾದರೂ ಸುಳ್ಳು ಹೇಳಿದ್ದಾರೆಯೇ?''

''ಇಲ್ಲ, ಅವರು ಸತ್ಯಸಂಧ ಎಂದೇ ಪ್ರಸಿದ್ಧರಾಗಿದ್ದಾರೆ.''

''ಅವರು ಎಂದಾದರೂ ಒಪ್ಪಂದ ಮುರಿದ ಉದಾಹರಣೆ ಇದೆಯೇ?''

''ಇಲ್ಲಿಯ ವರೆಗೆ ಅಂತಹದ್ದೇನೂ ಆಗಿಲ್ಲ, ಈಗ ನಮ್ಮ ನಡುವೆ ಹುದೈಬಿಯಾ ಸಂಧಿ ಏರ್ಪಟ್ಟಿದೆ. ಅದನ್ನು ಅವರು ಪಾಲಿಸುತ್ತಾರೋ ಇಲ್ಲವೋ ಗೊತ್ತಿಲ್ಲ.''

''ನೀವು ಎಂದಾದರೂ ಅವರ ಜೊತೆ ಯುದ್ಧ ಮಾಡಿದ್ದೀರಾ?''

''ಹೌದು.''

''ಅದರಲ್ಲಿ ಗೆಲ್ಲುತ್ತಿದ್ದದ್ದು ಯಾರು?''

''ಕೆಲವೊಮ್ಮೆ ನಾವು ಗೆದ್ದರೆ ಕೆಲವೊಮ್ಮೆ ಅವರೇ ಗೆಲ್ಲುತ್ತಿದ್ದರು?'' ಎಂದು ಅಬೂ ಸುಫ್ಯಾನ್ ಯಾವುದನ್ನೂ ಮರೆ ಮಾಚದೆ ಹೇಳಿದರು.

''ಅವರು ಜನರೊಂದಿಗೆ ಹೇಳುತ್ತಿರುವುದಾದರೂ ಏನು?''

ಹರ್ಕ್ಯುಲಸ್ ಕೇಳಿದ.

''ದೇವನು ಏಕೈಕನು. ಅವನಿಗೆ ವಿಧೇಯರಾಗಿರಿ. ಅವನಿಗೆ ಯಾರನ್ನೂ ಭಾಗೀದಾರರನ್ನಾಗಿಸಬೇಡಿ. ಸತ್ಯವನ್ನು ನುಡಿಯಿರಿ. ಪರಸ್ಪರ ಸ್ನೇಹ, ಕರುಣೆ, ವಾತ್ಸಲ್ಯದಿಂದ ವರ್ತಿಸಿರಿ, ಇದು ಜನರಿಗೆ ಮುಹಮ್ಮದ್(ಸ) ಬೋಧಿಸುತ್ತಿರುವ

ವಿಚಾರಗಳಾಗಿವೆ'' ಎಂದು ಅಬೂಸುಫ್‌ಯಾನ್ ಹೇಳಿದರು.

ಸರಿ. ಹಾಗಾದರೆ ಮುಹಮ್ಮದ್(ಸ) ದೇವ ಸಂದೇಶವಾಹಕರಾಗಿದ್ದಾರೆ. ಸಂದೇಶವಾಹಕರು ಸಾಮಾನ್ಯವಾಗಿ ಕುಲೀನ ಕುಟುಂಬದಿಂದಲೇ ಹುಟ್ಟಿ ಬರುತ್ತಾರೆ. ಇನ್ನು ನಿಮ್ಮ ಊರಿನಲ್ಲಿ ಈ ಹಿಂದೆ ಅದೇ ಕುಟುಂಬದಿಂದ ಯಾರಾದರೂ ನಾವು ಪ್ರವಾದಿಯಾಗಿದ್ದೇನೆಂದು ವಾದಿಸಿದ್ದರೆ ಅದನ್ನು ಮರಳಿ ಪಡೆಯುವ ಪ್ರಯತ್ನ ಎಂದು ಭಾವಿಸಬಹುದಿತ್ತು. ಒಂದು ವೇಳೆ ಅವರ ಕುಟುಂಬದಲ್ಲಿ ಯಾರಾದರೂ ದೊರೆಗಳು ಗತಿಸಿ ಹೋಗಿದ್ದರೆ ಅಧಿಕಾರ ವ್ಯಾಮೋಹದಿಂದ ಈ ರೀತಿ ಹೇಳಿ ನಡೆಯುತ್ತಿದ್ದಾರೆಂದು ಭಾವಿಸಬಹುದಿತ್ತು. ತನ್ನ ಜೀವಿತಾವಧಿಯಲ್ಲಿ ಸುಳ್ಳನ್ನಾಡದ ಓರ್ವ ವ್ಯಕ್ತಿಯು ದೇವನ ಹೆಸರಿನಲ್ಲಿ ಮಹಾ ಸುಳ್ಳನ್ನು ಪ್ರಚಾರ ಮಾಡುತ್ತಿದ್ದಾನೆಂಬುದನ್ನು ನಂಬಲೂ ಸಾಧ್ಯವಿಲ್ಲ. ಮೊದಲ ಹಂತದಲ್ಲಿಯೇ ಸಮಾಜದ ದುರ್ಬಲರು ಪ್ರವಾದಿಗಳನ್ನು(ಸ) ಬೆಂಬಲಿಸಿದ್ದರು ಎಂಬುದು ಕೂಡಾ ಹಿಂದಿನ ಇತಿಹಾಸಗಳು ಹೇಳುತ್ತಿವೆ. ಸತ್ಯದ ಹಾದಿಗೆ ಬೆಂಬಲಿಗರು ದಿನೇ ದಿನೇ ವರ್ಧಿಸುತ್ತಿರುವುದು ಕೂಡಾ ಸರಿಯಾದ ವಿಚಾರವೇ ಆಗಿದೆ. ಸಂದೇಶವಾಹಕರು ಯಾರನ್ನೂ ವಂಚಿಸಲಾರರು ಎಂಬುದೂ ಸರ್ವವಿದಿತವಾಗಿದೆ.

ನಿಮ್ಮ ಊರಿನ ಆ ವ್ಯಕ್ತಿ ದೇವಭಯದಿಂದ ಜೀವಿಸಬೇಕೆಂದು ಉಪದೇಶಿಸುತ್ತಾನೆಂದು ನೀವು ಹೇಳುತ್ತಿದ್ದೀರಿ. ನೀವು ಹೇಳುವ ವಿಚಾರಗಳೆಲ್ಲಾ ಸರಿಯಾದುದು ಎಂದಾದರೆ ಆ ವ್ಯಕ್ತಿ ಸಂದೇಶವಾಹಕರೆಂಬುದು ನಿಸ್ಸಂಶಯ. ಒಂದು ವೇಳೆ ನನಗೆ ಅವರ ಬಳಿಗೆ ಹೋಗಲು ಸಾಧ್ಯವಾಗುತ್ತಿದ್ದರೆ ಅವರ ಪಾದಗಳನ್ನು ತೊಳೆಯುತ್ತಿದ್ದೆ. ಹರ್ಕ್ಯುಲಸ್‌ನ ಪ್ರತಿಕ್ರಿಯೆ ಕೇಳಿದ ಅಬೂಸುಫ್‌ಯಾನ್ ಸ್ಥಂಭೀಭೂತನಾದ. ತನ್ನ ಪರಮ ವೈರಿಯಾಗಿದ್ದೂ ಅಬೂ ಸುಫ್‌ಯಾನ್ ಪ್ರವಾದಿವರ್ಯರ(ಸ) ಕುರಿತು ಸತ್ಯವನ್ನೇ ನುಡಿದಿದ್ದ. ಮುಹಮ್ಮದರ(ಸ) ಮೇಲ್ಮೆ ಮಹತ್ವವು ಯಾರಿಗೂ ಮರೆಮಾಚಲು ಸಾಧ್ಯವಾಗದಷ್ಟು ಶ್ರೇಷ್ಠವಾಗಿತ್ತು.

❖ ❖ ❖

43. ಜನರಿಗೆ ಹಿತವನ್ನು ಬಯಸಿದ ಪ್ರವಾದಿ

ಬದ್ರ್ ಯುದ್ಧದಲ್ಲಿ ಪರಾಜಿತರಾದ ಮಕ್ಕಾದ ಕುರೈಶರು ಪ್ರತೀಕಾರಕ್ಕಾಗಿ ಹಾತೊರೆಯುತ್ತಿದ್ದರು. ಕಅಬ್ ಬಿನ್ ಅಶ್ರಫ್‌ರಂತಹ ಇಸ್ಲಾಮಿನ ಶತ್ರುಗಳು ಅವರನ್ನು ಉದ್ರೇಕಿಸುತ್ತಿದ್ದರು. ಹಾಗೆಯೇ ಅಬೂ ಸುಫ್‌ಯಾನರ ನೇತೃತ್ವದ ವ್ಯಾಪಾರಿ ಸಂಘವು

ವ್ಯಾಪಾರದಿಂದ ಮರಳಿದ ಕೂಡಲೇ ಅವರಲ್ಲಿರುವ ಸಂಪತ್ತುಗಳನ್ನೆಲ್ಲಾ ಮುಸ್ಲಿಮ ವಿರುದ್ಧ ಹೋರಾಡಲು ವ್ಯಯಿಸುವುದಾಗಿ ನಿರ್ಧರಿಸಿದರು. ಮದೀನವನ್ನ ಧ್ವಂಸಗೊಳಿಸಲು ಅವರು ಬಲಿಷ್ಠ ಸೇನೆಯನ್ನು ಸಿದ್ಧಗೊಳಿಸಿದರು, ಅವರ ಉತ್ಸಾಹ ಆವೇಶ ಇನ್ನಷ್ಟು ವರ್ಧಿಸಲು ಹಿಂದ್‌ನ ನೇತೃತ್ವದಲ್ಲಿ ಮಹಿಳೆಯರ ದಂಡೊಂದು ಸಿದ್ಧವಾಯಿತು. ಅವರನ್ನು ತಡೆಯಲು ಬಂದವರೊಡನೆ ಹಿಂದ್ ಈ ರೀತಿ ಹೇಳಿದಳು ''ನೀವು ಬದ್ರ್‌ನ ರಣಾಂಗಣದಲ್ಲಿ ಪಾರಾದಿರಿ. ನಿಮ್ಮ ನಿಮ್ಮ ಮಹಿಳೆಯರ ಬಳ ನೀವು ಮರಳಿ ಬಂದಿರಿ. ಆದ್ದರಿಂದ ಕೇಳಿರಿ. ನಾವು ಯುದ್ಧಕ್ಕೆ ಖಂಡಿತಾ ಹೋಗುತ್ತೇವೆ ನಮ್ಮನ್ನು ತಡೆಯುವ ಪ್ರಯತ್ನ ಮಾಡಬೇಡಿರಿ. ಬದ್ರ್‌ನ ರಣಾಂಗಣಕ್ಕೆ ಹೊರಟ ನಮ್ಮನ್ನು ತುಹ್‌ಫದಿಂದ ತಡೆದು ಹಿಂದೆ ಕಳಿಸಿದಿರಿ. ಆಗ ಹೋರಾಟಗಾರರಿಗೆ ಉತ್ಸಾಹ ಚಿಮ್ಮುವಂತೆ ಮಾಡಲು ಅಲ್ಲಿ ಯಾರೂ ಇರಲಿಲ್ಲ, ಆದ್ದರಿಂದ ಅಂದು ನಮ್ಮ ಸ್ನೇಹಿತರು ಕೊಲ್ಲಲ್ಪಟ್ಟರು.''

ಕುರೈಶರು ಯುದ್ಧಕ್ಕೆ ಸಜ್ಜಾಗುತ್ತಿದ್ದಾರೆಂಬ ವಿಚಾರ ಪ್ರವಾದಿವರ್ಯರಿಗೆ(ಸ) ತಿಳಿಯಿತು. ಅವರು ತನ್ನ ಸಂಗಾತಿಗಳನ್ನು ಸೇರಿಸಿದರು. ಕುರೈಶರ ಆಕ್ರಮಣದ ಉದ್ದೇಶಗಳನ್ನೂ ಶಸ್ತ್ರಾಸ್ತ್ರಗಳ ಹಾಗೂ ಸೇನಾ ಬಲಗಳ ಕುರಿತು ಅವರಿಗೆ ಮನದಟ್ಟು ಮಾಡಿದರು. ಶತ್ರುಗಳ ಶಕ್ತಿ ಸಾಮರ್ಥ್ಯದ ಕುರಿತು ತಿಳಿದ ಕೆಲ ಮುಸ್ಲಿಮರು ಆತಂಕಿತರಾದರು. ಆದರೂ ಅಲ್ಲಾಹನ ಮೇಲಿದ್ದ ಅವರ ದೃಢ ವಿಶ್ವಾಸ, ಭರವಸೆಗಳು ಅವರಿಗೆ ಸಾಂತ್ವನ ನೀಡಿತು.

ಮದೀನದಲ್ಲಿದ್ದುಕೊಂಡೇ ಶತ್ರುಗಳ ಆಕ್ರಮಣವನ್ನು ಮಟ್ಟ ಹಾಕಬೇಕೆಂಬುದು ಪ್ರವಾದಿವರ್ಯರ(ಸ) ಉದ್ದೇಶವಾಗಿತ್ತು. ಪ್ರವಾದಿವರ್ಯರ(ಸ) ಆಪ್ತ ಸಂಗಾತಿಗಳು ಇದೇ ಅಭಿಪ್ರಾಯದವರಾಗಿದ್ದರು. ಆದರೆ ಹೊಸದಾಗಿ ಇಸ್ಲಾಮ್ ಸ್ವೀಕರಿಸಿದ ನವ ಮುಸ್ಲಿಮರು, ಬದ್ರ್ ಯುದ್ಧದಲ್ಲಿ ಪಾಲ್ಗೊಳ್ಳಲು ಅವಕಾಶ ಲಭಿಸದ ಯುವಕರು ಮದೀನಾದಿಂದ ಹೊರಗೆ ಹೋಗಿ ಶತ್ರು ಸೇನೆಯನ್ನು ಎದುರಿಸಬೇಕೆಂಬ ಅಭಿಪ್ರಾಯ ಹೊಂದಿದ್ದರು. ಅವರು ಬಹು ಸಂಖ್ಯೆಯಲ್ಲಿದ್ದರು. ಅವರ ಅಭಿಪ್ರಾಯವನ್ನು ಗೌರವಿಸಿದ ಪ್ರವಾದಿವರ್ಯರು(ಸ) ತನ್ನ ಹಾಗೂ ತನ್ನ ಆಪ್ತ ಸಂಗಾತಿಗಳ ಅಭಿಪ್ರಾಯವನ್ನು ನಿರ್ಲಕ್ಷಿಸಿದರು. ಇದು ಬಳಿಕ ಹಲವು ನಾಶನಷ್ಟಗಳಿಗೆ ಕಾರಣವಾಯಿತಾದರೂ ಆ ಬಹು ಸಂಖ್ಯೆಯಲ್ಲಿ ಅಭಿಪ್ರಾಯ ತಿಳಿಸಿದವರನ್ನು ನಿಂದಿಸುವುದೋ ಅಥವಾ ಹೀಯಾಳಿಸುವುದನ್ನೋ ಪ್ರವಾದಿವರ್ಯರು(ಸ) ಮಾಡಿಲ್ಲ. ಎಲ್ಲರೂ ಸೇರಿ ಸಮಾಲೋಚನೆಯಿಂದ ತಳೆದ ತೀರ್ಮಾನಕ್ಕೆ ಎಲ್ಲರೂ ಬದ್ಧರು ಎಂಬುದನ್ನು ಖಚಿತ ಪಡಿಸಿದರು.

ಪ್ರಜಾಪ್ರಭುತ್ವದ ಈ ಉದಾತ್ತ ಮಾದರಿಗೆ ವಿರುದ್ಧವಾದ ನಡೆ ಪ್ರವಾದಿ ವರ್ಯರಿಂದ(ಸ) ಒಮ್ಮೆಯೂ ಸಂಭವಿಸಿಲ್ಲ. ಅಲ್ಲಾಹನ ಸಂದೇಶವಾಹಕನಾಗಿಯೂ ಅಲ್ಲಾಹನಿಂದ ಸಂದೇಶ ಲಭಿಸಿದ ಪ್ರಮುಖ ಸಮಸ್ಯೆಗಳ ಕುರಿತು ಅವರು ಅನುಚರರೊಂದಿಗೆ ಚರ್ಚಿಸಿಯೇ ನಿರ್ಧಾರ ತೆಗೆದುಕೊಳ್ಳುತ್ತಿದ್ದರು.

❖ ❖ ❖

44. ಕರ್ತವ್ಯಲೋಪ ತಂದ ವಿಪತ್ತು

ಬದ್ರ್ ಯುದ್ಧದ ಸೋಲಿನ ಪ್ರತೀಕಾರಕ್ಕಾಗಿ ಕುರೈಶರ ಪ್ರಮುಖರು ಹಾತೊರೆಯುತ್ತಿದ್ದರು. ಹೋರಾಟಕ್ಕಾಗಿ ಪುರುಷರನ್ನು ಮಹಿಳೆಯರು ಹುರಿದುಂಬಿಸುತ್ತಿದ್ದರು. ಯುದ್ಧಕ್ಕೆ ಹೊರಡಲು ಹಿಂಜರಿಯುತ್ತಿದ್ದವರನ್ನೂ ನಿಂದಿಸುತ್ತಾ ಹೀಯಾಳಿಸುತ್ತಾ ಅವರು ರಂಗಕ್ಕಿಳಿದಿದ್ದರು.

ಹೀಗೆ ಕುರೈಶರ ದಂಡು ಅಟ್ಟಹಾಸದೊಂದಿಗೆ ಮದೀನಾದ ಮೇಲೆ ಆಕ್ರಮಣ ನಡೆಸಲು ತೆರಳಿತು. ಈ ಬಾರಿ ಸರ್ವ ರೀತಿಯ ಶಸ್ತ್ರಾಸ್ತ್ರಗಳೊಂದಿಗೆ ಸಜ್ಜುಗೊಂಡು ಹೋರಾಟಕ್ಕೆ ಧುಮುಕಿದ್ದರು. ಹಿಂದ್‌ನ ನೇತೃತ್ವದಲ್ಲಿ ಮಹಿಳೆಯರ ದಂಡೇ ಇತ್ತು.

ವಿಷಯವನ್ನು ಅರಿತ ಪ್ರವಾದಿವರ್ಯರು(ಸ) ತಮ್ಮ ಅನುಚರರೊಂದಿಗೆ ಸಮಾಲೋಚಿಸಿದ ಬಳಿಕ ಮದೀನಾದ ಹೊರಗಡೆಯ ಒಂದು ಪ್ರದೇಶದಲ್ಲಿ ಕುರೈಶರನ್ನು ಎದುರಿಸುವ ತೀರ್ಮಾನ ಕೈಗೊಂಡರು. ಆದರಂತೆ ಇಸ್ಲಾಮೀ ಸೈನ್ಯವು ಉಹುದ್‌ನಲ್ಲಿ ತಳವೂರಿತು. ಸೇನೆಯ ಯುದ್ಧತಂತ್ರದ ಭಾಗವಾಗಿ ಉಹುದ್ ಬೆಟ್ಟದ ಮೇಲೆ ಯುದ್ಧ ಭೂಮಿಯ ಒಳಗೆ ನುಸುಳುವ ಪ್ರವೇಶದ್ವಾರವೊಂದರ ಬಳಿ ಅಬ್ದುಲ್ಲಾ ಬಿನ್ ಜುಬೈರ್‌ರ(ರ) ನೇತೃತ್ವದಲ್ಲಿ 50 ನುರಿತ ಬಿಲ್ಲಾಳುಗಳನ್ನು ಪ್ರವಾದಿವರ್ಯರು(ಸ) ನಿಲ್ಲಿಸಿದ್ದರು. ಬಳಿಕ ಅವರೊಂದಿಗೆ ಈ ರೀತಿ ತಾಕೀತು ಮಾಡಿದರು. ನಮ್ಮ ಹಿಂಭಾಗ ಇರುವ ಈ ಪ್ರದೇಶವನ್ನು ನೀವು ಸಂರಕ್ಷಿಸಬೇಕು. ಯಾಕೆಂದರೆ ಈ ಭಾಗದಿಂದ ಬಂದು ಅವರು ನಮ್ಮ ಮೇಲೆ ಮುಗಿ ಬೀಳಬಹುದು. ಆದ್ದರಿಂದ ನೀವು ಇಲ್ಲಿ ಇರಲೇಬೇಕು. ಯಾವ ಕಾರಣಕ್ಕೂ ನೀವು ಇಲ್ಲಿಂದ ಕದಲಬಾರದು. ನಾವು ಶತ್ರುಗಳನ್ನು ಸೋಲಿಸಿ ಅವರ ಮೇಲೆ ಹತೋಟಿ ಸಾಧಿಸಿ ಅವರನ್ನು ಹಿಮ್ಮೆಟ್ಟಿಸುವುದನ್ನು ಕಂಡರೂ ನೀವು ಇಲ್ಲಿಂದ ಕದಲಬಾರದು ಅಥವಾ ನಮ್ಮ ಮೇಲೆ ಶತ್ರುಗಳು ದಾಳಿ ನಡೆಸಿ ನಮ್ಮನ್ನು ಕೊಲೆ ಮಾಡುವುದನ್ನು ಕಂಡುಬಂದರೂ ನೀವು ನಮ್ಮ ರಕ್ಷಣೆ ಗೆಂದು ಅಲ್ಲಿಗೆ ಬರಬೇಡಿ. ಇಲ್ಲಿಯೇ ನಿಂತು ಅವರ ಕುದುರೆಗಳಿಗೆ ಗುರಿಯಿಟ್ಟು ಬಾಣಗಳನ್ನು ಬಿಟ್ಟರೆ ಸಾಕು.

ಬಾಣಗಳು ಅವರತ್ತ ಬರುವುದನ್ನು ಕಂಡರೆ ಅವರು ಅತ್ತ ಬರಲಾರರು.''

ಪ್ರವಾದಿ ಮತ್ತವರ ಸಂಗಾತಿಗಳು ಶತ್ರುಗಳನ್ನು ಸೋಲಿಸಿದರು, ರಣಾಂಗಣ ತಮ್ಮ ವಶವಾಗುತ್ತಿದೆಯೆಂಬುದನ್ನು ಮನಗಂಡ ಕಾವಲುಗಾರರಾಗಿ ನಿಂತ ಬಿಲ್ಲಾಳುಗಳ ಪ್ರವಾದಿವರ್ಯರ(ಸ) ತಾಕೀತನ್ನು ಮರೆತು ಅವರು ನಾಯಕ ಅಬ್ದುಲ್ಲಾ ಜುಬೈರ್‌ರ(ರ ಮಾತನ್ನು ನಿರ್ಲಕ್ಷಿಸಿ ಯುದ್ಧ ಭೂಮಿಯತ್ತ ಧಾವಿಸಿದರು. ಸೋತು ಹಿಂ ಮರಳಿದಂತಹ ಶತ್ರು ಸೇನೆಯು ಇದನ್ನು ಗಮನಿಸಿತು. ಅವರು ಹಿಂದಿನಿಂದ ಮ ಬಂದು ಪ್ರವಾದಿವರ್ಯರು(ಸ) ಹಾಗೂ ಸಂಗಾತಿಗಳ ವಿರುದ್ಧ ಮುಗಿಬಿದ್ದರು. ಇದು ಉಹುದ್ ರಣಾಂಗಣದಲ್ಲಿ ಮುಸ್ಲಿಮರಿಗೆ ಭಾರೀ ನಾಶನಷ್ಟವುಂಟಾಗಲು ಕಾರಣವಾಯಿತು. ತನ್ನ ಮಾತುಗಳನ್ನು ಉಲ್ಲಂಘಿಸಿ ಇಸ್ಲಾಮಿಗೆ ಭಾರೀ ಹಾನಿ ತಂದೊಡ್ಡಲು ಕಾರಣಕರ್ತರಾದವರನ್ನು ಪ್ರವಾದಿವರ್ಯರು(ಸ) ಕ್ಷಮಿಸಿದರು.

❖ ❖ ❖

45. ನೈಜ ಪ್ರವಾದಿ(ಸ) ಪ್ರೇಮ

ಉಹುದ್ ಯುದ್ಧದಲ್ಲಿ ಪ್ರವಾದಿವರ್ಯರು(ಸ) ವಧಿಸಲ್ಪಟ್ಟಿದ್ದಾರೆಂಬ ವದಂತಿ ನಗರದಲ್ಲಿ ವ್ಯಾಪಕವಾಗಿ ಹಬ್ಬಿತು. ಇದರಿಂದ ಶತ್ರುಗಳ ಸಂತೋಷಕ್ಕೆ ಪಾರವಿಲ್ಲದಾಯಿತು. ಪ್ರವಾದಿವರ್ಯರ(ಸ) ಅನುಯಾಯಿಗಳಂತೂ ಈ ವದಂತಿಯಿಂದ ತೀವ್ರ ದುಃಖಿತರಾದರು. ದಿಗ್ಭ್ರಾಂತರಾದರು. ಮಹಿಳೆಯರು ಮನೆಯಿಂದ ಹೊರಟು ಬಂದಿದ್ದರು. ಈ ವದಂತಿಯು ಕಬ್‌ಶ ಬಿಂತಿ ರಾಬಿಯರವರ ಕಿವಿಯನ್ನೂ ತಲುಪಿತು. ಅವರು ಅದನ್ನು ನಂಬಲಿಲ್ಲ. ಆದರೂ ಅವರು ತಕ್ಷಣ ನಿಜ ಸ್ಥಿತಿ ತಿಳಿಯಲೆಂದು ಹೊರಟರು. ಯುದ್ಧ ಭೂಮಿಯಿಂದ ಮರಳುತ್ತಿದ್ದ ಕೆಲವು ಸೈನಿಕರೊಂದಿಗೆ ಪ್ರವಾದಿವರ್ಯರ(ಸ) ಕುರಿತು ವಿಚಾರಿಸಲೆಂದು ನಗರದ ದ್ವಾರದ ಬಳಿ ನಿಂತರು. ನಾನು ಇದೂ ವರೆಗೆ ಕೇಳಿದ ಸುದ್ದಿ ಸುಳ್ಳಾಗಲಿ ಎಂದು ಪ್ರಾರ್ಥಿಸುತ್ತಲೂ ಇದ್ದರು.

ದೂರದಿಂದ ಬರುತ್ತಿದ್ದ ಓರ್ವರ ಹತ್ತಿರ ಹೋಗಿ ''ಪ್ರವಾದಿವರ್ಯರಿಗೆ(ಸ) ಏನಾಗಿದೆ?'' ಎಂದು ವಿಚಾರಿಸಿದರು.

''ನಿಮ್ಮ ಎಲ್ಲಾ ಮಕ್ಕಳು ಯುದ್ಧ ಭೂಮಿಯಲ್ಲಿ ಮರಣವನ್ನಪ್ಪಿದ್ದಾರೆ!'' ಎಂಬ ಅನಿರೀಕ್ಷಿತ ಉತ್ತರ ಬಂತು. ಆದರೂ ಸತ್ಯದ ಮಾರ್ಗದಲ್ಲಿ ಸರ್ವವನ್ನೂ ಸಮರ್ಪಿಸಲು ಸನ್ನದ್ಧರಾಗಿದ್ದ ಆ ವೀರ ಮಹಿಳೆ ಅದರಿಂದ ವಿಚಲಿತರಾಗಲಿಲ್ಲ. ಆಗಲೂ ಅವರು

ಪ್ರವಾದಿವರ್ಯರ(ಸ) ಸ್ಥಿತಿಯ ಬಗ್ಗೆಯೇ ಕಾತರದಿಂದ ಇದ್ದರು.

''ನಿಮ್ಮ ತಂದೆಯವರೂ ವಧಿಸಲ್ಪಟ್ಟಿದ್ದಾರೆ.'' ಬೆಂಕಿಗೆ ಎಣ್ಣೆ ಸುರಿದಂತೆ ಯಾರೋ ಹೇಳಿದರು. ಆದರೂ ತುಂಬಲಾರದ ಈ ನಷ್ಟವೂ ಅವರನ್ನು ವಿಚಲಿತಗೊಳಿಸಲಿಲ್ಲ. ಆತಂಕಿತರಾಗಿ ಅವರು ಪ್ರವಾದಿವರ್ಯರ(ಸ) ಕುರಿತೇ ವಿಚಾರಿಸುತ್ತಿದ್ದರು.

''ನಿಮ್ಮ ಪತಿಯೂ ಹುತಾತ್ಮರಾಗಿದ್ದಾರೆ'' ಎಂಬ ಮತ್ತೊಂದು ಬಾಣವು ಅವರ ಎದೆಯನ್ನು ತಿವಿಯಿತು. ಆದರೆ ಅದನ್ನು ಅವರು ಲೆಕ್ಕಿಸದೆ ಪ್ರವಾದಿವರ್ಯರ(ಸ) ಕ್ಷೇಮದ ಕುರಿತೇ ವಿಚಾರಿಸುತ್ತಿದ್ದರು. ಯಾಕೆಂದರೆ ಪ್ರವಾದಿವರ್ಯರ(ಸ) ಅಂತ್ಯವಾದರೆ ಅದು ತಾನು ಇತರೆಲ್ಲವುಗಳಿಗಿಂತ ಹೆಚ್ಚು ಪ್ರೀತಿಸುವ ಸಿದ್ಧಾಂತದ, ವಿಶ್ವಾಸದ ಅಂತ್ಯ ಎಂಬುದಾಗಿ ಅವರು ಭಾವಿಸಿದ್ದರು. ಕೊನೆಗೆ ಪ್ರವಾದಿವರ್ಯರು(ಸ) ಸುರಕ್ಷಿತರಾಗಿದ್ದಾರೆಂಬ ವಿಚಾರ ತಿಳಿದರು. ಆದರೂ ಅವರು ಪ್ರವಾದಿವರ್ಯರನ್ನು(ಸ) ಪ್ರತ್ಯಕ್ಷವಾಗಿ ನೋಡದೆ ಸಂತೃಪ್ತರಾಗಿರಲಿಲ್ಲ. ಕೊನೆಗೆ ಅವರ ಕಣ್ಮುಂದೆಯೇ ಪ್ರವಾದಿವರ್ಯರು(ಸ) ಹಾಜರಾದಾಗ ''ನಿಮಗೇನೂ ಆಗಿಲ್ಲವೆಂದಾದರೆ ನನಗೆ ಬಂದೊದಗಿದ ಎಲ್ಲ ನಾಶ ನಷ್ಟಗಳೂ ತೃಣ ಸಮಾನ'' ಎಂಬ ಉದ್ಗಾರ ಆ ಧೀರ ಮಹಿಳೆಯ ಬಾಯಿಂದ ಹೊರಬಂತು.

❖ ❖ ❖

46. ಪ್ರವಾದಿವರ್ಯರ(ಸ) ಇಂಗಿತ ಬದಲಿಸಿದ ಕುರ್‌ಆನ್

ಪ್ರವಾದಿವರ್ಯರ(ಸ) ಜೀವಿತಾವಧಿಯಲ್ಲಿ ಹಲವು ಬಾರಿ ಶತ್ರುಗಳನ್ನು ಎದುರಿಸ ಬೇಕಾಗಿ ಬಂದಿದೆ. ಆದರೆ ಪ್ರವಾದಿವರ್ಯರಿಗೂ(ಸ) ಅವರ ಅನುಚರರಿಗೂ ಅತೀ ಹೆಚ್ಚು ಸಂಕಷ್ಟ ತಂದೊಡ್ಡಿರುವುದು ಉಹುದ್ ಯುದ್ಧವಾಗಿದೆ. ಪ್ರವಾದಿವರ್ಯರ(ಸ) ಅತ್ಯಂತ ಪ್ರೀತಿಯ ಚಿಕ್ಕಪ್ಪ ಹಂಝಾ(ರ) ವಧಿಸಲ್ಪಟ್ಟು ಹುತಾತ್ಮರಾದರು. ಶತ್ರುಗಳು ಈ ವೀರ ಯೋಧನ ಎದೆಯನ್ನು ಸೀಳಿ ಕರುಳನ್ನು ಹೊರತೆಗೆದು ಜಗಿದು ಉಗಿದಿದ್ದರು. ಇಸ್ಲಾಮೀ ಧ್ವಜವನ್ನು ಹಿಡಿದು ಮುಂದುವರಿಯುತ್ತಿದ್ದ ಮಿಸ್‌ಅಬ್ ಬಿನ್ ಉಮೈರ್‌ರನ್ನು ವಧಿಸಿದರು. ಹಾಗೆಯೇ ಅಬೂಹುದೈಫಾ ಮುಂತಾದ ಅತ್ಯಂತ ಆಪ್ತರು ಹುತಾತ್ಮರಾದರು. ಶತ್ರುಗಳು ಪ್ರವಾದಿವರ್ಯರು(ಸ) ಕೊಲ್ಲಲ್ಪಟ್ಟರು ಎಂಬ ವದಂತಿಯನ್ನು ಹಬ್ಬಿಸಿದ್ದರು. ಅನುಚರ ರಲ್ಲೊಂದು ವಿಭಾಗವು ಅದನ್ನು ನಂಬಿತು. ಕೆಲವರು ರಣಾಂಗಣದಿಂದ ಪಲಾಯನಗೈದರು. ಈ ಕಠಿಣ ಪರಿಸ್ಥಿತಿಯಲ್ಲಿ ಪ್ರವಾದಿವರ್ಯರ(ಸ) ರಕ್ಷಣೆಗೆ ನಿಂತ ಯೋಧರು ಅನೇಕ ರೀತಿಯ ತೊಂದರೆಗಳನ್ನು

ಎದುರಿಸಬೇಕಾಯಿತು. ಅವರಲ್ಲಿ ಓರ್ವರಾದ ಅನಸ್ ಬಿನ್ ನದೀರ್ ಎಂಬವರು ಧರೆಗುರುಳಿದಾಗ ಅವರ ಮೈಯಲ್ಲಿ 70ರಷ್ಟು ಗಾಯಗಳಿದ್ದುವು.

ವಿರೂಪಗೊಂಡ ಅವರ ಮೃತದೇಹವನ್ನು ಅವರ ಸಹೋದರಿ ಬೆರಳಚ್ಚಿನಿಂದ ಗುರುತು ಹಿಡಿದರು. ಪ್ರವಾದಿವರ್ಯರಿಗೂ(ಸ) ಈ ಯುದ್ಧದಲ್ಲಿ ಗಾಯಗಳಾಗಿತ್ತು. ಎರಡ್ಮೂರು ಹಲ್ಲುಗಳೂ ಒಡೆದಿತ್ತು. ಈ ಸಂಕಷ್ಟಗಳನ್ನೆಲ್ಲಾ ಎದುರಿಸಿ ದಣಿದ ಪ್ರವಾದಿವರ್ಯರು(ಸ) ಜರ್ಝರಿತ ಮನಸ್ಸಿನೊಂದಿಗೆ ಯುದ್ಧರಂಗದಲ್ಲಿ ಹುತಾತ್ಮರಾದವರ ದೇಹಗಳನ್ನು ಪರೀಕ್ಷಿಸುತ್ತಾ ಸಾಗುತ್ತಿದ್ದರು. ಆಗ ವಿಕೃತಗೊಂಡಿದ್ದ ಹಂಝಾರ(ರ) ಮೃತ ಶರೀರ ಅವರಿಗೆ ಗೋಚರಿಸುತ್ತದೆ. ಅದನ್ನು ನೋಡಿದ ಅವರು ತೀವ್ರ ದುಃಖಿತರಾದರು. ಆ ಮೃತದೇಹದ ಬಳಿ ನಿಂತು ಈ ರೀತಿ ಹೇಳಿದರು. ''ತಮಗಾದ ಪರಿಸ್ಥಿತಿ ಯಾರಿಗೂ ಬಾರದಿರಲಿ. ಇಷ್ಟೊಂದು ರೋಷ ಉಕ್ಕಿ ಬರುವಂತಹ ಪರಿಸ್ಥಿತಿ ನನಗೆ ಇದುವರೆಗೆ ಬಂದಿಲ್ಲ, ಅಲ್ಲಾಹನಾಣೆ! ಮುಂದೆ ಎಂದಾದರೂ ಅಲ್ಲಾಹನ ಅನುಗ್ರಹದಿಂದ ಅವರನ್ನು ನಾವು ಸೋಲಿಸಲು ಶಕ್ತರಾದರೆ ಅರಬರಲ್ಲಿ ಇದುವರೆಗೂ ಮಾಡದಂತಹ ಅವರ ಅಂಗಾಂಗಗಳನ್ನು ನಾವು ಛೇದಿಸುವೆವು.''

ಆದರೆ ಕೆಲವೇ ಕ್ಷಣಗಳಲ್ಲಿ ಪ್ರವಾದಿವರ್ಯರ(ಸ) ಈ ಹೇಳಿಕೆಗಳನ್ನು ತಿದ್ದುತ್ತಾ ಕುರ್‌ಆನ್ ಸೂಕ್ತ ಅವತರಣಗೊಂಡಿತು, ''ನೀವು ಪ್ರತೀಕಾರವೆಸಗುವುದಿದ್ದರೆ ನಿಮ್ಮ ಮೇಲೆ ಅತಿರೇಕವೆಸಗಿದಷ್ಟು ಮಾತ್ರ ಎಸಗಿರಿ. ಆದರೆ ನೀವು ತಾಳ್ಮೆ ವಹಿಸಿದರೆ ನಿಶ್ಚಯವಾಗಿಯೂ ಇದು ಸಹನಶೀಲರಿಗೆ ಅತ್ಯುತ್ತಮ. ಓ ಪೈಗಂಬರರೇ ನೀವು ಸಹನೆಯೊಂದಿಗೆ ಕಾರ್ಯವೆಸಗುತ್ತಲೇ ಇರಿ ಮತ್ತು ನಿಮ್ಮ ಸಹನೆ ಅಲ್ಲಾಹನ ಅನುಗ್ರಹದಿಂದಲೇ ಇದೆ. ಅವರ ಚಟುವಟಿಕೆಗಳ ಬಗ್ಗೆ ಖೇದಿಸಬೇಡಿರಿ. ಅವರ ಕುತಂತ್ರಗಳಿಂದ ಧೈರ್ಯಗುಂದಬೇಡಿ.'' (ಅನ್ನಹ್ಲ್ 125-127)

❖ ❖ ❖

47. ಶತ್ರುಗಳ ಸೇವೆ

ಹಿಜ್‌ರಾ 5ನೇ ವರ್ಷ ಮಕ್ಕಾದಲ್ಲಿ ಬರಗಾಲ ಬಂದು ಬೆಳೆಗಳು ಒಣಗಿ ನಾಶವಾದವು. ಶ್ರೀಮಂತರೆನಿಸಿಕೊಂಡವರೂ ಹಸಿವೆಯಲ್ಲಿ ಬಳಲಿದರು. ಈ ತೀಕ್ಷ್ಣತರ ಬರಗಾಲಕ್ಕೆ ಎಲ್ಲರೂ ಗುರಿಯಾದರು. ಆಹಾರ ವಸ್ತುಗಳು ಸಿಗದಾಯಿತು. ಕುರೈಶರ ಆರ್ತನಾದ ಮುಗಿಲು ಮುಟ್ಟುವಂತಿತ್ತು. ಈ ವಿಚಾರ ತಿಳಿದ ಪ್ರವಾದಿವರ್ಯರ(ಸ) ಕೋಮಲ ಮನಸ್ಸು ಕರಗಿತು. ನೊಂದಿತು. ತನ್ನನ್ನೂ ತನ್ನ ಅನುಚರರನ್ನೂ ಕ್ರೂರವಾಗಿ

ಮಾಜದಿಂದ ಬಹಿಷ್ಕರಿಸಿದ 'ಶಿಅಬ್ ಅಬೂ ತಾಲಿಬ್'ನಲ್ಲಿ ಬಂದಿಗಳಾಗಿ ಹಸಿವೆ ಾಳಲಾರದೆ ಹಸಿರು ಎಲೆಗಳನ್ನು ತಿನ್ನಬೇಕಾದಂತಹ ಪರಿಸ್ಥಿತಿ ನಿರ್ಮಾಣ ಮಾಡಿದವರು, ಳೆ ಹಸುಗೂಸುಗಳು ದಾಹ ಹಸಿವು ತಾಳಲಾರದೆ ಅಳುತ್ತಿರುವಾಗ ಕ್ರೂರವಾಗಿ ಹಗಹಿಸಿ ನಕ್ಕು ನಲಿದಾಡಿದವರು ಸಂಕಷ್ಟಭರಿತರಾದಾಗ ಪ್ರವಾದಿವರ್ಯರು(ಸ) ಂತೋಷ ಭರಿತರಾಗಲಿಲ್ಲ, ತನ್ನ ಪ್ರತೀಕಾರ ದಾಹ ತೀರಿಸುವ ಬದಲು ಅವರಿಗೆ ಮಾನವೀಯತೆಯ ಪಾಠ ಕಲಿಸಿ ಮಿತ್ರರನ್ನಾಗಿ ಮಾಡಲು ಶ್ರಮಿಸಿದರು. ಮದೀನಾದಿಂದ ಸಾಧ್ಯವಾದಷ್ಟು ಆಹಾರ ಧಾನ್ಯಗಳನ್ನು ಸಂಗ್ರಹಿಸಿ ಅಮ್ರ್ ಬಿನ್ ಉಮಯ್ಯರೊಡನೆ ಮಕ್ಕಾಗೆ ಕಳುಹಿಸಿದರು. ಶತ್ರು ಪಾಳಯದ ನೇತಾರ ಅಬೂ ಸುಫ್‌ಯಾನ್ ಪ್ರವಾದಿವರ್ಯರು(ಸ) ಕಳುಹಿಸಿದ ನೆರವನ್ನು ಸಂತೋಷದಿಂದ ಸ್ವೀಕರಿಸಿ ದರಿದ್ರರಿಗೆ ಹಂಚಿದರು. ಕೊನೆಗೆ ಅಮ್ರ್ ಬಿನ್ ಉಮಯ್ಯರಿಗೆ ಅಬೂ ಸುಫ್‌ಯಾನ್ ಕೃತಜ್ಞತೆ ಸಲ್ಲಿಸಿದರು, ಪ್ರವಾದಿವರ್ಯರ(ಸ) ಉದಾರತೆಯಿಂದ ಕೂಡಿದ ಈ ಸೇವಾ ಪ್ರತೀಕಾರ ಮಾನವ ಇತಿಹಾಸದಲ್ಲಿ ಬೇರೆಲ್ಲೂ ನಮಗೆ ಕಾಣಸಿಗದು.

❖ ❖ ❖

48. ಹುದೈಬಿಯಾ ಸಂಧಿ

ಹುದೈಬಿಯಾ ಸಂಧಿ ಇತಿಹಾಸ ಪ್ರಸಿದ್ಧವಾದ ಕರಾರಾಗಿದೆ. ಇದು ಮಕ್ಕಾದ ಶತ್ರುಗಳು ಹಾಗೂ ಪ್ರವಾದಿವರ್ಯರ(ಸ) ನಡುವೆ ನಡೆದ ಐಕ್ಯಕ ಒಪ್ಪಂದವಾಗಿದೆ. ಆ ಒಪ್ಪಂದದ ಶರತ್ತುಗಳು ಮುಸ್ಲಿಮರಿಗೆ ಪ್ರತಿಕೂಲವಾಗಿ ಕಂಡು ಬಂದರೂ ಪ್ರವಾದಿವರ್ಯರು(ಸ) ಹಾಗೂ ಮತ್ತವರ ಅನುಚರರಿಗೆ ವಿಜಯಶಾಲಿಗಳಾಗಿ ಮಕ್ಕಾಗೆ ಬರಲು ಅದು ಸಹಾಯಕವಾಯಿತು. ಈ ಕರಾರು ಪತ್ರದ ಸಂಭಾಷಣೆಯಲ್ಲೂ ಬರೆಯುವುದರಲ್ಲಿಯೂ ಕುರೈಶರನ್ನು ಸುಹೈಲ್ ಪ್ರತಿನಿಧಿಸಿದ್ದರು. ಈ ಒಪ್ಪಂದದ ನಿಯಮಗಳನ್ನು ಅಲಿ ಬಿನ್ ಅಬೂತಾಲಿಬ್ ಬರೆದಿದ್ದರು.

ಪ್ರವಾದಿವರ್ಯರು(ಸ) ಒಪ್ಪಂದದ ವಾಕ್ಯಗಳನ್ನು ಹೇಳಿಕೊಟ್ಟರು. ಅದು ಪ್ರಾರಂಭಿಸುವಾಗ 'ಪರಮ ದಯಾಮಯನಾದ ಅಲ್ಲಾಹನ ನಾಮದಿಂದ' ಎಂದು ಬರೆಯುವಂತೆ ಪ್ರವಾದಿವರ್ಯರು(ಸ) ಸೂಚಿಸಿದರು. ಕೂಡಲೇ ಮಧ್ಯೆ ಪ್ರವೇಶಿಸಿದ ಸುಹೈಲ್ ''ಏನು ಪರಮ ದಯಾಮಯನೂ ಕರುಣಾಳುವೋ? ಅದೊಂದೂ ನನಗೆ ಗೊತ್ತಿಲ್ಲ, ಅಲ್ಲಾಹನ ನಾಮದಿಂದ ಎಂದು ಬರೆದರೆ ಸಾಕು'' ಎಂದು ಹೇಳಿದ.

ಮುಸ್ಲಿಮರು ಅವರ ಅಭಿಪ್ರಾಯಕ್ಕೆ ಒಪ್ಪಲಿಲ್ಲ, ಪ್ರವಾದಿವರ್ಯರು(ಸ)

ಹೇಳಿಕೊಟ್ಟಂತೆ ಬರೆಯಬೇಕೆಂದು ಹಠ ಹಿಡಿದರು. ಆದರೆ ಪ್ರವಾದಿವರ್ಯರು(ಸ ಸುಹೈಲ್‌ನ ಅಭಿಪ್ರಾಯದಂತೆ 'ಅಲ್ಲಾಹನ ನಾಮದಿಂದ' ಎಂದು ಬರೆಯಲ ಆದೇಶಿಸಿದರು.

ಬಳಿಕ ಪ್ರವಾದಿವರ್ಯರು(ಸ) ''ಇದು ಅಲ್ಲಾಹನ ಸಂದೇಶವಾಹಕ ಮುಹಮ್ಮದ ರಿಂದ ಬಂದ ಕರಾರು ಪತ್ರವಾಗಿದೆ'' ಎಂದು ಬರೆಯಲು ತಿಳಿಸಿದರು. ಹಝ್ರತ ಅಲಿಯವರು ಅದನ್ನು ಬರೆದ ಕೂಡಲೇ ಸುಹೈಲ್ ಮಧ್ಯೆ ಪ್ರವೇಶಿಸಿ ''ತಾವ ದೇವನಿಂದ ನಿಯೋಜಿತರಾದ ಸಂದೇಶವಾಹಕರೆಂದು ನಾವು ಅಂಗೀಕರಿಸಿದ್ದರೆ ಈ ಸಮಸ್ಯೆಯೇ ಉದ್ಭವವಾಗುತ್ತಿರಲಿಲ್ಲ. ಕಅಬಾದ ಸಂದರ್ಶನದಿಂದ ನಿಮ್ಮನ್ನು ನಾವ ತಡೆಯುತ್ತಿರಲಿಲ್ಲ. ನಿಮ್ಮನ್ನು ಊರಿನಿಂದ ಹೊರ ಹಾಕುವುದಾಗಲೀ ನಿಮ್ಮೊಡನೆ ಯುದ್ಧ ಹೂಡುವುದಾಗಲೀ ಮಾಡುತ್ತಿರಲಿಲ್ಲ. ಆದ್ದರಿಂದ ಅಬ್ದುಲ್ಲಾರ ಮಗ ಮುಹಮ್ಮದ್ ಎಂದು ಬರೆದರೆ ಸಾಕೆಂದು ಹೇಳಿದ.

''ನೀವು ಒಪ್ಪಿದರೂ ಒಪ್ಪದಿದ್ದರೂ ನಾನು ಮಾತ್ರ ಅಲ್ಲಾಹನ ಸಂದೇಶವಾಹಕನಾಗಿದ್ದೇನೆ. ಇದು ಸತ್ಯ'' ಎಂದು ಪ್ರವಾದಿವರ್ಯರು(ಸ) ಹೇಳಿದರು. ಅಲ್ಲಾಹನ ಸಂದೇಶವಾಹಕ ಎನ್ನುವುದನ್ನು ಅಳಿಸಿ ಅಬ್ದುಲ್ಲಾರ ಮಗ ಮುಹಮ್ಮದ್ ಎಂದು ಬರೆಯುವಂತೆ ಸೂಚಿಸಿದರು. ಆದರೆ ಅಲಿಯವರು ಅದಕ್ಕೆ ಸಿದ್ಧರಾಗಲಿಲ್ಲ. ಆಗ ಪ್ರವಾದಿವರ್ಯರು(ಸ) ಅದನ್ನು ಪಡೆದು ತನ್ನ ಕೈಯಿಂದಲೇ ಅಳಿಸಿದರು.

''ನಾವು ಕಅಬಾವನ್ನು ಸಂದರ್ಶಿಸುತ್ತೇವೆ. ತವಾಫ್ ಮಾಡುತ್ತೇವೆ. ಅದಕ್ಕೆ ಯಾರೂ ಅಡ್ಡಿ ಪಡಿಸುವುದಿಲ್ಲ'' ಎಂದು ಬರೆಯುವಂತೆ ಪ್ರವಾದಿವರ್ಯರು(ಸ) ಆದೇಶಿಸಿದರು, ಆಗಲೂ ಸುಹೈಲ್ ಮಧ್ಯ ಪ್ರವೇಶಿಸಿದ. ''ಈ ವರ್ಷವಿಲ್ಲ, ಏನಿದ್ದರೂ ಮುಂದಿನ ವರ್ಷ ಬೇಕಾದರೆ ಮಾಡಿ. ಯಾಕೆಂದರೆ ಇಂತಹ ಒಂದು ನಿರ್ಧಾರಕ್ಕೆ ನಾವು ನಿರ್ಬಂಧಿತರಾಗಿದ್ದೇವೆ ಎಂದು ಅರಬರು ಭಾವಿಸಬಾರದು. ಅವನು ಮುಂದುವರಿಯುತ್ತಾ'' ನಿಮ್ಮವರು ಯಾರಾದರೂ ನಮ್ಮ ಬಳಿಗೆ ಬಂದರೆ ಅವರನ್ನು ಮರಳಿ ಕಳಿಸಲಾಗದು. ಹಾಗೆಯೇ ನಮ್ಮಿಂದ ಯಾರಾದರೂ ನಿಮ್ಮ ಬಳಿಗೆ ನಿಮ್ಮ ಧರ್ಮ ಸ್ವೀಕರಿಸಿ ಸೇರಲು ಬಂದರೆ ಅವನನ್ನು ನಮ್ಮಲ್ಲಿಗೆ ಮರಳಿಸಬೇಕು.''

ಪ್ರವಾದಿವರ್ಯರು(ಸ) ಈ ಮಾತನ್ನು ಒಪ್ಪಿದರು. ಆದರೆ ಅನುಚರರಿಗೆ ಇದು ಸಹ್ಯವಾಗಲಿಲ್ಲ, ಅವರ ಸಹನೆಯ ಕಟ್ಟೆಯೊಡೆದಿದ್ದು ಉಮರುಲ್ ಫಾರೂಕ್‌ರ(ರ) ಮುಖಾಂತರವಾಗಿತ್ತು. ಅವರು ಎದ್ದು ನಿಂತು ''ಪ್ರವಾದಿವರ್ಯರೇ(ಸ) ತಾವು ಅಲ್ಲಾಹನ ಸಂದೇಶವಾಹಕ ಎಂಬುದು ಸತ್ಯವಲ್ಲವೇ ಎಂದು ಕೇಳಿದಾಗ

ಪ್ರವಾದಿವರ್ಯರು(ಸ), ಹೌದು ನಿಶ್ಚಯವಾಗಿಯೂ ನಾನು ಅಲ್ಲಾಹನ ದೂತನಾಗಿದ್ದೇನೆ'' ಎಂದು ಹೇಳಿದರು. ಯಾರನ್ನೂ ಗಲಿಬಿಲಿಗೊಳಿಸುವಂತಹ ಇಂತಹ ಪ್ರಶ್ನೆ ತನ್ನ ಆಪ್ತ ಸಂಗಾತಿಯಿಂದ ಬಂದರೂ ಪ್ರವಾದಿವರ್ಯರು(ಸ) ಕೆರಳಲಿಲ್ಲ. ಶಾಂತಚಿತ್ತರಾಗಿ ಉತ್ತರಿಸಿದರು.

''ನಾವೆಲ್ಲರೂ ಮುಸ್ಲಿಮರಲ್ಲವೇ?'' ಎಂದು ಉಮರುಲ್ ಫಾರೂಕ್‌ರವರು ಗೌರವಭಾವದಿಂದ ಕೇಳಿದರು. 'ಹೌದು ನಿಶ್ಚಯವಾಗಿಯೂ ನಾವು ಮುಸ್ಲಿಮರಾಗಿದ್ದೇವೆ.' ಅದೇ ಶಾಂತರೀತಿಯಿಂದ ಉತ್ತರಿಸಿದರು.

ಈ ಶತ್ರುಗಳು ವಿಗ್ರಹಾರಾಧಕರೂ ದುರ್ಮಾರ್ಗಿಗಳೂ ಆಗಿದ್ದಾರೆ ಅಲ್ಲವೇ'' ಎಂದು ಕೇಳಿದಾಗ,

''ಖಂಡಿತವಾಗಿಯೂ'' ಎಂದುತ್ತರಿಸಿದರು. ಮತ್ತೆ ನಾವು ಯಾಕೆ ಈ ಅವಮಾನವನ್ನು ಸಹಿಸಬೇಕು. ಧರ್ಮದ ವಿಷಯದಲ್ಲಿ ನಾವು ಯಾಕೆ ಅವಮಾನಿತರಾಗಬೇಕು ಎಂದು ಉಮರ್ ಪ್ರಶ್ನಿಸಿದರು.

''ನಾನು ಅಲ್ಲಾಹನ ದೂತನಾಗಿದ್ದೇನೆ. ಅವನ ಆಜ್ಞೆಗಳನ್ನು ಪಾಲಿಸಲು ನಾನು ಬಾಧ್ಯಸ್ಥನು. ಆದ್ದರಿಂದ ಅವನೆಂದಿಗೂ ನನ್ನನ್ನು ನಿಂದಿಸನು, ಅಪಮಾನಿಸಲಾರನು, ನನ್ನ ಕೈ ಬಿಡಲಾರನು.'' ಪ್ರವಾದಿವರ್ಯರು(ಸ) ವಿನೀತರಾಗಿ ತನ್ನ ಸಂಗಾತಿಗಳಿಗೆ ವಾಸ್ತವವನ್ನು ಮನದಟ್ಟು ಮಾಡಿದರು.

ಅಲ್ಲಾಹನ ಆದೇಶದಂತೆ ಪ್ರವಾದಿವರ್ಯರು(ಸ) ತಯಾರಿಸಿದ ಈ ಒಪ್ಪಂದವು ನೋಡಲು ಮುಸ್ಲಿಮರಿಗೆ ದೋಷಪೂರ್ಣವೂ ಅವಮಾನಕರವೂ ಆಗಿತ್ತು. ಆದರೆ ಅದು ಹೆಚ್ಚು ಪ್ರಯೋಜನಕಾರಿಯಾಗಿಯೂ ಫಲಪ್ರದವೂ ವಿಜಯಕರವೂ ಆಗಿತ್ತೆಂಬುದು ಪ್ರವಾದಿಗಳ(ಸ) ಅನುಯಾಯಿಗಳಿಗೆ ಕೆಲವೇ ದಿನಗಳಲ್ಲಿ ಅನುಭವಕ್ಕೆ ಬಂತು. ನಿಜವಾಗಿಯೂ ಮಕ್ಕಾ ವಿಜಯಕ್ಕೆ ದಾರಿ ಮಾಡಿಕೊಟ್ಟದ್ದೇ ಈ ಹುದೈಬಿಯಾ ಸಂಧಿಯಾಗಿತ್ತು.

ಇಲ್ಲಿ ಉಮರುಲ್ ಫಾರೂಕ್‌ರ(ರ) ರೋಷಾವೇಶದಿಂದ ಕೂಡಿದ ಪ್ರಶ್ನೆಗಳಿಗೆ ಪ್ರವಾದಿವರ್ಯರು(ಸ) ವಹಿಸಿದ ಉದಾತ್ತವಾದ ಸಹನೆ, ಸಂಯಮವು ಎಲ್ಲ ತರದ ನಾಯಕರಿಗೂ ಮಾದರಿ ಯೋಗ್ಯವಾಗಿದೆ. ಆದರೆ ಹೆಚ್ಚಿನವರು ಇದನ್ನು ಅರಿಯುವುದಿಲ್ಲ.

❖ ❖ ❖

49. ಅಬೂಜಂದಲರ ಕಥೆ

ಅದು ಹಿಜಿರಾ 6ನೆಯ ವರ್ಷ. ಹುದೈಬಿಯಾದಲ್ಲಿ ಮುಸ್ಲಿಮರು ಹಾಗು ಮಕ್ಕಾದ ಶತ್ರುಗಳು ಪರಸ್ಪರ ಒಪ್ಪಂದದ ಮಾತುಕತೆಯಲ್ಲಿ ನಿರತರಾಗಿದ್ದಾರೆ. ಈ ಮಾತುಕತೆಯಲ್ಲಿ ಮುಸ್ಲಿಮರ ಪಾಳಯದ ನೇತೃತ್ವವನ್ನು ಪ್ರವಾದಿವರ್ಯರು(ಸ ವಹಿಸಿದ್ದರೆ ಶತ್ರುಗಳ ಪಾಳಯದ ನೇತೃತ್ವವನ್ನು ಸುಹೈಲ್ ಬಿನ್ ಅಮ್ರ್ ವಹಿಸಿದ್ದರು ಚರ್ಚೆಯ ಕೊನೆಯಲ್ಲಿ ಒಪ್ಪಂದದ ನಿಯಮಗಳು ಪೂರ್ಣಗೊಂಡಿತು ಪ್ರವಾದಿವರ್ಯರು(ಸ) ನಿರ್ದೇಶಿಸಿದಂತೆ ಅಲೀ ಬಿನ್ ಅಬೂತಾಲಿಬ್ ಬರೆಯುತ್ತಿದ್ದರು ಪ್ರತ್ಯಕ್ಷವಾಗಿ ಅದು ಮುಸ್ಲಿಮರಿಗೆ ಪ್ರತಿಕೂಲವಾಗಿತ್ತು. ಅದನ್ನು ಅಂಗೀಕರಿಸಲು ಅವರ ಮನಸ್ಸು ಒಪ್ಪುತ್ತಿರಲಿಲ್ಲ. ಅದರಲ್ಲೂ ವಿಶೇಷವಾಗಿ ನಾಲ್ಕು ಮತ್ತು 5ನೆಯ ಶರ್ತಗಳು ಒಪ್ಪಲು ತುಂಬಾ ಕಷ್ಟವಾಯಿತು. ''ಮುಂದಿನ ವರ್ಷ ಮಕ್ಕಾಗೆ ಬಂದು ಹಿಂದಿರುಗಿ ಹೋಗುವಾಗ ಅಲ್ಲಿರುವ ಮುಸ್ಲಿಮರನ್ನು ತಮ್ಮೊಂದಿಗೆ ಕರೆದೊಯ್ಯಬಾರದು. ಮುಸ್ಲಿಮರಲ್ಲಿ ಯಾರಾದರೂ ಮಕ್ಕಾಗೆ ಮರಳಿ ಹೋಗಲು ಬಯಸಿದರೆ ಅವರನ್ನು ತಡೆಯಬಾರದು. ಮುಸ್ಲಿಮರಲ್ಲಿ ಅಥವಾ ಮುಸ್ಲಿಮೇತರರಲ್ಲಿ ಯಾರಾದರೂ ಮಕ್ಕಾದಿಂದ ಮದೀನಕ್ಕೆ ಹೋದರೆ ಅವರನ್ನು ಮರಳಿ ಕಳಿಸಬೇಕು. ಆದರೆ ಮುಸ್ಲಿಮರಲ್ಲಿ ಯಾರಾದರೂ ಮಕ್ಕಾಗೆ ಬಂದರೆ ಅವರನ್ನು ಮರಳಿ ಕಳುಹಿಸಲಾಗದು.''

ಕರಾರು ಪತ್ರ ಬರೆಯುತ್ತಿರುವಂತೆ ಸುಹೈಲ್‌ರ ಪುತ್ರ ಅಬೂಜಂದಲ್ ಹೇಗೋ ಅಲ್ಲಿಗೆ ತಲುಪಿದರು. ಕಾಲ ಸರಪಳಿಯನ್ನು ಎಳೆಯುತ್ತಾ ಮುಸ್ಲಿಮರ ಮುಂದೆ ಬಂದು ಬಿದ್ದರು.

ನಿಜವಾಗಿ ಅವರು ಹಿಜ್‌ರಾಗಿಂತ ಮೊದಲೇ ಇಸ್ಲಾಮಿನಿಂದ ಆಕರ್ಷಿತರಾಗಿದ್ದರು. ಪ್ರವಾದಿವರ್ಯರ(ಸ) ವ್ಯಕ್ತಿತ್ವ ಹಾಗೂ ಪರಿಶುದ್ಧವಾದ ಜೀವನ ಶೈಲಿ ಬಾಲಕನಾದ ಅಬೂಜಂದಲ್‌ನನ್ನು ತೀವ್ರವಾಗಿ ಆಕರ್ಷಿಸಿತ್ತು. ಪ್ರವಾದಿವರ್ಯರ(ಸ) ಈ ಆಹ್ವಾನಗಳು ದೇವ ಮಾರ್ಗದೆಡೆಗೆ ಎಂಬುದರ ಕುರಿತು ಅವರಿಗೆ ಎಳ್ಳಷ್ಟೂ ಸಂಶಯವಿರಲಿಲ್ಲ. ಆದರೆ ಹಠಮಾರಿಯೂ ದಾರ್ಷ್ಟ್ಯತನದಿಂದ ಕೂಡಿದವನೂ ಆದ ತಂದೆ ಸುಹೈಲ್‌ಗೆ ಹೆದರಿ ಎಲ್ಲವನ್ನೂ ಮನದಲ್ಲಿ ಬಚ್ಚಿಟ್ಟುಕೊಂಡಿದ್ದರು.

ಪ್ರವಾದಿವರ್ಯರ(ಸ) ಹಾಗೂ ಅನುಚರರ ಹಿಜ್‌ರಾದ ಬಳಿಕ ಅಬೂಜಂದಲ್‌ರ ಮನಸ್ಸು ಆಂತರಿಕ ಸಂಘರ್ಷದಲ್ಲಿ ತೊಳಲಾಡಿತು. ಹೀಗಿರುವಾಗ ಬದ್ರ್ ಯುದ್ಧದ ಸನ್ನಾಹ ನಡೆಯುತ್ತಿತ್ತು. ಅಬೂ ಜಹಲನ ನೇತೃತ್ವದಲ್ಲಿ ಹೊರಟ ಮಕ್ಕಾ ನಿವಾಸಿಗಳ ಸೇನೆಯೊಂದಿಗೆ ಸೇರಿಕೊಂಡರು. ಬದ್ರ್‌ನ ರಣಾಂಗಣದಲ್ಲಿ ಮುಸ್ಲಿಮರು ಹಾಗೂ

ಶತ್ರುಗಳ ನಡುವೆ ತೀವ್ರ ಕದನ ನಡೆಯುತ್ತಿರುವಾಗ ಅಬೂ ಜಂದಲ್ ಮುಸ್ಲಿಮರ ಪಾಳಯವನ್ನು ಸೇರಿದರು. ಯುದ್ಧದಲ್ಲಿ ಕುರೈಶರು ದಯನೀಯ ಸೋಲು ಅನುಭವಿಸಿದರೂ ಅಬೂ ಜಂದಲ್ ಕುರೈಶರ ಸೆರೆಯಾದರು. ಆ ಮೂಲಕ ಅವರ ಕೈ ಕಾಲುಗಳು ಸಂಕೋಲೆಗಳಲ್ಲಿ ಬಂಧಿತವಾಯಿತು. ಮಕ್ಕಾದ ಸೆರೆಮನೆಯಲ್ಲಿ ಅವರನ್ನು ಹಾಕಲಾಯಿತು. ಕಬ್ಬಿಣದ ಸಂಕೋಲೆಗಳಲ್ಲಿ ಬಂಧಿತರಾದ ಅವರನ್ನು ಅವರ ತಂದೆ ಹಾಗೂ ಸಹಚರರು ಆಹಾರ ನೀಡದೆ ಸತಾಯಿಸಿದರು. ಚಾಟಿಯಿಂದ ಪ್ರಹಾರ ಮಾಡಿದರು. ಬೆಂಕಿಯಿಂದ ಕಾದ ಕಬ್ಬಿಣದ ಸಲಾಕೆಗಳಿಂದ ದೇಹಕ್ಕೆ ಚುಚ್ಚಿದರು. ನಿಂದನೆ ಅಪಹಾಸ್ಯಗಳ ಸುರಿಮಳೆಗರೆದರೂ ಅವರು ವಿಚಲಿತರಾಗದೆ ಸನ್ಮಾರ್ಗದಲ್ಲಿ ಬಂಡೆಯಂತೆ ಅಚಲರಾಗಿ ನಿಂತರು.

ಹೀಗೆ ಅಸಹನೀಯವಾದ ಯಾತನೆ, ದುಃಖ ನೋವು ಅನುಭವಿಸುತ್ತಿದ್ದ ಅಬೂ ಜಂದಲ್‌ಗೆ ಪ್ರವಾದಿವರ್ಯರು(ಸ) ಹಾಗೂ ಅವರ ಅನುಚರರು ಮಕ್ಕಾಗೆ ಆಗಮಿಸಿದ ವಿಚಾರ ತಿಳಿಯುತ್ತದೆ. ಸೆರೆಮನೆಯಿಂದ ತಪ್ಪಿಸಿಕೊಂಡ ಅಬೂ ಜಂದಲ್ ಹುದೈಬಿಯಾವನ್ನು ತಲುಪಿದರು. ಇಸ್ಲಾಮ್ ಸ್ವೀಕರಿಸಿದ ಕಾರಣಕ್ಕಾಗಿ ತನ್ನ ಮೇಲೆ ನಡೆದ ದೌರ್ಜನ್ಯ ಹಿಂಸೆಗಳನ್ನೆಲ್ಲಾ ವಿವರಿಸಿದರು. ಅವರ ಯಾತನೆಯ ಅನುಭವಗಳನ್ನು ಕೇಳಿ ಅಲ್ಲಿದ್ದವರ ಕಣ್ಣು ಮಂಜಾಯಿತು. ಕೊನೆಗೆ ಅವರು ಪ್ರವಾದಿವರ್ಯರೊಂದಿಗೆ(ಸ) ''ಪ್ರವಾದಿವರ್ಯರೇ ನನ್ನನ್ನು ಅವಿಶ್ವಾಸಿಗಳಿಂದ ಕಾಪಾಡಿ ತಮ್ಮೊಂದಿಗೆ ಸೇರಿಸಿಕೊಳ್ಳಿ'' ಎಂದು ವಿನಂತಿಸಿದರು.

ಈ ಮಾತುಗಳನ್ನು ಕುರೈಶರ ಪ್ರತಿನಿಧಿ ಸುಹೈಲ್ ಆಲಿಸುತ್ತಿದ್ದನು. ಆಗ ತನ್ನ ಪುತ್ರ ಅಬೂ ಜಂದಲ್‌ನ ಮೇಲಿನ ದ್ವೇಷ ಇಮ್ಮಡಿಯಾಯಿತು. ಸುಹೈಲ್ ಪ್ರವಾದಿವರ್ಯ ರೊಂದಿಗೆ(ಸ) ''ಕರಾರು ಪತ್ರದ ನಿಯಮದ ಪ್ರಕಾರ ಮೊದಲು ಪಾಲಿಸಬೇಕಾದ ವಿಚಾರ ವಿದು'' ಎಂದು ಹೇಳಿದ. ಒಪ್ಪಂದದ ಪ್ರಕಾರ ಪ್ರವಾದಿವರ್ಯರಿಗೆ(ಸ) ಅಬೂ ಜಂದಲ್‌ರನ್ನು ತಮ್ಮೊಂದಿಗೆ ಕರೆದೊಯ್ಯಲು ಅವಕಾಶವಿರಲಿಲ್ಲ. ಪ್ರವಾದಿವರ್ಯರು(ಸ) ಸಂದಿಗ್ಧ ಪರಿಸ್ಥಿತಿಯನ್ನು ಎದುರಿಸಿದರು. ಒಂದೆಡೆ ಕರಾರನ್ನು ಪಾಲಿಸಲೇಬೇಕಾದ ಅನಿವಾರ್ಯತೆ, ಮತ್ತೊಂದೆಡೆ ಅಸಹಾಯಕನಾಗಿ ದೌರ್ಜನ್ಯಕ್ಕೊಳಗಾದ ಮುಸಿಮ್ ಸಹೋದರನನ್ನು ಕಪಿ ಮುಷ್ಟಿಯಿಂದ ಪಾರುಗೊಳಿಸಬೇಕಾದ ಪರಿಸ್ಥಿತಿ. ಇವೆರಡರಲ್ಲಿ ಯಾವುದಾದರೊಂದನ್ನು ಆರಿಸಬೇಕಾದ ಕಠಿಣ ಪರಿಸ್ಥಿತಿಯು ನಿರ್ಮಾಣವಾಯಿತು. ಆಗಲೂ ಅಬೂ ಜಂದಲ್ ಅಸಹಾಯಕರಾಗಿ ದಯನೀಯತೆಯಿಂದ ''ನನ್ನನ್ನು ಅವಿಶ್ವಾಸಿಗಳಿಗೆ ಒಪ್ಪಿಸಬೇಡಿರಿ'' ಎಂದು ಅಂಗಲಾಚುತ್ತಿದ್ದರು. ಅದು ಎಂತಹವರ ಹೃದಯವನ್ನೂ ಕರಗಿಸುವಂತಿತ್ತು.

ಈ ರಂಗದ ದೃಕ್ಸಾಕ್ಷಿಗಳಾದ ಮುಸ್ಲಿಮರು ತೀವ್ರ ದುಃಖಿತರಾದರು. ಅವ ಮುಖ ಭಾವವೇ ನಲುಗಿತು. ಹೃದಯವು ಮಿಡಿಯಿತು. ಕಣ್ಣಾಲಿಗಳು ತುಂಬಿದವ ದುಃಖವನ್ನು ಅದುಮಿಡಲಾಗದೆ ಉಮರ್ ಖತ್ತಾಬ್‌ರು(ರ ಪ್ರವಾದಿವರ್ಯರೊಂದಿಗೆ(ಸ) ''ತಾವು ಅಲ್ಲಾಹನ ನೈಜ ಸಂದೇಶವಾಹಕನೆಂದಾದ ನಾವೇಕೆ ಈ ಅವಮಾನವನ್ನು ಸಹಿಸಬೇಕು?'' ಎಂದು ಕೇಳಿದರು.

ಕರಾರು ಪತ್ರದ ನಿಯಮಾನುಸಾರ ಅಬೂ ಜಂದಲ್‌ರನ್ನು ಕುರೈಶರಿಗೆ ಒಪ್ಪಿಸ ನಿರ್ವಾಹವಿಲ್ಲ. ಪ್ರವಾದಿವರ್ಯರು(ಸ) ಅದನ್ನು ಪಾಲಿಸಿದರು. ಈ ರೀತಿ ಅಬೂ ಜಂದಲ್ ಸತ್ವ ಪರೀಕ್ಷೆಗೊಳಗಾದರು. ಅವರ ವಿಶ್ವಾಸದಲ್ಲಿ ಅಲ್ಪವೇನಾದರೂ ದೌರ್ಬಲ್ಯವಿದ್ದಿದ್ದರೆ ಸತ್ಯ ಧರ್ಮದಿಂದ ವಿಮುಖರಾಗಬಹುದಿತ್ತು. ಇಲ ಪ್ರವಾದಿವರ್ಯರ(ಸ) ನ್ಯಾಯಪಾಲನೆ ಪ್ರಜ್ವಲಿಸಿತು. ಅವರಿಗೆ ಒಪ್ಪಂದ ಪತ್ರ ಬರೆದು ಇನ್ನೂ ಪೂರ್ತಿಯಾಗಿಲ್ಲ ಎಂದು ಹೇಳಿ ಜಾರಿಕೊಳ್ಳಬಹುದಿತ್ತು. ಆದರೆ ಅದು ಪ್ರವಾದಿವರ್ಯರಿಗೆ(ಸ) ಹೇಳಿಸಿದ್ದಲ್ಲ. ಕರಾರಿನ ನಿಯಮಗಳು ಸಾಂಕೇತಿಕವಾಗಿ ಮಾತ್ರ ರೂಪುಗೊಂಡಿದ್ದರೂ ಅದೇ ನೆಪ ಹೇಳಿ ಸಮರ್ಥಿಸಲು ಪ್ರವಾದಿವರ್ಯರ(ಸ) ಉದಾತ್ತ ಮೌಲ್ಯಗಳು ಅವಕಾಶ ನೀಡಲಿಲ್ಲ. ತೀವ್ರವಾದ ಮನೋ ದುಗುಡದೊಂದಿಗೆ ಅ ಕರಾರನ್ನು ಪಾಲಿಸಿದರು.

ಈ ನಿರ್ಧಾರದಿಂದ ಪ್ರವಾದಿವರ್ಯರ(ಸ) ಸಂಗಾತಿಗಳು ಕಠಿಣ ಸತ್ವ ಪರೀಕ್ಷೆಗೆ ಒಳಗಾದರು. ಅದನ್ನು ಪಾಲಿಸಲೇಬೇಕಾದ ಅನಿವಾರ್ಯತೆ. ಒಂದೆಡೆ ಅಬೂ ಜಂದಲ್‌ರ ದಯನೀಯ ಪರಿಸ್ಥಿತಿಯು ಕಣ್ಣೆದುರು ಕಾಣುತ್ತಿದ್ದರೂ ಪ್ರವಾದಿವರ್ಯರೊಂದಿಗೆ(ಸ) ಇದ್ದ ನಿಷ್ಕಳಂಕ ಅರ್ಪಣಾ ಮನೋಭಾವವು ಅವರನ್ನು ಚಾಚೂ ತಪ್ಪದೆ ಪಾಲಿಸುವಂತೆ ಮಾಡಿತು.

ಅಬೂ ಜಂದಲ್‌ರನ್ನು ಬೀಳ್ಕೊಡುತ್ತಿರುವಾಗ ಪ್ರವಾದಿವರ್ಯರು(ಸ) ಅವರಿಗೆ ಸಾಂತ್ವನ ನೀಡುತ್ತಾ ''ಸಹನೆ ವಹಿಸಿರಿ. ಎದೆಗುಂದದಿರಿ. ಅಲ್ಲಾಹನು ನಿಮಗೂ ನಿಮ್ಮಂತಿರುವ ಇನ್ನಿತರ ಮರ್ದಿತರಿಗೂ ಏನಾದರೂ ವಿಮೋಚನೆಯ ಮಾರ್ಗ ತೋರಿಸದಿರಲಾರ. ಈಗ ತಾನೇ ಕರಾರು ವ್ಯವಸ್ಥೆಗಳು ನಿಶ್ಚಯಿಸಿದ ಕಾರಣ ಅದನ್ನು ಪಾಲಿಸದೇ ನಿರ್ವಾಹವಿಲ್ಲ. ಅಬೂಜಂದಲ್ ಕಾಲಿನಲ್ಲಿದ್ದ ಸರಪಳಿಗಳನ್ನು ಎಳೆದುಕೊಂಡು ಹೋಗುತ್ತಿರುವುದನ್ನು ಪ್ರವಾದಿವರ್ಯರ(ಸ) ಸಂಗಾತಿಗಳು ಭಾರವಾದ ಹೃದಯ ಹಾಗೂ ತುಂಬಿದ ಕಣ್ಣಾಲಿಗಳೊಂದಿಗೆ ನೋಡಿದರು.

❖ ❖ ❖

50. ಪತ್ನಿಯ ಸಲಹೆ ಸ್ವೀಕರಿಸಿದ ಪ್ರವಾದಿ(ಸ)

ಪ್ರವಾದಿವರ್ಯರು(ಸ) ಹಾಗೂ ಮಕ್ಕಾದ ಕುರೈಶರ ನಡುವೆ ನಡೆದ ಹುದೈಬಿಯಾ ಒಪ್ಪಂದದಿಂದ ಮುಸ್ಲಿಮರಲ್ಲಿ ತೀವ್ರ ನಿರಾಶೆ ಕಾಡಿತ್ತು. ಅದಕ್ಕೆ ಪ್ರಮುಖ ಕಾರಣ ಈ ಒಪ್ಪಂದದ ಶರತ್ತುಗಳಲ್ಲಿ ಮುಸ್ಲಿಮರಿಗೆ ಪ್ರತಿಕೂಲ ಎಂಬ ಭಾವನೆಯಾಗಿತ್ತು. ಸಂದೇಶವಾಹಕರ ನಿರ್ಧಾರದಲ್ಲಿ ನಮಗೆ ಅರ್ಥವಾಗದ ಯಾವುದಾದರೂ ಯುಕ್ತಿ ಅಡಗಿರಬಹುದೆಂಬ ನಂಬಿಕೆ ಅವರಿಗಿದ್ದರೂ ಹಠಾತ್ತನೆ ಉಂಟಾದ ಮನೋದುಗುಡವನ್ನು ಅವರಿಗೆ ಅದುಮಿಡಲಾಗಲಿಲ್ಲ.

ಎರಡೂ ವಿಭಾಗಗಳೂ ಒಪ್ಪಂದಕ್ಕೆ ಸಹಿ ಹಾಕುವುದರೊಂದಿಗೆ ಉಮ್ರಾದಿಂದ ವಿರಮಿಸುವಂತೆ ಅನುಯಾಯಿಗಳಿಗೆ ಪ್ರವಾದಿವರ್ಯರು(ಸ) ಆದೇಶಿಸಿದರು. ಅದರ ಸಲುವಾಗಿ ಬಲಿ ಕರ್ಮ ನಿರ್ವಹಿಸಲು, ತಲೆ ಬೋಳಿಸಲು ಆದೇಶಿಸಿದರು. ತೀವ್ರ ದುಃಖಿತರಾದ ಮುಸ್ಲಿಮರು ಅಳತೊಡಗಿದರು. ಇದರಿಂದ ಕಳವಳಗೊಂಡ ಪ್ರವಾದಿ ವರ್ಯರು(ಸ) ತನ್ನ ಸಹಧರ್ಮಿಣಿ ಉಮ್ಮು ಸಲಮರೊಂದಿಗೆ ಮನೋದುಗುಡವನ್ನು ಹಂಚಿಕೊಂಡರು. ಅದಕ್ಕೆ ಉಮ್ಮು ಸಲಮರು ಒಂದು ಪರಿಹಾರ ಸೂಚಿಸಿದರು. ''ಪ್ರವಾದಿವರ್ಯರೇ ತಾವು ತಮ್ಮ ಒಂಟೆಯನ್ನು ಬಲಿ ನೀಡಿರಿ ಹಾಗೂ ತಲೆ ಕೂದಲನ್ನು ಕತ್ತರಿಸಿರಿ. ಆಗ ಉಳಿದವರೆಲ್ಲರೂ ಅದನ್ನು ಅನುಸರಿಸುವರು.''

ಪ್ರವಾದಿವರ್ಯರು(ಸ) ಉಮ್ಮು ಸಲಮರ ಮಾತಿನಂತೆ ನಡೆದರು. ಅದರೊಂದಿಗೆ ಅವರ ಅನುಯಾಯಿಗಳೂ ಅದನ್ನು ಅನುಸರಿಸಿದರು. ಉತ್ತಮ ಸಲಹೆಯನ್ನು ಯಾರು ನೀಡಿದರೂ ಅದನ್ನು ಜಾರಿಗೆ ತರಲು ಅವರು ಸ್ವಲ್ಪವೂ ಹಿಂದೆ ಮುಂದೆ ನೋಡುತ್ತಿರಲಿಲ್ಲ. ಸುಪ್ರಧಾನವಾದ ಆರಾಧನಾ ವಿಚಾರಗಳಲ್ಲೂ ಪ್ರವಾದಿವರ್ಯರು(ಸ) ಸಹಧರ್ಮಿಣಿಯ ಸಲಹೆಗಳನ್ನು ಸ್ವೀಕರಿಸುತ್ತಿದ್ದರು.

❖ ❖ ❖

51. ಅಬೂ ಬಸೀರ್‌ರ ದುಃಖ

ಅಬೂ ಬಸೀರ್ ಹೇಗೋ ಬಂಧನದಿಂದ ಬಿಡುಗಡೆಗೊಂಡರು. ಶತ್ರುಗಳ ತೀವ್ರ ದೌರ್ಜನ್ಯಗಳಿಂದ ಅವರು ಜರ್ಝರಿತರಾಗಿದ್ದರು. ಹೀಗಿದ್ದೂ ಅದನ್ನು ಲೆಕ್ಕಿಸದೆ ಅವರು ಮದೀನಕ್ಕೆ ಕಾಲ್ನಡಿಗೆಯಲ್ಲಿ ಪ್ರಯಾಣ ಆರಂಭಿಸಿದರು. ಪ್ರವಾದಿವರ್ಯರು(ಸ) ಹಾಗೂ ಅವರ ಸಂಗಾತಿಗಳನ್ನು ಸೇರಬೇಕೆಂಬ ಅವರ ಅದಮ್ಯವಾದ ಬಯಕೆಯು

ಅವರನ್ನು ಈ ಹಾದಿಯಲ್ಲಿ ಮುನ್ನಡೆಯಲು ಪ್ರೇರೇಪಿಸಿತ್ತು. ಏಳು ದಿನಗಳ ನಿರಂತರ ಪ್ರಯಾಣದ ಬಳಿಕ ಅವರು ಪ್ರವಾದಿವರ್ಯರ(ಸ) ಸನ್ನಿಧಿಗೆ ತಲುಪಿದರು.

ಅಷ್ಟರಲ್ಲಿ ಮಕ್ಕಾದ ಕುರೈಶರೂ ಅಲ್ಲಿಗೆ ತಲುಪಿದರು. ಅವರು ಪ್ರವಾದಿವರ್ಯರನ್ನು(ಸ) ಭೇಟಿಯಾದರು. ತಾನು ಅನುಭವಿಸಿದ ದೌರ್ಜನ್ಯವನ್ನು ಅಬೂ ಬಸೀರ್ ಎಳೆ ಎಳೆಯಾಗಿ ಬಿಡಿಸಿ ಹೇಳಿದರು. ಅದನ್ನು ಕೇಳಿ ಅಲ್ಲಿದ್ದವರೆಲ್ಲಾ ಅತ್ತುಬಿಟ್ಟರು. ತಾನು ಅನುಭವಿಸಿದ ದೌರ್ಜನ್ಯಗಳಿಗೆಲ್ಲಾ ಕೊನೆಯಾಯಿತೆಂದು ಭಾವಿಸಿ ಅದೆಲ್ಲವನ್ನೂ ಅವರು ವಿವರಿಸಿದ್ದರು. ಶತ್ರುಗಳಿಂದ ಕ್ರೂರ ಹಿಂಸೆಗೊಳಗಾದ ತನ್ನನ್ನು ಮತ್ತೆ ಆ ಕ್ರೂರಿಗಳಿಗೆ ಒಪ್ಪಿಸುತ್ತಾರೆಂಬ ಸಂಕಲ್ಪವೂ ಆಗ ಅವರಲ್ಲಿರಲಿಲ್ಲ.

ಆದರೆ ಅಲ್ಲಿಗೆ ಆಗಮಿಸಿದ ಕುರೈಶರ ಪ್ರತಿನಿಧಿಗಳು ಪ್ರವಾದಿವರ್ಯರೊಂದಿಗೆ(ಸ) ಹುದೈಬಿಯಾ ಒಪ್ಪಂದದ ನಿಯಮಗಳನ್ನು ನೆನಪಿಸಿದರು. ಅಬೂ ಬಸೀರ್‌ರನ್ನು ತಮಗೆ ಮರಳಿ ಒಪ್ಪಿಸಬೇಕೆಂದು ಅವರು ಹೇಳಿದರು ಇದರಿಂದ ಅಬೂ ಬಸೀರ್ ತುಂಬಾ ಕಳವಳಗೊಂಡರು. ಅವರೋರ್ವ ನಿಷ್ಕಳಂಕ ಮನಸ್ಸಿನ ಪುಟ್ಟ ಬಾಲಕನಂತೆ ''ಪ್ರವಾದಿ ವರ್ಯರೇ(ಸ) ಸತ್ಯವಿಶ್ವಾಸ ಸ್ವೀಕರಿಸಿದ್ದಕ್ಕಾಗಿ ನನ್ನನ್ನು ಅತಿ ಕ್ರೂರವಾಗಿ ಹಿಂಸಿಸಿದ ಈ ಕ್ರೂರಿಗಳ ವಶಕ್ಕೆ ನನ್ನನ್ನು ಮರಳಿ ಒಪ್ಪಿಸುವುದೇ?'' ಎಂದು ಕೇಳಿದರು.

''ಅಬೂ ಬಸೀರ್! ನಾವು ಅವರೊಂದಿಗೆ ಮಾಡಿದ ಕರಾರಿನ ಕುರಿತು ನಿಮಗೆ ತಿಳಿದಿದೆಯಲ್ಲವೇ? ಅದು ಉಲ್ಲಂಘಿಸಿದರೆ ವಂಚನೆ ಮಾಡಿದಂತಾಗುತ್ತದೆ. ವಚನ ಭಂಗವು ಮಹಾ ಪಾಪವೆಂದು ಇಸ್ಲಾಮ್ ನಮಗೆ ಕಲಿಸುತ್ತದೆ. ಆದ್ದರಿಂದ ನೀವು ಹೊರಡಿರಿ. ಅಲ್ಲಾಹನು ನಿಮಗೂ ನಿಮ್ಮ ಸಂಗಾತಿಗಳಿಗೂ ಸಾಂತ್ವನ ಹಾಗೂ ವಿಮೋಚನೆಯನ್ನು ಅನುಗ್ರಹಿಸಲಿ'' ಎಂದು ಪ್ರವಾದಿವರ್ಯರು(ಸ) ಹೇಳಿದರು.

ಅಬೂ ಬಸೀರ್‌ರು ಬಿಕ್ಕಿ ಬಿಕ್ಕಿ ಅಳುತ್ತಾ ''ತಾವು ಮತ್ತೆ ಅವರಿಗೆ ಒಪ್ಪಿಸುತ್ತೀರಾ?'' ಎಂದು ಕೇಳಿದರು.

ಪ್ರವಾದಿವರ್ಯರು(ಸ) ಅವರನ್ನು ಸಮಾಧಾನ ಪಡಿಸುತ್ತಾ, ''ಹೋಗಿರಿ. ಅಬೂ ಬಸೀರ್ ಅಲ್ಲಾಹನು ನಿಮ್ಮನ್ನು ಕಾಪಾಡದೆ ಇರಲಾರ'' ಎಂದು ಹೇಳಿದರು. ಪ್ರವಾದಿವರ್ಯರು(ಸ) ತುಂಬಿದ ಕಣ್ಣುಗಳೊಂದಿಗೆ ದೀರ್ಘವಾದ ನಿಟ್ಟುಸಿರೊಂದು ಬಿಟ್ಟು ಅವರನ್ನು ಬೀಳ್ಕೊಟ್ಟರು.

❖ ❖ ❖

52. ಒಪ್ಪಂದ ತಿದ್ದಿದ ಯುವತಿ

ಉಮ್ಮು ಕುಲ್ಸೂಮ್ ಉಮವಿ ಗೋತ್ರದಲ್ಲಿ ಹುಟ್ಟಿದವರಾಗಿದ್ದರು. ಅವರು ಉಖ್‌ಬಾನ ಪ್ರಿಯ ಪುತ್ರಿಯಾಗಿದ್ದರೆ, ವಲೀದ್‌ನ ಸಹೋದರಿಯಾಗಿದ್ದರು. ಉಮವಿ ಗೋತ್ರಜರು ಪ್ರವಾದಿವರ್ಯರ(ಸ) ಕಠಿಣ ಶತ್ರುಗಳಾಗಿದ್ದರು. ಅವರು ಪ್ರವಾದಿವರ್ಯರ(ಸ) ತಲೆ ಉರುಳಿಸಲು ಅನೇಕ ಬಾರಿ ಪ್ರಯತ್ನಿಸಿ ವಿಫಲರಾಗಿದ್ದರು. ಕೊನೆಗೆ ಪ್ರವಾದಿ(ಸ) ಮತ್ತವರ ಸಂಗಾತಿಗಳು ಮಕ್ಕಾ ತೊರೆದು ಮದೀನಕ್ಕೆ ಹಿಜ್‌ರಾ ಹೊರಟರು. ಆದರೂ ಅವರ ದ್ವೇಷ ತಣಿದಿರಲಿಲ್ಲ. ಅವರು ಅಲ್ಲಿಯೂ ಹೋರಾಟ ನಡೆಸಿ ಸೋಲಿಸಲು ಸಾಕಷ್ಟು ಶ್ರಮಿಸಿದರು.

ಉಮ್ಮು ಕುಲ್ಸೂಮ್ ಅತ್ಯಂತ ಸುಂದರಿ ತರುಣಿಯಾಗಿದ್ದರು. ನೋಡುಗರನ್ನು ಆಕರ್ಷಿಸುವಂತಹ ಸೌಂದರ್ಯ ಅವರಲ್ಲಿತ್ತು. ಅವರು ಹುಟ್ಟಿದ್ದೂ ಬೆಳೆದದ್ದೂ ಸುಖದ ಸುಪ್ಪತ್ತಿಗೆಯಲ್ಲಿ. ಯಾವುದಕ್ಕೂ ಕೊರತೆಯಿಲ್ಲದೆ ಬೆಳೆದ ಅವರನ್ನೂ ಇಸ್ಲಾಮ್ ಆಕರ್ಷಿಸಿತು. ಸತ್ಯವಿಶ್ವಾಸವು ಅವರ ಮನಸ್ಸಿನ ಮೇಲೆ ಅಗಾಧವಾದ ಪ್ರಭಾವ ಬೀರಿತ್ತು. ಅದು ಮನದಲ್ಲಿ ಪ್ರಜ್ವಲಿಸಿತು. ಆದರೆ ತನ್ನ ಇಸ್ಲಾಮ್ ಸ್ವೀಕಾರವನ್ನು ಅವರು ಬಹಿರಂಗ ಪಡಿಸಲಿಲ್ಲ. ಅವರು ಬಹಳ ರಹಸ್ಯವಾಗಿ ಇಸ್ಲಾಮಿನ ಅನುಯಾಯಿಯಾದರು. ಜೊತೆಗೆ ತನ್‌ಈಮ್ ತಲೆಮಾರಿನ ಕುಟುಂಬದಲ್ಲಿ ಜೀವಿಸಿ ತನ್ನ ವಿಶ್ವಾಸ ಮತ್ತು ದೌತ್ಯವನ್ನು ಸಂರಕ್ಷಿಸಲು ಸಾಧ್ಯವಿಲ್ಲವೆಂಬುದನ್ನು ಮನಗಂಡರು. ಅದಕ್ಕಾಗಿ ಮದೀನಾದಲ್ಲಿರುವ ಪ್ರವಾದಿವರ್ಯರ(ಸ) ಸನ್ನಿಧಿಗೆ ತೆರಳಲು ಅವರ ಮನಸ್ಸು ಹಾತೊರೆಯುತ್ತಿತ್ತು.

ಆದರೆ ಅದು ಅಷ್ಟೊಂದು ಸುಲಭವಲ್ಲ ಎಂಬುದು ಅವರಿಗೆ ತಿಳಿದಿತ್ತು. ಯಾಕೆಂದರೆ ಅಲ್ಲಿಂದ ಪ್ರವಾದಿವರ್ಯರ(ಸ) ಸನ್ನಿಧಿಗೆ ತೆರಳಲು 600 ಕಿ.ಮೀ. ಅಂತರವಿತ್ತು. ಸೌಂದರ್ಯವತಿಯಾದ ಅವಿವಾಹಿತ ಯುವತಿ ಏಕಾಂಗಿಯಾಗಿ ಇಷ್ಟೊಂದು ದೂರದ ಪ್ರಯಾಣ ಬೆಳೆಸುವುದು ಊಹನಾತೀತವಾಗಿತ್ತು. ಅಲ್ಲದೆ ಬಿಸಿಲ ಧಗೆಯಿಂದ ಕುದಿಯುತ್ತಿರುವ ಮರುಭೂಮಿಯಲ್ಲಿ ನಡೆಯುವುದೇ? ಸೂರ್ಯೋದಯವಾದ ಕೂಡಲೇ ಮರುಭೂಮಿ ಸುಡತೊಡಗುವುದು. ಅದು ಮಧ್ಯಾಹ್ನವಾಗುವಾಗ ಬೆಂಕಿಯ ಉಂಡೆಗಳಂತಾಗುವುದು. ಸಾಲದಕ್ಕೆ ನಡುನಡುವೆ ಬೀಸುವ ಬಿಸಿಗಾಳಿ ದೃಢಕಾಯದವರನ್ನೂ ಕೂಡಾ ಅದು ಏದುಸಿರು ಬಿಡುವಂತೆ ಮಾಡುವುದು. ಇನ್ನು ಶ್ರೀಮಂತರ ಮನೆಯಲ್ಲಿ ಬೆಳೆದ ಕೋಮಲಚರ್ಮದ ಯುವತಿಯೊಬ್ಬಳು ಈ ಬಿಸಿಲ ಝಳಕ್ಕೆ ಪ್ರಯಾಣಿಸುವುದೇ?

ಆದರೂ ಉಮ್ಮು ಕುಲ್ಸೂಮ್ ಈ ಸಾಹಸೀ ಯಾತ್ರೆಗೆ ಸಿದ್ಧರಾದರು. ತನ್ನ ಮ ಮಂದಿ, ಆಪ್ತರಾರೂ ಅರಿಯದಂತೆ ಮನೆಯಿಂದ ಹೊರಟೇ ಬಿಟ್ಟರು. ಮದೀನ ತಲುಪಬೇಕಾದ ಅತ್ಯಾಗ್ರಹದ ಮುಂದೆ ಉಳಿದೆಲ್ಲವೂ ಅವರಿಗೆ ತೃಣ ಸಮಾನವಾಗಿತ್ತು ಇಸ್ಲಾಮೀ ಸಹೋದರರ ತಂಡವನ್ನು ಸೇರುವ ತವಕದಿಂದ ಉಳಿದೆಲ್ಲವನ್ನೂ ಅವರು ನಿರ್ಲಕ್ಷಿಸಿದರು.

ಯಾರೂ ಸಹಾಯಕರಿಲ್ಲದಾಗ ಅಲ್ಲಾಹನು ಸಹಾಯ ಮಾಡುತ್ತಾನೆ ಎಂಬ ವಚನವು ಉಮ್ಮು ಕುಲ್ಸೂಮ್‌ರ ಜೀವನದಲ್ಲಿ ಯಥಾರ್ಥವಾಗ ತೊಡಗಿತ್ತು. ಅದರಂತೆ ನಂಬಿಗಸ್ತರೂ ಸಚ್ಚಾರಿತ್ರ್ಯವಂತರೂ ಆದ ಓರ್ವ ಸಹಪ್ರಯಾಣಿಕರು ಅವರಿಗೆ ದೊರೆತರು. ಅವರು ಖುದಾಅ ಗೋತ್ರದವರಾಗಿದ್ದರು. ಆದರೆ ಮದೀನಾದಲ್ಲಿ ಅವರನ್ನು ಹುದೈಬಿಯಾ ಒಪ್ಪಂದದ ನಿಯಮಗಳು ಸ್ವಾಗತಕ್ಕಾಗಿ ಕಾದು ಕುಳಿತಿತ್ತು. ಪ್ರವಾದಿವರ್ಯರು(ಸ) ಈ ಒಪ್ಪಂದದಂತೆ ಮಕ್ಕಾದಿಂದ ಇಸ್ಲಾಮ್ ಸ್ವೀಕರಿಸಲು ಬಂದ ಸತ್ಯವಿಶ್ವಾಸಿಗಳನ್ನು ಮಕ್ಕಾಗೆ ಹಿಂದಿರುಗಿ ಕಳುಹಿಸುತ್ತಿದ್ದರು. ಉಮ್ಮು ಕುಲ್ಸೂಮ್‌ರು ಪ್ರವಾದಿವರ್ಯರ(ಸ) ಸನ್ನಿಧಿಯಲ್ಲಿ ತನ್ನ ಜೀವನಾನುಭವಗಳನ್ನು ವಿವರಿಸುವಾಗ ಪ್ರವಾದಿವರ್ಯರ(ಸ) ಮುಖದಲ್ಲಿ ದುಃಖದ ಛಾಯೆ ಕಂಡುಬಂತು. ಮಕ್ಕಾದಿಂದ ಬಹಳ ಶುಭ ನಿರೀಕ್ಷೆಯಿಟ್ಟು ತನ್ನನ್ನು ಅರಸಿಕೊಂಡು ಬಂದಿದ್ದ ಯುವತಿಯ ಮಾತು ಮುಗಿದ ಕೂಡಲೇ ಪ್ರವಾದಿವರ್ಯರು(ಸ) ಆತಂಕಿತರಾಗಿ ಈ ರೀತಿ ಪ್ರತಿಕ್ರಿಯಿಸಿದರು, ''ನಾನು ಈಗ ಅಸಹಾಯಕನಾಗಿದ್ದೇನೆ. ಮಕ್ಕಾದ ಅವಿಶ್ವಾಸಿ ಗಳೊಂದಿಗೆ ನಡೆಸಿದ ಒಪ್ಪಂದದಂತೆ ಅಲ್ಲಿಂದ ಸತ್ಯವಿಶ್ವಾಸ ಸ್ವೀಕರಿಸಿ ಬಂದವರನ್ನು ಅಲ್ಲಿಗೇ ಮರಳಿ ಕಳುಹಿಸಲು ಬಾಧ್ಯಸ್ತನಾಗಿದ್ದೇನೆ. ಒಪ್ಪಂದ ಮುರಿಯುವುದು ಸರಿಯಲ್ಲ ಅಲ್ಲವೇ? ಅಬೂ ಜಂದಲ್, ಅಬೂ ಬಸೀರ್ ಮುಂತಾದವರ ಕೆಲವು ಘಟನೆಗಳನ್ನು ವಿವರಿಸಿದರು. ಪ್ರವಾದಿವರ್ಯರು(ಸ) ತೀರಾ ಕಳವಳಗೊಂಡಿದ್ದರು. ಅವರ ಕಣ್ಣಾಲಿಗಳು ತುಂಬಿತ್ತು.

ಉಮ್ಮು ಕುಲ್ಸೂಮ್ ಬೆದರಿದ ಹರಿಣಿಯಂತಾದರು. ಅವರ ಮನಸ್ಸು ನಲುಗಿತು. ಕೈ ಕಾಲುಗಳು ನಡುಗಿತು. ರಾಕ್ಷಸರಿಂದ ತಪ್ಪಿಸಿಕೊಂಡು ಕರುಣೆಯನ್ನು ಆಗ್ರಹಿಸಿ ಸಂಕಷ್ಟಗಳನ್ನು ಸಹಿಸಿ ಬಂದ ನನ್ನನ್ನು ಮತ್ತೆ ಆ ದುರುಳರಿಗೆ ಒಪ್ಪಿಸುವುದೇ? ಅಯ್ಯೋ! ಅದು ಅವರಿಂದ ಊಹಿಸಲೂ ಅಸಾಧ್ಯವಾಗಿತ್ತು. ಅವರ ಕಣ್ಣುಗಳು ಕತ್ತಲೆಯಾಯಿತು. ಆದರೂ ಅಲ್ಲಾಹನು ತನ್ನನ್ನು ಕಾಪಾಡುವನೆಂದು ಅವರ ಮನಸ್ಸು ಜ್ಞಾಪಿಸುತ್ತಿತ್ತು. ಅವರು ಪ್ರವಾದಿವರ್ಯರೊಂದಿಗೆ(ಸ) ''ಪ್ರವಾದಿವರ್ಯರೇ? ದೃಢಕಾಯರಾದ ಪುರುಷರೂ ಅಬಲೆಯರಾದ ನಮ್ಮಂತಹ ಮಹಿಳೆಯರ ಸ್ಥಿತಿಯೂ ಒಂದೇ ರೀತಿ ಅಲ್ಲ ಅಲ್ಲವೇ, ಪುರುಷರಿಗೆ ಅವರ ಪ್ರಾಣ ಮಾತ್ರ ಹರಣವಾಗಬಲ್ಲುದು.

ದರೆ ಮಹಿಳೆಯರ ಸ್ಥಿತಿ ಹಾಗಲ್ಲವಲ್ಲ, ಆದ ಕಾರಣ ನಮ್ಮ ವಿಚಾರದಲ್ಲಿ ಅಲ್ಲಾಹನು ಂದು ಪರಿಹಾರ ನೀಡದೆ ಇರಲಾರ'' ಎಂದು ಹೇಳಿದರು.

ಉಮ್ಮು ಕುಲ್ಸೂಮ್‌ರ ನಿರೀಕ್ಷೆಯನ್ನು ಅಲ್ಲಾಹನು ಹುಸಿಗೊಳಿಸಲಿಲ್ಲ, ನೊಂದ ನಸ್ಸಿಗೆ ಅಲ್ಲಾಹನು ಸಾಂತ್ವನ ನೀಡಿದನು. ಮಿಡಿಯುತ್ತಿದ್ದ ಪ್ರವಾದಿವರ್ಯರ(ಸ) ೃದಯ ಶಾಂತವಾಯಿತು. ಅಲ್ಲಾಹನು ಅವರೊಂದಿಗೆ "ಸತ್ಯವಿಶ್ವಾಸಿಗಳೇ, ಸತ್ಯ ಶ್ವಾಸಿನಿಯರು ವಲಸೆ ಮಾಡಿ ನಿಮ್ಮ ಬಳಿಗೆ ಬಂದರೆ(ಅವರು ಸತ್ಯವಿಶ್ವಾಸಿನಿಯೆಂಬ ರಿತು) ಪರೀಕ್ಷಿಸಿಕೊಳ್ಳಿ. ಅವರ ಸತ್ಯವಿಶ್ವಾಸದ ಕುರಿತು ಅಲ್ಲಾಹನು ಚೆನ್ನಾಗಿ ಬಲ್ಲನು. ವರು ಸತ್ಯವಿಶ್ವಾಸಿನಿಗಳೆಂದು ತಿಳಿದು ಬಂದಾಗ, ಅವರನ್ನು ಸತ್ಯನಿಷೇಧಿಗಳ ಕಡೆಗೆ ಂದಿಗೂ ಮರಳಿಸಬೇಡಿರಿ. ಅವರು ಸತ್ಯನಿಷೇಧಿಗಳ ಪಾಲಿಗೆ ಧರ್ಮಬದ್ಧರಲ್ಲ ುತ್ತು ಸತ್ಯನಿಷೇಧಿಗಳೂ ಅವರ ಪಾಲಿಗೆ ಧರ್ಮಬದ್ಧರಲ್ಲ." (ಅಲ್ ಮುಮ್ತಹಿನ:10)

❖ ❖ ❖

53. ಕಂದಮ್ಮಗಳಿಗಾಗಿ ಕಣ್ಣೀರು

ಒಂದು ಯುದ್ಧದಿಂದ ಮರಳಿಬಂದ ಪ್ರವಾದಿವರ್ಯರೊಂದಿಗೆ ನುಯಾಯಿಗಳು ''ಈ ಯುದ್ಧದಲ್ಲಿ ಹಲವು ಮಕ್ಕಳು ಕೊಲ್ಲಲ್ಪಟ್ಟಿದ್ದಾರೆ'' ಎಂದರು.

ಇದು ಪ್ರವಾದಿವರ್ಯರನ್ನು(ಸ) ದುಃಖಿತರನ್ನಾಗಿ ಮಾಡಿತು. ಅವರ ಹೃದಯವು ಕಂದಮ್ಮಗಳಿಗಾಗಿ ಮಿಡಿದವು. ಆಗ ಅವರ ಅನುಚರರು ಪ್ರವಾದಿವರ್ಯರನ್ನು(ಸ) ಾಂತ್ವನಿಸುತ್ತಾ ''ಕೊಲ್ಲಲ್ಪಟ್ಟವರು ನಮ್ಮವರ ಮಕ್ಕಳಲ್ಲ, ಶತ್ರುಗಳ ಮಕ್ಕಳಾಗಿದ್ದಾರೆ.'' ಂದು ನುಡಿದರು. ಆದರೆ ಇದು ಪ್ರವಾದಿವರ್ಯರಿಗೆ(ಸ) ಸಹ್ಯವಾಗಲಿಲ್ಲ, ಅವರು ುಕ್ಕಳೆಲ್ಲರೂ ಒಂದೇ ರೀತಿಯಲ್ಲವೇ? ಅವರೆಲ್ಲರೂ ನಿರಪರಾಧಿಗಳು. ಅವರು ಯಾವುದೇ ತಪ್ಪೆಸಗದವರು. ಆದರೂ ಅವರು ಕೊಲ್ಲಲ್ಪಟ್ಟರು. ಅಯ್ಯೋ! ಯಾವ ಯುದ್ಧದಲ್ಲಿಯೂ ಮಕ್ಕಳು ಅಪರಾಧಿಗಳಲ್ಲ, ಹಿರಿಯರು ಮಾಡಿದ ತಪ್ಪಿಗಾಗಿ ುಕ್ಕಳನ್ನು ಶಿಕ್ಷಿಸಬಾರದು. ಇನ್ನು ಮುಂದೆ ಯಾವ ಯುದ್ಧದಲ್ಲಿಯೂ ಮಕ್ಕಳನ್ನು ವಧಿಸಬಾರದು'' ಎಂದು ಆದೇಶಿಸಿದರು.

ಮುಂದೊಮ್ಮೆ ಯುದ್ಧರಂಗಕ್ಕೆ ಹೊರಡುತ್ತಿದ್ದ ಸೈನಿಕರಿಗೆ ಈ ರೀತಿ ಉಪದೇಶಿಸಿದರು. ''ನೀವು ಮಹಿಳೆಯರನ್ನು, ಮಕ್ಕಳನ್ನು, ವೃದ್ಧರನ್ನು ವಧಿಸಬಾರದು. ಟ್ಟಡಗಳನ್ನು ಧ್ವಂಸಗೊಳಿಸಬಾರದು. ಮರಗಿಡಗಳನ್ನು ಕಡಿಯಬಾರದು. ಅಲ್ಲಾಹನನ್ನು ಯಪಡಿರಿ.'' ❖

54. ವೈರಿಯಾಗಿ ಬಂದು ಮಿತ್ರನಾಗಿ ಹೊರಟ ಉಮೈರ್

ಬದ್ರ್ ಯುದ್ಧದಲ್ಲಿ ಉಂಟಾದ ಸೋಲು ಶತ್ರುಗಳನ್ನು ಕಂಗೆಡಿಸಿತ್ತು. ತಮ್ಮ ಪ್ರಮುಖ ನೇತಾರರ ದುರಂತ ಮರಣದಿಂದ ಅವರು ತೀವ್ರ ದುಃಖಿತರಾಗಿದ್ದರು. ಅವರಲ್ಲಿ ಪ್ರತೀಕಾರದ ಅಗ್ನಿಯು ಭುಗಿಲೆದ್ದಿತು. ಈ ಪ್ರತೀಕಾರ ತೀರಿಸಲು ಉಮೈರ್ ಬಿನ್ ವಹಬ್ ಹಾಗೂ ಸಫ್ವಾನ್ ಬಿನ್ ಉಮಯ್ಯ ಒಂದಾದರು. ಈರ್ವರೂ ಸೇರಿ ಪ್ರವಾದಿವರ್ಯರು(ಸ) ಮತ್ತು ಸಂಗಡಿಗರು ಮಕ್ಕಾದಿಂದ ಹಿಜ್‌ರಾಗೆ ಹೋಗುವುದಕ್ಕಿಂತ ಮುಂಚೆ ಅವರನ್ನು ತೀವ್ರವಾಗಿ ಹಿಂಸಿಸಿದ್ದರು.

ಬದ್ರ್‌ನಲ್ಲಿ ತಮಗಾದ ಅಪಾರ ನಾಶನಷ್ಟಗಳ ಕುರಿತು ಪರಸ್ಪರ ಮಾತನಾಡುತ್ತಿರುವಾಗ ಉಮೈರ್ ಈ ರೀತಿ ಹೇಳಿದರು, ''ನನಗೆ ಕೈ ತುಂಬಾ ಸಾಲವಿದ್ದು ಅದು ತೀರಿಸಬೇಕೆಂಬ ಭಯ. ಜೊತೆಗೆ ಮಕ್ಕಳು ಹೊಟ್ಟೆಗಿಲ್ಲದೆ ಸಾಯುವರೆಂಬ ಭಯ ನನಗಿಲ್ಲದಿರುತ್ತಿದ್ದರೆ, ನಾನು ಮದೀನಕ್ಕೆ ಹೋಗಿ ಆ ಮುಹಮ್ಮದರ(ಸ) ಕತೆ ಮುಗಿಸುತ್ತಿದ್ದೆ. ಮುಹಮ್ಮದರನ್ನು(ಸ) ನಾನು ಭೇಟಿಯಾಗಲು ಒಂದು ಕಾರಣ ಕೂಡಾ ಇದೆ. ನನ್ನ ಪುತ್ರನೋರ್ವ ಅವರ ಬಂಧನದಲ್ಲಿದ್ದಾನೆ.''

ಉಮೈರ್‌ರ ಮಾತು ಕೇಳಿದ ಸಫ್ವಾನ್ ಉತ್ಸಾಹ ಭರಿತನಾದ. ಆವೇಶದಿಂದ ಅವೆಲ್ಲವನ್ನೂ ಆಲಿಸಿದ ಬಳಿಕ ಆತನು ''ನಿಮ್ಮ ಸಾಲವನ್ನೆಲ್ಲಾ ನಾನು ತೀರಿಸುವೆ. ನಿಮ್ಮ ಮಕ್ಕಳ ಸಂರಕ್ಷಣೆಯ ಜವಾಬ್ದಾರಿ ನನ್ನದು. ನನ್ನ ಪ್ರಾಣ ಹಾಗೂ ಐಶ್ವರ್ಯವಿರುವ ವರೆಗೆ ನನ್ನ ಮಕ್ಕಳನ್ನು ಸಾಕಿದಂತೆ ನಿನ್ನ ಮಕ್ಕಳನ್ನು ನಾನು ಸಾಕುವೆ.''

ಈರ್ವರೂ ತಮ್ಮ ಈ ಮಾತುಕತೆಯನ್ನು ಅತ್ಯಂತ ರಹಸ್ಯವಾಗಿಡಲು ನಿರ್ಧರಿಸಿದರು. ಉಮೈರ್ ಕೂಡಲೇ ತನ್ನ ಖಡ್ಗಕ್ಕೆ ವಿಷವನ್ನು ಲೇಪಿಸಿ ಸಿದ್ಧ ಪಡಿಸಿದ. ಕಾಲಹರಣಗೊಳಿಸದೆ ತಕ್ಷಣ ಮದೀನಾದತ್ತ ಹೊರಟ.

ಪ್ರವಾದಿವರ್ಯರ(ಸ) ಮಸೀದಿಯ ಪಕ್ಕದಲ್ಲಿ ಸಂಭಾಷಣೆಯಲ್ಲಿ ನಿರತರಾಗಿದ್ದ ಉಮರ್ ಖತ್ತಾಬ್ ಹಾಗೂ ಸಂಗಡಿಗರ ಕಣ್ಣಿಗೆ ಉಮೈರ್ ಬಿದ್ದ. ಕೂಡಲೇ ಉಮರ್ ಖತ್ತಾಬ್‌ರು ''ಅಲ್ಲಾಹನ ಧರ್ಮದ ವೈರಿ ಉಮೈರ್ ಏನೋ ದುರುದ್ದೇಶದಿಂದ ಬಂದಿದ್ದಾನೆ. ಬದ್ರ್‌ನಲ್ಲಿ ಉಂಟಾದ ಸೋಲಿನ ಪ್ರತೀಕಾರಕ್ಕಾಗಿ ಖಡ್ಗದೊಂದಿಗೆ ಬಂದಿರುವನು'' ಎಂದು ಹೇಳಿದರು.

ಬಳಿಕ ಪ್ರವಾದಿವರ್ಯರಿಗೆ(ಸ) ಈ ಸುದ್ದಿ ಮುಟ್ಟಿಸಿದರು. ಆಗ ಪ್ರವಾದಿ(ಸ) ತನ್ನ

ಳಿಗೆ ಬರಲು ಉಮೈರ್‌ಗೆ ಅನುಮತಿ ನೀಡಿದರು. ಹಿಂದಿನಿಂದ ಖಡ್ಗವನ್ನೆತ್ತಿ ಹಿಡಿದು ಉಮರ್ ಖತ್ತಾಬ್‌ರು ಅವನನ್ನು ಪ್ರವಾದಿವರ್ಯರ(ಸ) ಬಳಿಗೆ ಕರೆ ತಂದರು. ಜೊತೆಗೆ ಪಕ್ಕದಲ್ಲಿರುವವರೊಂದಿಗೆ ಆತನ ಕುರಿತು ಹೆಚ್ಚು ಎಚ್ಚರದಿಂದಿರುವಂತೆ ಹೇಳಿದರು.

ಆದರೆ ಪ್ರವಾದಿವರ್ಯರಿಗೆ(ಸ) ತನ್ನ ಕುರಿತು ಯಾವುದೇ ಭಯವಿರಲಿಲ್ಲ. ಅದಕ್ಕಾಗಿ ಅವರು ಉಮೈರ್‌ರನ್ನು ಸ್ವತಂತ್ರವಾಗಿ ಬರಲು ಹೇಳಿದರು. ಬಳಿಕ ಉಮೈರ್‌ರೊಡನೆ ತನ್ನ ಪಕ್ಕದಲ್ಲಿ ಕುಳಿತು ಕೊಳ್ಳಲು ಸೂಚಿಸಿದರು. ಕುಶಲೋಪರಿ ವಿಚಾರಿಸಿದ ಬಳಿಕ ತಾವು ಬಂದಿರುವ ಉದ್ದೇಶವೇನು? ಎಂದು ಕೇಳಿದರು.

ನಾನು ನನ್ನ ಪುತ್ರನ ಬಂಧಮುಕ್ತಿಗಾಗಿ ಬಂದಿರುತ್ತೇನೆ ಎಂದು ಹೇಳಿ ತನ್ನ ನಿಗೂಢ ತಂತ್ರವನ್ನು ಅಡಗಿಸಲು ಪ್ರಯತ್ನಿಸಿದ. ಹಾಗಾದರೆ ಈ ಖಡ್ಗವೇತಕ್ಕೆ ಎಂದು ಪ್ರಶ್ನಿಸಿದರು.

''ಅದೋ ನಾನು ಅದನ್ನು ತೆಗೆದಿರಿಸಲು ಮರೆತಿದ್ದೆ'' ಎಂದು ಸುಳ್ಳು ಹೇಳಿದ.

''ನೀವು ಮತ್ತು ಸಫ್ವಾನ್‌ರ ನಡುವೆ ಒಂದು ಒಪ್ಪಂದವೇರ್ಪಟ್ಟ ಬಳಿಕ ನೀವು ವಿಷ ಲೇಪಿಸಿದ ಖಡ್ಗದೊಂದಿಗೆ ಇಲ್ಲಿಗೆ ಬಂದಿರಿ ಅಲ್ಲವೇ? ನಿಮ್ಮ ಸಾಲ ತೀರಿಸಿ ನಿಮ್ಮ ಮಕ್ಕಳ ಸಂರಕ್ಷಣೆಯ ಜವಾಬ್ದಾರಿಯನ್ನು ವಹಿಸಿ ಸಫ್‌ವಾನ್ ನಿಮ್ಮನ್ನು ಇಲ್ಲಿಗೆ ಕಳುಹಿಸಿದ ಅಲ್ಲವೇ?

ಪ್ರವಾದಿವರ್ಯರ(ಸ) ಮಾತಿನಿಂದ ಉಮೈರ್ ಬೆಚ್ಚಿ ಬಿದ್ದು ಸ್ಥಂಭೀಭೂತನಾದ. ಅತ್ಯಂತ ರಹಸ್ಯವಾಗಿ ನಮ್ಮ ನಡುವೆ ನಡೆದ ಸಂಭಾಷಣೆ ಇವರಿಗೆ ಹೇಗೆ ತಿಳಿಯಿತು ಎಂದು ವಿಸ್ಮಯಗೊಂಡನು. ಇವರಿಗೆ ಅಲ್ಲಾಹನೇ ಈ ವಿಚಾರವನ್ನು ತಿಳಿಸಿರಬಹುದು ಎಂಬುದು ಆತನಿಗೆ ವ್ಯಕ್ತವಾಯಿತು. ಆತ ಸ್ವಲ್ಪ ಸಮಯದ ವರೆಗೆ ಮೌನದಿಂದಿದ್ದು ಬಳಿಕ, ''ತಾವು ಅಲ್ಲಾಹನ ಸಂದೇಶವಾಹಕರಾಗಿದ್ದೀರಿ ಎಂದು ನಾನು ಸಾಕ್ಷ್ಯವಹಿಸುತ್ತೇನೆ. ತಮಗೆ ದೇವನಿಂದ ದಿವ್ಯ ಸಂದೇಶಗಳು ಲಭಿಸುತ್ತಿರುವುದನ್ನು ನಾವು ನಿರಾಕರಿಸುತ್ತಿದ್ದೆವು. ಈಗ ನನಗೆ ಖಚಿತವಾಯಿತು. ನಾನು ಮತ್ತು ಸಫ್‌ವಾನ್‌ರ ನಡುವೆ ನಡೆದ ಸಂಭಾಷಣೆಯನ್ನು ದೇವನಲ್ಲದೆ ನಿಮಗೆ ಇನ್ನಾರೂ ಹೇಳಲು ಸಾಧ್ಯವಿಲ್ಲ, ಆದ್ದರಿಂದ ಅಲ್ಲಾಹನಿಗೆ ಸರ್ವಸ್ತುತಿಗಳು. ಅವನು ನನಗೆ ಸನ್ಮಾರ್ಗವನ್ನು ದಯಪಾಲಿಸಿದನು. ಇದೋ ನಾನು ಇಸ್ಲಾಮ್ ಸ್ವೀಕರಿಸುತ್ತೇನೆ. ಉಮೈರ್‌ರ ಇಸ್ಲಾಮ್ ಸ್ವೀಕಾರವು ಪ್ರವಾದಿವರ್ಯರನ್ನು(ಸ) ಸಂತೋಷಗೊಳಿಸಿತು. ಜೀವನದ ಕೆಲವು ಮಾರ್ಗದರ್ಶನಗಳನ್ನು ನೀಡುವಂತೆ ಅನುಚರರಿಗೆ ಅವರು ಸೂಚಿಸಿದರು. ಉಮೈರ್

ತನಗೆ ಸಿದ್ಧಿಸಿದ ಸನ್ಮಾರ್ಗದ ಜ್ಯೋತಿಯನ್ನು ತನ್ನ ಸ್ನೇಹಿತರಿಗೆ ಪಸರಿಸಲು ಮಕ್ಕಾದೆಡೆಗೆ ಹೋಗಲು ತವಕ ಪಟ್ಟರು. ಪ್ರವಾದಿವರ್ಯರು(ಸ) ಅವರಿಗೆ ಅನುಮತಿ ನೀಡಿದರು.

ಅತ್ತ ಸಫ್ವಾನ್ ಉಮೈರ್‌ರ ಆಗಮನದ ನಿರೀಕ್ಷೆಯಲ್ಲಿದ್ದನು. ಪ್ರವಾದಿವರ್ಯರನ್ನು(ಸ) ವಧಿಸಿದ ವಾರ್ತೆ ಅರಿಯಲು ತವಕದಿಂದ ಸಿಕ್ಕವರೊಂದಿಗೆಲ್ಲಾ ಉಮೈರ್‌ನ ಕುರಿತು ವಿಚಾರಿಸ ತೊಡಗಿದ. ಪ್ರವಾದಿವರ್ಯರನ್ನು(ಸ) ವಧಿಸಲು ತೆರಳಿದ ಉಮೈರ್ ಅವರ ಆಪ್ತ ಅನುಯಾಯಿಯಾದ ವಿಚಾರ ಸಫ್ವಾನ್‌ಗೆ ತಿಳಿದಿರಲಿಲ್ಲ. ಸತ್ಯದ ಜ್ಯೋತಿಯನ್ನು ನಂದಿಸಲು ಹೊರಟವರು ಜ್ಯೋತಿಯನ್ನು ಬೆಳಗಿಸಿ ತರುವರೆಂದು ಸಫ್ವಾನ್ ಕನಸಿನಲ್ಲಿಯೂ ಊಹಿಸಿಕೊಂಡಿರಲಿಲ್ಲ. ಆದ್ದರಿಂದ ಉಮೈರ್‌ರ ಇಸ್ಲಾಮ್ ಸ್ವೀಕಾರದ ವಾರ್ತೆಯನ್ನು ಕೇಳಿ ಆತ ಕುಸಿದಿದ್ದ. ಕೋಪದಿಂದ ಕಿಡಿಕಿಡಿಯಾದ. ಇನ್ನು ಮುಂದೆ ಆತನ ಜೊತೆ ಮಾತನಾಡಲಾರೆ ಎಂದು ಪ್ರತಿಜ್ಞೆ ಮಾಡಿದ.

ಮಕ್ಕಾಗೆ ತಲುಪಿದ ಉಮೈರ್ ತಾನು ಆಸ್ವಾದಿಸಿದ ಧರ್ಮವನ್ನು ಸ್ವೀಕರಿಸುವಂತೆ ಇತರರನ್ನು ಪ್ರೇರೇಪಿಸತೊಡಗಿದರು. ಅಲ್ಲಿದ್ದವರು ಉಮೈರ್‌ರನ್ನು ವಿರೋಧಿಸತೊಡಗಿದರು. ಅವರನ್ನು ಸಾಧ್ಯವಾದಷ್ಟು ಹಿಂಸೆ, ದೌರ್ಜನ್ಯಕ್ಕೀಡು ಮಾಡತೊಡಗಿದರು. ತನ್ನ ಕಿರುಕುಳದಿಂದ ಮುಸ್ಲಿಮರು ಸಂಕಷ್ಟ ಅನುಭವಿಸಿದಂತೆ ವೈರಿಗಳ ಮರ್ದನವನ್ನು ಸಹನೆಯಿಂದ ಸ್ವೀಕರಿಸಿದರು. ಅವರ ಈ ತ್ಯಾಗ ಸಹನೆಯ ನಡೆಯು ಹಲವರನ್ನು ಇಸ್ಲಾಮಿನತ್ತ ಆಕರ್ಷಿಸುವಂತೆ ಮಾಡಲು ಸಹಾಯಕವಾಯಿತು.

❖ ❖ ❖

55. ಸಾಟಿಯಿಲ್ಲದ ಉದಾರತೆ

ಮದೀನವನ್ನು ಕೇಂದ್ರೀಕರಿಸಿಕೊಂಡು ಪ್ರವಾದಿವರ್ಯರು(ಸ) ಸ್ಥಾಪಿಸಿದ ಇಸ್ಲಾಮೀ ರಾಷ್ಟ್ರವು ದಿನೇ ದಿನೇ ಅಭಿವೃದ್ಧಿ ಹೊಂದುತ್ತಿತ್ತು. ಇದಕ್ಕೆ ಪ್ರಮುಖ ಕಾರಣ ಪರಿಸರ ವಾಸಿಗಳು ಗುಂಪು ಗುಂಪಾಗಿ ಇಸ್ಲಾಮ್ ಸ್ವೀಕರಿಸುತ್ತಿರುವುದಾಗಿತ್ತು. ಇದು ಹಾತಿಮ್ ತಾಯಿಯವರ ಪುತ್ರ ಅದಿಯ್ಯ್‌ನನ್ನು ಕಂಗೆಡಿಸಿತು. ತಾನು ವಾಸಿಸುವ ನಜ್‌ದ್ ಕೂಡಾ ಇಸ್ಲಾಮೀ ರಾಷ್ಟ್ರದ ಭಾಗವಾಗುವುದೋ ಎಂಬ ಆತಂಕ ಅವರನ್ನು ಕಾಡಿತು. ಅದಕ್ಕಾಗಿ ತನ್ನ ಕುಟುಂಬಸ್ಥರನ್ನೆಲ್ಲಾ ಕರೆದುಕೊಂಡು ನೆರೆಯ ರಾಷ್ಟ್ರ ಸಿರಿಯಾಕ್ಕೆ ಹೋದರು. ಆದರೆ ಹೋಗುವಾಗ ತನ್ನ ಸಹೋದರಿಯನ್ನು ಕರೆದುಕೊಂಡು ಹೋಗಲು ಮರೆತರು. ಹಾಗೆಯೇ ಅದಿಯ್ಯ್‌ರ ಸಹೋದರಿ ನಜ್‌ದ್‌ನಲ್ಲಿ

ಕಾಂಗಿಯಾದರು. ಇದರಿಂದ ಅದಿಯ್ಯ್‌ಗೆ ಅಸಹನೀಯವಾದ ದುಃಖವಾಯಿತು. ವರ ಸಹೋದರಿಯ ಪರಿಸ್ಥಿತಿಯನ್ನು ಅರಿತ ಪ್ರವಾದಿವರ್ಯರ(ಸ) ಅನುಚರರು ವರನ್ನು ಮದೀನಕ್ಕೆ ಕರೆ ತಂದರು. ಅವರು ಪ್ರವಾದಿವರ್ಯರ(ಸ) ಮುಂದೆ ತನ್ನ ಯನೀಯ ಸ್ಥಿತಿಯನ್ನು ವಿವರಿಸಿ ಅತ್ತರು. ''ಅಲ್ಲಾಹನ ಪ್ರವಾದಿಗಳೇ! ನಾನು ಂದೆ ಕಳಕೊಂಡು ಏಕ ಸಹೋದರನ ಆಶ್ರಯದಲ್ಲಿ ಬದುಕುತ್ತಿದ್ದೆ. ಅವನು ಕೂಡಾ ನ್ನ ಕುಟುಂಬಸ್ಥರೊಂದಿಗೆ ಊರು ತೊರೆದು ಹೋದ. ಆದ್ದರಿಂದ ತಾವು ನನನ್ನ ಮೇಲೆ ಕರುಣೆ ತೋರಿಸಬೇಕು'' ಎಂದು ಬಿನ್ನವಿಸಿದರು.

''ಯಾರು ನಿನ್ನ ಆ ಸಹೋದರ'' ಪ್ರವಾದಿವರ್ಯರು(ಸ) ಕೇಳಿದರು.

''ಹಾತಿಮ್ ತಾಯಿಯ ಪುತ್ರ ಅದಿಯ್ಯ್'' ಎಂದುತ್ತರಿಸಿದರು.

ಅವರನ್ನು ಸ್ವಲ್ಪ ಹೊತ್ತು ಆಶ್ಚರ್ಯದಿಂದ ನೋಡಿದ ಪ್ರವಾದಿವರ್ಯರು(ಸ) ಅಲ್ಲಾಹನ ಹಾಗೂ ಅವನ ಸಂದೇಶವಾಹಕನ ಶತ್ರು. ಸತ್ಯದ ಹಾದಿಗೆ ಹೆದರಿ ಲಾಯನ ಮಾಡಿದವನು'' ಎಂದರು.

ಇದು ಕೇಳಿದ ಅದಿಯ್ಯ್‌ರ ಸಹೋದರಿ ಇನ್ನು ಪ್ರವಾದಿವರ್ಯರಿಂದ(ಸ) ರವು ಸಿಗಲು ಸಾಧ್ಯವಿಲ್ಲವೆಂದು ಬಗೆದರು. ಕೂಡಲೇ ಪ್ರವಾದಿವರ್ಯರು(ಸ) ಕೆಯನ್ನು ಸಂತೈಸುತ್ತಾ ''ನಿಮ್ಮ ಕುರಿತು ನನಗೆ ಅನುಕಂಪವಿದೆ, ನನ್ನಿಂದ ಈಗ ಮಗೆ ಏನು ಸಹಾಯ ಬೇಕು'' ಎಂದು ಕೇಳಿದರು.

''ನನ್ನ ಸಹೋದರ ಹಾಗೂ ಕುಟುಂಬವು ಸಿರಿಯಾದಲ್ಲಿ ವಾಸವಾಗಿದೆ. ನನ್ನನ್ನು ವರ ಬಳಿಗೆ ತಲುಪಿಸಿ ಕರುಣೆ ತೋರಿರಿ'' ಎಂದು ದೈನ್ಯತೆಯಿಂದ ನಿವೇದಿಸಿದರು.

''ಸರಿ. ನನ್ನದೇನೂ ಅಭ್ಯಂತರವಿಲ್ಲ, ಆದರೆ ದುಡುಕಬಾರದು. ನಿಮ್ಮನ್ನು ಅಲ್ಲಿಗೆ ರಕ್ಷಿತವಾಗಿ ತಲುಪಿಸಬಹುದೆಂಬ ಖಾತ್ರಿಯಿದ್ದವರು ಯಾರಾದರೂ ನಿಮಗೆ ಕಂಡು ಂದರೆ ತಿಳಿಸಿರಿ. ಆ ತನಕ ನಿಮ್ಮ ಜವಾಬ್ದಾರಿ ನಮಗಿರಲಿ'' ಎಂದು ಪ್ರವಾದಿವರ್ಯರು(ಸ) ಹೇಳಿದರು.

ಕೆಲ ದಿವಸಗಳ ಬಳಿಕ ತನಗೆ ಪರಿಚಯವಿರುವ ಕೆಲವರನ್ನು ಹೊಂದಿರುವ ವ್ಯಾಪಾರೀ ತಂಡವೊಂದು ಅಲ್ಲಿಗೆ ಆಗಮಿಸಿತು. ಆ ಕೂಡಲೇ ಆ ಯುವತಿ ಪ್ರವಾದಿವರ್ಯರಿಗೆ(ಸ) ಸುದ್ದಿ ಮುಟ್ಟಿಸಿದರು. ಕೂಡಲೇ ಪ್ರವಾದಿವರ್ಯರು(ಸ) ಆ ವ್ಯಾಪಾರಿ ತಂಡದ ಪ್ರಾಮಾಣಿಕತೆಯ ಕುರಿತು ವಿವರ ಸಂಗ್ರಹಿಸಿದರು. ಬಳಿಕ ಕೆಯನ್ನು ಅವರೊಂದಿಗೆ ಕಳುಹಿಸಿದರು. ಪ್ರಯಾಣದ ವೆಚ್ಚ, ವಾಹನ, ವಸ್ತ್ರಗಳನ್ನೂ

ನೀಡಿ ಗೌರವದಿಂದ ಕಳುಹಿಸಿದರು. ತನ್ನ ವೈರಿಯ ಸಹೋದರಿಯ ಉದಾರತೆಯಿಂದ ಬೀಳ್ಕೊಟ್ಟರು. ಪ್ರವಾದಿವರ್ಯರ(ಸ) ಉದಾರತೆಯ ಜನಸಾಮಾನ್ಯರ ಊಹೆಗೂ ನಿಲುಕದಷ್ಟು ವಿಶಾಲವಾಗಿತ್ತು. ಅದು ಅವರ ಎ ಲೆಕ್ಕಾಚಾರಗಳನ್ನು ಮೀರುವಂತಹದ್ದಾಗಿತ್ತು.

❖ ❖ ❖

56. ಉಪದೇಶಗಳು ಸಾಕಾರವಾದಾಗ

''ಕಾಲ ಹರಣಗೊಳಿಸದೆ ಕೂಡಲೇ ಹೊರಡು. ನೀನು ಈ ತನಕ ಆ ಪ್ರವಾದಿ ಕುರಿತು ತಪ್ಪು ತಿಳಿದುಕೊಂಡಿರುವೆ. ಅವರು ದೇವನ ಸಂದೇಶವಾಹಕರೆಂದಾದರೆ ಪಾ ವಿಮೋಚನೆ ಪಡೆಯುವುದರಲ್ಲಿ ನೀನು ಮೊದಲಿಗನಾಗು.'' ಸಹೋದರಿ ಅಂತರಂಗದಿಂದ ಹೊರಟ ಈ ಮಾತು ಹಾತಿಮ್ ತಾಯಿಯ ಪುತ್ರ ಅದಿಯ್ಯ್‌ರ ಮೇ ಗಾಢ ಪ್ರಭಾವ ಬೀರಿತು. ಅವರ ಸಹೋದರಿಗೆ ಪ್ರವಾದಿವರ್ಯರ(ಸ) ಬಳಿ ಕೆಲ ದಿನಗಳ ಕಾಲ ಕಳೆಯುವ ಅವಕಾಶವೊದಗಿ ಬಂದಿತ್ತು. ಅದರಿಂದ ಅವರನ್ನು ಅರ್ಥೈಸ ಆಕೆಗೆ ಅದು ನೆರವಾಯಿತು.

ಸಹೋದರಿಯ ನಿರ್ದೇಶನವನ್ನು ಪಾಲಿಸಲು ಅದಿಯ್ಯ್ ಕೂಡಲೇ ಮದೀ ಹೊರಟರು. ಅವರು ಅಲ್ಲಿಗೆ ತಲುಪಿದಾಗ ಪ್ರವಾದಿವರ್ಯರು(ಸ) ತ ಅನುಚರರೊಂದಿಗೆ ಮಸೀದಿಯಲ್ಲಿ ಕುಳಿತಿದ್ದರು. ಆಗ ಅಲ್ಲಿಗೆ ಕರಿಯ ಗುಲಾ ಹೆಣ್ಣೊಬ್ಬಳು ಬಂದಳು. ಪ್ರವಾದಿವರ್ಯರೊಂದಿಗೆ(ಸ) ರಹಸ್ಯವಾಗಿ ಮಾತನಾಡ ಅನುಮತಿ ಯಾಚಿಸಿದಳು. ಆಗ ಪ್ರವಾದಿವರ್ಯರು(ಸ) ''ನಿನಗೆ ಮದೀನ ಯಾವ ಬೀದಿಯಲ್ಲಿ ಎಷ್ಟು ಸಮಯ ಬೇಕಾದರೂ ಮಾತನಾಡಬಹುದಲ್ಲಾ ಎಂದುತ್ತರಿಸಿದರು. ಬಳಿಕ ಅಲ್ಲಿಂದ ಸ್ವಲ್ಪ ದೂರ ತೆರಳಿ ಆ ಗುಲಾಮ ಸ್ತ್ರೀ ಮಾತುಗಳನ್ನೆಲ್ಲಾ ತಾಳ್ಮೆಯಿಂದ ಆಲಿಸಿದರು. ಸಮುದಾಯದ ನಾಯಕನ ಆಡಳಿತಾಧಿಕಾರಿಯೂ ಆದ ಪ್ರವಾದಿ ಮುಹಮ್ಮದ್‌ರು(ಸ) ಓರ್ವ ಕರಿಯ ಗುಲಾ ಮಹಿಳೆಗೆ ನೀಡಿದ ಪ್ರಾಧಾನ್ಯತೆಯನ್ನು ನೋಡಿದ ಅದಿಯ್ಯ್ ಆಶ್ಚರ್ಯಚಕಿತನಾದನ

ಅದಿಯ್ಯ್, ಮಸೀದಿಗೆ ತೆರಳಿ ಪ್ರವಾದಿವರ್ಯರನ್ನು ಭೇಟಿಯಾಗಿ ಸ್ವತಃ ತನ್ನ ಪರಿಚಯಿಸಿದನು. ಅವರ ಆಗಮನದಿಂದ ಪ್ರವಾದಿವರ್ಯರು(ಸ) ಬಹ ಸಂತೋಷಗೊಂಡ. ಉದಾರತೆಗೆ ಹೆಸರುವಾಸಿಯಾದ ಹಾತಿಮ್ ತಾಯಿಯವರ ಪು ಅದಿಯ್ಯ್ ಅಲ್ಲವೇ ನೀವು ಎಂದು ಕೇಳಿ ಪ್ರವಾದಿವರ್ಯರು(ಸ) ಅದಿಯ್ಯ್‌ರ

ತನ್ನೊಂದಿಗೆ ಮನೆಗೆ ಕರೆದುಕೊಂಡು ಹೋದರು. ಮನೆಯೊಳಗೆ ಪ್ರವೇಶಿಸಿದ ಪ್ರವಾದಿವರ್ಯರು(ಸ) ಖರ್ಜೂರದ ನಾರಿನಿಂದ ತಯಾರಿಸಲಾದ ತಲೆದಿಂಬನ್ನು ಅದಿಯ್ಯ್‌ರಿಗೆ ಕುಳಿತುಕೊಳ್ಳಲು ನೀಡಿದರು. ಬಳಿಕ ಪ್ರವಾದಿವರ್ಯರು(ಸ) ತಾನು ಬರೀ ಕಲ್ಲಿನಲ್ಲಿ ಕುಳಿತುಕೊಂಡರು. ಇದನ್ನು ನೋಡಿದ ಅದಿಯ್ಯ್ ಆಶ್ಚರ್ಯಚಕಿತನಾದ. ತಾನು ಭಾವಿಸಿದಂತೆ ಓರ್ವ ಅಹಂಕಾರಿ ದೊರೆಯಲ್ಲ, ಈ ಮುಹಮ್ಮದ್(ಸ) ಎಂಬ ಸತ್ಯ ಅವರಿಗೆ ಮನದಟ್ಟಾಯಿತು. ಕುಶಲೋಪರಿ ವಿಚಾರಿಸಿದ ಬಳಿಕ ''ನೀವು ಕ್ರೈಸ್ತ ಧರ್ಮ ಹಾಗೂ ಸ್ವಾಬಿಈ ಧರ್ಮದ ತತ್ವಗಳನ್ನು ಬೆರೆಸಿ ಉಂಟು ಮಾಡಿದ ಧರ್ಮದ ಅನುಯಾಯಿಗಳಲ್ಲವೇ?'' ಎಂದು ವಿಚಾರಿಸಿದರು.

''ಹೌದು'' ಎಂದು ಅದಿಯ್ಯ್ ಉತ್ತರಿಸಿದರು.

''ನೀವು ಜನರ ಸೊತ್ತು ಸಂಪತ್ತುಗಳಿಂದ ನಾಲ್ಕರಲ್ಲಿ ಒಂದು ಭಾಗವನ್ನು ಬಲವಂತವಾಗಿ ವಸೂಲಿ ಮಾಡುತ್ತಿರಲಿಲ್ಲವೇ? ಇದನ್ನು ನಿಮ್ಮ ಧರ್ಮ ಅಂಗೀಕರಿಸುವುದೇ?'' ಎಂದು ಪ್ರವಾದಿವರ್ಯರು(ಸ) ಕೇಳಿದರು.

''ಇಲ್ಲ, ಖಂಡಿತವಾಗಿಯೂ ಅಂಗೀಕರಿಸದು!'' ಅದಿಯ್ಯ್ ಉತ್ತರಿಸಿದರು. ಇದರೊಂದಿಗೆ ಪ್ರವಾದಿವರ್ಯರು(ಸ) ದೇವನ ಸಂದೇಶವಾಹಕನೆಂದು ಮನದಟ್ಟಾಯಿತು. ಬಳಿಕ ಪ್ರವಾದಿವರ್ಯರು(ಸ) ನೀಡಿದ ಉಪದೇಶಗಳು ಅವರನ್ನು ಹೆಚ್ಚು ಆಕರ್ಷಿಸಿತು.

ಪ್ರವಾದಿವರ್ಯರು(ಸ) ಹೇಳಿದರು, ''ಮುಸ್ಲಿಮರ ಈ ಹಸಿವು, ದಾರಿದ್ರ್ಯ ಸಂಕಷ್ಟಗಳು ನಿಮ್ಮನ್ನು ಸನ್ಮಾರ್ಗ ಸ್ವೀಕರಿಸಲು ತಡೆಯಾಗಿರಬಹುದು. ಆದರೆ ಅಲ್ಲಾಹನಾಣೆ! ಆಹಾರಗಳು ಹೆಚ್ಚಾಗಿ ಸ್ವೀಕರಿಸಲು ಜನರಿಲ್ಲದ ಕಾಲ ಅತಿಶೀಘ್ರದಲ್ಲಿ ಬರಲಿದೆ. ಮುಸ್ಲಿಮರು ಕಡಿಮೆ ಸಂಖ್ಯೆಯಲ್ಲಿ ಶತ್ರುಗಳು ಹೆಚ್ಚಿನ ಸಂಖ್ಯೆಯಲ್ಲಿರುವ ಕಾರಣ ನೀವು ಇಸ್ಲಾಮ್ ಸ್ವೀಕರಿಸಲು ಹಿಂದೇಟು ಹಾಕಿರಬಹುದು. ಆದರೆ ಅಲ್ಲಾಹನಾಣೆ! ದೂರದ ಖಾದಿಸ್ಸಿಯಾದಿಂದ ಓರ್ವ ಹೆಣ್ಮಗಳು ಏಕಾಂಗಿಯಾಗಿ ಯಾರದೇ ಭಯವಿಲ್ಲದೆ ಈ ಪವಿತ್ರ ಭವನದ ಸಂದರ್ಶನಕ್ಕೆ ಬಂದಳು ಎಂಬುದನ್ನು ನೀವು ಖಂಡಿತವಾಗಿಯೂ ಕೇಳುವಿರಿ.'' ಇನ್ನು ಶತ್ರುಗಳು ಪ್ರಬಲರೆಂದು ಭಾವಿಸಿ ನೀವು ಇಸ್ಲಾಮ್ ಸ್ವೀಕರಿಸಲು ಹಿಂದೇಟು ಹಾಕುತ್ತೀರಿ ಎಂದಾದರೆ. ಕೇಳಿರಿ ಅಲ್ಲಾಹನಾಣೆ! ಬಾಬಿಲೋನಿಯಾದ ಶ್ವೇತಭವನಗಳು ಮುಸ್ಲಿಮರ ಅಧೀನಕ್ಕೆ ಬಂತು ಎಂಬುದನ್ನು ನೀವು ಕೇಳುವಿರಿ. ಹರ್ಮೂಸನ ಮಗ ಕಿಸ್‌ರಾನ ಖಜಾನೆಗಳನ್ನೂ ಅವರು ವಶಪಡಿಸುವರು.''

ಪ್ರವಾದಿವರ್ಯರ(ಸ) ಈ ಉಪದೇಶಗಳು ಆದಿಯ್ಯ್‌ನ ಮೇಲೆ ಭಾರೀ ಪ್ರಭಾವ ಬೀರಿತು. ಕೂಡಲೇ ಇಸ್ಲಾಮ್ ಸ್ವೀಕರಿಸಿದ ಅದಿಯ್ಯ್, ಬಳಿಕ ಪ್ರವಾದಿವರ್ಯರ(ಸ) ಭವಿಷ್ಯ ನುಡಿಗಳು ಸಾಕಾರಗೊಳ್ಳುವುದನ್ನು ಪ್ರತ್ಯಕ್ಷ ಕಂಡು ಅನುಭವಿಸಿದರು.

❖ ❖ ❖

57. ಕರುಣೆಯ ವಾಹಕ ಪ್ರವಾದಿ ಮಹಮ್ಮದ್(ಸ)

ಕರುಣೆ, ದಯೆಯ ಕುರಿತು ಕೇಳುವುದು ಕೂಡಾ ಕುತೂಹಲಕಾರಿಯಾಗುತ್ತದೆ. ಅದು ಸಿಗಬೇಕೆಂದು ಎಲ್ಲರೂ ಬಯಸುತ್ತಾರೆ. ಜೀವದ ಉಳಿವಿಗೆ ನೀರು ಹೇಗೆ ಅಗತ್ಯವೋ ಸಾಮಾಜಿಕ ಸಂಬಂಧಗಳನ್ನು ಬಲಪಡಿಸಲು ದಯೆ, ಕರುಣೆ ಅನಿವಾರ್ಯವಾಗಿರುತ್ತದೆ. ಮಾನವ ಸಂಬಂಧದ ಮೂಲ ಧಾತುವೇ ಅದಾಗಿದೆ.

ಹರಿತವಾದ ಖಡ್ಗದ ಮುಂದೆ ಶರಣಾಗದವರು ಕೂಡಾ ಸ್ನೇಹಭರಿತವಾದ ಬಾಂಧವ್ಯದ ಮುಂದೆ ಶರಣಾಗುತ್ತಾರೆ. ಮರ್ದಕನ ಮನ ಪರಿವರ್ತನೆಗೆ ಮರ್ದಿತನ ಪ್ರತೀಕಾರಕ್ಕಿಂತ ಆತನ ಕರುಣೆಯಿಂದ ಕೂಡಿದ ಕ್ಷಮೆಯಲ್ಲವೇ ಮಿಗಿಲು. ಎಂತಹ ಕಠಿಣ ಹೃದಯಿಗಳನ್ನೂ ಅದು ತೆರೆಯಬಲ್ಲುದು.

ಪ್ರವಾದಿ ಮುಹಮ್ಮದ್‌ರು(ಸ) ಕರುಣೆಯ ಸಾಗರವಾಗಿದ್ದರು. ಅವರ ಹೃದಯ ಕರುಣೆಯಿಂದ ತುಂಬಿ ತುಳುಕುತ್ತಿತ್ತು. ಅದಕ್ಕಾಗಿಯೇ ಅವರು ಲೋಕಾನುಗ್ರಹಿಯಾಗಿದ್ದಾರೆ. ಮಕ್ಕಳೊಂದಿಗೂ ಮಹಿಳೆಯರೊಂದಿಗೂ ವೃದ್ಧರೊಂದಿಗೂ ಮಾತ್ರವಲ್ಲ, ಪ್ರಾಣಿ-ಪಕ್ಷಿಗಳ ಮೇಲೂ ಮರ-ಗಿಡಗಳ ಮೇಲೂ ಅವರು ಕರುಣೆ ತೋರಿಸುತ್ತಿದ್ದರು. ಯುದ್ಧದಲ್ಲಿ ಕೂಡಾ ಶತ್ರು ಸೇನೆಯ ಮಹಿಳೆಯರ, ಮಕ್ಕಳ, ವೃದ್ಧರ ಮೇಲೆ ಆಕ್ರಮಣ ನಡೆಸಬಾರದೆಂದು ತನ್ನ ಸೈನಿಕರಿಗೆ ತಾಕೀತು ನೀಡಿದ್ದರು. ಹಾಗೆಯೇ ಮರಗಿಡಗಳನ್ನು ಕಡಿಯಬಾರದೆಂದೂ ಆದೇಶಿಸಿದ್ದರು.

ಒಮ್ಮೆ ಪ್ರವಾದಿವರ್ಯರು(ಸ) ತನ್ನ ಮೊಮ್ಮಗ ಅಲಿಯವರ ಪುತ್ರ ಹಸನ್‌ರನ್ನು ಚುಂಬಿಸಿದರು. ಪ್ರವಾದಿವರ್ಯರ(ಸ) ಸಮೀಪದಲ್ಲಿದ್ದುಕೊಂಡು ನೋಡುತ್ತಿದ್ದ ಅಕ್ರಅ್ ಬಿನ್ ಹಾಬಿಸ್‌ರಿಗೆ ಆಶ್ಚರ್ಯವಾಯಿತು. ಅವರು ಹೇಳಿದರು, ''ನನಗೆ ಹತ್ತು ಮಕ್ಕಳಿದ್ದಾರೆ. ಒಬ್ಬರನ್ನೂ ಒಮ್ಮೆಯೂ ನಾನು ಚುಂಬಿಸಿಲ್ಲ.''

''ಅಲ್ಲಾಹನು ತಮ್ಮ ಹೃದಯದಿಂದ ಕರುಣೆಯನ್ನು ಕಿತ್ತು ತೆಗೆದಿದ್ದರೆ ನಾನೇನು ಮಾಡಲಿ. ಜನರೊಂದಿಗೆ ಕರುಣೆ ತೋರಿಸದವನಿಗೆ ಅಲ್ಲಾಹನು ಕರುಣೆ ತೋರಿಸುವುದಿಲ್ಲ''

ಎಂದು ಪ್ರವಾದಿ(ಸ) ಹೇಳಿದರು.

❖ ❖ ❖

58. ಯಹೂದಿ ಕುಟುಂಬದ ಮನ ಪರಿವರ್ತನೆ

ಪ್ರವಾದಿವರ್ಯರು(ಸ) ನಡೆದುಕೊಂಡು ಹೋಗುತ್ತಿದ್ದ ಕಾಲು ದಾರಿಯ ಪಕ್ಕ ಸಣ್ಣ ಗುಡಿಸಲೊಂದಿತ್ತು. ಅದರಲ್ಲಿ ಯಹೂದಿ ಕುಟುಂಬವೊಂದು ವಾಸವಾಗಿತ್ತು. ಅವರು ಪ್ರವಾದಿ(ಸ) ಹಾಗೂ ಸಂಗಾತಿಗಳನ್ನು ತೀವ್ರವಾಗಿ ದ್ವೇಷಿಸುತ್ತಿದ್ದರು. ಅವಕಾಶ ಸಿಕ್ಕಿದಾಗಲೆಲ್ಲಾ ಅವರು ಅದನ್ನು ಬಹಿರಂಗ ಪಡಿಸುತ್ತಿದ್ದರು. ಆ ಮನೆಯಲ್ಲಿದ್ದ ಹೆಣ್ಮಗಳೊಬ್ಬಳು ಪ್ರವಾದಿವರ್ಯರು(ಸ) ನಡೆದುಕೊಂಡು ಹೋಗುತ್ತಿರುವಾಗ ಅವರ ಮೈಮೇಲೆ ಬೀಳುವಂತೆ ಕಸಕಡ್ಡಿ ಹಾಕುತ್ತಿದ್ದಳು. ಆದರಿಂದ ಅವಳು ಸಂತೋಷ ಪಡುತ್ತಿದ್ದಳು. ಆದರೆ ಪ್ರವಾದಿವರ್ಯರು(ಸ) ಅದಕ್ಕೇನೂ ಪ್ರತಿಕ್ರಿಯಿಸುತ್ತಿರಲಿಲ್ಲ, ಶರೀರದ ಮೇಲೆ ಬಿದ್ದ ಕಸಕಡ್ಡಿಗಳನ್ನು ತೆಗೆದು ಎಸೆದು ಏನೂ ಸಂಭವಿಸದಂತೆ ತನ್ನ ಪಾಡಿಗೆ ಹೋಗುತ್ತಿದ್ದರು.

ಯಹೂದಿ ಹೆಣ್ಮಗಳ ದುರಾಚಾರದಿಂದ ಕೆರಳಿದ ಪ್ರವಾದಿವರ್ಯರ(ಸ) ಅನುಯಾಯಿ ಗಳು ಪ್ರತೀಕಾರಕ್ಕೆ ಸಿದ್ಧರಾದರು. ಆದರೆ ಪ್ರವಾದಿವರ್ಯರು(ಸ) ಅವರನ್ನು ತಡೆಯುತ್ತಾ ಈ ರೀತಿ ಹೇಳಿದರು, ''ನನ್ನ ಮೇಲೆ ಕಸಕಡ್ಡಿಗಳನ್ನು ಎಸೆಯುವುದರಿಂದ ನನಗೇನೂ ತೊಂದರೆಯಾಗದು. ಆದರಿಂದ ಆಕೆ ಸಂತೃಪ್ತಿಗೊಳ್ಳುತ್ತಾಳೆ. ನಾನೇಕೆ ಅವಳ ಸಂತೋಷಕ್ಕೆ ಅಡ್ಡಬರಲಿ? ಅಲ್ಲಾಹನ ಮಾರ್ಗಕ್ಕೆ ಜನರನ್ನು ಆಹ್ವಾನಿಸುತ್ತಾ ಅವನ ಸ್ತುತಿ ಸ್ತೋತ್ರಗೈಯುವ ಕಾರಣದಿಂದಲ್ಲವೇ ನಾನು ಈ ತರದ ಕಿರುಕುಳ ಅನುಭವಿಸಬೇಕಾಗಿ ಬಂದಿರುವುದು. ಆದ್ದರಿಂದ ಇದು ಅಲ್ಲಾಹನ ಪರೀಕ್ಷೆಯಾಗಿದೆ. ಎಲ್ಲವನ್ನೂ ಸಂತೋಷದಿಂದ ಸಹಿಸಬೇಕು.''

ಒಂದು ದಿನ ಪ್ರವಾದಿವರ್ಯರು(ಸ) ಆ ದಾರಿಯಾಗಿ ನಡೆದುಕೊಂಡು ಹೋಗುವಾಗ ಆ ಹೆಣ್ಮಗಳು ಅಲ್ಲಿರಲಿಲ್ಲ. ಹೀಗೆ ಎರಡು ಮೂರು ದಿನ ಆಕೆ ಕಾಣದಾದಳು. ಪ್ರವಾದಿವರ್ಯರು(ಸ) ಆಕೆಯ ಕುರಿತು ವಿಚಾರಿಸಿದಾಗ ಆಕೆ ಯಾವುದೋ ರೋಗಕ್ಕೆ ಈಡಾಗಿರುವುದು ತಿಳಿದುಬಂತು. ಕೂಡಲೇ ಆಕೆಯ ಮನೆಗೆ ತೆರಳಿ ಆಕೆಯ ಆರೋಗ್ಯದ ಬಗ್ಗೆ ವಿಚಾರಿಸಿದರು. ಆಕೆಯ ರೋಗ ಶಮನಕ್ಕಾಗಿ ಪ್ರಾರ್ಥಿಸಿದರು. ಬಳಿಕ ಆಕೆಯೊಂದಿಗೆ ''ಮಗಳೇ! ನೀನು ರೋಗ ಬಾಧಿತಳಾದ ಕಾರಣ ನಿನ್ನ ದೇಹಗಳು ನೋಯುತ್ತಿರಬಹುದು. ನನ್ನ ದೇಹದ ಮೇಲೆ ಕಸಕಡ್ಡಿಗಳನ್ನು ಎಸೆಯಲು ಸಾಧ್ಯವಾಗದ ಕಾರಣ ಮನಸ್ಸು

ವ್ಯಥೆಪಡುತ್ತಿದ್ದರೆ ನಿನಗೆ ಎಷ್ಟು ಸಾಧ್ಯವೋ ಅಷ್ಟು ನನಗೆ ಉಪಟಳ ನೀಡಿ ನಿನ್ನ ಮನಸ್ಸನ್ನು ಸಂತೃಪ್ತಿ ಪಡಿಸಿಕೊಳ್ಳು.''

ಪ್ರವಾದಿವರ್ಯ‌ರ(ಸ) ಮಾತುಗಳು ಆ ಹೆಣ್ಣಗಳನ್ನು ನಡುಗಿಸಿತು. ಅವಳು ಪಶ್ಚಾತ್ತಾಪ ಪಟ್ಟು ಅಳತೊಡಗಿದಳು. ಹಾಗೆಯೇ ಪ್ರವಾದಿವರ್ಯ‌ರ(ಸ) ಈ ವಾತ್ಸಲ್ಯ ಭರಿತವಾದ ಸಂದೇಶವು ಆ ಹೆಣ್ಮಗಳ ಹಾಗೂ ಆಕೆಯ ಕುಟುಂಬದ ಮೇಲೂ ಗಾಢ ಪ್ರಭಾವ ಬೀರಿತು. ಅವರು ತಮ್ಮ ವೈರತ್ವವನ್ನು ತೊರೆದು ಪ್ರವಾದಿವರ್ಯ‌ರ(ಸ) ಉತ್ತಮ ಅನುಯಾಯಿಗಳಾಗಿ ಮಾರ್ಪಟ್ಟರು.

❖ ❖ ❖

59. ಅಬೂ ಉಮೈರ್‌ರ ಗಿಳಿ

ಅಬೂ ಉಮೈರ್ ಎಂಬ ಬಾಲಕ ಅಬೂತಲ್ಹ ಹಾಗೂ ಉಮ್ಮು ಸುಲೈಮರ ಪ್ರೀತಿಯ ಪುತ್ರನಾಗಿದ್ದ. ಅದು ಆಡಿ ನಲಿಯುವ ಎಳೆಯ ಪ್ರಾಯ. ಆತನ ಬಳಿಯೊಂದು ಗಿಳಿ ಇತ್ತು. ಅಬೂ ಉಮೈರ್‌ಗೆ ಅದೆಂದರೆ ಪಂಚಪ್ರಾಣ. ಅದಕ್ಕೆ ತಿನ್ನಿಸುತ್ತಾ, ಆಡಿಸುತ್ತಾ ಅದನ್ನು ಬೆಳೆಸಿದ. ಅದು ಆತನ ಹವ್ಯಾಸವಾಗಿತ್ತು. ಉಮ್ಮು ಸುಲೈಮರ ಪುತ್ರ ಅನಸ್ ಬಿನ್ ಮಾಲಿಕ್‌ರೊಂದಿಗೆ ಮನೆಗೆ ಬರುತ್ತಿದ್ದ ಪ್ರವಾದಿವರ್ಯ‌ರು(ಸ) ಆತನೊಂದಿಗೆ ಆಟದಲ್ಲಿ ಸೇರುತ್ತಿದ್ದರು. ಆತನೊಂದಿಗೆ ಪ್ರವಾದಿವರ್ಯ‌ರು(ಸ) ನಗುತ್ತಾ ''ಎಲ್ಲಿ ನಿನ್ನ ಗಿಳಿ? ಅದೇನು ಮಾಡುತ್ತಿದೆ?'' ಎಂದು ಕೇಳಿದ ತಕ್ಷಣ ಆತ ಪ್ರವಾದಿವರ್ಯ‌ರ(ಸ) ಮುಂದೆ ಗಿಳಿಯನ್ನು ತರುತ್ತಿದ್ದ. ಗಿಳಿಯನ್ನು ಆಡಿಸಿ, ಲಾಲಿಸಿ, ಮುದ್ದಿಸುತ್ತಿದ್ದ. ಆತ ಪ್ರವಾದಿವರ್ಯ‌ರೊಂದಿಗೆ(ಸ) ಅದರ ಕಥೆಯನ್ನು ಹೇಳುವನು. ಪ್ರವಾದಿವರ್ಯ‌ರು(ಸ) ಬಹಳ ಸಹನೆಯಿಂದ ಆಲಿಸುತ್ತಿದ್ದರು. ಬಳಿಕ ಅದನ್ನು ನೋಯಿಸಬಾರದು. ಅದರ ಜೊತೆ ದಯೆ ತೋರಿಸುವಂತೆ ಉಪದೇಶಿಸುತ್ತಿದ್ದರು.

ಒಂದು ದಿನ ಅಬೂ ಉಮೈರ್ ತೀವ್ರ ದುಃಖಿತನಾಗಿದ್ದ. ಕಾರಣವೇನೆಂದು ವಿಚಾರಿಸಿದಾಗ ಅಂದು ಬೆಳಿಗ್ಗೆ ಆತನ ಗಿಳಿ ಸತ್ತಿರುವುದಾಗಿ ಉಮ್ಮು ಸುಲೈಮ್ ತಿಳಿಸಿದರು. ಪ್ರವಾದಿವರ್ಯ‌ರು(ಸ) ಆತನ ಬಳಿ ತೆರಳಿ ತಲೆ ನೇವರಿಸುತ್ತಾ ಗಿಳಿ ಸತ್ತಿರುವುದು ಹೇಗೆಂದು ಕೇಳಿದರು. ತನ್ನ ಪ್ರೀತಿಯ ಗಿಳಿ ಸತ್ತಿದ್ದ ವಿಚಾರ ಹೇಳುವಾಗ ಅಬೂ ಉಮೈರ್‌ನ ಕೆನ್ನೆಗಲ್ಲಗಳಲ್ಲಿ ಕಣ್ಣೀರು ಹರಿದಾಡಿತು. ಪ್ರವಾದಿವರ್ಯ‌ರು(ಸ) ಆತನ ಕಣ್ಣೀರೊರೆಸಿ ಸಾಂತ್ವನಪಡಿಸಿದರು. ಮಕ್ಕಳೊಂದಿಗೆ ಇರುವಾಗಲೂ

ಪ್ರವಾದಿವರ್ಯರು(ಸ) ಅವರಲ್ಲಿ ಓರ್ವರಾಗಿದ್ದರು.

❖ ❖ ❖

60. ಹಕ್ಕಿ ಮರಿಯನ್ನು ಕಾಪಾಡಿದ ಪ್ರವಾದಿ(ಸ)

ಒಂದು ಕಂಬಳಿಯಲ್ಲಿ ಏನೋ ಹೊದ್ದುಕೊಂಡು ಓರ್ವರು ಪ್ರವಾದಿವರ್ಯರ(ಸ) ಬಳಿಗೆ ಬಂದರು. ಬಳಿಕ ಆ ವ್ಯಕ್ತಿಯು ''ಇದರೊಳಗೆ ಒಂದು ತಾಯಿ ಹಕ್ಕಿ ಹಾಗೂ ಅದರ ಕೆಲವು ಮರಿಗಳಿವೆ. ನಾನು ತೋಟದಲ್ಲಿ ನಡೆದುಕೊಂಡು ಬರುತ್ತಿರುವಾಗ ಈ ಹಕ್ಕಿ ಮರಿಗಳ ಅಳು ಕೇಳಿಸಿತು. ಆಗ ಅದನ್ನು ಹಿಡಿದು ಈ ಕಂಬಳಿಯಲ್ಲಿ ಹೊದ್ದು ತರುವಾಗ ಅದರ ತಾಯಿ ಹಕ್ಕಿ ನನ್ನ ತಲೆಯ ಸುತ್ತ ಹಾರ ತೊಡಗಿತು. ನಾನು ಕಂಬಳಿ ತೆರೆದಾಗ ಅದು ಮರಿಗಳ ಬಳಿ ಬಂದು ಕುಳಿತಿತು. ಕೂಡಲೇ ಅದನ್ನೂ ಹೊದ್ದುಕೊಂಡು ಇಲ್ಲಿಗೆ ಬಂದೆ.

ಆಗಂತುಕನ ವಿವರಣೆಯನ್ನು ಗಮನವಿಟ್ಟು ಆಲಿಸಿದ ಪ್ರವಾದಿವರ್ಯರು(ಸ) ಆ ಹಕ್ಕಿ ಹಾಗೂ ಮರಿಗಳನ್ನು ಬಿಟ್ಟುಬಿಡುವಂತೆ ಆದೇಶಿಸಿದರು. ಕೂಡಲೇ ಆತ ಕಂಬಳಿಯನ್ನು ಬಿಡಿಸಿದ. ಆದರೆ ತಾಯಿ ಹಕ್ಕಿ ಮರಿಗಳನ್ನು ಬಿಟ್ಟು ಹಾರಲಿಲ್ಲ.

ಪ್ರವಾದಿವರ್ಯರ(ಸ) ಅನುಚರರು ಬಹಳ ಕುತೂಹಲದಿಂದ ಈ ಘಟನೆಯನ್ನು ನೋಡುತ್ತಿದ್ದರು. ಕೂಡಲೇ ಪ್ರವಾದಿವರ್ಯರು(ಸ) ನೋಡಿ, ಈ ತಾಯಿ ಹಕ್ಕಿಯ ವಾತ್ಸಲ್ಯವು ನಿಮಗೆ ಆಶ್ಚರ್ಯ ತಂದಿರಬಹುದು. ಆದರೆ ಅಲ್ಲಾಹನಿಗೆ ಅವನ ಸೃಷ್ಟಿಗಳ ಮೇಲೆ ಈ ತಾಯಿ ಹಕ್ಕಿಯ ಪ್ರೀತಿಗಿಂತ ಎಷ್ಟೋ ಪಟ್ಟು ಸ್ನೇಹ ವಾತ್ಸಲ್ಯವಿದೆ ಎಂಬುದನ್ನು ಅರಿಯಿರಿ. ಆದ್ದರಿಂದ ಈ ತಾಯಿ ಹಕ್ಕಿ ಹಾಗೂ ಅದರ ಮರಿಗಳನ್ನು ಎಲ್ಲಿಂದ ಹಿಡಿದು ತಂದಿರೋ ಅಲ್ಲಿಗೇ ಬಿಟ್ಟು ಬನ್ನಿರಿ ಎಂದು ಹೇಳಿದರು.

❖ ❖ ❖

61. ಇರುವೆಗಳಿಗಾಗಿ ಕಳವಳ

ಒಮ್ಮೆ ಪ್ರವಾದಿವರ್ಯರು(ಸ) ತಮ್ಮ ಅನುಚರರೊಂದಿಗೆ ಪ್ರಯಾಣದಲ್ಲಿದ್ದರು. ದಣಿವು ನಿವಾರಿಸಲೆಂದು ಒಂದು ಸ್ಥಳದಲ್ಲಿ ತಂಗಿದರು. ಪ್ರವಾದಿವರ್ಯರ(ಸ) ಶಿಷ್ಯಂದಿರಲ್ಲಿ ಹೆಚ್ಚಿನವರು ವಿಶ್ರಾಂತಿ ಪಡೆಯುತ್ತಿದ್ದರು. ಅಲ್ಲಿನ ಪರಿಸರ ವೀಕ್ಷಿಸಲು ಪ್ರವಾದಿವರ್ಯರು(ಸ) ಅಲ್ಲಿಂದ ಸ್ವಲ್ಪ ದೂರ ನಡೆದರು. ಬೆಂಕಿ ಉರಿಯುತ್ತಿರುವುದನ್ನು ಕಂಡು ಅಲ್ಲಿಗೆ ಹೋದರು. ಆಗ ಇರುವೆಗಳ ಗುಂಪೊಂದನ್ನು ಅವರು ಗಮನಿಸಿದರು.

ಆ ಬೆಂಕಿ ಒಂದು ವೇಳೆ ಹಬ್ಬಿದರೆ ಆ ಇರುವೆಗಳು ಸುಟ್ಟು ಕರಕಲಾಗುತ್ತದೆ ಎಂದರಿತ ಪ್ರವಾದಿಗಳು ಕಳವಳಗೊಂಡರು. ಅವರಿಂದ ಅದು ಊಹಿಸಲೂ ಅಸಾಧ್ಯವಾಗಿತ್ತು. ಕೂಡಲೇ ತನ್ನ ಅನುಚರರನ್ನು ಕರೆದು ಇಲ್ಲಿ ಬೆಂಕಿ ಹಚ್ಚಿದವರು ಯಾರೆಂದು ಕೇಳಿದರು.

''ನಾನು'' ಎಂದು ಓರ್ವರು ಉತ್ತರಿಸಿದರು.

''ಹಾಗಾದರೆ ಕೂಡಲೇ ಅದನ್ನು ನಂದಿಸು'' ಎಂದು ಆದೇಶಿಸಿದರು. ಅದಕ್ಕೆ ಕಾರಣ ಕೂಡ ಕೇಳದೆ ತಕ್ಷಣ ಆ ಬೆಂಕಿಯನ್ನು ನಂದಿಸಿದರು. ಬೆಂಕಿ ಸಂಪೂರ್ಣ ಆರುವ ತನಕ ಪ್ರವಾದಿವರ್ಯರು(ಸ) ಅಲ್ಲಿದ್ದರು. ಇರುವೆಗಳು ರಕ್ಷಿಸಲ್ಪಟ್ಟವು ಎಂದು ಖಾತ್ರಿಯಾದ ಕೂಡಲೇ ಪ್ರವಾದಿವರ್ಯರು(ಸ) ''ಸರ್ವಸ್ತುತಿಗಳೂ ಸರ್ವಲೋಕ ಪರಿಪಾಲಕನಾದ ಅಲ್ಲಾಹನಿಗೆ ಮೀಸಲು'' ಎಂದು ಹೇಳಿದರು.

❖ ❖ ❖

62. ಒಂಟೆಯ ರೋದನ

ಪ್ರವಾದಿವರ್ಯರು(ಸ) ಒಮ್ಮೆ ಒಂದು ತೋಟದ ಬದಿಯಲ್ಲಿ ನಡೆದುಕೊಂಡು ಹೋಗುತ್ತಿದ್ದರು. ಅವರಿಗೆ ಒಂದು ಒಂಟೆಯ ಕೂಗು ಕೇಳಿಸಿತು. ಅತ್ತ ಗಮನ ಹರಿಸಿದಾಗ ಖರ್ಜೂರದ ಮರವೊಂದಕ್ಕೆ ಒಂಟೆಯೊಂದನ್ನು ಕಟ್ಟಿಹಾಕಲಾಗಿತ್ತು. ಅದರ ಕಣ್ಣಲ್ಲಿ ನೀರು ತುಂಬಿತ್ತು. ಪ್ರವಾದಿವರ್ಯರು(ಸ) ತನ್ನ ಕೈಯಿಂದ ಅದರ ಕಣ್ಣೀರು ಒರೆಸಿದರು. ಬಳಿಕ ಅದನ್ನು ನೇವರಿಸುತ್ತಾ ಸಾಂತ್ವನ ಪಡಿಸಿದರು. ಅದು ಹಸಿವು ತಾಳಲಾರದೆ ಅಳುತ್ತಿದೆಯೆಂದು ಪ್ರವಾದಿವರ್ಯರಿಗೆ(ಸ) ಮನದಟ್ಟಾಯಿತು. ಬಳಿಕ ಈ ಒಂಟೆ ಯಾರದ್ದೆಂದು ವಿಚಾರಿಸಿದರು.

ಮರದ ಬುಡದಲ್ಲಿ ವಿಶ್ರಾಂತಿ ಪಡೆಯುತ್ತಿದ್ದ ಓರ್ವರು ''ನನ್ನದೆಂದು'' ಉತ್ತರಿಸಿದರು. ''ಒಂಟೆಯನ್ನು ಕಟ್ಟಿ ಹಾಕಿ ಅದು ಹಸಿವಿನಿಂದ ನರಳುವಂತೆ ಮಾಡಿರುವ ಈ ಕೃತ್ಯ ಕ್ರೌರ್ಯವಾಗಿದೆ. ಈ ಒಂಟೆಯ ಕುರಿತು ನಾಳೆ ಪರಲೋಕದಲ್ಲಿ ಅಲ್ಲಾಹನು ಪ್ರಶ್ನಿಸುವನು ಎಂಬ ಭಯ ನಿಮಗಿಲ್ಲವೇ? ಅಲ್ಲಾಹನು ಅದನ್ನು ನಿಮ್ಮ ವಶಕ್ಕೆ ಒಪ್ಪಿಸಿರುವುದು, ಅದನ್ನು ಚೆನ್ನಾಗಿ ಸಂರಕ್ಷಣೆ ಮಾಡಬೇಕೆಂದಾಗಿದೆ. ಅದನ್ನು ಸರಿಯಾದ ರೀತಿಯಲ್ಲಿ ಪೋಷಿಸಿ ಸಂರಕ್ಷಣೆ ಮಾಡುವವನಿಗೆ ಮಾತ್ರ ಅದನ್ನು ಉಪಯೋಗಿಸಲು ಹಕ್ಕಿರುವುದು.'' ಎಂದು ಪ್ರವಾದಿ(ಸ) ಹೇಳಿದರು.

ಪ್ರವಾದಿವರ್ಯರ(ಸ) ಮಾತುಗಳಿಂದ ಆ ವ್ಯಕ್ತಿ ತೀವ್ರ ಪಶ್ಚಾತ್ತಾಪಪಟ್ಟರು.

ಬಳಿಕ ಈ ರೀತಿ ಹೇಳಿದರು, ''ಅಲ್ಲಾಹನ ಸಂದೇಶವಾಹಕರೇ, ನಾನು ಮಹಾ ಪಾಪವನ್ನು ಮಾಡಿದೆ. ಅಲ್ಲಾಹನು ಸೃಷ್ಟಿಸಿದ ಈ ಜೀವಿಯೊಂದಿಗೆ ಈ ರೀತಿ ನಾನು ವರ್ತಿಸಬಾರದಿತ್ತು. ನಿಶ್ಚಯವಾಗಿಯೂ ನನಗೆ ಆ ಕುರಿತು ಬಹಳ ಖೇದವಿದೆ.''

❖ ❖ ❖

63. ಮರದ ನೋವು

''ಮಗೂ ಯಾಕೆ ನೀನು ಆ ಮರದ ಮೇಲೆ ಕಲ್ಲೆಸೆದೆ?'' ಪ್ರವಾದಿವರ್ಯರು(ಸ) ತನ್ನ ಮುಂದೆ ಹಾಜರು ಪಡಿಸಿದ ಪುಟ್ಟ ಬಾಲಕನೊಂದಿಗೆ ಕೇಳಿದರು.

ಬೆಳೆದು ನಿಂತಿದ್ದ ಖರ್ಜೂರದ ಗೊನೆಗಳಿರುವ ಮರದ ಮೇಲೆ ಆತ ಕಲ್ಲೆಸೆದುದಕ್ಕಾಗಿ ತೋಟದ ಮಾಲಿಕ ಆ ಹುಡುಗನನ್ನು ಹಿಡಿದು ಪ್ರವಾದಿವರ್ಯರ(ಸ) ಮುಂದೆ ಹಾಜರು ಪಡಿಸಿದ್ದ.

''ನನಗೆ ಹಣ್ಣು ಬೇಕಾಗಿತ್ತು. ಅದಕ್ಕೆ ಕಲ್ಲು ಎಸೆದೆ.'' ಆತನ ನಿಷ್ಕಳಂಕವಾದ ಉತ್ತರ. ಆತನಲ್ಲಿ ಆಗ ಯಾವುದೇ ರೀತಿಯ ತಪ್ಪು ಮಾಡಿದಂತಹ ಭಾವನೆ ಇರಲಿಲ್ಲ.

''ಮಗೂ! ಆದರೆ ಇನ್ನು ಮುಂದೆ ನೀನು ಯಾವ ಮರದ ಮೇಲೆಯೂ ಕಲ್ಲು ಎಸೆಯಬಾರದು. ನೀನು ಕಲ್ಲೆಸೆದಾಗ ಅದಕ್ಕೆ ನೋವಾಗುವುದು? ಗಾಯವಾಗುವುದು ಅಲ್ವಾ! ಬಳಿಕ ಅದು ಹಣ್ಣು ನೀಡಬಲ್ಲುದೇ? ಆದರೆ ಹಣ್ಣಾದ ಬಳಿಕ ನೀನು ಕಲ್ಲೆಸೆಯದಿದ್ದರೂ ಅದು ಕೆಳಗೆ ಬೀಳುವುದು. ಆಗ ಅದನ್ನು ಹೆಕ್ಕಿ ತಿನ್ನಬಹುದಲ್ಲವೇ?'' ಆ ಹುಡುಗನ ತಲೆ ಬೆನ್ನು ಸವರುತ್ತಾ ಪ್ರವಾದಿವರ್ಯರು(ಸ) ಉಪದೇಶಿಸಿದರು. ಇನ್ನು ಮುಂದೆ ಎಂದಿಗೂ ನಾನು ಮರದ ಮೇಲೆ ಕಲ್ಲೆಸೆಯಲಾರೆ ಎಂಬ ದೃಢ ನಿರ್ಧಾರದೊಂದಿಗೆ ಆ ಹುಡುಗ ಅಲ್ಲಿಂದ ಮರಳಿದ.

❖ ❖ ❖

64. ಸೂರ್ಯಗ್ರಹಣ ಹಾಗೂ ಪ್ರವಾದಿ(ಸ) ಪುತ್ರನ ನಿಧನ

ಇಬ್ರಾಹೀಮ್, ಪ್ರವಾದಿವರ್ಯರ(ಸ) ಪ್ರೀತಿಪಾತ್ರ ಪುತ್ರನಾಗಿದ್ದರು. ಅವನು ಏಕೈಕ ಗಂಡು ಮಗನಾಗಿದ್ದ. ಪ್ರವಾದಿವರ್ಯರ(ಸ) ಇನ್ನಿಬ್ಬರು ಪುತ್ರರಾದ ಕಾಸಿಮ್ ಹಾಗೂ ಅಬ್ದುಲ್ಲಾ ತಮ್ಮ ಶೈಶವಾವಸ್ಥೆಯಲ್ಲಿಯೇ ಅವರ ಮಾತೆ ಖದೀಜರ

ಮಡಿಲಲ್ಲಿಯೇ ಇಹಲೋಕ ತ್ಯಜಿಸಿದ್ದರು. ಆ ಕಾರಣವಾಗಿ ಇಬ್ರಾಹೀಮ್‌ನ ಜೊ ಪ್ರವಾದಿವರ್ಯರಿಗೆ(ಸ) ಅಪಾರ ಪ್ರೀತಿ ವಾತ್ಸಲ್ಯವಿತ್ತು, ಸಮಯ ಸಿಕ್ಕಾಗಲೇ ಪ್ರವಾದಿವರ್ಯರು(ಸ) ಆ ಮಗುವನ್ನು ಆಡಿಸುತ್ತಾ, ಮುದ್ದು ಮಾಡುತ್ತಾ ಇದ್ದರು

ಆದರೆ ಪ್ರವಾದಿವರ್ಯರ(ಸ) ಈ ಸಂತೋಷ ಹೆಚ್ಚು ಕಾಲ ಉಳಿಯಲಿಲ್ಲ ಮಗುವಿಗೆ ಒಂದು ವರ್ಷ ತುಂಬುವಾಗಲೇ ಮಗು ರೋಗ ಬಾಧಿತವಾಯಿತು ತಾಯಿ ಮಾರಿಯತುಲ್ ಕಿಬ್ತಿಯಾ ಹಾಗೂ ಸಹೋದರಿ ಸಿರೀನ್ ಮಗುವಿ ಸಾಧ್ಯವಾದ ಶುಶ್ರೂಷೆ ನೀಡಿದರು. ಕೊನೆಗೆ ಚಿಕಿತ್ಸೆ ಫಲಕಾರಿಯಾಗ ಮರಣಾಸನ್ನವಾದಾಗ ಪ್ರವಾದಿವರ್ಯರಿಗೆ(ಸ) ವಿವರ ಮುಟ್ಟಿಸಿದರು. ಇದರಿಂ ತೀವ್ರ ದುಃಖಿತರಾದ ಪ್ರವಾದಿವರ್ಯರು(ಸ) ಅಬ್ದುರ್ರಹ್ಮಾನ್ ಬಿನ್ ಔಫ್‌ರೊಂದಿ ಮಾರಿಯತುಲ್ ಕಿಬ್ತಿಯಾರ ಮನೆಗೆ ತಲುಪಿದರು. ಮಗು ಅಂತಿಮ ಶ್ವಾ ಎಳೆಯುತ್ತಿರುವಾಗ ತನ್ನ ಪ್ರೀತಿ ಪಾತ್ರ ಪುತ್ರನನ್ನು ನೋಡುತ್ತಾ ಹೀಗೆಂದರು ''ಅಲ್ಲಾಹನ ವಿಧಿ ನಿರ್ಣಯದ ಮುಂದೆ ನಾವು ನಿನ್ನನ್ನು ರಕ್ಷಿಸಲು ಅಶಕ್ತರಾಗಿದ್ದೇವೆ.'

ಸ್ವಲ್ಪ ಸಮಯದಲ್ಲಿಯೇ ಆ ಪುಟ್ಟ ಕಂದಮ್ಮನ ಹೃದಯ ಬಡಿತ ನಿಂತಿತು ನಿಶ್ಚಲವಾದ ಆ ಶರೀರವನ್ನು ನೋಡಿ ಪ್ರವಾದಿವರ್ಯರು(ಸ) ಈ ರೀತಿ ಹೇಳಿದರು ''ಇಬ್ರಾಹೀಮ್! ಮನುಷ್ಯರಲ್ಲಿ ಮೊದಲಿಗನೂ ಕೊನೆಯವನೂ ನಾಳೆ ಅಲ್ಲಾಹ ಮುಂದೆ ಒಂದುಗೂಡಿಸಲಿರುವುದು ನಿಶ್ಚಯ. ಖಂಡಿತವಾಗಿಯೂ ಸಾಕ್ಷಾತ್ಕಾರಗೊಳ್ಳು ಅಲ್ಲಾಹನ ವಾಗ್ದಾನವದು! ಆ ಅಂತಿಮ ದಿನ ಎಂಬುದು ಇಲ್ಲವೆಂದಾದಲ್ಲಿ ನಿ ಅಗಲಿಕೆಯ ದುಃಖವು ಇದಕ್ಕಿಂತ ಎಷ್ಟೋ ಪಟ್ಟು ಅಧಿಕವಿರುತ್ತಿತ್ತು.''

ಇಬ್ರಾಹೀಮರ ನಿಧನ, ಪ್ರವಾದಿವರ್ಯರನ್ನು ತೀವ್ರ ದುಃಖಕ್ಕೀಡು ಮಾಡಿತ್ತು ಅದು ಅವರ ಮುಖದಲ್ಲಿ ಪ್ರಕಟಗೊಂಡಿತ್ತು. ಆ ದಿನ ಕೂಡ ಎಂದಿನಂತೆ ಮುಂಜಾನೆಯು ಹೆಚ್ಚು ಪ್ರಕಾಶಮಾನವಾಗಿತ್ತು. ಆದರೆ ಮಧ್ಯಾಹ್ನವಾಗುವ ಹೊತ್ತಿ ಅಂತರಿಕ್ಷವು ಮಸುಕಾಗುತ್ತಾ ಬಂತು. ಸ್ವಲ್ಪ ಹೊತ್ತು ಕಳೆದಾಗ ಸಂಪೂರ್ಣ ಕತ್ತಲು ಆವರಿಸಿತು. ಅಂದು ನಡು ಮಧ್ಯಾಹ್ನವು ನಡು ರಾತ್ರಿಯಂತೆ ಕತ್ತಲ ಮಬ್ಬು ಆವರಿಸಿತ್ತು. ಏನು ಸಂಭವಿಸುತ್ತಿದೆಯೆಂದು ಜನರು ಆತಂಕಕ್ಕೀಡಾದರು. ಇಂತಹದ್ದೊಂದು ಘಟನೆ ಆದ ನೆನಪು ಮದೀನ ವಾಸಿಗಳಲ್ಲಿರಲಿಲ್ಲ, ಆದ್ದರಿಂದ ಅವರು ತೀವ್ರ ಕಳವಳಗೊಂಡರು. ಏನೋ ಸಂಕಷ್ಟ ಆವರಿಸುತ್ತಿದೆಯೆಂಬ ಭೀತಿ ಅವರನ್ನು ಕಾಡಿತು. ಏನು ಸಂಭವಿಸುತ್ತಿರುವುದೆಂಬುದರ ಕುರಿತು ಅರಿಯಲು ತೀವ್ರ ಶ್ರಮ ಪಟ್ಟರು. ಹೆಚ್ಚಿನವರು ಪ್ರವಾದಿವರ್ಯರ(ಸ) ಸುಪುತ್ರ ಇಬ್ರಾಹೀಮರ ನಿಧನಕ್ಕೂ ಸೂರ್ಯಗ್ರಹಣಕ್ಕೂ ಸಂಬಂಧ ಕಲ್ಪಿಸ ತೊಡಗಿದರು. ಇದು ವದಂತಿಯಾಗಿ ಹಬ್ಬ

ೂಡಗಿತು. ವದಂತಿ ಕೇಳಿದವರೆಲ್ಲರೂ ಮಗುವಿನ ಮರಣವೇ ಈ ರೀತಿ ತ್ತಲಾವರಿಸಲು ಕಾರಣವೆಂದು ನಂಬಿದರು. ಅದಕ್ಕೆ ಭಾರೀ ಪ್ರಚಾರವೂ ಸಿಕ್ಕಿತು.

ನಿಜಕ್ಕೂ ಇದೊಂದು ಆಕಸ್ಮಿಕವಾಗಿತ್ತು. ಎರಡೂ ಘಟನೆಗಳಿಗೆ ಪರಸ್ಪರ ಂಬಂಧವಿರಲಿಲ್ಲ. ಆದರೆ ಇಂತಹ ವ್ಯತ್ಯಸ್ತ ಘಟನೆಗಳನ್ನು ಪರಸ್ಪರ ಜೋಡಿಸಿದಾಗ ಂದಾಚಾರಗಳ ಉಗಮವಾಗುತ್ತದೆ. ಕಳ್ಳ ಬಾಬಾಗಳು, ಸುಳ್ಳು ೇವಮಾನವರೆನಿಸಿಕೊಂಡ ಕಪಟಿಗಳೂ ಇಂತಹವುಗಳಿಂದ ಲಾಭ ಪಡೆಯಲು ವಣಿಸುತ್ತಾರೆ. ಅವರು ತಮ್ಮನ್ನು ಹುಡುಕಿ ಬಂದವರನ್ನು ಗುಣ ಪಡಿಸುವುದಾಗಿ ೇಳಿ ಔಷಧಿ ನೀಡುವರು. ಅದರಲ್ಲಿ ಕೆಲವರಿಗೆ ಯಾವುದೋ ಕಾರಣದಿಂದ ುಣವಾದರೆ ಅದಕ್ಕೆ ಭಾರೀ ಪ್ರಚಾರ ನೀಡುವರು. ಅವರ ಪ್ರವಚನಗಳು ುಳ್ಳಿನಿಂದಾವೃತವಾಗಿರುತ್ತದೆ. ಅನೇಕ ರೋಗಗಳು ಶಮನಗೊಳ್ಳದೆ ಉಲ್ಬಣಿಸಿದರೂ ಅವೆಲ್ಲವನ್ನೂ ಜನರು ಗಮನಿಸದೆ ನಿರ್ಲಕ್ಷಿಸುವರು. ಇಂತಹ ಅಂಧ ವಿಶ್ವಾಸಗಳು ಂದಾಚಾರಿಗಳ ಉಗಮಕ್ಕೆ ಕಾರಣವಾಗುತ್ತದೆ.

ಜನರು ಮದೀನದ ಬೀದಿಯಲ್ಲಿ ಅಲ್ಲಲ್ಲಿ ಸೇರಿಕೊಂಡು ಪ್ರವಾದಿವರ್ಯರ(ಸ) ಮಹತ್ವದ ಕುರಿತು ಪರಸ್ಪರ ಮಾತಾಡ ತೊಡಗಿದರು. ಪ್ರವಾದಿವರ್ಯರ(ಸ) ಪುತ್ರನ ಮರಣಕ್ಕಾಗಿ ಅಲ್ಲಾಹನು ಸೂರ್ಯನನ್ನೇ ಮರೆ ಮಾಚಿದಕ್ಕಾಗಿ ಅವರು ಆಶ್ಚರ್ಯ ವ್ಯಕ್ತ ಪಡಿಸುತ್ತಿದ್ದರು. ಕೊನೆಗೆ ಪ್ರವಾದಿವರ್ಯರು(ಸ) ಅವರೆಲ್ಲರನ್ನೂ ಬಳಿಗೆ ಕರೆದರು. ಅವರೆಲ್ಲರೂ ಮದೀನದ ಮಸೀದಿಯಲ್ಲಿ ಸೇರಿದರು. ಮಸೀದಿಯ ಮಿಂಬರ್ ಏರಿದ ಪ್ರವಾದಿವರ್ಯರು(ಸ) ಈ ರೀತಿ ಹೇಳಿದರು, ''ಸೂರ್ಯ ಹಾಗೂ ಚಂದ್ರ ಅಲ್ಲಾಹನ ಎರಡು ದೃಷ್ಟಾಂತಗಳಾಗಿವೆ. ಅವನ ಮಹಾನತೆಯ ಚಿಹ್ನೆಗಳು! ಅವನು ನಿಶ್ಚಯಿಸಿದ ಪ್ರಕಾರ ಅದು ಉದಯಿಸುತ್ತವೆ ಮತ್ತು ಅಸ್ತಮಿಸುತ್ತದೆ. ಅದರ ನಿರ್ಧರಿತ ಪಥದಲ್ಲಿ ಅದು ಚಲಿಸುತ್ತಿರುವುದು. ಯಾರದೋ ಮರಣ ಅಥವಾ ಜನನದ ಕಾರಣವು ಅದಕ್ಕೇನೂ ಬಾಧಿಸದು. ಅಲ್ಲಾಹನ ಈ ಎಲ್ಲಾ ಮಹಿಮೆಗಳಿಗಾಗಿ ಅವನನ್ನು ಸ್ತುತಿಸಿರಿ. ಅವನೊಂದಿಗೇ ಯಾಚಿಸಿರಿ, ಪ್ರಾರ್ಥಿಸಿರಿ.''

ಹೀಗೆ ಪ್ರವಾದಿವರ್ಯರು(ಸ) ತಲೆಎತ್ತಬಹುದಾಗಿದ್ದ ಮೂಢನಂಬಿಕೆಯೊಂದರ ಅಸ್ತಿತ್ವವನ್ನು ಮೊಳಕೆಯಲ್ಲಿಯೇ ಚಿವುಟಿ ಹಾಕಿದರು. ಅಮಾನವೀಯವೂ ಮೂಢ ನಂಬಿಕೆಗಳಿಂದ ಆವೃತವಾದ ಗಿರಿ, ಪದವಿ ತನ್ನ ಮೇಲೆ ಇಡದಂತೆ ಅತೀವ ಎಚ್ಚರಿಕೆಯನ್ನು ಪ್ರವಾದಿವರ್ಯರು(ಸ) ವಹಿಸಿದ್ದರು.

❖ ❖ ❖

65. ಸಂತೃಪ್ತ ಬಾಲಕ

ಯಮನ್‌ನ ತಜೀಬ್ ಗೋತ್ರದ 13 ಮಂದಿ ಪ್ರವಾದಿವರ್ಯರನ್ನು ಭೇ ಮಾಡಲು ಬಂದರು. ಅವರ ಆಗಮನದಿಂದ ಸಂತುಷ್ಟರಾದ ಪ್ರವಾದಿವರ್ಯರು(ಸ ಅತಿಥಿಗಳನ್ನು ಸತ್ಕರಿಸಲು ಬಿಲಾಲ್ ಬಿನ್ ರಬಾಹ್‌ರಿಗೆ ಹೊಣೆಗಾರಿಕೆಯನ ನೀಡಿದರು. ಅತಿಥಿಗಳು ಪ್ರವಾದಿವರ್ಯರ(ಸ) ಜೊತೆ ಕಾಲ ಕಳೆದು ಹಲವ ವಿಷಯಗಳನ್ನು ಕಲಿತರು. ಅವರು ಮರಳಿ ಹೋಗುವ ಸಂದರ್ಭವಾದಾ ಪ್ರವಾದಿವರ್ಯರೊಂದಿಗೆ ವಿದಾಯದ ಅನುಮತಿ ಕೇಳಿದರು. ಸಾಮಾನ್ಯವಾಗಿ ಹೀ ಅನುಮತಿ ಕೇಳಿದಾಗ ಅವರಿಗೆ ಉಡುಗೊರೆಗಳನ್ನು ಕೊಟ್ಟು ಕಳುಹಿಸುವುದು ವಾಡಿಕೆಯಾಗಿತ್ತು.

ಅದರಂತೆ ಪ್ರವಾದಿವರ್ಯರು(ಸ) ಬಿಲಾಲ್‌ರನ್ನು ಕರೆದು ''ಸಾಮಾನ್ಯವಾಗಿ ನಾವು ನೀಡುತ್ತಾ ಬರುವ ಉಡುಗೊರೆಗಳಿಗಿಂತ ಉತ್ತಮವಾದುದನ್ನು ನೀಡಿರಿ'' ಎಂದು ಆದೇಶಿಸಿದರು. ಅವರು ಅದನ್ನು ಪಡೆದು ಹೊರಡಲನುವಾದಾಗ ಪ್ರವಾದಿವರ್ಯರು(ಸ) ಅವರೊಡನೆ, ''ನಿಮ್ಮೊಂದಿಗೆ ಇನ್ನು ಯಾರಾದರೂ ಇದ್ದಾರೆಯೇ?'' ಎಂದು ಕೇಳಿದರು.

''ನಮ್ಮ ಯಾತ್ರಾ ವಾಹನಗಳಿಗೆ ಕಾವಲು ನಿಲ್ಲುವ ಓರ್ವ ಬಾಲಕನಿದ್ದಾನೆ'' ಎಂದರು.

''ಹಾಗಾದರೆ ಆತನನ್ನು ಕರೆ ತನ್ನಿರಿ'' ಎಂದು ಹೇಳಿದರು. ಪ್ರವಾದಿವರ್ಯರ(ಸ) ನಿರ್ದೇಶನದಂತೆ ಅವರು ಆ ಬಾಲಕನನ್ನು ಕರೆ ತಂದರು.

ಆ ಬಾಲಕ ಪ್ರವಾದಿವರ್ಯರ(ಸ) ಜೊತೆ ತನ್ನನ್ನು ಸ್ವಯಂ ಪರಿಚಯ ಪಡಿಸುತ್ತಾ ''ನಾನು ಅಬದೀ ಗೋತ್ರಜನಾಗಿದ್ದೇನೆ. ಸ್ವಲ್ಪ ಮೊದಲು ಈ ಯಾತ್ರಾ ತಂಡದ ಕೋರಿಕೆಯನ್ನು ಪೂರೈಸಿದಂತೆ ನನ್ನ ಒಂದು ಕೊರಿಕೆಯನ್ನು ಪೂರೈಸಬೇಕು'' ಎಂದು ನಿವೇದಿಸಿದನು.

''ಸರಿ. ನಿನ್ನ ಕೋರಿಕೆ ಏನೆಂದು ತಿಳಿಸು?'' ಎಂದು ಹೇಳಿದರು.

''ನನ್ನ ಕೋರಿಕೆಯು ಈ ಯಾತ್ರಾ ತಂಡವು ಮಾಡಿದ ಕೋರಿಕೆಯಂತಲ್ಲ. ನಾನು ಊರಿಂದ ಇಲ್ಲಿಯ ವರೆಗೆ ಬಂದಿರುವುದು ನೀವು ನನಗಾಗಿ ಪ್ರಾರ್ಥಿಸಬೇಕೆಂದು ಹೇಳಲಿಕ್ಕಾಗಿದೆ. ನನ್ನನ್ನು ಕ್ಷಮಿಸಲೂ ನನಗೆ ಕರುಣೆ ನೀಡಲೂ ನನ್ನ ಐಶ್ವರ್ಯ ನನ್ನ ಮನಸ್ಸಲ್ಲೇ ತುಂಬಿರಲು ತಾವು ಅಲ್ಲಾಹನೊಡನೆ ಪ್ರಾರ್ಥಿಸಬೇಕು.''

ಬಾಲಕನ ಮಾತು ಕೇಳಿದ ಪ್ರವಾದಿವರ್ಯರು(ಸ) ಆಶ್ಚರ್ಯಚಕಿತರಾದರು. ಬಳಿಕ ಆ ಬಾಲಕನನ್ನು ಹತ್ತಿರ ಸೆಳೆದುಕೊಂಡು, ''ಅಲ್ಲಾಹನೇ ಈ ಬಾಲಕನನ್ನು ಕ್ಷಮಿಸು. ಈತನ ಮೇಲೆ ಕರುಣೆ ತೋರು. ಈತನ ಐಶ್ವರ್ಯವು ಈತನ ಮನಸ್ಸಿನಲ್ಲಿಯೇ ಇರಲು ಅನುಗ್ರಹಿಸು'' ಎಂದು ಪ್ರಾರ್ಥಿಸಿದರು.

ಆ ಯಾತ್ರಾ ತಂಡದೊಂದಿಗೆ ಆ ಮಗುವನ್ನು ಊರಿಗೆ ಬೀಳ್ಕೊಟ್ಟರು. ಬಳಿಕ ಹಿಜ್‌ರಾ ಹತ್ತನೇ ವರ್ಷದಲ್ಲಿ ಹಜ್ಜ್‌ನ ಸಂದರ್ಭದಲ್ಲಿ ಮಿನಾದಲ್ಲಿ ಆ ಯಾತ್ರಾ ತಂಡವು ಎದುರಾಯಿತು. ಪ್ರವಾದಿವರ್ಯರು(ಸ) ಅವರೊಂದಿಗೆ ''ನಿಮ್ಮೊಂದಿಗಿದ್ದ ಆ ಬಾಲಕ ಎಲ್ಲಿ'' ಎಂದು ಕೇಳಿದರು. ಅವರೆಲ್ಲರೂ ಏಕ ಕಂಠದಲ್ಲಿ ಹೇಳಿದರು, ''ಅವನಂತಹ ಹುಡುಗನನ್ನು ನಾವು ಎಲ್ಲಿಯೂ ಕಂಡಿಲ್ಲ, ಮಾತ್ರವಲ್ಲ, ದೇವನು ನೀಡಿರುವುದರಲ್ಲಿ ಅವನಷ್ಟು ಸಂತೃಪ್ತಿಗೊಂಡು ಜೀವಿಸುವವನನ್ನು ನಾವು ಇದುವರೆಗೂ ಕಂಡಿಲ್ಲ. ಜನರೆಲ್ಲರೂ ಈ ಜಗತ್ತನ್ನೇ ಹಂಚಲು ತೊಡಗಿದರೂ ಆತ ಅತ್ತ ಕಡೆ ತಿರುಗಿಯೂ ನೋಡಲಿಲ್ಲ.''

''ಅಲ್ಲಾಹನಿಗೆ ಸ್ತುತಿ, ಅವನು ಏಕಾಂಗಿಯಾಗಿಯೇ ಇಹಲೋಕ ತ್ಯಜಿಸಲಿ'' ಎಂದು ಪ್ರವಾದಿವರ್ಯರು(ಸ) ಆತನಿಗಾಗಿ ಪ್ರಾರ್ಥಿಸಿದರು.

ಆಗ ಓರ್ವರು ''ಮನುಷ್ಯರೆಲ್ಲರೂ ಏಕಾಂಗಿಯಾಗಿಯೇ ಮರಣ ಹೊಂದುವುದಲ್ಲವೇ'' ಎಂದು ಕೇಳಿದರು.

''ಹಾಗಲ್ಲ, ಅನೇಕರು ಭಿನ್ನ ಭಿನ್ನವಾಗಿ ಸಾಯುವರು. ಅವರ ಅತ್ಯಾಸೆಗಳು ಕಣಿವೆಗಳಲ್ಲಿ ತುಂಬಿರುವುವು. ಅಂತಹ ಯಾವುದಾದರೂ ಕಣಿವೆಯಲ್ಲಿ ಅವರು ಬಿದ್ದು ಸಾಯುವರು. ಅವನು ಯಾವುದರಿಂದ ನಾಶ ಹೊಂದಿದನು ಎಂದು ಕೂಡಾ ಅಲ್ಲಾಹನು ಆತನತ್ತ ತಿರುಗಿ ನೋಡಲಾರನು.''

ಪ್ರವಾದಿವರ್ಯರು(ಸ) ಪ್ರಾರ್ಥಿಸಿದಂತೆ ಆ ಹುಡುಗನು ಯಾವುದರ ಕಡೆಗೂ ಅತಿಯಾದ ಆಸೆಯಿರಿಸದೆ ತನಗೆ ದೊರೆತುದರಲ್ಲೇ ಸಂತೃಪ್ತನಾಗಿ ಜೀವಿಸಿ, ಸಂತುಷ್ಟನಾಗಿಯೇ ಮರಣ ಹೊಂದಿದನು.

❖ ❖ ❖

66. ಅಸಾಮಾನ್ಯ ತೀರ್ಪು

ಪ್ರವಾದಿವರ್ಯರ(ಸ) ಕಾಲದಲ್ಲಿ ಮಖ್‌ಝೂಮ್ ಗೋತ್ರದ ಓರ್ವಳು ಕಳ್ಳತನ ನಡೆಸಿದಾಗ ಸಿಕ್ಕಿಬಿದ್ದಳು. ಆಕೆ ಶಿಕ್ಷೆಗೆ ಗುರಿಯಾದಳು. ಕುರೈಶರು ಇದು ತಮಗಾದ

ಅವಮಾನವೆಂದು ಭಾವಿಸಿದರು. ಅವರು ವ್ಯಾಕುಲಚಿತ್ತರಾದರು. ಯಾಕೆಂದರೆ ಅ ಪ್ರತಿಷ್ಠಿತ ಕುಟುಂಬದ ಮಹಿಳೆಯಾಗಿದ್ದಳು. ಇಂತಹ ಶ್ರೇಷ್ಠ ಕುಟುಂಬದಿಂದ ಬಂ ಮಹಿಳೆಯು ಶಿಕ್ಷೆಗೊಳಗಾಗುವುದು ಅವರಿಗೆ ಸಹ್ಯವಾಗಲಿಲ್ಲ. ಅದಕ್ಕಾಗಿ ಅವ ಪರಸ್ಪರ ಚರ್ಚೆಯಲ್ಲಿ ನಿರತರಾದರು. ''ಇವಳನ್ನು ಶಿಕ್ಷೆಯಿಂದ ಪಾರುಗೊಳಿಸುವಂ ನಮಗಾಗಿ ಪ್ರವಾದಿವರ್ಯರ(ಸ) ಮುಂದೆ ಶಿಫಾರಸು ಮಾಡುವವರು ಯಾರು?' ಎಂದು ಓರ್ವರು ಕೇಳಿದರು.

ಉಸಾಮ ಬಿನ್ ಝೈದ್‌ರವರು(ರ) ಪ್ರವಾದಿವರ್ಯರಿಗೆ(ಸ) ಹೆಚ್ಚು ನಿಕಟರು ಆತ್ಮೀಯರೂ ಆಗಿದ್ದರು ಎಂಬುದನ್ನು ಸ್ಮರಿಸಿದ ಕುರೈಶರು ಅವರನ್ನು ಸಮೀಪಿಸಿ ತವ ಅಹವಾಲು ನಿವೇದಿಸಿಕೊಂಡರು. ಅವರ ಸೂಚನೆಯಂತೆ ಪ್ರವಾದಿವರ್ಯರನ್ನು(ಸ ಉಸಾಮ ಸಂಪರ್ಕಿಸಿ ಈ ವಿಚಾರ ತಿಳಿಸಿದರು. ಇದನ್ನು ಕೇಳಿದ ಪ್ರವಾದಿವರ್ಯರ(ಸ ಮುಖಭಾವವೇ ಬದಲಾಯಿತು. ತುಸು ಕೋಪದಿಂದಲೇ ಅವರೊಡನೆ ''ಪ್ರತಿಷ್ಠಿತರ ತಪ್ಪೆಸಗಿದರೆ ಅವರನ್ನು ಶಿಕ್ಷಿಸದೆ ದುರ್ಬಲರು, ಬಡವರು ತಪ್ಪು ಮಾಡಿದರೆ ಅವರನ ಶಿಕ್ಷಿಸಿದ ಕಾರಣದಿಂದಲೇ ನಿಮ್ಮ ಹಿಂದಿನ ಜನಾಂಗಗಳು ನಾಶವಾಯಿತು. ನಾನ ಕೂಡಾ ಅದನ್ನು ಪುನರಾವರ್ತಿಸಬೇಕಾ?'' ಎಂದು ಕೇಳಿದರು.

ಬಳಿಕ ಸ್ವಲ್ಪ ಉದ್ರೇಕಿತರಾಗಿ ''ನನ್ನ ಪುತ್ರಿ ಫಾತಿಮಾ ಒಂದು ವೇಳೆ ಕಳ್ಳತನ ಮಾಡಿದಳು ಎಂದಾದರೆ ನಾನು ಆಕೆಯ ಕೈಯನ್ನು ಕತ್ತರಿಸಲು ಹಿಂಜರಿಯಲಾರೆ' ಎಂದು ಹೇಳಿದರು.

❖ ❖ ❖

67. ಶಿಕ್ಷೆ ಹಾಗೂ ಶಿಕ್ಷಣ

ಅದು ಉಪವಾಸದ ಸಂದರ್ಭವಾಗಿತ್ತು. ಪ್ರವಾದಿವರ್ಯರ(ಸ) ಅನುಚರರೋರ್ವ ರಿಂದ ಒಂದು ಪ್ರಮಾದವಾಯಿತು. ಅದೊಂದು ಆಜ್ಞೋಲ್ಲಂಘನೆ. ಉಪವಾಸವಿರುವಂತೆ ಪತ್ನಿಯೊಂದಿಗೆ ಲೈಂಗಿಕ ಸಂಬಂಧ ಬೆಳೆಸಿದರು. ಬಳಿಕ ಕಳವಳಗೊಂಡು ಪಾಪದ ಪ್ರಾಯಶ್ಚಿತ್ತಕ್ಕಾಗಿ ಪ್ರವಾದಿವರ್ಯರ(ಸ) ಬಳಿಗೆ ಸಾಗಿ ವಿಷಯವನ್ನೆಲ್ಲಾ ತಿಳಿಸಿದರು. ಪ್ರವಾದಿ ವರ್ಯರೊಂದಿಗೆ ಈ ಪಾಪದ ಪ್ರಾಯಶ್ಚಿತ್ತವಾಗಿ ಪರಿಹಾರವೇನೆಂದು ಕೇಳಿದರು.

ಪ್ರವಾದಿವರ್ಯರು(ಸ) ಅವರೊಂದಿಗೆ ''ಬಂಧಿತನಾದ ಓರ್ವ ಗುಲಾಮನನ್ನು ವಿಮೋಚನೆ ಗೊಳಿಸಿ ಸ್ವತಂತ್ರಗೊಳಿಸಿರಿ, ಇದು ನಿಮ್ಮ ಪಾಪಕ್ಕಿರುವ ಪ್ರಾಯಶ್ಚಿತ್ತ.

ಇದೊಂದು ಅತೀ ಮಹತ್ತರವಾದ ಪುಣ್ಯ ಕರ್ಮವಾಗಿದೆ. ನಿಮ್ಮ ಪಾಪಗಳನ್ನು ಅದು ಅಳಿಸಿ ಹಾಕುವುದು'' ಎಂದರು.

''ಅಲ್ಲಾಹನ ಪ್ರವಾದಿಗಳೇ(ಸ) ಅದು ನನ್ನಿಂದ ಸಾಧ್ಯವಾಗದ ಮಾತು? ಯಾಕೆಂದರೆ ಆರ್ಥಿಕವಾಗಿ ನಾನು ತುಂಬಾ ದುರ್ಬಲನಾಗಿದ್ದೇನೆ'' ಎಂದು ಯುವಕ ತನ್ನ ಸ್ಥಿತಿಯನ್ನು ತಿಳಿಸಿದನು.

''ಹಾಗಾದರೆ ನಿರಂತರ ಎಡಬಿಡದೆ ಎರಡು ತಿಂಗಳು ಉಪವಾಸ ವ್ರತ ಕೈಗೊಳ್ಳಿರಿ. ಅದೊಂದು ಉತ್ತಮವಾದ ಪ್ರಾಯಶ್ಚಿತ್ತವಾಗಿದೆ. ಅದು ನಿನ್ನನ್ನು ಪಾಪ ಮುಕ್ತಗೊಳಿಸುವ ಉಪಾಧಿಯಾಗಿದೆ'' ಎಂದರು.

''ಪ್ರವಾದಿಗಳೇ ಒಂದು ತಿಂಗಳ ಉಪವಾಸ ಆಚರಿಸುವುದರಲ್ಲಿಯೇ ಎಡವಿರುವ ನಾನು ಇನ್ನು ಎರಡು ತಿಂಗಳು ನಿರಂತರ ಎಡಬಿಡದೆ ಉಪವಾಸ ಆಚರಿಸಲು ಸಾಧ್ಯವೇ?'' ಎಂದು ತನ್ನ ಅಸಹಾಯಕತೆಯನ್ನು ಯುವಕ ವಿವರಿಸಿದ.

''ಹಾಗಾದರೆ 60 ಮಂದಿ ದರಿದ್ರರಿಗೆ ಅನ್ನದಾನ ಮಾಡಬೇಕು. ಅದಲ್ಲದೆ ಬೇರೆ ಮಾರ್ಗವಿಲ್ಲ'' ಎಂದು ಪ್ರವಾದಿವರ್ಯರು(ಸ) ತನ್ನ ಕೊನೆಯ ತೀರ್ಪು ಎಂಬಂತೆ ಹೇಳಿಬಿಟ್ಟರು.

''ಪ್ರವಾದಿವರ್ಯರೇ(ಸ) ನಾನು ಅತ್ಯಂತ ಬಡವ. ಕಡು ಬಡವನಾಗಿದ್ದುಕೊಂಡು ದಿನ ನಿರ್ವಹಣೆಯೇ ನನ್ನಿಂದ ಕಷ್ಟವಾಗುತ್ತಿರುವಾಗ ನಾನು 60 ಮಂದಿಗೆ ಅನ್ನದಾನ ಮಾಡಲಿ ಹೇಗೆ? ಎಂದು ಕೇಳಿದನು.

ಯುವಕನ ಮಾತು ಕೇಳಿದ ಪ್ರವಾದಿವರ್ಯರು(ಸ) ಮುಗುಳ್ನಕ್ಕರು. ಪಾಪದ ಬಗೆಗಿನ ಪ್ರಾಯಶ್ಚಿತ್ತದ ತುಡಿತದಲ್ಲಿದ್ದ ಆ ಯುವಕನ ನಿಷ್ಕಳಂಕವಾದ ಮನಸ್ಸು, ಆತನ ಅಸಹಾಯಕತೆ ಪ್ರವಾದಿವರ್ಯರಿಗೆ(ಸ) ಆತನಲ್ಲಿ ಅನುಕಂಪ ಮೂಡುವಂತೆ ಮಾಡಿತು. ಆಗ ಪ್ರವಾದಿವರ್ಯರಿಗೆ(ಸ) ಉಡುಗೊರೆಯಾಗಿ ನೀಡಲೆಂದು ಓರ್ವರು ಖರ್ಜೂರದ ಗಂಟನ್ನು ಹಿಡಿದುಕೊಂಡು ಬಂದರು. ಪ್ರವಾದಿವರ್ಯರು(ಸ) ಆ ಉಡುಗೊರೆಯನ್ನು ಸ್ವೀಕರಿಸಿದರು. ಬಳಿಕ ಆ ಯುವಕನಿಗೆ ನೀಡುತ್ತಾ ''ಈ ಖರ್ಜೂರವನ್ನು ಬಡಬಗ್ಗರಿಗೆ ದಾನ ಮಾಡಿರಿ.''

''ನಿಮಗೆ ನನ್ನ ಕುರಿತು ತಿಳಿದಿಲ್ಲವೇ ಪ್ರವಾದಿಗಳೇ, ನನ್ನಷ್ಟು ದಾರಿದ್ರ್ಯಕ್ಕೆ ಒಳಗಾದವರು ಈ ಪ್ರದೇಶದಲ್ಲಿ ಯಾರೂ ಇಲ್ಲ'' ಎಂದು ಯುವಕ ಪ್ರತಿಕ್ರಿಯಿಸಿದ.

''ಹಾಗಾದರೆ ನೀನು ಇದನ್ನು ತೆಗೆದುಕೊಂಡು ಮನೆಗೆ ಹೋಗು'' ಎಂದು ಪ್ರವಾದಿವರ್ಯರು(ಸ) ನಿರ್ದೇಶಿಸಿದರು.

ಕರುಣೆಯ ಆಗರವಾದ ಪ್ರವಾದಿವರ್ಯ(ಸ) ಮಾತುಗಳು ಆ ಯುವಕನ ಕಣ್ಣುಗಳನ್ನು ಒದ್ದೆಯಾಗಿಸಿತು. ಈ ಶಿಕ್ಷಾವಿಧಿ ಅಲ್ಲಿರುವ ಎಲ್ಲರನ್ನೂ ನಿಬ್ಬೆರಗಾಗಿಸಿತು. ಮನುಷ್ಯನನ್ನು ಪೀಡಿಸುವುದೋ ಅಥವಾ ಸಂಕಷ್ಟಕ್ಕೊಳ ಪಡಿಸುವುದೋ ಅಲ್ಲಾಹನ ಉದ್ದೇಶವಲ್ಲ, ಬದಲು ಆತನನ್ನು ಸಂಸ್ಕರಿಸಿ ಶುದ್ಧಿಗೊಳಿಸುವುದೇ ಉದ್ದೇಶವಾಗಿದೆ ಎನ್ನುವುದನ್ನು ಪ್ರವಾದಿವರ್ಯರು(ಸ) ಕಲಿಸಿದರು. ಯಾರಿಗೂ ತಿಳಿಯದಂತೆ ಮಾಡಿದ ಪಾಪವನ್ನು ಹೊಣೆಗಾರ ವ್ಯಕ್ತಿಯೊಂದಿಗೆ ತಿಳಿಸಿ ಶಿಕ್ಷೆಯನ್ನು ಕೇಳಿ ಪಡೆಯಲು ಸನ್ನದ್ಧವಾದ ಮನೋಭಾವವನ್ನು ಗೌರವಿಸಿದ ಬಳಿಕವೇ ಅಲ್ಲಿ ಶಿಕ್ಷೆಗೆ ಎರಡನೇ ಸ್ಥಾನವಾಗಿದೆ.

❖ ❖ ❖

68. ಎರಡು ಘಟನೆ ಎರಡು ತೀರ್ಪು

6ನೇ ಶತಮಾನದಲ್ಲಿ ಮಹಿಳೆಯರು ಗುಲಾಮರಂತಿದ್ದರು. ಅವರನ್ನು ಹೀನಾಯವಾಗಿ ಕಾಣಲಾಗುತ್ತಿತ್ತು. ಅಂದರೆ ಮಾರಾಟದ ಸರಕುಗಳಂತೆ ಸಂತೆ, ಮಾರ್ಕೆಟುಗಳಲ್ಲಿ ಕಂಡುಬರುವ ಮಾರಾಟದ ಜಾನುವಾರುಗಳಂತೆ ಮಹಿಳೆ ಕೇವಲ ಭೋಗದ ವಸ್ತುವಾಗಿದ್ದಳು. ಕೌಟುಂಬಿಕ ಜೀವನದಲ್ಲಾಗಲೀ ವೈವಾಹಿಕ ಜೀವನದಲ್ಲಾಗಲೀ ಅವಳ ಅಭಿಪ್ರಾಯಗಳಿಗೆ ಯಾವುದೇ ರೀತಿಯ ಮಾನ್ಯತೆ ಇರಲಿಲ್ಲ. ಈ ರೀತಿ ರಿವಾಜುಗಳು ಅಲ್ಲಿ ನಡೆದುಕೊಂಡು ಬರುತ್ತಿರುವಾಗ ಓರ್ವರು ತನ್ನ ಪುತ್ರಿಯನ್ನು ತನ್ನ ಸಹೋದರ ಪುತ್ರನಿಗೆ ವಿವಾಹ ಮಾಡಿಸಿ ಕೊಡಲು ನಿರ್ಧರಿಸಿದರು. ಈಕೆಯ ಮುಖಾಂತರ ಆ ಸಹೋದರ ಪುತ್ರನ ಕುಂದು ಕೊರತೆಗಳು ಪರಿಹಾರವಾಗಬೇಕೆಂಬುದು ಆತನ ಉದ್ದೇಶವಾಗಿತ್ತು. ಆದರೆ ಆಕೆಗೆ ಈ ವಿವಾಹ ಇಷ್ಟವಾಗಲಿಲ್ಲ, ಯಾಕೆಂದರೆ ನನ್ನಲ್ಲಿ ಯಾವುದೇ ರೀತಿಯ ಅಭಿಪ್ರಾಯ ಕೇಳದೆ ವಿವಾಹ ನಡೆಸಿದ್ದು ಸರಿಯಲ್ಲ ಎಂಬ ಭಾವನೆ ಆಕೆಯಲ್ಲಿ ಬಲವಾಗಿ ಮೂಡಿತ್ತು. ಇಸ್ಲಾಮ್ ನೀಡಿದ ಸ್ವಾತಂತ್ರ್ಯದ ಕೊಡುಗೆಯಿಂದ ಆಕೆಗೆ ಈ ಭಾವನೆ ಹೊಮ್ಮಿತ್ತು. ಅದರ ವಿರುದ್ಧ ಧ್ವನಿಯೆತ್ತಲು ಪ್ರೇರಕವಾಯಿತು. ಅವಳು ನೇರವಾಗಿ ಈ ಕುರಿತು ಪ್ರವಾದಿವರ್ಯರ(ಸ) ಬಳಿ ತೆರಳಿ ತಂದೆಯ ವಿರುದ್ಧ ದೂರಿತ್ತಳು. ಪ್ರವಾದಿವರ್ಯರು(ಸ) ''ನಿನಗೆ ಇಷ್ಟವಿದ್ದರೆ ಮಾತ್ರ ಆತನನ್ನು ವಿವಾಹವಾಗಬಹುದು, ಇಲ್ಲದಿದ್ದರೆ ತೊರೆಯಬಹುದು.'' ಈ ಕುರಿತು ನೀನೇ ತೀರ್ಮಾನಿಸು ಎಂದು ಹೇಳಿದರು. ಈ ಮೂಲಕ ತನ್ನ ಹಾಗೂ ಮಹಿಳೆಯರ ಸ್ವಾತಂತ್ರ್ಯವನ್ನು ಮರಳಿ ಪಡೆದ ಆಕೆ 'ನಾನು ತಂದೆಯವರ ಆಯ್ಕೆಯನ್ನು ಅಂಗೀಕರಿಸುವೆನು. ಈ ವಿಚಾರದಲ್ಲಿ ತಂದೆಯಂದಿರು ತಮಗಿರುವ ಹಕ್ಕಿನ ಕುರಿತು ಅರಿಯುವಂತೆ ಮಾಡುವುದು ನನ್ನ

ಉದ್ದೇಶವಾಗಿತ್ತು' ಎಂದಳು. ತನ್ನ ನಿಲುವಿಗೆ ಪ್ರವಾದಿವರ್ಯರಿಂದ(ಸ) ಅಂಗೀಕಾರ ಪಡೆದ ಸಂಪೂರ್ಣ ಸ್ತ್ರೀ ಕುಲದ ಮಹತ್ವವನ್ನು ಎತ್ತಿ ಹಿಡಿದ ಆಕೆ ಅಭಿಮಾನದಿಂದ ಮರಳಿದಳು.

ಪ್ರವಾದಿವರ್ಯರ(ಸ) ಶಿಷ್ಯಂದಿರಲ್ಲಿ ಪ್ರಮುಖರಾದ ಸಾಬಿತ್ ಬಿನ್ ಕೈಸ್‌ರು ನೋಡಲು ಸ್ವಲ್ಪ ಕುರೂಪಿಯಾಗಿದ್ದರು. ಅವರ ಮೈಬಣ್ಣ ಕೂಡಾ ಕಪ್ಪಾಗಿತ್ತು. ಆದರೆ ಅವರ ಪತ್ನಿ ಜಮೀಲ ಅತ್ಯಂತ ಸುಂದರಿಯಾಗಿದ್ದರು. ಆದ್ದರಿಂದ ಆಕೆಯನ್ನು ಅವರು ತುಂಬಾ ಪ್ರೀತಿಸುತ್ತಿದ್ದರು. ಆದರೆ ಜಮೀಲರಿಗೆ ಅವರ ಕುರಿತು ಅಸಂತೃಪ್ತಿಯಿತ್ತು. ಆ ಕಾರಣವಾಗಿ ಜಮೀಲ ವಿವಾಹ ವಿಚ್ಛೇದನಕ್ಕಾಗಿ ಆಗ್ರಹಿಸಿದಳು. ಸಾಬಿತ್‌ರಿಗೆ ಇದು ಊಹಿಸಲಾಗದ ಆಘಾತವಾಗಿತ್ತು. ಕಾರಣ ಅವರು ಅವರನ್ನು ಅಷ್ಟೊಂದು ಗಾಢವಾಗಿ ಪ್ರೀತಿಸುತ್ತಿದ್ದರು. ಜಮೀಲ ಪ್ರವಾದಿವರ್ಯರನ್ನು ಸಂಪರ್ಕಿಸಿ ತನ್ನ ಮನದಿಂಗಿತವನ್ನು ವಿವರಿಸಿದರು. 'ಪ್ರವಾದಿವರ್ಯರೇ(ಸ) ಸಾಬಿತ್ ಬಿಸ್ ಕೈಸ್‌ರಲ್ಲಿ ನನಗೆ ಧಾರ್ಮಿಕವಾಗಿಯೋ ಚಾರಿತ್ರ್ಯದ ವಿಷಯದಲ್ಲೋ ಯಾವುದೇ ರೀತಿಯ ಕೊರತೆ ಕಂಡಿಲ್ಲ, ಆದರೂ ನಾನು ಅವರನ್ನು ಇಷ್ಟ ಪಡುವುದಿಲ್ಲ, ಮನಸ್ಸಲ್ಲಿ ಅವರ ಕುರಿತು ನನಗೆ ತುಂಬಾ ಅಲರ್ಜಿ ಇದೆ. ಆ ಕಾರಣದಿಂದ ನಾನು ಅವರಿಂದ ವಿಚ್ಛೇದನವನ್ನು ಬಯಸುತ್ತಿದ್ದೇನೆ.''

ಇವನ್ನು ಕೇಳಿದ ಪ್ರವಾದಿವರ್ಯರು(ಸ), ''ವಿವಾಹಧನವಾಗಿ ನೀವು ಅವರಿಂದ ಏನು ಪಡೆದುಕೊಂಡಿದ್ದೀರಿ'' ಎಂದು ಕೇಳಿದರು.

''ಒಂದು ತೋಟವನ್ನು ಪಡೆದಿರುತ್ತೇನೆ'' ಎಂದುತ್ತರಿಸಿದರು.

''ಹಾಗಾದರೆ ಅದನ್ನು ಮರಳಿ ಅವರಿಗೆ ನೀಡಿ ವಿವಾಹ ವಿಚ್ಛೇದನ ಪಡೆಯುತ್ತೀರಾ?''

''ಖಂಡಿತವಾಗಿಯೂ ನೀಡುತ್ತೇನೆ'' ಎಂದರು.

ಅದರಂತೆ ಸಾಬಿತ್‌ರನ್ನು ಕರೆದು ಪ್ರವಾದಿವರ್ಯರು(ಸ)

''ನೀವು ತೋಟವನ್ನು ಪಡೆದುಕೊಳ್ಳಿರಿ. ಬಳಿಕ ಅವಳನ್ನು ವಿಚ್ಛೇದಿಸಿರಿ'' ಎಂದು ಹೇಳಿದರು.

ಪ್ರವಾದಿವರ್ಯರ(ಸ) ಈ ತೀರ್ಮಾನವು ಮಹಿಳೆಗೆ ವಿವಾಹ ವಿಚ್ಛೇದನದ ಅನುಮತಿಯ ಬಾಗಿಲು ತೆರೆಯಲ್ಪಟ್ಟಿತು.

❖ ❖ ❖

69. ಸ್ವಾಭಿಮಾನಿ

ಯಾತ್ರಾ ತಂಡವು ನಿರಂತರ ಕೆಲವಾರು ಗಂಟೆಗಳಿಂದ ಮರುಭೂಮಿಯ ಮಧ್ಯೆ ಸಂಚರಿಸುತ್ತಿತ್ತು. ಎಲ್ಲರ ಮುಖದಲ್ಲೂ ದಣಿವು ಗೋಚರವಾಗುತ್ತಿತ್ತು. ಅವರನ್ನು ಹೊತ್ತುಕೊಂಡು ಹೋಗುತ್ತಿರುವ ಒಂಟೆಗಳೂ ತೀರಾ ದಣಿದಿದ್ದವು. ಅವರು ದಾಹದಿಂದ ಬಳಲಿದ್ದರು. ಕುಡಿಯಲು ಸ್ವಲ್ಪ ನೀರು ಸಿಕ್ಕಿದ್ದರೆ!! ಎಂಬ ನಿರೀಕ್ಷೆಯಲ್ಲಿದ್ದರು. ಸ್ವಲ್ಪ ದೂರ ಹೋದಾಗ ಎಲ್ಲರ ನಿರೀಕ್ಷೆಯಂತೆ ಅವರಿಗೆ ನೀರು ಕಾಣ ಸಿಕ್ಕಿತು. ಅಲ್ಲಿ ಅವರು ಸ್ವಲ್ಪ ವಿಶ್ರಾಂತಿ ಪಡೆಯಲು ಬಯಸಿದರು. ಪ್ರವಾದಿವರ್ಯರು(ಸ) ಒಂಟೆಯಿಂದ ಕೆಳಗಿಳಿದರು. ಅನುಚರರೂ ಅವರನ್ನು ಅನುಸರಿಸಿದರು. ಹಾಗೆಯೇ ಎಲ್ಲರೂ ನೀರು ಕುಡಿಯಲು ತೆರಳಿದರು. ಆದರೆ ಪ್ರವಾದಿವರ್ಯರು(ಸ) ಸ್ವಲ್ಪ ದೂರ ಹೋದ ಬಳಿಕ ಹಿಂದಿರುಗಿ ಬಂದರು. ಆಶ್ಚರ್ಯಗೊಂಡ ಅನುಚರರು ಅವರನ್ನು ನೋಡುತ್ತಾ ನಿಂತರು. ತನ್ನ ಒಂಟೆಯ ಕಾಲುಗಳನ್ನು ಕಟ್ಟಿದ ಬಳಿಕ ಪ್ರವಾದಿವರ್ಯರು(ಸ) ಬಂದರು.

ಇಷ್ಟು ಕ್ಷುಲ್ಲಕ ಕೆಲಸಕ್ಕಾಗಿ ಅಲ್ಲಾಹನ ಪ್ರವಾದಿಗಳು ಕಷ್ಟಪಟ್ಟು ಹಿಂದಿರುಗಿ ಬಂದದ್ದನ್ನು ನೋಡಿ ನೊಂದ ಅನುಚರರು ಅವರನ್ನು ಸಮೀಪಿಸಿ, ''ಇಷ್ಟೊಂದು ಕ್ಷುಲ್ಲಕ ಕಾರ್ಯಕ್ಕೆ ತಾವು ಹಿಂತಿರುಗಿ ಬಂದಿರುವುದಾದರೂ ಏಕೆ? ನಮಗೆ ಸ್ವಲ್ಪ ಸೂಚನೆ ನೀಡಿದ್ದರೆ ನಮ್ಮಲ್ಲಿ ಯಾರಾದರೊಬ್ಬರು ಆ ಕಾರ್ಯ ಸಂತೋಷದಿಂದ ನಿರ್ವಹಿಸುತ್ತಿದ್ದರಲ್ಲವೇ? ನಮಗೆ ಅದೊಂದು ಮಹತ್ಕಾರ್ಯವಾಗಿದೆ'' ಎಂದು ಹೇಳಿದರು.

''ನಾವು ಸ್ವತಃ ಮಾಡಬೇಕಾದ ಕಾರ್ಯಗಳನ್ನು ಇತರರೊಂದಿಗೆ ಹೇಳುವುದು, ಅದು ಮಾಡಿ ಕೊಡುವಂತೆ ಕಾದು ನಿಲ್ಲುವುದು ಸರಿಯಲ್ಲ, ಅದು ಹಲ್ಲು ಶುಚಿಗೊಳಿಸಲು ಉಪಯೋಗಿಸುವ ಸಣ್ಣ ಕಡ್ಡಿಯ ವಿಷಯದಲ್ಲಾದರೂ ಸರಿ'' ಎಂದು ಪ್ರವಾದಿವರ್ಯರು(ಸ) ಹೇಳಿದರು.

❖ ❖ ❖

70. ಎಲ್ಲರಲ್ಲಿ ಒಬ್ಬರು

ಪ್ರವಾದಿವರ್ಯರು(ಸ) ಮತ್ತವರ ಅನುಚರರು ಒಮ್ಮೆ ಪ್ರಯಾಣದಲ್ಲಿರುವಾಗ ವಿಶ್ರಾಂತಿ ಹಾಗೂ ಉಪಹಾರಕ್ಕಾಗಿ ಒಂದೆಡೆ ತಂಗಿದರು. ಎಲ್ಲರೂ ಸೇರಿ ಅವರೊಂದು

ಡೊಂದನ್ನು ದಿಬ್ಞ ಮಾಡಿ ಅಡುಗೆ ಮಾಡಲು ನಿರ್ಧರಿಸಿದರು. ಆಗ ಅವರಲ್ಲಿ ರ್ವರು ''ನಾನು ಆಡನ್ನು ದಿಬ್ಹ್ ಮಾಡುತ್ತೇನೆ'' ಎಂದರು. ಇನ್ನೋರ್ವರು ನಾನು ಆಡಿನ ಚರ್ಮವನ್ನು ಸುಲಿಯುತ್ತೇನೆ'' ಎಂದಾಗ ಮತ್ತೋರ್ವರು ''ನಾನು ದಾರ್ಥ ಮಾಡುತ್ತೇನೆ'' ಎಂದು ಹೇಳುತ್ತಾ ಪ್ರತಿಯೊಬ್ಬರೂ ಒಂದೊಂದು ಕೆಲಸವನ್ನು ಹಿಸಿಕೊಂಡರು. ಕೂಡಲೇ ಪ್ರವಾದಿವರ್ಯರು(ಸ) ''ಕಟ್ಟಿಗೆಯನ್ನು ನಾನು ತರುತ್ತೇನೆ'' ಂದರು. ''ಬೇಡ, ನಾವೇ ತರುತ್ತೇವೆಂದು'' ಅನುಚರರು ಹೇಳಿದರು. ಆದರೆ ಪ್ರವಾದಿವರ್ಯರು(ಸ) ಒಪ್ಪಲಿಲ್ಲ, ''ನೋಡಿ, ನೀವು ಅದನ್ನು ಮಾಡುತ್ತೀರಿ ಎಂಬುದು ನನಗೆ ತಿಳಿದಿದೆ. ಆದರೆ ನಾನು ಸ್ವತಃ ನಿಮಗಿಂತ ನನ್ನನ್ನು ಶ್ರೇಷ್ಠನನ್ನಾಗಿ ಕಾಣಲು ಬಯಸುವುದಿಲ್ಲ, ನೀವು ಆ ರೀತಿ ನನ್ನನ್ನು ಒಂದೆಡೆ ಕೂರಿಸುವುದನ್ನು ನಾನು ಇಷ್ಟ ಪಡುವುದಿಲ್ಲ, ತನ್ನ ಸ್ನೇಹಿತರ ಮಧ್ಯೆ ತಾನೇ ಶ್ರೇಷ್ಠ ಎಂದು ಬಯಸುವವನನ್ನು ಅಲ್ಲಾಹನು ಇಷ್ಟ ಪಡಲಾರ'' ಎಂದು ಹೇಳಿದರು. ಬಳಿಕ ಅಡುಗೆ ಮಾಡಲು ಸೂಚಿಸಿದ ಪ್ರವಾದಿವರ್ಯರು(ಸ) ಸ್ವತಃ ಕಟ್ಟಿಗೆ ಸಂಗ್ರಹಿಸಿ ತಂದರು.

ಹಾರೆ, ಪಿಕ್ಕಾಸುಗಳ ಮೂಲಕ ಅಗೆಯುವುದು ಮುಂತಾದ ಕೆಲಸಗಳು ತನ್ನ ಅರ್ಹತೆಗೆ ತಕ್ಕುದಲ್ಲವೆಂದು ಪ್ರವಾದಿವರ್ಯರು(ಸ) ಭಾವಿಸುತ್ತಿರಲಿಲ್ಲ, ಹಿಜ್‌ರಾ 5ರಲ್ಲಿ ನಡೆದ ಅಹ್‌ಝಾಬ್ ಯುದ್ಧದ ಸಂದರ್ಭದಲ್ಲಿ ಮೂರು ಸಾವಿರ ಅನುಚರ ರೊಂದಿಗೆ 20 ದಿನಗಳ ಕಾಲ ಕಣಿವೆ ಅಗೆಯುವುದರಲ್ಲಿ ಅವರೂ ಭಾಗಿಯಾಗಿದ್ದರು.

❖ ❖ ❖

71. ಸರಳತೆಯ ಹರಿಕಾರ

ಒಮ್ಮೆ ಉಮರ್‌ರು(ರ) ಪ್ರವಾದಿವರ್ಯರೊಡನೆ ''ಅಲ್ಲಾಹನ ಪ್ರವಾದಿಗಳೇ, ತಾವು ಇಷ್ಟೊಂದು ದಾರಿದ್ರ್ಯ ಸಂಕಷ್ಟಗಳಿಂದ ಕೂಡಿದ ಜೀವನ ನಡೆಸುತ್ತಿರುವಾಗ ಕಿಸ್ರಾ ಹಾಗೂ ಕೈಸರ್‌ನ ದೊರೆಗಳು ಸರ್ವರೀತಿಯ ಸುಖಾಡಂಬರಗಳಿಂದ ಕೂಡಿದ ಜೀವನ ನಡೆಸುತ್ತಿರುವುದೊಂದು ವಿಪರ್ಯಾಸವಲ್ಲವೇ?'' ಎಂದು ಕೇಳಿದರು. ಈ ಪ್ರಶ್ನೆಯನ್ನು ಕೇಳುತ್ತಿರುವಾಗ ಉಮರ್‌ರ(ರ) ಕಣ್ಣುಗಳಿಂದ ನೀರು ತುಂಬಿ ಹರಿದಾಡಿತ್ತು. ತಾನು ಅತೀ ಹೆಚ್ಚು ಪ್ರೀತಿಸುವ ವಿಶ್ವ ನಾಯಕನ ಬೆನ್ನ ಮೇಲೆ ಮಲಗಿದ ಚಾಪೆಯ ಗೆರೆಯನ್ನು ಕಂಡು ಅವರಿಗೆ ದುಃಖ ತಡೆಯಲಾಗಲಿಲ್ಲ, ಆಗ ಸುಮಾರು ಅರೇಬಿಯಾದ ಅರ್ಧಭಾಗ ಪ್ರವಾದಿವರ್ಯರ(ಸ) ಅಧೀನಕ್ಕೊಳಪಟ್ಟಿತ್ತು. ಪ್ರವಾದಿವರ್ಯರು(ಸ) ಇಸ್ಲಾಮೀ ಸಮಾಜದ ನಾಯಕ ಮಾತ್ರವಾಗಿರಲಿಲ್ಲ, ಮದೀನಾ ರಾಜಧಾನಿಯಾಗಿದ್ದ

ಇಸ್ಲಾಮೀ ಸಾಮ್ರಾಜ್ಯದ ಆಡಳಿತಾಧಿಕಾರಿಯಾಗಿದ್ದರು. ಆದರೂ ಎಲೆಯಿಂ
ತಯಾರಿಸಿದ ಚಾಪೆಯಲ್ಲಿ ಅವರು ನಿದ್ರಿಸುತ್ತಿದ್ದರು. ಅವರ ಮನೆಯ ವಸ
ಸಾಮಗ್ರಿಗಳಿಗೂ ಮಿತಿಯಿತ್ತು.

ಆಗ ಪ್ರವಾದಿವರ್ಯರಿಗೆ(ಸ) ಸಮೀಪದ ನಾಡುಗಳಿಂದ ಸಂಪತ್ತುಗಳೂ ಹರಿದ
ಬರುತ್ತಿತ್ತು. ಆದರೆ ಪ್ರವಾದಿವರ್ಯರು(ಸ) ಅದರಿಂದ ಚಿಕ್ಕಾಸನ್ನೂ ತನಗಾ
ಉಪಯೋಗಿಸದೆ ಎಲ್ಲವನ್ನೂ ಸಾರ್ವಜನಿಕರಿಗೆ ವಿನಿಯೋಗಿಸುತ್ತಿದ್ದರು. ಬಹ
ಸರಳತೆಯ ಜೀವನ ನಡೆಸಿದರು. ಅರೇಬಿಯಾದ ಅತ್ಯಂತ ಬಡವನಂತಿತ್ತು ಅವ
ಸ್ಥಿತಿ. ಇದನ್ನು ನೋಡಿದ ಉಮರ್(ರ) ಅಳು ತಡೆದಿರಿಸುವುದಾದರೂ ಹೇಗೆ?

ಆಗ ಪ್ರವಾದಿವರ್ಯರು(ಸ) ''ಉಮರ್(ರ) ನೋಡಿರಿ. ಈ ಕೈಸರ್
ದೊರೆಗಳು, ಈ ಭೌತಿಕ ಜಗತ್ತನ್ನು ಆರಿಸಿರುವಾಗ ನಾನು ಪರಲೋಕವನ್ನು ಇಷ್ಟ
ಪಟ್ಟಿರುವುದು ನಿಮಗೆ ಇಷ್ಟವಿಲ್ಲವೇ?'' ಎಂದು ಕೇಳಿದರು.

ಪ್ರವಾದಿವರ್ಯರ(ಸ) ಈ ಪ್ರಶ್ನೆಗೆ ಉಮರ್(ರ) ನಿರುತ್ತರರಾದರು.

❖ ❖ ❖

72. ಬದಲಾವಣೆಯ ಹಾದಿ

''ಏನಾದರೂ ಕೊಡುತ್ತೀರಾ'' ಎಂದು ಓರ್ವರು ಪ್ರವಾದಿವರ್ಯರ(ಸ) ಬಳಿ
ಬಂದು ಯಾಚಿಸಿದರು.

ಪ್ರವಾದಿವರ್ಯರ(ಸ) ಸುತ್ತಲೂ ಅವರ ಅನುಚರರು ಸೇರಿದ್ದರು. ಆ ಯುವಕನು ಧರಿಸಿದ ಬಟ್ಟೆಗಳು ಚಿಂದಿ ಚಿಂದಿಯಾಗಿತ್ತು. ತೀರಾ ಹಳತಾಗಿತ್ತು.

''ನೀವೇಕೆ ಈ ರೀತಿ ಭಿಕ್ಷೆ ಬೇಡುತ್ತಿರುವುದು? ಮನೆಯಲ್ಲಿ ಏನೂ ಇಲ್ಲವೇ?'' ಎಂದು ಪ್ರವಾದಿವರ್ಯರು(ಸ) ಕೇಳಿದರು.

''ಇಲ್ಲ.''

''ಏನೂ ಇಲ್ಲವಾ?''

''ನಿದ್ರಿಸಲು ಉಪಯೋಗಿಸುವ ಚಾದರವೊಂದಿದೆ ಹಾಗೂ ನೀರು ತರಲು ಉಪಯೋಗಿಸುವ ಪಾತ್ರೆಯೊಂದಿದೆ.''

''ಹಾಗಾದರೆ ಅವೆರಡನ್ನೂ ತನ್ನಿ.''

ಆ ವ್ಯಕ್ತಿ ಅವೆರಡನ್ನೂ ತಂದರು. ಅದನ್ನು ಕೈಗೆತ್ತಿಕೊಂಡು ಪ್ರವಾದಿವರ್ಯರು(ಸ)

'ಇದನ್ನು ಪಡೆಯುವವರು ಯಾರಾದರೂ ಇದ್ದಾರೆಯೇ'' ಎಂದು ಅನುಚರರಲ್ಲಿ ಕೇಳಿದರು.

ಆಗ ಅವರಲ್ಲೋರ್ವರು ಒಂದು ದಿರ್ಹಮ್ ಕೊಟ್ಟು ತಾನು ಪಡೆಯುವುದಾಗಿ ಹೇಳಿದರು.

ಆಗ ಪ್ರವಾದಿವರ್ಯರು(ಸ) ''ಅದಕ್ಕಿಂತಲೂ ಹೆಚ್ಚು ನೀಡಲು ಯಾರಾದರೂ ಸಿದ್ಧರಿದ್ದೀರಾ'' ಎಂದು ಕೇಳಿದರು. ಆಗ ಅವರಲ್ಲಿ ಓರ್ವರು ಎರಡು ದಿರ್ಹಮ್ ನೀಡುವುದಾಗಿ ಹೇಳಿದರು. ಪ್ರವಾದಿವರ್ಯರು(ಸ) ಅವೆರಡನ್ನೂ ಅವರಿಗೆ ನೀಡಿ, ಎರಡು ದಿರ್ಹಮ್ ಪಡೆದರು.

ಆ ಭಿಕ್ಷುಕನಿಗೆ ಎರಡು ದಿರ್ಹಮ್ ನೀಡುತ್ತಾ ''ಒಂದು ದಿರ್‌ಹಮ್‌ನಲ್ಲಿ ನಿನ್ನ ಕುಟುಂಬಸ್ಥರಿಗೆ ಆಹಾರವನ್ನು ನೀಡು. ಮತ್ತೊಂದು ದಿರ್ಹಮ್‌ನಿಂದ ಒಂದು ಕೊಡಲಿ ಖರೀದಿಸಿ ತಾ ಎಂದು ಹೇಳಿದರು.

ಸ್ವಲ್ಪ ಸಮಯದ ಬಳಿಕ ಆ ವ್ಯಕ್ತಿ ಕೊಡಲಿಯೊಂದನ್ನು ಖರೀದಿಸಿ ತಂದರು. ಪ್ರವಾದಿವರ್ಯರು(ಸ) ಅದಕ್ಕೊಂದು ಮರದ ಹಿಡಿ ಹಾಕಿ ಅವರೊಂದಿಗೆ ''ಇದನ್ನು ಪಯೋಗಿಸಿಕೊಂಡು ಕಟ್ಟಿಗೆಯನ್ನು ಕಡಿದು ಪೇಟೆಯಲ್ಲಿ ಮಾರಾಟ ಮಾಡು. ಇದನ್ನು ನಿರಂತರ ಮಾಡುತ್ತಲಿರಿ. ಇನ್ನು ಹದಿನೈದು ದಿವಸಗಳ ಬಳಿಕ ನನ್ನನ್ನು ಭೇಟಿಯಾಗು'' ಎಂದು ಹೇಳಿದರು.

ಪ್ರವಾದಿವರ್ಯರ(ಸ) ನಿರ್ದೇಶನದಂತೆ ಅವರು ಕಟ್ಟಿಗೆ ಕಡಿದು ಮಾರಾಟ ಮಾಡ ತೊಡಗಿದರು. ಅದರಿಂದ ಅವರು ಹತ್ತು ದಿರ್‌ಹಮ್ ಸಂಪಾದಿಸಿದರು. ಬಳಿಕ ಪ್ರವಾದಿವರ್ಯರನ್ನು(ಸ) ಸಂಪರ್ಕಿಸಿದಾಗ ಪ್ರವಾದಿವರ್ಯರು(ಸ) ಅವರೊಂದಿಗೆ ''ನೀವು ಈಗ ಚದ್ದರ ಹಾಗೂ ಗೃಹೋಪಯೋಗಿ ವಸ್ತುಗಳನ್ನು ಖರೀದಿಸಿರಿ'' ಎಂದು ಹೇಳಿದರು.

ಅವರು ಸಂತೋಷ ಭರಿತರಾಗಿ ಅಭಿಮಾನದಿಂದ ನಡೆದರು.

❖ ❖ ❖

73. ವ್ಯಭಿಚಾರಕ್ಕೆ ಅನುಮತಿ

ಪ್ರವಾದಿ(ಸ) ಮತ್ತು ಅವರ ಅನುಚರರು ಸೇರಿದ್ದ ಒಂದೆಡೆಗೆ ಓರ್ವನ ಆಗಮನವಾಯಿತು. ಆತನ ಮುಖವೇ ವಿಕಾರವಾಗಿತ್ತು. ವಿಕಾರ ಭಾವದಿಂದ ಇದ್ದ

ಆತ ಪ್ರವಾದಿವರ್ಯರೊಂದಿಗೆ(ಸ) ಸ್ವಲ್ಪ ಉದ್ಧಟತನದಿಂದಲೇ ವರ್ತಿಸಿದ ಪ್ರವಾದಿವರ್ಯರ(ಸ) ಬಳಿ ಬಂದು "ನನಗೆ ವ್ಯಭಿಚಾರ ನಡೆಸಲು ಅನುಮ ನೀಡಬೇಕು ಎಂದು ಹೇಳಿದ."

ಪ್ರವಾದಿವರ್ಯರ(ಸ) ಮುಂದೆ ಅದೂ ಮಸೀದಿಯಲ್ಲಿ ಕೂತು ಈ ರೀತಿಯ ಕೆಟ್ಟ ಮಾತುಗಳು! ಇದು ಪ್ರವಾದಿವರ್ಯರ(ಸ) ಅನುಚರರಿಗೆ ಸಹ್ಯವಾಗಲಿಲ್ ಅವರು ಆತನನ್ನು ತಡೆದು "ಸುಮ್ಮನಿರು" ಎಂದರು.

ಕೂಡಲೇ ಪ್ರವಾದಿವರ್ಯರು(ಸ) ಆತನನ್ನು ಆಲಂಗಿಸಿ ತನ್ನ ಬಳಿಯ ಕುಳ್ಳಿರಿಸಿದರು. ಕುಶಲೋಪರಿ ವಿಚಾರಿಸಿದ ಬಳಿಕ, ಪ್ರವಾದಿವರ್ಯರು(ಸ) ಆತನೊಡ "ನೀನು ನಿನ್ನ ತಾಯಿ ಜೊತೆ ವ್ಯಭಿಚಾರವೆಸಗುವುದನ್ನು ಇಷ್ಟ ಪಡುತ್ತೀಯಾ' ಎಂದು ಕೇಳಿದರು.

"ಇಲ್ಲ, ಅಲ್ಲಾಹನಾಣೆ! ನಾನು ಅದನ್ನು ಇಷ್ಟ ಪಡಲಾರೆ. ಮಾತ್ರವಲ್ಲ, ಈ ಜಗತ್ತಿನ ಯಾರೂ ತನ್ನ ಮಾತೆಯೊಂದಿಗೆ ವ್ಯಭಿಚಾರ ನಡೆಸುವುದನ್ನು ನಾನ ಇಷ್ಟಪಡಲಾರೆ."

"ಹಾಗಾದರೆ ನಿನ್ನ ಪುತ್ರಿಯೊಂದಿಗೆ ವ್ಯಭಿಚಾರ ನಡೆಸುವುದನ್ನು ಇಷ ಪಡುತ್ತೀರಾ?"

"ಇಲ್ಲ, ಅದೆಂದಿಗೂ ನಾನು ಇಷ್ಟಪಡಲಾರೆ."

"ನಿನ್ನ ಸಹೋದರಿಯೊಂದಿಗೆ?"

"ಇಲ್ಲ, ಅದನ್ನು ನಾನು ಅಂಗೀಕರಿಸಲಾರೆ. ತನ್ನ ಸಹೋದರಿಯೊಂದಿ ವ್ಯಭಿಚಾರವೆಸಗುವುದನ್ನು ಯಾರೂ ಇಷ್ಟ ಪಡಲಾರರು."

"ಹಾಗಾದರೆ ನಿನ್ನ ಪಿತೃ ಸಹೋದರಿಯನ್ನು ವ್ಯಭಿಚರಿಸಿದರೆ?"

"ಅದನ್ನು ನಾನು ಸಹಿಸಲಾರೆ."

"ಇನ್ನು ತಾಯಿಯ ಸಹೋದರಿಯನ್ನು ವ್ಯಭಿಚರಿಸಿದರೆ"

"ಇದ್ಯಾವುದನ್ನೂ ನಾನು ಇಷ್ಟಪಡಲಾರೆ, ಯಾರೂ ಇದನ್ನು ಇಷ್ಟಪಡಲಾರರು.'

ಈ ಮೂಲಕ ಆ ವ್ಯಕ್ತಿಗೆ ವ್ಯಭಿಚಾರದ ವಾಸ್ತವಿಕತೆಯನ್ನು ಮನವರಿ ಮಾಡಿಸುತ್ತಿದ್ದರು. ಯಾರೂ ಕೂಡಾ ತನ್ನ ಮಾತೆಯನ್ನೋ ಸಹೋದರಿಯನ್ನೋ ಪುತ್ರಿಯನ್ನೋ, ತಾಯಿಯ ಸಹೋದರಿಯನ್ನೋ ವ್ಯಭಿಚರಿಸುವುದನ್ನು ಇಷ್ಟಪಡ

ಲಾರರು. ಎಲ್ಲಾ ಮಹಿಳೆಯರೂ ಇದರಲ್ಲಿ ಯಾವುದಾದರೊಂದು ಆಗಿರುತ್ತಾರೆ.'' ಪ್ರವಾದಿವರ್ಯರು(ಸ) ಅವರ ಎದೆಯನ್ನು ಸವರಿ ಆ ವ್ಯಕ್ತಿಗಾಗಿ ಪ್ರಾರ್ಥಿಸಿದರು.

ಅಲ್ಲಿಂದ ಹಿಂದೆ ತೆರಳುವಾಗ ಆ ವ್ಯಕ್ತಿಯು ''ಇಲ್ಲಿಗೆ ಬರುತ್ತಿರುವಾಗ ನನಗೆ ಅತ್ಯಂತ ಇಷ್ಟವುಳ್ಳ ಕೃತ್ಯ ವ್ಯಭಿಚಾರವಾಗಿತ್ತು. ಈಗ ನನಗೆ ಅತ್ಯಂತ ಹೀನಾಯ, ಅಸಹ್ಯ ಕೃತ್ಯ ವ್ಯಭಿಚಾರವಾಗಿದೆ'' ಎಂದನು.

❖ ❖ ❖

74. ಪ್ರಯೋಜನಕಾರಿಯಾದ ದಾನ

ಒಮ್ಮೆ ಪ್ರವಾದಿವರ್ಯರು(ಸ) ತನ್ನ ಶಿಷ್ಯರೊಂದಿಗೆ ಓರ್ವರು ನೀಡಿದ ದಾನದ ಮಹತ್ವದ ಕುರಿತು ಈ ರೀತಿ ಹೇಳಿದರು, ''ಓರ್ವರು ನಾನು ಇಂತಿಷ್ಟು ದಾನ ಮಾಡುತ್ತೇನೆಂದು ಮನೆಯಿಂದ ಸ್ವಲ್ಪ ಹಣ ಹಿಡಿದು ಹೊರಟು ಅದನ್ನು ಅವರು ಓರ್ವ ಕಳ್ಳನಿಗೆ ದಾನ ಮಾಡಿದರು. ಇದನ್ನು ಅರಿತ ಊರ ಜನರು ಅವರನ್ನು ಕಳ್ಳನಿಗೆ ದಾನ ಮಾಡಿದವನೆಂದು ಮೂದಲಿಸ ತೊಡಗಿದರು.

ಇದನ್ನು ಕೇಳಿದ ಆ ವ್ಯಕ್ತಿಯು ''ಅಲ್ಲಾಹನಿಗೆ ಸರ್ವಸ್ತುತಿ'' ಎನ್ನುತ್ತಾ ಇಂದು ಕೂಡಾ ನಾನು ದಾನ ಮಾಡುವೆನೆಂದು ಹೇಳುತ್ತಾ ಹಣದ ಚೀಲದೊಂದಿಗೆ ಹೊರಟರು. ಅಂದು ಓರ್ವ ವೇಶ್ಯೆಗೆ ದಾನ ಮಾಡಿದರು. ಊರ ಜನರು ''ವೇಶ್ಯೆಗೆ ದಾನ ಮಾಡಿದವನೆಂದು'' ಅವರನ್ನು ಹೀಯಾಳಿಸಲಾರಂಭಿಸಿದರು.

''ಅಲ್ಲಾಹನಿಗೆ ಸರ್ವಸ್ತುತಿ. ಇಂದು ಕೂಡಾ ನಾನು ಓರ್ವನಿಗೆ ದಾನ ಮಾಡುವೆನೆಂದು ಹೇಳಿ ಹೊರಟರು. ಅಂದು ಆ ವ್ಯಕ್ತಿಯು ಶ್ರೀಮಂತನೋರ್ವನಿಗೆ ದಾನ ಮಾಡಿದನು. ಊರವರು ಶ್ರೀಮಂತನಿಗೆ ದಾನ ಮಾಡಿದವನೆಂದು ಆತನನ್ನು ಹಂಗಿಸಿದರು. ಆಗಲೂ ಆ ವ್ಯಕ್ತಿ ಅಲ್ಲಾಹನನ್ನು ಸ್ತುತಿಸುತ್ತಾ, ''ಕಳ್ಳನಿಗೂ, ಶ್ರೀಮಂತನಿಗೂ, ವೇಶ್ಯೆಗೂ ದಾನ ಮಾಡಲು ಅನುಗ್ರಹಿಸಿದ ನಿನಗೆ ಸರ್ವಸ್ತುತಿ'' ಎಂದು ಹೇಳಿದನು. ಉತ್ತಮ ಕಾರ್ಯ ಮಾಡಿದಿರಿ. ನಿಮ್ಮ ಈ ನಿಷ್ಕಲ್ಮಶವಾದ ದಾನದಿಂದ ಕಳ್ಳನು ಕಳ್ಳತನದಿಂದಲೂ, ವೇಶ್ಯೆ ವೇಶ್ಯಾವೃತ್ತಿಯಿಂದಲೂ ಮುಕ್ತಿ ಹೊಂದಿರಬಹುದು. ಶ್ರೀಮಂತನಿಗೆ ಅದೊಂದು ಪಾಠವಾಗಿರಬಹುದು. ನಾಳೆಯಿಂದ ಆತನೂ ದಾನ ಮಾಡಬಹುದು'' ಎಂದು ಅಪರಿಚಿತ ವ್ಯಕ್ತಿಯೋರ್ವರು ಬಂದು ಅಭಿನಂದಿಸಿದರು.

❖ ❖ ❖

75. ಮಸೀದಿಯಲ್ಲಿ ಮೂತ್ರ ಮಾಡಿದ ಗ್ರಾಮೀಣ ಅರಬ

ಪ್ರವಾದಿವರ್ಯರು(ಸ) ಮತ್ತವರ ಅನುಚರರು ಮಸೀದಿಯಲ್ಲಿ ಕುಳಿತಿರುವಾ ಓರ್ವ ಗ್ರಾಮೀಣ ಅರಬನ ಪ್ರವೇಶವಾಯಿತು. ಆತ ಮಸೀದಿಯಲ್ಲಿ ಮೂತ್ರಿಸ ತೊಡಗಿದನು. ಇದನ್ನು ನೋಡಿದ ಪ್ರವಾದಿವರ್ಯರ(ಸ) ಅನುಚರರು ಆತನನ್ನು ತಡೆಯಲು ಅನುವಾದರು. ಪ್ರವಾದಿವರ್ಯರು(ಸ) ಅವರನ್ನು ತಡೆದು, ಅವನು ಸಂಪೂರ್ಣ ಮೂತ್ರ ಮಾಡುವವರೆಗೆ ಸುಮ್ಮನಿರುವಂತೆ ಆದೇಶಿಸಿದರು. ಹಾಗೆ ಆ ವ್ಯಕ್ತಿ ಮೂತ್ರಿಸಿದ ಬಳಿಕ ಆತನನ್ನು ಪ್ರವಾದಿವರ್ಯರು(ಸ) ತನ್ನ ಬಳಿಯಲ್ಲಿ ಕುಳ್ಳಿರಿಸಿದರು. ಬಳಿಕ ಬಹಳ ಶಾಂತ ರೀತಿಯಿಂದ ''ಮಸೀದಿಯಲ್ಲಿ ಮೂತ್ರ ಮಾಡಬಾರದು. ಅದು ನಮಾಝ್ ನಿರ್ವಹಿಸಲು, ಪ್ರಾರ್ಥಿಸಲು, ದೇವನ ಕೀರ್ತನೆ ನಡೆಸಲು ಹಾಗೂ ಕುರ್‌ಆನ್ ಪಾರಾಯಣ ಮಾಡಲು ಇರುವ ಪವಿತ್ರ ಸ್ಥಳವಾಗಿದೆ'' ಎಂದು ಹೇಳಿದರು.

ಬಳಿಕ ತನ್ನ ಅನುಚರರೊಡನೆ ಬಂದು ಬಕೆಟ್ ನೀರು ತರುವಂತೆ ಹೇಳಿ ಅದನ್ನು ಮೂತ್ರ ಮಾಡಿದ ಸ್ಥಳದಲ್ಲಿ ಸುರಿಯಲು ಹೇಳಿದರು. ಅವರು ಹಾಗೆಯೇ ಮಾಡಿದರು. ಈ ರೀತಿ ಪ್ರವಾದಿವರ್ಯರು(ಸ) ಬಹಳ ಯುಕ್ತಿಪೂರ್ವಕವಾಗಿ, ಮಾನವೀಯತೆಯಿಂದ ಜನ ಸಾಮಾನ್ಯರ ತಪ್ಪುಗಳನ್ನು ತಿದ್ದುತ್ತಿದ್ದರು. ಈ ರೀತಿ ಅವರಿಗೆ ಒಂದು ಸಮಾಜದಲ್ಲಿ ಆಮೂಲಾಗ್ರ ಬದಲಾವಣೆ ತರಲು ಮತ್ತು ಅವರನ್ನು ಸಂಪೂರ್ಣ ಸಂಸ್ಕರಿಸಲು ಸಾಧ್ಯವಾಯಿತು.

❖ ❖ ❖

76. ಕಳ್ಳತನಕ್ಕೆ ಅನುಮತಿ

ಓರ್ವರು ಪ್ರವಾದಿವರ್ಯರ(ಸ) ಬಳಿ ಬಂದು ಈ ರೀತಿ ಕೇಳಿದರು. ''ನನಗೆ ಇಸ್ಲಾಮ್ ಸ್ವೀಕರಿಸಬೇಕೆಂದು ಅತೀವವಾದ ಬಯಕೆಯಿದೆ. ಆದರೆ ನನ್ನಲ್ಲೊಂದು ದೌರ್ಬಲ್ಯ ವಿದೆ. ಸನ್ಮಾರ್ಗ ಸ್ವೀಕರಿಸುವುದರಿಂದಲೂ ಆ ದೌರ್ಬಲ್ಯದಿಂದ ಹೊರಬರಲು ಸಾಧ್ಯವಿಲ್ಲ.''

''ಏನದು'' ಎಂದು ಪ್ರವಾದಿವರ್ಯರು(ಸ) ಕೇಳಿದರು.

''ನಾನು ದೃಢಕಾಯ ಹಾಗೂ ಬಲಶಾಲಿಯಾಗಿದ್ದೇನೆ'' ಎಂದು ಆತ ಹೇಳಿದ.

''ಅದಕ್ಕೇನಂತೆ, ಅದು ಅಲ್ಲಾಹನ ಅನುಗ್ರಹವಲ್ಲವೇ? ಗಟ್ಟಿಮುಟ್ಟಾದ ಶರೀರವಿದ್ದರೆ ಒಳ್ಳೆಯದಲ್ಲವೇ?'' ಎಂದು ಪ್ರವಾದಿವರ್ಯರು(ಸ) ಹೇಳಿದರು.

ಅಲ್ಲಾಹನ ಪ್ರವಾದಿಗಳೇ ''ಆದರೆ ನನ್ನ ದೇಹವನ್ನು ನಿಯಂತ್ರಿಸಲು ನಾನು ವಿಫಲನಾಗಿರುವೆ. ಅದಕ್ಕಾಗಿ ನಾನು ಆಡುಗಳನ್ನು ಕದ್ದು ಹೊತ್ತುಕೊಂಡು ಬರುವುದು ಸಾಮಾನ್ಯವಾಗಿದೆ'' ಎಂದಾತ ಹೇಳಿದ.

ಆಗ ಪ್ರವಾದಿವರ್ಯರು(ಸ), ''ನೀವೇನೂ ಕಳವಳ ಪಡಬೇಕಾಗಿಲ್ಲ, ಅದಕ್ಕೆ ಪರಿಹಾರ ನಾನು ಸೂಚಿಸುತ್ತೇನೆ'' ಎಂದು ಹೇಳಿದರು. ನಮ್ಮಲ್ಲಿನ ಅನೇಕ ಸತ್ಯವಿಶ್ವಾಸಿ ಸಹೋದರರನ್ನು ಶತ್ರುಗಳು ಬಂಧಿಸಿಟ್ಟಿದ್ದಾರೆ. ಅದಕ್ಕಾಗಿ ಅವರನ್ನು ಹುಡುಕಿ ಪತ್ತೆ ಹಚ್ಚಿ ಹೊತ್ತುಕೊಂಡು ತರಬೇಕು. ಈ ಮೂಲಕ ನಿಮ್ಮ ದೇಹವನ್ನು ನಿಯಂತ್ರಿಸ ಬಹುದು. ಅಲ್ಲಾಹನಿಂದ ಪರಲೋಕದಲ್ಲಿ ಅತೀ ಮಹತ್ತರವಾದ ಪುಣ್ಯಗಳಿಸಬಹುದು. ಜೊತೆಗೆ ಇಸ್ಲಾಮಿಗಾಗಿ ಅಮೂಲ್ಯವಾದ ಸೇವೆ ಸಲ್ಲಿಸುವ ಒಂದು ಅವಕಾಶವೂ ದೊರೆಯುವುದು'' ಎಂದು ಪ್ರವಾದಿವರ್ಯರು(ಸ) ಅವರಿಗೆ ಪರಿಹಾರ ಸೂಚಿಸಿದರು.

ತನ್ನನ್ನು ಕಾಡುತ್ತಿರುವ ಸಮಸ್ಯೆಗೆ ಪ್ರವಾದಿವರ್ಯರು(ಸ) ಪರಿಹಾರ ಕಲ್ಪಿಸಿದಾಗ ಆ ವ್ಯಕ್ತಿ ಇಸ್ಲಾಮ್ ಸ್ವೀಕರಿಸಿದರು. ಪ್ರವಾದಿವರ್ಯರು(ಸ) ಯಾವಾಗಲೂ ಎಲ್ಲರೊಂದಿಗೂ ದುಡುಕಿನಿಂದ ನಿಷೇಧಾತ್ಮಕ ರೀತಿಯಲ್ಲಿ ವ್ಯವಹರಿಸುವುದಕ್ಕಿಂತ ರಚನಾತ್ಮಕವಾಗಿ ಫಲಪ್ರದವಾಗುವ ರೀತಿಯಲ್ಲಿ ವ್ಯವಹರಿಸುತ್ತಿದ್ದರು. ಇದು ಬದಲಾವಣೆಯ ಹಾದಿಯ ಅಮೂಲ್ಯ ಹೆಜ್ಜೆಗಳಾಗಿತ್ತು.

❖ ❖ ❖

77. ಅದೆಂತಹ ಮಾದರಿ

ಪ್ರವಾದಿವರ್ಯರು(ಸ) ತನಗೆ ಉಡುಗೊರೆಯಾಗಿ ದೊರೆತ ಹಣ್ಣು ಹಂಪಲುಗಳನ್ನು ಒಂದು ಪಾತ್ರೆಯಲ್ಲಿರಿಸಿ ಆಯಿಶಾರಿಗೆ(ರ) ನೀಡಿದರು. ಯಾವುದೋ ವಿಚಾರದಲ್ಲಿ ಕೋಪ ಗೊಂಡಿದ್ದ ಅವರು ಅದನ್ನು ನೆಲಕ್ಕೆ ಹಾಕಿದರು. ಪ್ರವಾದಿವರ್ಯರು(ಸ) ಯಾವುದೇ ರೀತಿ ಯಲ್ಲಿ ಉದ್ರೇಕಿತರಾಗದೆ ಅದನ್ನೆಲ್ಲಾ ಹೆಕ್ಕತೊಡಗಿದರು. ಇದನ್ನು ನೋಡಿದ ಆಯಿಶಾರಿಗೆ(ರ) ಸಹಿಸಲಾಗಲಿಲ್ಲ, ಅವರ ಹೃದಯವು ಮಿಡಿಯಿತು, ಪಶ್ಚಾತ್ತಾಪದ ಭಾವದಿಂದ ಪ್ರವಾದಿವರ್ಯರಿಂದ(ಸ) ಆ ಪಾತ್ರೆಯನ್ನು ಪಡೆದು ತಾನೇ ಹೆಕ್ಕತೊಡಗಿದರು. ತನ್ನಿಂದಾದ ಪ್ರಮಾದದಿಂದ ತೀವ್ರ ದುಃಖಿತರಾದ ಆಯಿಶಾರನ್ನು(ರ) ಪ್ರವಾದಿವರ್ಯರು(ಸ) ಸಂತೈಸಿದರು. ❖

78. ತಾಯಿಯ ಪಾದದಡಿ ಸ್ವರ್ಗವಿದೆ

ಪ್ರವಾದಿವರ್ಯರ(ಸ) ಅನುಚರರಲ್ಲಿ ಅಲ್‌ಖಮಾರವರು ಓರ್ವರಾಗಿದ್ದರು. ದೇವಭಯ ಭಕ್ತಿ ಹಾಗೂ ದಯಾಭಾವವನ್ನು ಹೊಂದಿದವರೂ ಧೀರರೂ ಶೂರರೂ ಆಗಿದ್ದರು. ಅವರೊಮ್ಮೆ ರೋಗ ಬಾಧಿತರಾಗಿ ಹಾಸಿಗೆ ಹಿಡಿದರು. ರೋಗ ಉಲ್ಬಣಿಸಿದಾಗ ಅವರ ಪತ್ನಿಯು ಪ್ರವಾದಿವರ್ಯರ(ಸ) ಬಳಿ ಬಂದು ಅವರಿಗಾಗಿ ಪ್ರಾರ್ಥಿಸಲು ವಿನಂತಿಸಿದರು. ಅಲ್‌ಖಮಾರ ಬಗ್ಗೆ ಅರಿಯಲು ಪ್ರವಾದಿವರ್ಯರು(ಸ) ಅಲೀ ಬಿನ್ ಅಬೂತಾಲಿಬ್(ರ), ಉಮರ್ ಖತ್ತಾಬ್(ರ) ಹಾಗೂ ಬಿಲಾಲ್‌ರನ್ನು(ರ) ಕಳುಹಿಸಿದರು. ಅವರು ಅಲ್‌ಖಮಾರನ್ನು ಸಾಕಷ್ಟು ಶುಶ್ರೂಷೆಗೈದರು. ಮರಣಾಸನ್ನರಾದ ಅವರಿಗೆ ಪವಿತ್ರ ವಚನ ಹೇಳಿಕೊಟ್ಟರು. ಆದರೆ ಅದನ್ನು ಹೇಳಲು ಅವರಿಂದ ಸಾಧ್ಯವಾಗುತ್ತಿರಲಿಲ್ಲ. ಈ ವಿವರವನ್ನು ಬಿಲಾಲ್(ರ) ಪ್ರವಾದಿವರ್ಯರಿಗೆ(ಸ) ತಲುಪಿಸಿದರು.

ಅಲ್‌ಖಮಾರವರ ಕುರಿತು ಚೆನ್ನಾಗಿ ತಿಳಿದ ಪ್ರವಾದಿವರ್ಯರು(ಸ) ''ಅವರ ಮಾತಾಪಿತರು ಜೀವಂತವಿದ್ದಾರೆಯೇ?'' ಎಂದು ಕೇಳಿದರು.

''ಅವರ ತಂದೆ ಇಹಲೋಕ ತ್ಯಜಿಸಿದ್ದಾರೆ. ವೃದ್ಧೆಯಾದ ಅವರ ತಾಯಿ ಅವರ ಜೊತೆಯಿದ್ದಾರೆ.''

ಹಾಗಾದರೆ ''ಅವರ ತಾಯಿಯ ಬಳಿ ಹೋಗಿ ನನ್ನ ಸಲಾಮ್ ತಿಳಿಸಿರಿ. ಸಾಧ್ಯವಾದರೆ ನನ್ನನ್ನೊಮ್ಮೆ ಭೇಟಿಯಾಗಲಿ, ಇಲ್ಲವಾದರೆ ನಾನೇ ಅಲ್ಲಿಗೆ ಬರುವೆ'' ಎಂದು ಬಿಲಾಲ್‌ರೊಂದಿಗೆ ಪ್ರವಾದಿವರ್ಯರು(ಸ) ಹೇಳಿ ಕಳುಹಿಸಿದರು.

ಹಾಗೆಯೇ ಆ ವೃದ್ಧೆ ಪ್ರವಾದಿವರ್ಯರ(ಸ) ಸನ್ನಿಧಿಗೆ ಹಾಜರಾದರು. ಅವರನ್ನು ಪ್ರವಾದಿವರ್ಯರು(ಸ) ಬಹಳ ಆದರದಿಂದ ಬರಮಾಡಿಕೊಂಡರು. ಬಳಿಕ ಅಲ್‌ಖಮಾ ನಿಮ್ಮೊಂದಿಗೆ ಹೇಗೆ ವ್ಯವಹರಿಸುತ್ತಿದ್ದರೆಂದು ಕೇಳಿದರು.

ಆಗ ಆ ವೃದ್ಧೆಯು ಹೇಳಿದರು, ''ನನ್ನ ಪುತ್ರ ಅಲ್‌ಖಮಾ ಅಲ್ಲಾಹನನ್ನು ಭಯ ಪಟ್ಟು ಜೀವಿಸುವವನಾಗಿದ್ದಾನೆ. ಆತ ಅಲ್ಲಾಹನ ಆದೇಶಗಳನ್ನು ಧಿಕ್ಕರಿಸಲಾರನು. ಉತ್ತಮ ದೇವಭಕ್ತ ಕೂಡಾ. ಆದರೆ ಆತ ನನ್ನೊಂದಿಗೆ ಉತ್ತಮವಾಗಿ ವ್ಯವಹರಿಸುತ್ತಿರಲಿಲ್ಲ, ತುಂಬಾ ಕೆಟ್ಟದಾಗಿ ವರ್ತಿಸುತ್ತಿದ್ದ, ಆದ್ದರಿಂದ ನನಗೆ ಆತನೊಡನೆ ತುಂಬಾ ಕೋಪವಿದೆ. ಆತ ತನ್ನ ಪತ್ನಿಯ ಮುಂದೆ ನನ್ನನ್ನು ಗೇಲಿ ಮಾಡುತ್ತಿದ್ದ, ಆದ್ದರಿಂದ ನಾನು ಆಕೆಯ ಆಜ್ಞೆಗಳನ್ನು ತಪ್ಪದೇ ಪಾಲಿಸಬೇಕಾಗಿತ್ತು.''

ಇದನ್ನು ಕೇಳಿದ ಪ್ರವಾದಿವರ್ಯರು(ಸ) ''ಇದೇ ಕಾರಣದಿಂದ ಅಲ್‌ಖಮಾರಿಗೆ ಪವಿತ್ರ ವಚನ ಹೇಳಲು ನಾಲಿಗೆ ಹೊರಳುತ್ತಿರಲಿಲ್ಲ'' ಎಂದು ಪ್ರವಾದಿಗಳು(ಸ) ಅಗ್ನಿಕುಂಡ ತಯಾರಿಸಿ ಅದಕ್ಕೆ ಅಲ್‌ಖಮಾರನ್ನು ಎಸೆಯುವಂತೆ ಬಿಲಾಲ್‌ರಿಗೆ ಆದೇಶಿಸಿದರು.

ಇದನ್ನು ಕೇಳಿದ ಆ ಮಾತೆ ಉಚ್ಚ ಸ್ವರದಲ್ಲಿ ''ಅಲ್ಲಾಹನ ಪ್ರವಾದಿಗಳೇ, ನನ್ನ ಮುಂದೆಯೇ ನನ್ನ ಮಗನನ್ನು ಬೆಂಕಿಗೆಸೆಯುವುದೇ? ನಾನು ಅದನ್ನು ಹೇಗೆ ಸಹಿಸಲಿ'' ಎಂದು ಕೇಳಿದರು.

''ಅಲ್ಲಾಹನ ಶಿಕ್ಷೆ ಇದಕ್ಕಿಂತಲೂ ಕಠಿಣವಲ್ಲವೇ? ಆದ್ದರಿಂದ ನೀವು ಅವರಿಗೆ ಕ್ಷಮೆ ನೀಡಿರಿ. ಇಲ್ಲವಾದಲ್ಲಿ ಆತನ ಆರಾಧನಾ ಕರ್ಮಗಳೊಂದಿಗೆ ಆತನ ಎಲ್ಲಾ ಸತ್ಕರ್ಮಗಳೂ ವ್ಯರ್ಥವಾಗುವುದು. ಆದರಿಂದ ಅವನಿಗೆ ಯಾವುದೇ ಪ್ರಯೋಜನ ಸಿಗದು.''

ಇದನ್ನು ಕೇಳಿದ ಆ ಮಾತೆ ತನ್ನ ಮಗನಿಗೆ ಕ್ಷಮೆ ನೀಡಿದರು. ಪ್ರವಾದಿವರ್ಯರು(ಸ) ಬಿಲಾಲ್‌ರನ್ನು ಪುನಃ ಅಲ್‌ಖಮರವರ ಮನೆಗೆ ಕಳುಹಿಸಿದರು. ಆಗ ಅಲ್‌ಖಮಾ ಬಹಳ ಸುಲಲಿತವಾಗಿ ಪವಿತ್ರ ವಚನಗಳನ್ನು ಹೇಳುತ್ತಿದ್ದರು. ಹಾಗೆಯೇ ಪ್ರಾರ್ಥನೆಯಲ್ಲಿ ಮಗ್ನರಾಗಿರುವಂತೆ ಇಹಲೋಕ ತ್ಯಜಿಸಿದರು. ಅವರ ಮರಣಾನಂತರದ ಎಲ್ಲಾ ಕರ್ಮಗಳಿಗೆ ಹಾಗೂ ನಮಾಝಿಗೂ ಪ್ರವಾದಿವರ್ಯರೇ(ಸ) ನೇತೃತ್ವ ವಹಿಸಿದರು. ಅಲ್‌ಖಮಾರ ಈ ಘಟನೆಯು ತಾಯಿಯ ಪಾದದಡಿ ಸ್ವರ್ಗವಿದೆ ಎಂಬುದಕ್ಕೆ ಪುರಾವೆಯಂತಿತ್ತು.

❖ ❖ ❖

79. ಸತ್ಯ ವಿಶ್ವಾಸದ ತೀರ್ಪು

ನ್ಯಾಯಾಲಯಗಳಿಲ್ಲದ ಅದೆಷ್ಟೋ ನಾಡುಗಳಿಲ್ಲವೇ. ಅದೇ ರೀತಿ ದಿನಂಪ್ರತಿ ಧಾರಾಳ ವ್ಯಾಜ್ಯಗಳ ಕಾರ್ಯಭಾರಗಳನ್ನು ನಡೆಸಿಕೊಳ್ಳುವಂತಹ ನ್ಯಾಯಾಲಯಗಳಿಲ್ಲವೇ? ಹಲವಾರು ಮಂದಿ ಕೋರ್ಟು, ಕಛೇರಿಯೆಂದು ಅಲೆದಾಡುತ್ತಿರುವುದು, ದಾವೆಗಳನ್ನು ಹೂಡುತ್ತಿರುವುದು ತಾನು ಜಯಿಸಬೇಕೆಂದಲ್ಲವೇ. ತಮ್ಮ ಹಠಮಾರಿತನ ಹಾಗೂ ಪ್ರತಿಷ್ಠೆಯನ್ನು ಬಹಿರಂಗ ಪಡಿಸುವ ಒಂದು ಸ್ಥಳವಾಗಿದೆ ನ್ಯಾಯಾಲಯ. ತನ್ನ ವಾದ ಜಯಿಸಬೇಕೆಂದು ಸುಳ್ಳಾಡುವವರಿಗೇನೂ ಇಂದು ಕೊರತೆಯಿಲ್ಲ, ಆದರೆ ಇದಕ್ಕೆಲ್ಲ ತೀರಾ ವ್ಯತಿರಿಕ್ತವಾದ ಘಟನೆಗಳಿಗೆ ಇತಿಹಾಸವು

ಸಾಕ್ಷಿಯಾಗಿದೆ. ಅದು ಬಹಳ ಅಪರೂಪ ಹಾಗೂ ಆಶ್ಚರ್ಯದಿಂದ ಕೂಡಿದ ಘಟನೆಗಳಾಗಿವೆ.

ಪ್ರವಾದಿವರ್ಯರ(ಸ) ಪತ್ನಿ ಉಮ್ಮು ಸಲಮ ಈ ಘಟನೆಯನ್ನು ನಮಗೆ ಈ ರೀತಿ ವಿವರಿಸುತ್ತಾರೆ.

ತಂದೆಯ ನಂತರದ ಸೊತ್ತನ್ನು ಪಾಲು ಮಾಡುವ ಕುರಿತು ಈರ್ವರಿಗೆ ವಿವಾದ ವುಂಟಾಗಿ ಅವರು ಪ್ರವಾದಿವರ್ಯರನ್ನು(ಸ) ಭೇಟಿಯಾಗಿ ದೂರಿತ್ತರು. ಈರ್ವರಲ್ಲಿಯೂ ವಾದ ತರ್ಕಗಳಲ್ಲದೆ ಸ್ಪಷ್ಟವಾದ ಪುರಾವೆಗಳೇನೂ ಇರಲಿಲ್ಲ. ಇದು ನನ್ನ ಹಕ್ಕು ಎಂದು ಈರ್ವರೂ ಬಹಳ ಒತ್ತಿ ಹೇಳುತ್ತಿದ್ದರು. ಇನ್ನೋರ್ವರು ಸುಳ್ಳು ಹೇಳುತ್ತಿದ್ದಾರೆಂದು ಈರ್ವರೂ ಪರಸ್ಪರ ಆರೋಪಿಸುತ್ತಿದ್ದರು. ಇವರ ಮಾತುಗಳನ್ನು ಕೇಳಿದವರಿಗೆ ಇವರು ಯಾವುದೇ ರೀತಿಯ ತ್ಯಾಗಕ್ಕೆ ಸಿದ್ಧರಿಲ್ಲವೆಂಬುದು ಮನವರಿಕೆಯಾಯಿತು.

ಪ್ರವಾದಿವರ್ಯರ(ಸ) ಮುಂದೆ ಹಾಜರಾದ ಈರ್ವರೂ ತಮಗೆ ಸಾಧ್ಯವಾದಷ್ಟು ರೀತಿಯಲ್ಲಿ ತಮ್ಮ ವಾದ ಮಂಡಿಸಿದರು, ಈರ್ವರ ವಾದವನ್ನು ಆಲಿಸಿದ ಪ್ರವಾದಿ ವರ್ಯರು(ಸ) ಅವರೊಡನೆ, ''ನೋಡಿ ನಾನು ಓರ್ವ ಮನುಷ್ಯನಾಗಿದ್ದೇನೆ, ನೀವು ನಿಮ್ಮ ದಾವೆಗಳೊಂದಿಗೆ ನನ್ನ ಮುಂದೆ ಬಂದಿದ್ದೀರಿ. ನಿಮ್ಮಲ್ಲಿ ಯಾರಾದರೊಬ್ಬರು ತಮ್ಮ ವಾದವನ್ನು ಇನ್ನೊಬ್ಬನಿಗಿಂತ ಚೆನ್ನಾಗಿ ಮಂಡಿಸಬಹುದು. ನನಗೆ ತಿಳಿದ ಪ್ರಕಾರ ನಾನು ಅವನ ಪರ ತೀರ್ಪು ನೀಡಬಹುದು. ನಿಮ್ಮ ವಾದದ ಗಂಭೀರತೆ ನೋಡಿಯಲ್ಲವೇ ನಾನು ತೀರ್ಪು ನೀಡುವುದು. ಹಾಗೆ ಒಂದು ವೇಳೆ ಓರ್ವನ ಹಕ್ಕು ಇನ್ನೋರ್ವನಿಗೆ ದೊರೆಯಿತು ಎಂದಾದರೆ ಅದನ್ನು ಅವನು ತೆಗೆದುಕೊಳ್ಳಬಾರದು. ಅನ್ಯರ ಸೊತ್ತನ್ನು ಕಬಳಿಸುವುದು ಮಹಾ ಪಾಪವಾಗಿದೆ. ಹಾಗಿರುವಾಗ ನಾನು ಅವನಿಗೆ ತೀರ್ಮಾನಿಸಿ ಕೊಡುವುದು ಒಂದು ತುಂಡು ನರಕವಾಗಿದೆ. ಅಲ್ಲಾಹನು ಎಲ್ಲವನ್ನೂ ಬಲ್ಲವನು ಎಂಬುದರ ಕುರಿತು ಪ್ರಜ್ಞಾವಂತರಾಗಿರಿ ಎಂದರು.

ಪ್ರವಾದಿವರ್ಯರ(ಸ) ಈ ಮಾತುಗಳು ಈರ್ವರ ಮೇಲೆಯೂ ಭಾರೀ ಪ್ರಭಾವ ಬೀರಿತು. ಅವರ ಮನಸ್ಸುಗಳು ಕಂಪಿಸಿತು. ಮರಣಾ ನಂತರದ ಜೀವನ ಮತ್ತು ದೇವಭಯದ ಪ್ರಜ್ಞೆಯೂ ಅವರಲ್ಲಿ ಮೇಳೈಸಿತು. ಈರ್ವರೂ ಪರಸ್ಪರ ''ನನ್ನ ಹಕ್ಕನ್ನು ನಾನು ನಿನಗೆ ಬಿಟ್ಟು ಕೊಟ್ಟಿರುತ್ತೇನೆ'' ಎಂದು ಹೇಳುತ್ತಾ ವಾದಿಸಲು ಜಯಿಸಲು ಬಂದವರು ನ್ಯಾಯದ ತೀರ್ಮಾನಕ್ಕೆ ಬದ್ಧರಾಗಲು ಅಣಿಯಾದರು.

❖ ❖ ❖

80. ಪ್ರವಾದಿ(ಸ) ಪ್ರೇಮಕ್ಕೊಂದು ಮಾದರಿ

ಕುರ್‌ಆನ್ ಕಲಿಸಲು ಹಾಗೂ ಇಸ್ಲಾಮೀ ನಿಯಮಗಳನ್ನು ಕಲಿಸಿ ಕೊಡಲು ತಮಗೆ ಕೆಲವರನ್ನು ಕಳುಹಿಸಿ ಕೊಡಬೇಕೆಂದು ಪ್ರವಾದಿವರ್ಯರೊಂದಿಗೆ ಒಂದು ತಂಡವು ವಿನಂತಿಸಿ ಕೊಂಡಿತು. ಅವರು ಮದೀನದ ಸಮೀಪದ ಗೋತ್ರವೊಂದರಿಂದ ಬಂದವರಾಗಿದ್ದರು. ನಿಜವಾಗಿ ಅವರ ಮಾತುಗಳಲ್ಲಿ ಸಂಶಯವುಂಟು ಮಾಡುವಂತಹ ವಿಚಾರಗಳೇ ಇರಲಿಲ್ಲ. ಅದಕ್ಕಾಗಿ ಅವರ ವಿನಂತಿಯನ್ನು ಮನ್ನಿಸಿಕೊಂಡು ಪ್ರಮುಖರಾದ ೬ ಮಂದಿ ಅನುಚರರನ್ನು ಪ್ರವಾದಿವರ್ಯರು(ಸ) ಆ ತಂಡದೊಂದಿಗೆ ಕಳುಹಿಸಿಕೊಟ್ಟರು. ಆದರೆ ಅವರು ರಜೀಅ ಎಂಬ ಸ್ಥಳಕ್ಕೆ ತಲುಪಿಸಿದಾಗ ಅದೇ ಊರಿನವರಾದ ಹುದೈಲ್ ಗೋತ್ರಜರನ್ನು ಪ್ರವಾದಿವರ್ಯರ(ಸ) ಶಿಷ್ಯಂದಿರ ಮೇಲೆ ದಾಳಿ ನಡೆಸಲು ಪ್ರಚೋದಿಸಿದರು. ಅವರು ತಮ್ಮ ಹರಿತವಾದ ಖಡ್ಗಗಳೊಂದಿಗೆ ಪ್ರವಾದಿವರ್ಯರ(ಸ) ಅನುಚರರನ್ನು ಸುತ್ತುವರಿದರು. ಅವರು ಪ್ರತಿರೋಧಕ್ಕೆ ಸಿದ್ಧರಾದಾಗ, ಹುದೈಲ್ ಗೋತ್ರಜರು ''ನೋಡಿ ನಿಮ್ಮನ್ನು ನಾವು ಕೊಲ್ಲ ಬಯಸುವುದಿಲ್ಲ, ಬದಲು ನಿಮ್ಮನ್ನು ಮಕ್ಕಾ ವಾಸಿಗಳಿಗೆ ಮಾರಲು ಬಯಸುತ್ತೇವೆ. ಆದ್ದರಿಂದ ದೇವನಾಣೆ! ನಿಮ್ಮನ್ನು ನಾವು ವಧಿಸಲಾರೆವು'' ಎಂದು ಹೇಳಿದರು.

ಮಕ್ಕಾಗೆ ತೆರಳಿ ಅವಮಾನಿತರಾಗಿ ಗುಲಾಮರಾಗುವುದಕ್ಕಿಂತ ಸಾಯವುದೇ ವಾಸಿ ಎಂದು ಭಾವಿಸಿ ಆ ಕುರಿತು ಹೇಳಿದರೂ ಅವರ ಮಾತುಗಳನ್ನು ಅವರು ಅಂಗೀಕರಿಸಲಿಲ್ಲ, ಹುದೈಲ್ ಗೋತ್ರಜರ ಮುಂದೆ ನಾವು ಆರು ಮಂದಿ ಗೆಲ್ಲಲು ಸಾಧ್ಯವಿಲ್ಲ ಎಂಬುದನ್ನು ಅರಿತೂ ಅವರು ಪ್ರತಿ ಹೋರಾಟಕ್ಕಿಳಿದರು. ಆಗ ಅವರಲ್ಲಿ ಮೂವರು ಸ್ಥಳದಲ್ಲಿಯೇ ವಧಿಸಲ್ಪಟ್ಟರು. ಉಳಿದವರನ್ನು ಅವರು ಬಂಧಿಸಿದರು. ಅವರ ಕೈಕಾಲುಗಳನ್ನು ಕಟ್ಟಿ ಮಕ್ಕಾಗೆ ಕೊಂಡು ಹೋದರು. ಈ ಮಧ್ಯೆ ಅವರಲ್ಲೋರ್ವರಾದ ಅಬ್ದುಲ್ಲಾ ಬಿನ್ ತಾರಿಕ್(ರ) ದಾರಿ ಮಧ್ಯೆ ಅವರ ಕಟ್ಟುಗಳನ್ನು ಬಿಡಿಸಿ ತಪ್ಪಿಸಲು ನೋಡಿದರು. ಆದರೆ ಅವರನ್ನು ಅವರು ಕೊಂದು ಹಾಕಿದರು. ಬಳಿಕ ಇಬ್ಬರು ಉಳಿದರು. ಅವರನ್ನು ಮಕ್ಕಾದ ಕುರೈಶರಿಗೆ ಮಾರಿದರು. ಅವರಲ್ಲಿ ಓರ್ವರಾದ ಝೈದ್ ಬಿನ್ ಅದ್ದಾಸಿಯವರನ್ನು ಇಸ್ಲಾಮಿನ ಪರಮ ವೈರಿ ಸಫ್‌ವಾನ್ ಬಿನ್ ಉಮಯ್ಯ ಖರೀದಿಸಿದ್ದ. ಆತ ಝೈದ್‌ರನ್ನು ಕೊಲ್ಲಲು ನಿರ್ಧರಿಸಿದ. ಅದಕ್ಕಾಗಿ ತನ್ನ ಸೇವಕ ನಸ್ತಾನ್‌ನಿಗೆ ಹೊಣೆ ವಹಿಸಿದನು. ಈ ಸಂದರ್ಭದಲ್ಲಿ ಅಲ್ಲಿಗೆ ಕುರೈಶರ ನೇತಾರ ಅಬೂಸುಫ್ಯಾನ್ ಬಂದು ಝೈದ್‌ರೊಡನೆ ನಿನ್ನನ್ನು ಇಲ್ಲಿಂದ ಬಂಧಮುಕ್ತಿ ಗೊಳಿಸಿ ನಿನ್ನ ಕುಟುಂಬದವರ ಬಳಿಗೆ ಕಳುಹಿಸುವ ಬದಲು ಮುಹಮ್ಮದ್‌ರನ್ನು

ಕೊಲ್ಲುವುದಾದರೆ ನೀನು ಏನು ಹೇಳುವೆ?' ಎಂದು ಕೇಳಿದರು.

''ನಾನು ಮನೆಯಲ್ಲಿರುವಾಗ ಪ್ರವಾದಿ ಮುಹಮ್ಮದ್‌ರಿಗೆ(ಸ) ಎಲ್ಲಿಯೋ ಒಂದು ಕಡೆ ಅವರ ದೇಹಕ್ಕೆ ಒಂದು ಸಣ್ಣ ಮುಳ್ಳು ತರಚುವುದನ್ನೂ ನಾನು ಸಹಿಸಲಾರೆ'' ಎಂದು ಝೈದ್ ದೃಢತೆಯಿಂದ ಹೇಳಿದರು. ಇದನ್ನು ಕೇಳಿದ ಅಬೂ ಸುಫ್‌ಯಾನ್‌ರ ಪ್ರತಿಕ್ರಿಯೆ ಹೀಗಿತ್ತು. ''ಮುಹಮ್ಮದರನ್ನು(ಸ) ಅವರ ಅನುಯಾಯಿಗಳು ಪ್ರೀತಿಸುವಷ್ಟು ಬೇರೆ ಯಾವ ನಾಯಕನನ್ನೂ ಪ್ರೀತಿಸುವ ತಂಡವನ್ನು ನಾನು ಕಂಡಿಲ್ಲ!!!

ಬಳಿಕ ನಸ್ತಾನ್ ತನ್ನ ಹೊಣೆಗಾರಿಕೆ ನಿರ್ವಹಿಸಿದನು. ಬಳಿಕ ಅವರ ಜೊತೆಯಿದ್ದ ಖುಬೈಬ್‌ರನ್ನು ಬಂಧಿಸಿ ಮೊಳೆ ಹೊಡೆದು ಕೊಲ್ಲಲಾಯಿತು. ಈ ರೀತಿ ಪ್ರವಾದಿವರ್ಯರು(ಸ) ಕಳುಹಿಸಿದ ಆರು ಮಂದಿಯೂ ಹುತಾತ್ಮರಾದರು.

❖ ❖ ❖

81. ಒಂಟೆಯ ಉಪಮೆ

ಒಮ್ಮೆ ಪ್ರವಾದಿ(ಸ) ಮತ್ತವರ ಸಂಗಾತಿಗಳು ಒಂದೆಡೆ ಸೇರಿರುವಾಗ ಅಪರಿಚಿತನೋರ್ವ ಬಂದು ಏನಾದರೂ ಕೊಡಿ ಎಂದು ಯಾಚಿಸಿದನು. ಆಗ ಅವರಿಗೆ ಪ್ರವಾದಿವರ್ಯರು(ಸ) ಏನೋ ಒಂದು ವಸ್ತು ನೀಡಿದರು. ಬಳಿಕ ಆ ವ್ಯಕ್ತಿಯೊಂದಿಗೆ ನಾನು ನೀಡಿದ್ದುದು ನಿಮಗೆ ತೃಪ್ತಿಯಾಯಿತೇ?

''ನಾನು ನಿಮ್ಮೊಂದಿಗೆ ಉದಾರವಾಗಿ ವರ್ತಿಸಿಲ್ಲವೇ'' ಎಂದೂ ಕೇಳಿದರು. ಆಗ ಆ ವ್ಯಕ್ತಿಯು ''ಇಲ್ಲ, ನನ್ನೊಂದಿಗೆ ನೀವು ಸರಿಯಾದ ರೀತಿಯಲ್ಲಿ ವರ್ತಿಸಿಲ್ಲ'' ಎಂದು ಹೇಳಿದರು.

ಇದನ್ನು ಕೇಳಿದ ಪ್ರವಾದಿವರ್ಯರ(ಸ) ಸಂಗಾತಿಗಳು ಕೋಪಗೊಂಡರು. ಅವರು ಆ ವ್ಯಕ್ತಿಯನ್ನು ಹೊರಹಾಕಲು ಬಯಸಿದರು. ಆದರೆ ಪ್ರವಾದಿವರ್ಯರು(ಸ) ಅದಕ್ಕೆ ಅನುಮತಿಸಲಿಲ್ಲ, ಅವರೊಡನೆ ಸನ್ನೆಯ ಮೂಲಕ ಸುಮ್ಮನಿರುವಂತೆ ಸೂಚಿಸಿದರು. ಬಳಿಕ ಆ ವ್ಯಕ್ತಿಯನ್ನು ಕರೆದುಕೊಂಡು ಹೋಗಿ ಅಲ್ಲಿ ಇನ್ನೂ ಹೆಚ್ಚಿನವುಗಳನ್ನು ನೀಡುತ್ತಾ, ''ಈಗ ನೀವು ಸಂತೃಪ್ತರೇ? ನಾನು ನಿಮ್ಮೊಂದಿಗೆ ಉದಾರವಾಗಿ ವರ್ತಿಸಿದೆಯಲ್ಲಾ'' ಎಂದು ಕೇಳಿದರು.

ಆಗ ಆ ವ್ಯಕ್ತಿ ''ಹೌದು. ಅಲ್ಲಾಹನು ತಮ್ಮನ್ನೂ ತಮ್ಮ ಕುಟುಂಬಸ್ಥರನ್ನೂ ಅನುಗ್ರಹಿಸಲಿ!'' ಎಂದು ಕೃತಜ್ಞತೆ ಅರ್ಪಿಸಿದರು.

ಆಗ ಪ್ರವಾದಿವರ್ಯರು(ಸ) ಆ ವ್ಯಕ್ತಿಯೊಂದಿಗೆ, ''ಆಗ ನೀವು ಆಡಿದಂತಹ ುನುಚಿತವಾದ ಮಾತುಗಳು ನನ್ನ ಸಂಗಾತಿಗಳ ಮನಸ್ಸಿಗೆ ಸ್ವಲ್ಪ ನೋವುಂಟು ಾಡಿದೆ. ಆದ್ದರಿಂದ ನೀವು ಈಗ ಹೇಳಿದ ಮಾತುಗಳನ್ನು ಅವರ ಮುಂದೆ ಹೇಳಿದರೆ ುತ್ತಮವಾಗಿತ್ತು. ನಿಮ್ಮೊಂದಿಗೆ ಅವರಿಗಿರುವ ವೈರಾಗ್ಯವು ದೂರವಾಗಬಹುದು.''

''ಸರಿ ಹಾಗೆಯೇ ಆಗಲಿ'' ಎಂದು ಹೇಳಿದರು.

ಪ್ರವಾದಿ ಮತ್ತವರ ಸಂಗಾತಿಗಳು ಒಂದೆಡೆ ಸೇರಿರುವಾಗ ಅವರು ಪುನಃ ಂದರು. ಆಗ ಪ್ರವಾದಿವರ್ಯರು(ಸ) ''ಇವರು ನನ್ನೊಂದಿಗೆ ಅನುಚಿತವಾದ ಮಾತುಗಳನ್ನು ಆಡಿದರು. ಆದರೆ ನಾನು ಅವರಿಗೆ ಮತ್ತೂ ಸ್ವಲ್ಪ ಹೆಚ್ಚು ನೀಡಿದೆ. ಂದರಿಂದ ಅವರು ಸಂತೃಪ್ತರಾದರು ಎಂದು ಹೇಳುತ್ತಾ ಆ ವ್ಯಕ್ತಿಯತ್ತ ತಿರುಗಿ ನಾನು ಹೇಳಿದ್ದು ಸರಿ ತಾನೆ'' ಎಂದು ಕೇಳಿದರು.

''ಹೌದು. ಅಲ್ಲಾಹನು ತಮ್ಮನ್ನೂ ತಮ್ಮ ಕುಟುಂಬಸ್ಥರನ್ನು ಅನುಗ್ರಹಿಸಲಿ'' ಂದು ಹೇಳಿದರು.

ಕೂಡಲೇ ಪ್ರವಾದಿವರ್ಯರು(ಸ) ''ನನ್ನ ಹಾಗೂ ಈ ವ್ಯಕ್ತಿಯ ಉದಾಹರಣೆಯು ಕಳೆದು ಹೋದ ಒಂಟೆಯ ಮಾಲಕನಂತಿದೆ. ಜನರು ಆ ಒಂಟೆಯ ಹಿಂದೆ ಸೇರಿದರು. ಅದರಿಂದ ಒಂಟೆಯು ಭಯ ಭೀತಗೊಂಡು ಹೆದರಿ ಓಡ ತೊಡಗಿತು. ಅದರ ಮಾಲಿಕ ಈ ರೀತಿ ಕೂಗಿ ಹೇಳುತ್ತಿದ್ದನು, ದಯವಿಟ್ಟು ಆ ಒಂಟೆಯನ್ನು ಅದರ ಪಾಡಿಗೆ ಬಿಟ್ಟು ಬಿಡಿರಿ. ಅದರ ಬಗ್ಗೆ ನೀವು ಚಿಂತಿಸಬೇಡಿ. ನಾನು ನೋಡಿಕೊಳ್ಳುವೆನು. ಅದರೊಂದಿಗೆ ಹೆಚ್ಚು ದಯೆ, ಪ್ರೀತಿಯಿರುವುದು ನನಗಲ್ಲವೇ? ಅದರ ಬಗ್ಗೆ ಹೆಚ್ಚು ತಿಳಿದವನೂ ನಾನಲ್ಲವೇ?'' ಎಂದು ಹೇಳುತ್ತಾ ಆ ಒಂಟೆಯ ಬಳಿ ತೆರಳಿ ಕೈಯಲ್ಲಿ ಸ್ವಲ್ಪ ಹುಲ್ಲನ್ನು ಹಿಡಿದು ಅದನ್ನು ಕರೆದನು. ಅದು ಮೆಲ್ಲ ಮೆಲ್ಲನೆ ಮಾಲಕನ ಬಳಿ ಬಂತು. ಕೊನೆಗೆ ಆ ಒಂಟೆಯು ಆತನ ಮುಂದೆ ಕಾಲೂರಿತು.

❖ ❖ ❖

82. ಪಶ್ಚಾತ್ತಾಪದ ಮಹತ್ವ

ಸಾಮಾನ್ಯವಾಗಿ ತಪ್ಪು ಮಾಡದವರು ಯಾರೂ ಇಲ್ಲ. ಅರಿತೋ ಅರಿಯದೆಯೋ ಪಾಪಗಳು ಸಂಭವಿಸುತ್ತವೆ. ಹೇಳುವವರಿಗೂ, ಮಾಡುವವರಿಗೂ, ಅನುಷ್ಠಾನಿಸುವವರಿಗೂ ತಪ್ಪುಗಳು ಸಂಭವಿಸುತ್ತವೆ, ಮರಣಾನಂತರ ಪರಲೋಕದಲ್ಲಿ

ಪಾರಾಗುವವನು ಯಾವುದೇ ತಪ್ಪು ಮಾಡದವನು ಎಂದು ಎಲ್ಲಿಯೂ ಯಾರೂ ಹೇಳಿಲ್ಲ, ಹೇಳುವುದೂ ಇಲ್ಲ.

ಎಂತಹ ದುಷ್ಟನಾದರೂ ಆತನ ಪಾಪಕ್ಕೆ ಪ್ರಾಯಶ್ಚಿತ್ತವಿದೆ ಎಂದು ಧರ್ಮ ಕಲಿಸುತ್ತದೆ. ಪಾಪದ ಪ್ರಾಯಶ್ಚಿತ್ತದೊಂದಿಗೆ ಎಂತಹ ದುಷ್ಕರ್ಮಿಯೂ ಸತ್ಕರ್ಮಿಯಾಗಿ ಮಾರ್ಪಡುವನು. ಹೀಗೆ ಪಾಪದಿಂದ ಪ್ರಾಯಶ್ಚಿತ್ತ ಪಡೆದು ಹೊರಬಂದವನು ಅಲ್ಲಾಹನಿಗೆ ಅತ್ಯಂತ ಪ್ರಿಯನು. ಪ್ರವಾದಿವರ್ಯರು(ಸ) ಇದನ್ನು ಉದಾಹರಣೆಯ ಮುಖಾಂತರ ಈ ರೀತಿ ವಿವರಿಸಿದ್ದಾರೆ.

ಮರುಭೂಮಿಯಲ್ಲಿ ಒಂಟೆಯ ಮೇಲೆ ಓರ್ವ ವ್ಯಕ್ತಿ ಪ್ರಯಾಣಿಸುತ್ತಿದ್ದನು. ಅವನ ಅನ್ನ ಪಾನೀಯಗಳು, ಅಗತ್ಯ ವಸ್ತುಗಳೆಲ್ಲವೂ ಆ ಒಂಟೆಯ ಮೇಲಿತ್ತು. ಸುದೀರ್ಘ ಪ್ರಯಾಣದಿಂದ ಬಳಲಿದ ಅವನು ಒಂದೆಡೆ ವಿಶ್ರಾಂತಿ ಪಡೆದು ಅಲ್ಲಿಯೇ ನಿದ್ದೆ ಹೋದನು. ನಿದ್ದೆಯಿಂದ ಎಚ್ಚರಗೊಂಡಾಗ ತನಗೆ ಎಲ್ಲವೂ ಆಗಿದ್ದ ಒಂಟೆಯು ಕಾಣೆಯಾಗಿತ್ತು. ತನ್ನ ದಾಹ ಶಮನಕ್ಕಾಗಿ ನೀರು ಹಸಿವು ತಣಿಸುವ ಆಹಾರವೂ ಇಲ್ಲದೆ ಕಂಗಾಲಾದನು. ತುಂಬಾ ದುಃಖಿತನಾದ ಆ ವ್ಯಕ್ತಿ ಒಂಟೆಯನ್ನು ಅರಸುತ್ತಾ ನಡೆದನು, ಆದರೆ ಎಲ್ಲಿಯೂ ಒಂಟೆ ಕಂಡು ಬರಲಿಲ್ಲ, ರಾತ್ರಿ ಹಗಲೆನ್ನದೆ ಹುಡುಕಿದರೂ ಒಂಟೆ ಸಿಗಲಿಲ್ಲ, ತೀವ್ರ ನಿರಾಶನಾದ ಆ ವ್ಯಕ್ತಿಯು ಮರಳಿನಲ್ಲಿ ಅಂಗಾತ ಮಲಗಿದನು. ಇನ್ನು ಪಾರಾಗುವ ಯಾವುದೇ ದಾರಿಯಿಲ್ಲ ಎಂದು ಆತನಿಗೆ ಭಾಸವಾಯಿತು. ತನ್ನ ಎಲ್ಲ ನಿರೀಕ್ಷೆಗಳು ಹುಸಿಯಾಯ್ತು ಎಂದು ಭಾವಿಸಿ ಅಲ್ಲಿಯೇ ನಿದ್ದೆ ಹೋದನು. ನಿದ್ದೆಯಿಂದೆದ್ದು ಕಣ್ಣು ತೆರೆದಾಗ ಆತನಿಗೆ ಅಚ್ಚರಿ ಕಾದಿತ್ತು. ಅವನ ಕಣ್ಣುಗಳನ್ನೇ ಆತ ನಂಬದಾದನು. ತಾನು ಕಳೆದುಕೊಂಡೆ ಎಂದು ಭಾವಿಸಿದ ಒಂಟೆಯು ಅಲ್ಲಿ ನಿಂತುಕೊಂಡಿತ್ತು. ಆತ ಸಂತೋಷಾತಿರೇಕದಿಂದ ''ದೇವನೇ ನೀನು ನನ್ನ ದಾಸನು. ನಾನು ನಿನ್ನ ಒಡೆಯನಾಗಿರುವೆ ಎಂದು ಹೇಳಿದ. ಆದರೆ ನಿಜವಾಗಿ ಆ ವ್ಯಕ್ತಿ ದೇವನೇ ನಾನು ನಿನ್ನ ದಾಸ. ನೀನು ನನ್ನೊಡೆಯ'' ಎಂದು ಹೇಳಬೇಕಾಗಿತ್ತು. ಸಂತೋಷಾತಿರೇಕದಿಂದ ಆತನಲ್ಲಿ ತಪ್ಪು ಸಂಭವಿಸಿತ್ತು.

ಪ್ರವಾದಿವರ್ಯರು(ಸ) ವಿವರಿಸಿದರು, ''ಆ ವ್ಯಕ್ತಿ ಅನುಭವಿಸಿದ ಸಂತೋಷಕ್ಕಿಂತ ಎಷ್ಟೋ ಪಟ್ಟು ಅಧಿಕ ಸಂತೋಷ ಪಾಪದಲ್ಲಿ ಮುಳುಗಿದ ತನ್ನ ದಾಸನು ಪಶ್ಚಾತ್ತಾಪ ಪಟ್ಟು ಮರಳಿದಾಗ ಅಲ್ಲಾಹನಿಗಾಗುತ್ತದೆ.

❖ ❖ ❖

83. ಯಹೂದಿಗಾಗಿ ಕುರ್‌ಆನ್ ವಚನಗಳು

ಪ್ರವಾದಿವರ್ಯರ(ಸ) ಕಾಲದಲ್ಲಿ ಬನೂ ಝುಫರ್ ಗೋತ್ರದ ಬಶೀರ್ ಬಿನ್ ಉಬೈರಿಬ್ ಎಂಬವನು ಯುದ್ಧ ಕವಚವೊಂದನ್ನು ಕದ್ದನು. ಕಾಣೆಯಾದ ಯುದ್ಧ ಕವಚವನ್ನು ಅದರ ಒಡೆಯ ಹುಡುಕುತ್ತಿರುವಾಗ ಕದ್ದ ವ್ಯಕ್ತಿ ಆ ಕವಚವನ್ನು ಓರ್ವ ಯಹೂದಿಯಲ್ಲಿ ಒತ್ತೆ ಇರಿಸಿದನು. ಕವಚದ ಯಜಮಾನ ಈ ಕುರಿತು ಪ್ರವಾದಿವರ್ಯರಲ್ಲಿ(ಸ) ದೂರು ನೀಡಿದರು. ಬಶೀರ್‌ನ ಕುರಿತು ನನಗೆ ಅನುಮಾನ ಇರುವುದಾಗಿಯೂ ಹೇಳಿದರು. ಅಷ್ಟಾಗುವಾಗ ಕದ್ದ ಬಶೀರ್ ಬಿನ್ ಉಬೈರಿಬ್ ತನ್ನ ಸಂಬಂಧಿಕರನ್ನೆಲ್ಲಾ ಕರೆದು ಒಟ್ಟು ಸೇರಿಸಿದನು. ಬಳಿಕ ಆತ ಆ ಯಹೂದಿಯ ಮೇಲೆ ಕಳ್ಳತನದ ಆರೋಪ ಹೊರಿಸಲು ಪ್ರಯತ್ನಿಸಿದನು. ಯಹೂದಿಯನ್ನು ಕರೆದು ವಿಚಾರಿಸಿದಾಗ ಆತ ಆರೋಪವನ್ನು ನಿರಾಕರಿಸಿ ನಡೆದ ಘಟನೆಯನ್ನೆಲ್ಲಾ ವಿವರಿಸಿದನು. ಆದರೂ ಅಲ್ಲಿನ ಪರಿಸ್ಥಿತಿ ಯಹೂದಿಗೆ ಪ್ರತಿಕೂಲವಾಗಿತ್ತು. ಯಾಕೆಂದರೆ ಯುದ್ಧ ಕವಚ ಅವರ ಬಳಿಯಲ್ಲಿತ್ತು. ಅಷ್ಟರಲ್ಲಿ ಬಶೀರನ ಸಂಬಂಧಿಕರೆಲ್ಲಾ ಸೇರಿ, ಈತನೋರ್ವ ಯಹೂದಿ. ಸತ್ಯವನ್ನೂ ದೇವನ ಪ್ರವಾದಿಯನ್ನೂ ಧಿಕ್ಕರಿಸುವ ಈತನ ಮಾತು ನಂಬಲು ಸಾಧ್ಯವಿಲ್ಲ, ಮುಸ್ಲಿಮರಾದ ನಾವು ಹೇಳುವ ಮಾತುಗಳನ್ನು ಅಂಗೀಕರಿಸಬೇಕು ಎಂದು ಒಕ್ಕೊರಳಿನಿಂದ ಹೇಳಿದರು.

ಅವರ ವಾದ ಹಾಗೂ ಬಾಹ್ಯವಾದ ಸಾಕ್ಷಿಗಳನ್ನು ಗಮನಿಸಿದ ಪ್ರವಾದಿವರ್ಯರೂ(ಸ) ಯಹೂದಿಯ ವಿರುದ್ಧ ನಿಲುವು ತಾಳುವ ಸಿದ್ಧತೆಯಲ್ಲಿ ತೊಡಗಿದರು. ಅಷ್ಟರಲ್ಲಿ ಅಲ್ಲಾಹನ ವತಿಯಿಂದ ದಿವ್ಯವಾಣಿ ಅವತೀರ್ಣವಾಯಿತು. ಯಹೂದಿಯ ಪರವಾಗಿ ಹಾಗೂ ಮುಸ್ಲಿಮನ ವಿರುದ್ಧವಾಗಿ ಕುರ್‌ಆನ್ ಅವತೀರ್ಣಗೊಂಡಿತು.

"ಓ ಪೈಗಂಬರರೇ, ಅಲ್ಲಾಹನು ನಿಮಗೆ ತೋರಿಸಿ ಕೊಟ್ಟ ಪ್ರಕಾರ ಜನರ ನಡುವೆ ತೀರ್ಪು ನೀಡಲಿಕ್ಕಾಗಿ ನಾವು ನಿಮ್ಮ ಮೇಲೆ ಈ ಗ್ರಂಥವನ್ನು ಸತ್ಯಸಹಿತ ಅವತೀರ್ಣಗೊಳಿಸಿದ್ದೇವೆ. ನೀವು ಅಪ್ರಾಮಾಣಿಕರ ಪರವಾಗಿ ವಾದಿಸುವವರಾಗಬೇಡಿರಿ. ಪಾಪ ವಿಮೋಚನೆಗಾಗಿ ಅಲ್ಲಾಹನನ್ನು ಪ್ರಾರ್ಥಿಸಿರಿ. ಅವನು ಅತ್ಯಂತ ಕ್ಷಮಾಶೀಲನೂ ಕರುಣಾನಿಧಿಯೂ ಆಗಿರುತ್ತಾನೆ. ಆತ್ಮ ವಂಚನೆ ಮಾಡುವವರನ್ನು ನೀವು ಸಮರ್ಥಿಸಬೇಡಿರಿ. ನಿಶ್ಚಯವಾಗಿಯೂ ವಿಶ್ವಾಸಘಾತಕ ಮತ್ತು ಪಾಪಿಗಳಾದವರು ಅಲ್ಲಾಹನಿಗೆ ಮೆಚ್ಚುಗೆಯವರಲ್ಲ, ಇವರು ತಮ್ಮ ಚಟುವಟಿಕೆಗಳನ್ನು ಮಾನವರಿಗೆ ತಿಳಿಯದಂತೆ ಅಡಗಿಸಿ ಬಿಡಬಲ್ಲರು. ಆದರೆ ಅಲ್ಲಾಹನಿಗೆ ತಿಳಿಯದಂತೆ ಅಡಗಿಸಲಾರನು.

ಇವರು ರಾತ್ರಿಕಾಲದಲ್ಲಿ ಅವಿತುಕೊಂಡು ಅವನ ಇಚ್ಛೆಗೆ ವಿರುದ್ಧ ಸಂ
ನಡೆಸುತ್ತಿರುವಾಗಲೂ ಆತ ಇವರ ಜೊತೆಗೇ ಇರುತ್ತಾನೆ. ಇವರ ಸಕಲ ಕರ್ಮಗಳನ
ಅಲ್ಲಾಹನು ಆವರಿಸಿಕೊಂಡಿರುತ್ತಾನೆ. ಸರಿ; ನೀವು ಈ ಅಪರಾಧಿಗಳ ಪರವಾಗಿ ಇ
ಜೀವನದಲ್ಲಂತೂ ವಾದ ಮಾಡಿದಿರಿ. ಆದರೆ ಪುನರುತ್ಥಾನ ದಿನದಂದು ಇವರಿಗಾ
ಅಲ್ಲಾಹನೊಂದಿಗೆ ವಾದಿಸುವವರು ಯಾರಿದ್ದಾರೆ? ಅಲ್ಲಿ ಇವರ ವಕಾಲ
ವಹಿಸುವವರು ಯಾರು? ಯಾವನಾದರೂ ದುಷ್ಕರ್ಮವೆಸಗಿ ಬಿಟ್ಟರೆ ಅಥವಾ ತ
ಮೇಲೆ ತಾನೇ ಅನ್ಯಾಯವೆಸಗಿದರೆ ಮತ್ತು ಆ ಬಳಿಕ ಅಲ್ಲಾಹನೊಡನೆ ಕ್ಷಮಾಯಾಚ
ಮಾಡಿದರೆ, ಅಲ್ಲಾಹನು ಕ್ಷಮಾದಾನಿಯೂ ಕರುಣಾನಿಧಿಯೂ ಆಗಿರುವುದನ್ನು ಅವ
ಕಾಣುವನು. ಆದರೆ ಯಾರಾದರೂ ಪಾಪ ಗಳಿಸಿಕೊಂಡರೆ, ಅವನ ಗಳಿಕೆಯ
ಅವನಿಗೇ ಕೇಡಾಗುವುದು. ಅಲ್ಲಾಹನಿಗೆ ಸಕಲ ವಿಷಯಗಳ ಅರಿವಿದೆ. ಅವನು ಮ
ಯುಕ್ತಿಪೂರ್ಣನಾಗಿರುತ್ತಾನೆ. ಇನ್ನು ಯಾರಾದರೂ ಅಪರಾಧ ಅಥ
ಪಾಪಕಾರ್ಯವೆಸಗಿ ಅದರ ಆರೋಪವನ್ನು ಇನ್ನೊಬ್ಬ ನಿರಪರಾಧಿಯ ಮೇ
ಹೊರಿಸಿದರೆ ಅವನು ಅತೀ ದೊಡ್ಡ ಸುಳ್ಳಾರೋಪ ಮತ್ತು ಸುವ್ಯಕ್ತ ಪಾತಕದ ಹೊ
ಹೊತ್ತುಕೊಂಡನು.'' (ಅನ್ನಿಸಾ 105-112)

❖ ❖ ❖

84. ಸಂಪತ್ತಿನ ಶುದ್ಧೀಕರಣ

ಪ್ರವಾದಿವರ್ಯರ(ಸ) ಕಾಲದಲ್ಲಿ ಝುಕಾತ್ ಸಂಗ್ರಹಿಸಲು ಕೆಲವರಿಗೆ ಹೊಣೆಗಾ
ವಹಿಸಿ ಕೊಡಲಾಗಿತ್ತು. ಅವರಲ್ಲಿ ಉಬಯ್ಯ್ ಬಿನ್ ಕಅಬ್ ಕೂಡಾ ಒಬ್ಬರಾಗಿದ್ದ
ಝುಕಾತಿನ ಕುರಿತು ಲೆಕ್ಕ ಹಾಕಲು ಮತ್ತು ಸಂಗ್ರಹಿಸಲು ಹೊರಟ ಅವ
ಜಾನುವಾರುಗಳನ್ನು ಸಾಕಿ ಜೀವನ ಸವೆಸುತ್ತಿದ್ದ ಓರ್ವ ಗ್ರಾಮೀಣರನ್ನು ಭೇಟಿಯಾದ
ಅವರು ತನ್ನಲ್ಲಿದ್ದ ಒಂಟೆ ಹಾಗೂ ಆಡುಗಳನ್ನು ಉಬಯ್ಯ್‌ರಿಗೆ ತೋರಿಸಿದರು. ಎಲ್ಲವ
ಪರಿಶೀಲಿಸಿದ ಬಳಿಕ ಅವರು ನೀವೊಂದು ಒಂಟೆಯ ಮರಿಯೊಂದನ್ನು ತೋ
ಇದನ್ನು ನೀಡಿದರೆ ಸಾಕೆಂದು ಹೇಳಿದರು.

ಅದಕ್ಕೆ ಗ್ರಾಮೀಣನು ''ನೀವು ತೋರಿಸಿದ ಆ ಒಂಟೆ ಮರಿಯಿಂದ ಸರ
ಸಾಗಿಸಲೋ ಪ್ರಯಾಣ ಮಾಡಲೋ ಸಾಧ್ಯವಾಗದು. ಆದ್ದರಿಂದ ಪ್ರಯಾ
ಯೋಗ್ಯವಾದ ದಷ್ಟಪುಷ್ಟವಾದ ಈ ಒಂಟೆಯನ್ನು ಸ್ವೀಕರಿಸಿರಿ'' ಎಂದು ಹೇಳಿದ

''ಇಲ್ಲ, ಅದನ್ನು ನಾನು ಪಡೆಯಲಾರೆ. ಪ್ರವಾದಿವರ್ಯರು(ಸ) ಆದೇಶಿಸಿದ್ದಕ್ಕಿ

ಹೆಚ್ಚಿನದ್ದನ್ನು ನಾನು ಮಾಡಲಾರೆ'' ಎಂದು ಉಬಯ್ಯ್ ಮರುತ್ತರಿಸಿದರು.

ಇದರಿಂದ ಆ ಗ್ರಾಮೀಣ ತೀರಾ ನೊಂದುಕೊಂಡರು. ತಾನು ನೀಡ ಬಯಸಿದ ಒಂಟೆ ಯೊಂದಿಗೆ ಪ್ರವಾದಿವರ್ಯರ(ಸ) ಬಳಿಗೆ ಸಾಗಿದರು. ಪ್ರವಾದಿವರ್ಯರಿಗೆ(ಸ) ಸಲಾಮ್ ಹೇಳಿ ಪ್ರವೇಶಿಸಿದ ಅವರು ''ಅಲ್ಲಾಹನ ಪ್ರವಾದಿಗಳೇ, ಝಕಾತ್ ಸಂಗ್ರಹಿಸಲು ತಾವು ಕಳುಹಿಸಿದ ಪ್ರತಿನಿಧಿ ನನ್ನ ಬಳಿಗೆ ಬಂದಿದ್ದರು. ಈ ಹಿಂದೆ ಝಕಾತ್ ಸಂಗ್ರಹಿಸಲು ನಿಮ್ಮ ಪರವಾಗಿ ಯಾರೂ ನನ್ನ ಬಳಿಗೆ ಬಂದಿರಲಿಲ್ಲ, ಆದ್ದರಿಂದ ನಾನು ನನ್ನೆಲ್ಲಾ ಸೊತ್ತುಗಳನ್ನು ಅವರಿಗೆ ತೋರಿಸಿ ಲೆಕ್ಕ ನೀಡಿದೆ. ಎಲ್ಲವನ್ನೂ ಪರಿಶೀಲಿಸಿದ ಅವರು ನೀವು ಒಂಟೆ ಮರಿ ಯೊಂದನ್ನು ನೀಡಿದರೆ ಸಾಕೆಂದು ಹೇಳಿದರು. ಆದರೆ ಅದು ತೀರಾ ಸಣ್ಣದಾಗಿದ್ದು, ಸರಕು ಸಾಗಿಸಲೋ ಪ್ರಯಾಣಕ್ಕೋ ಯೋಗ್ಯವಾಗಿರಲಿಲ್ಲ, ನಾನು ದಷ್ಟಪುಷ್ಟವಾದ ಒಂಟೆಯೊಂದನ್ನು ತೋರಿಸಿ ಪಡೆಯಲು ಅವರೊಂದಿಗೆ ವಿನಂತಿಸಿಕೊಂಡರೂ ಅವರು ಅದನ್ನು ಸ್ವೀಕರಿಸಲಿಲ್ಲ, ಅದಕ್ಕಾಗಿ ಈ ಒಂಟೆಯನ್ನು ಸ್ವೀಕರಿಸಬೇಕೆಂದು ವಿನಂತಿಸಿಕೊಳ್ಳುತ್ತಿದ್ದೇನೆ'' ಎಂದು ಹೇಳಿದರು.

ಅತ್ಯಪೂರ್ವವಾದ ಆ ವ್ಯಕ್ತಿಯ ಉದಾರತೆ ಹಾಗೂ ದೇವಭಕ್ತಿಯು ಪ್ರವಾದಿ ವರ್ಯರನ್ನು(ಸ) ಆಹ್ಲಾದಭರಿತರಾಗಿ ಮಾಡಿತು. ಬಳಿಕ ಪ್ರವಾದಿವರ್ಯರು(ಸ) ''ನೀವು ನಿಮ್ಮಿಷ್ಟದಂತೆ ಮಾಡಿರಿ. ಕಡ್ಡಾಯವಾಗಿ ನೀಡಬೇಕಾದುದನ್ನು ನನ್ನ ಪ್ರತಿನಿಧಿ ನಿಮ್ಮಿಂದ ಪಡೆದುಕೊಂಡಿರುತ್ತಾರೆ. ಇನ್ನೂ ಹೆಚ್ಚಿನ ಪುಣ್ಯ ಸಂಪಾದಿಸಬೇಕೆಂಬ ಉತ್ಕಟೇಚ್ಛೆ ನಿಮಗಿದ್ದರೆ, ಖಂಡಿತವಾಗಿಯೂ ಅಲ್ಲಾಹನು ಅದಕ್ಕೆ ಹೆಚ್ಚಿನ ಪ್ರತಿಫಲ ನೀಡುವನು'' ಎಂದರು.

ಆ ಗ್ರಾಮೀಣನು ತಾನು ತಂದ ಬೆಲೆ ಬಾಳುವ ಒಂಟೆಯನ್ನು ಪ್ರವಾದಿವರ್ಯರಿಗೆ(ಸ) ಸಮರ್ಪಿಸಿದರು. ಪ್ರವಾದಿವರ್ಯರು(ಸ) ಅದನ್ನು ಪಡೆದು ಸಾರ್ವಜನಿಕ ಖಜಾನೆಗೆ ಸೇರಿಸಿ ದರು. ಬಳಿಕ ಅಲ್ಲಾಹನಲ್ಲಿ ಆ ವ್ಯಕ್ತಿಯ ಒಳಿತಿಗಾಗಿಯೂ ವಿಜಯಕ್ಕಾಗಿಯೂ ಪ್ರಾರ್ಥಿಸಿದರು.

❖ ❖ ❖

85. ಹಕ್ಕುಗಳ ಸಂದಾಯ

''ಮುಹಮ್ಮದ್(ಸ), ಈ ಧನವು ನಿಮ್ಮ ತಂದೆಯವರದ್ದೋ ಅಥವಾ ಅಲ್ಲಾಹನದ್ದೋ'' ಎಂಬ ತೀಕ್ಷ್ಣವಾದ ಬಾಣದಂತಹ ಪ್ರಶ್ನೆಯನ್ನು ಒಬ್ಬ ಗ್ರಾಮೀಣ ಅರಬನು ಪ್ರವಾದಿವರ್ಯರಿಗೆ(ಸ) ಎಸೆದನು. ಆಗ ಪ್ರವಾದಿವರ್ಯರು(ಸ) ಸಾರ್ವಜನಿಕ

ಖಜಾನೆಯಿಂದ ಹಣವನ್ನು ಹಂಚುತ್ತಿದ್ದರು. ತನಗೆ ಸಿಕ್ಕಿದುದರಿಂದ ತೃಪ್ತನಾಗದ ಅರಬನು ಕೋಪದಿಂದ ಈ ರೀತಿ ವರ್ತಿಸಿದ್ದ. ಅವರ ಈ ದುರ್ವರ್ತನೆಯು ಪ್ರವಾದಿವರ್ಯ‌ರ(ಸ) ಸಂಗಾತಿಗಳಿಗೆ ಸಹ್ಯವಾಗಲಿಲ್ಲ. ತಮ್ಮ ಪ್ರಾಣಕ್ಕಿಂತಲೂ ಹೆಚ್ಚು ಪ್ರೀತಿಸುವ ಪ್ರವಾದಿ ವರ್ಯರೊಂದಿಗೆ(ಸ) ಈ ರೀತಿ ವರ್ತಿಸುವುದನ್ನು ಕಂಡು ಅವರು ಸುಮ್ಮನಿರುವರೇ? ಕೆಲವರು ಅವನ ಮೇಲೆರಗಲು ಹೋದರು. ಅಷ್ಟರಲ್ಲಿ ಪ್ರವಾದಿವರ್ಯರು(ಸ) ಅವರೊಂದಿಗೆ, ''ನೀವು ಆ ವ್ಯಕ್ತಿಗೆ ಏನೂ ತೊಂದರೆ ನೀಡಬೇಡಿ. ಅವನನ್ನು ಬಿಟ್ಟುಬಿಡಿರಿ. ಅವನೂ ಈ ಸೊತ್ತಿನ ಹಕ್ಕುದಾರನಲ್ಲವೇ? ಅವನಿಗೆ ಮಾತನಾಡಲು ಹಕ್ಕಿದೆ.'' ತನ್ನಲ್ಲಿ ಪ್ರತಿರೋಧವೆಸಗಲು ಬಂದರೂ ಯಾವುದೇ ಮುಲಾಜಿಲ್ಲದೆ ತನ್ನನ್ನು ಸಮರ್ಥಿಸುವ ಮನೋಭಾವವನ್ನು ಪ್ರವಾದಿವರ್ಯರು(ಸ) ತನ್ನ ಭಾಷಣದಲ್ಲೂ ಹೇಳಲು ಹಿಂಜರಿಯಲಿಲ್ಲ.

ಒಮ್ಮೆ ಪ್ರವಾದಿವರ್ಯರು(ಸ) ''ಒಂದು ವೇಳೆ ನಾನು ಯಾರದೇ ಸೊತ್ತು ಸಂಪತ್ತನ್ನು ಕಬಳಿಸಿದೆನೆಂದಾದರೆ ಇಲ್ಲಿದೆ ನನ್ನ ಸಂಪತ್ತು. ಇದರಿಂದ ಪಡೆದುಕೊಳ್ಳಿರಿ. ನಾನು ಯಾರಿಗಾದರೂ ಹೊಡೆದಿದ್ದರೆ ಅವರು ನನ್ನ ಬೆನ್ನ ಮೇಲೆ ಪ್ರಹಾರ ಮಾಡಲಿ'' ಎಂದು ದೇಹವನ್ನು ತೋರಿಸುತ್ತಾ ಹೇಳಿದರು.

❖ ❖ ❖

86. ಕೆಟ್ಟ ಮಾತುಗಳಿಗೂ ಸ್ವಾಗತ

ಸಾಲವಾಗಿ ಪಡೆದ ಖರ್ಜೂರವನ್ನು ಮರಳಿಸಬೇಕೆಂದು ಓರ್ವ ಗ್ರಾಮೀಣನು ಪ್ರವಾದಿವರ್ಯರಿಗೆ(ಸ) ತುಂಬಾ ಕಿರುಕುಳ ನೀಡುತ್ತಿದ್ದನು. ಆಗ ಆತನೊಂದಿಗೆ ಪ್ರವಾದಿವರ್ಯರು(ಸ), ''ಈಗ ನನ್ನ ಬಳಿ ಕೊಡಲು ಏನೂ ಉಳಿದಿಲ್ಲ. ಸ್ವಲ್ಪ ಕಾಲಾವಕಾಶ ನನಗೆ ಕೊಡಿರಿ. ನನಗೆ ಸಿಕ್ಕ ತಕ್ಷಣ ಅದನ್ನು ನಿಮಗೆ ಮರಳಿಸುವೆ'' ಎಂದರು. ಆದರೆ ಆ ಗ್ರಾಮೀಣ ಅದನ್ನು ಒಪ್ಪುವುದಕ್ಕೆ ಸಿದ್ಧನಿರಲಿಲ್ಲ. ಮಾತ್ರವಲ್ಲ, ಪ್ರವಾದಿ ವರ್ಯರನ್ನು(ಸ) ತೀವ್ರವಾಗಿ ವಿಮರ್ಶಿಸತೊಡಗಿದನು. ಕೆಟ್ಟ ಮಾತುಗಳನ್ನಾಡ ಲಾರಂಭಿಸಿದನು.ಉಮರ್‌ರು(ರ) ಇದನ್ನು ಕಂಡು ಕೆರಳಿದರು. ಕೋಪೋದ್ರಿಕ್ತರಾದ ಅವರು ಆತನ ಮೇಲೆ ಏರಿ ಹೋದರು. ಕೂಡಲೇ ಪ್ರವಾದಿವರ್ಯರು(ಸ) ಅವರನ್ನು ತಡೆದರು. ''ಉಮರ್! ಅವರನ್ನು ಬಿಟ್ಟುಬಿಡಿರಿ. ಆತ ಹಕ್ಕುದಾರನಲ್ಲವೇ, ಆತ ಹಾಗೆಲ್ಲಾ ಮಾತನಾಡುತ್ತಿರಬಹುದು.''

ಬಳಿಕ ಹಕೀಮ್‌ರ ಪುತ್ರಿ ಖಲ್‌ವತ್‌ರ ಮನೆಯಿಂದ ಖರ್ಜೂರ ತಂದು ಅವರ

ಸಾಲವನ್ನು ಮರಳಿಸಿದರು.

❖ ❖ ❖

87. ಷಾಸ್‌ನ ಕುತಂತ್ರಕ್ಕೆ ಪ್ರವಾದಿಯವರ(ಸ) ಪ್ರತಿ ತಂತ್ರ

ಪ್ರವಾದಿವರ್ಯರ(ಸ) ಆಗಮನವಾಗುವುದಕ್ಕಿಂತ ಮುಂಚೆ ಯಸ್ರಿಬ್ ಗೋತ್ರವು ಹಗೆ ಹಾಗೂ ಹೋರಾಟಕ್ಕೆ ಪ್ರಸಿದ್ಧವಾದ ಪ್ರದೇಶವಾಗಿತ್ತು. ಅಲ್ಲಿದ್ದ ಔಸ್ ಹಾಗೂ ಖಝ್ರಜ್ ಗೋತ್ರಗಳು ಪರಸ್ಪರ ಜಗಳಾಡದ ದಿನಗಳು ವಿರಳ. ತಲೆ ತಲಾಂತರಗಳಿಂದ ಅವರ ಮಧ್ಯೆ ತೀವ್ರ ದ್ವೇಷವಿತ್ತು. ಅಲ್ಲಿನ ಮಹಿಳೆಯರು ಗರ್ಭ ಧರಿಸಿ ಮಕ್ಕಳನ್ನು ಹೆತ್ತು ಹೊತ್ತು ಬೆಳೆಸುತ್ತಿದ್ದುದೇ ಪರಸ್ಪರ ಹೋರಾಟ ನಡೆಸಲಿಕ್ಕಾಗಿತ್ತು. ಪ್ರತಿಯೊಂದು ಯುದ್ಧದ ಮುಕ್ತಾಯದ ಸಂದರ್ಭದಲ್ಲಿ ಮುಂದಿನ ರಣಾಂಗಣದ ಬಗ್ಗೆ ಪ್ರತಿಜ್ಞೆ ತೆಗೆದೇ ಅಲ್ಲಿಂದ ವಿರಮಿಸುತ್ತಿದ್ದರು.

ಯಸ್ರಿಬ್‌ನ ಈ ರಕ್ತಸಿಕ್ತ ಮರುಭೂಮಿಗೆ ಪ್ರವಾದಿವರ್ಯರ(ಸ) ಉದಾತ್ತ ಸಂದೇಶವು ಬೆಳಕನ್ನು ನೀಡಿತು. ಅಲ್ಲಿ ಸ್ನೇಹ, ಪ್ರೀತಿ, ಪರಸ್ಪರ ಕರುಣೆ, ನಯ-ವಿನಯ, ತಾಳ್ಮೆ, ಸಹನೆ, ಕ್ಷಮೆಯ ಪರಿಮಳ ಪಸರಿಸಿತು. ಅದು ಆ ಜನತೆಯ ಮೇಲೆ ಭಾರೀ ಪ್ರಭಾವ ಬೀರಿತು.

ಯಸ್ರಿಬ್‌ನಲ್ಲಿ ಪರಸ್ಪರ ಕಠಿಣ ಶತ್ರುಗಳಾಗಿದ್ದ ಔಸ್, ಖಝ್ರಜ್ ಗೋತ್ರಗಳ ಮಧ್ಯೆ ಸ್ನೇಹದ ಸಂಕೋಲೆ ಬೆಸೆಯಿತು. ಅವರು ಅತ್ಯಂತ ಆಪ್ತರಾದರು.

ಔಸ್, ಖಝ್ರಜ್‌ನ ನಡುವಿನ ಹೋರಾಟದಿಂದ ಲಾಭಗಳಿಸುತ್ತಿದ್ದ ಯಹೂದಿ ನೇತಾರ ಷಾಸ್ ಬಿನ್ ಕೈಸ್ ಇದರಿಂದ ತೀವ್ರ ಚಿಂತಿತನಾದ. ಪ್ರವಾದಿವರ್ಯರ(ಸ) ಈ ಭಾಗೀದಾರಿಕೆಯಿಂದ ಆತನ ವರಮಾನಕ್ಕೂ ಧಕ್ಕೆಯುಂಟಾಯಿತು. ಅದಕ್ಕಾಗಿ ಔಸ್, ಖಝ್ರಜ್ ಗೋತ್ರಗಳು ಪರಸ್ಪರ ಹೊಡೆದಾಡಲು ಷಡ್ಯಂತ್ರ ರೂಪಿಸ ತೊಡಗಿದನು. ಈ ಮಧ್ಯೆ ಆತನಿಗೆ ಯಹೂದಿ ಕವಿಯೊಬ್ಬನ ಬೆಂಬಲವೂ ಸಿಕ್ಕಿತು. ಷಾಸ್ ಬಿನ್ ಝ್ಹೈದ್ ಆತನ ಕಿವಿಯೂದ ತೊಡಗಿದನು. ''ನೋಡು ಪರಸ್ಪರ ಕಾದಾಡುತ್ತಿದ್ದ ಈ ಔಸ್, ಖಝ್ರಜ್ ಗೋತ್ರಗಳು ಈಗ ವಿಸ್ಮಯಕರವಾಗಿ ಪರಸ್ಪರ ಐಕ್ಯದಿಂದಿವೆ. ನಮ್ಮೆಲ್ಲಾ ನಾಶನಷ್ಟಗಳಿಗೆ ಇದೇ ಕಾರಣ. ಅವರ ನಡುವಿನ ಐಕ್ಯವು ನಮಗೆ ಮಾರಕವಾಗುವುದು. ನಮ್ಮ ಸುಖವನ್ನು ಅವರು ಕೆಡಿಸುತ್ತಿದ್ದಾರೆ. ಆದ್ದರಿಂದ

ಅವರ ಒಗ್ಗಟ್ಟನ್ನು ಮುರಿಯಬೇಕು. ನೀವು ಖಝ್ರಜ್ ಗೋತ್ರಜರನ್ನು ಸಂಪರ್ಕಿಸಿರಿ. ಬುಆಸ್ ಯುದ್ಧದ ಕುರಿತು ಅವರಿಗೆ ನೆನಪಿಸಿ. ಔಸ್ ಗೋತ್ರಗಳು ನಡೆಸಿದ ಮೃತ್ಯು ತಾಂಡವವನ್ನು ವಿವರಿಸುತ್ತಾ ಅವರ ಮೃತರಾದ ಸಹೋದರರನ್ನು ನೆನಪಿಸಿ ಪ್ರಚೋದಿಸಿರಿ ಎಂದು ಹೇಳಿದನು.

ಆ ಯಹೂದಿ ಯುವಕ ಖಝ್ರಜ್ ಗೋತ್ರದವರನ್ನು ಸಂಪರ್ಕಿಸಿ ಹಳೆಯ ನೆನಪುಗಳನ್ನು ಕೆದಕ ತೊಡಗಿದನು. ಹಾಗೆಯೇ ಔಸ್‌ರನ್ನೂ ಸಮೀಪಿಸಿ ಉದ್ರೇಕಿಸ ತೊಡಗಿದನು. ಮತ್ತೆ ಎರಡೂ ವಿಭಾಗಗಳ ಮಧ್ಯೆ ದ್ವೇಷದ ಹೊಗೆ ಏಳಲು ಆರಂಭವಾಯಿತು. ಪರಸ್ಪರ ವಾದ-ವಿವಾದಗಳು ಪ್ರಾರಂಭವಾಯಿತು. ಅದು ಬೆಳೆದು ಮದೀನಾದ ಹೊರಗಿನ ಹುರ್ರ ಎಂಬಲ್ಲಿ ಕಾದಾಟ ನಡೆಸಲು ಮುಹೂರ್ತವಿಟ್ಟರು.

ವಿಷಯ ತಿಳಿದ ಪ್ರವಾದಿವರ್ಯರು(ಸ) ತಕ್ಷಣ ಅಲ್ಲಿಗೆ ಧಾವಿಸಿದರು. ಷಾಸ್‌ನ ಕುತಂತ್ರಗಳ ಕುರಿತು ಅವರಿಗೆ ಮನವರಿಕೆ ಮಾಡಿಸಿದರು. ಬಳಿಕ ಅವರೊಂದಿಗೆ ''ನಾನು ಜೀವಂತವಿರುವಾಗ ಮತ್ತೆ ನೀವು ಪರಸ್ಪರ ಸಂಘರ್ಷಿಸುವುದೇ? ಇಸ್ಲಾಮಿನ ಕಾರಣ ನಿಮ್ಮನ್ನು ಅಲ್ಲಾಹನು ಪರಸ್ಪರ ಒಂದುಗೂಡಿಸಿದನು. ಪರಸ್ಪರ ಅನ್ಯೋನ್ಯವಾದ ನೀವು ಆತ್ಮೀಯ ಮಿತ್ರರಾದಿರಿ. ಆ ಮೂಲಕ ನೀವು ಗೌರವಾನ್ವಿತರಾದಿರಿ. ನರಕದ ಶಿಕ್ಷೆಯಿಂದ ಪಾರಾದ ನೀವು ಮತ್ತೆ ನರಕದ ಹಾದಿಗೆ ಮರಳುವುದೇ?'' ಪ್ರವಾದಿವರ್ಯರ(ಸ) ಈ ಉಪದೇಶವು ಅವರ ಮನಸ್ಸುಗಳ ಮೇಲೆ ಭಾರೀ ಪ್ರಭಾವ ಬೀರಿತು. ತಮ್ಮಿಂದಾದ ಪ್ರಮಾದಕ್ಕೆ ಪಶ್ಚಾತ್ತಾಪದಿಂದ ಅವರ ಕಣ್ಣುಗಳು ತುಂಬಿದವು. ಪರಸ್ಪರ ಕ್ಷಮಾಯಾಚನೆ ಮಾಡಿದರು. ಆ ಮೂಲಕ ಅವರ ಪ್ರೇಮ, ಸ್ನೇಹ, ವಾತ್ಸಲ್ಯವು ಇನ್ನಷ್ಟು ಪ್ರಬಲವಾಯಿತು.

ಶತ್ರುಗಳ ಈ ರೀತಿಯ ಕುತಂತ್ರಗಳ ಕುರಿತು ಪವಿತ್ರ ಕುರ್‌ಆನ್ ಸತ್ಯವಿಶ್ವಾಸಿಗಳಿಗೆ ಈ ರೀತಿ ನಿರ್ದೇಶಿಸಿತು. ''ನೀವೆಲ್ಲರೂ ಅಲ್ಲಾಹನ ಪಾಶವನ್ನು ಬಿಗಿಯಾಗಿ ಹಿಡಿಯಿರಿ ಮತ್ತು ಭಿನ್ನ ಭಿನ್ನರಾಗದಿರಿ. ಅಲ್ಲಾಹನು ನಿಮಗೆ ಮಾಡಿದ ಉಪಕಾರವನ್ನು ಸ್ಮರಿಸಿರಿ. ನೀವು ಪರಸ್ಪರ ಶತ್ರುಗಳಾಗಿದ್ದಿರಿ. ಅವನು ನಿಮ್ಮ ಹೃದಯಗಳನ್ನು ಜೋಡಿಸಿದನು ಮತ್ತು ಅವನ ಅನುಗ್ರಹದಿಂದ ನೀವು ಸಹೋದರರಾದಿರಿ. ನೀವು ಅಗ್ನಿಕುಂಡದ ಅಂಚಿನಲ್ಲಿನಿಂತಿದ್ದಿರಿ. ಅಲ್ಲಾಹನು ನಿಮ್ಮನ್ನು ಅದರಿಂದ ರಕ್ಷಿಸಿದನು. ಈ ದೃಷ್ಟಾಂತಗಳಿಂದ ನಿಮಗೆ ನಿಮ್ಮ ಶಾಶ್ವತ ವಿಜಯದ ನೇರಮಾರ್ಗ ಕಾಣಬಹುದೆಂದು, ನಿರೀಕ್ಷಿಸಿ ಅಲ್ಲಾಹನು ತನ್ನ ನಿದರ್ಶನಗಳನ್ನು ನಿಮಗೆ ಸ್ಪಷ್ಟಪಡಿಸುತ್ತಾನೆ.'' (ಅಲ್ ಇಮ್ರಾನ್-103)

❖ ❖ ❖

88. ಸರಿಸಾಟಿಯಿಲ್ಲದ ದಯೆ

ಅಬೂ ಸುಫ್ಯಾನ್ ಮಕ್ಕಾದಲ್ಲಿ ಪ್ರವಾದಿವರ್ಯರ(ಸ) ಪ್ರಮುಖ ಎದುರಾಳಿಗಳಲ್ಲಿ ಓರ್ವರಾಗಿದ್ದರು. ಪ್ರವಾದಿವರ್ಯರಿಗೂ(ಸ) ಅವರ ಸಂಗಾತಿಗಳಿಗೂ ನೀಡಿದ ಕಿರುಕುಳ, ಉಪಟಳಗಳಿಗೆಲ್ಲ ಅನೇಕ ಬಾರಿ ಅವರೇ ನೇತೃತ್ವ ವಹಿಸಿದ್ದರು. ಪ್ರವಾದಿ(ಸ) ಮತ್ತವರ ಸಂಗಾತಿಗಳಿಗೆ ಮೂರು ವರ್ಷಗಳ ಕಾಲ ಬಹಿಷ್ಕಾರ ಹೇರಿದ ತೀರ್ಮಾನದಲ್ಲಿಯೂ ಅಬೂ ಸುಫ್ಯಾನ್‌ರ ಪಾತ್ರ ಪ್ರಮುಖವಾಗಿತ್ತು. ಮಾತ್ರವಲ್ಲ, ಪ್ರವಾದಿವರ್ಯರು(ಸ) ಮತ್ತವರ ಸಂಗಾತಿಗಳು ಊರು ತೊರೆದು ಹಿಜ್‌ರಾ ಹೋಗಲು ಕಾರಣಕರ್ತರಲ್ಲಿ ಅವರ ಪಾಲು ಬಹಳಷ್ಟಿದೆ. ಅವರು ತಮ್ಮ ಬೆಂಬಲಿಗರೊಂದಿಗೆ ಹಿಜ್‌ರಾದ ಬಳಿಕ ಹೆಚ್ಚಿನ ಯುದ್ಧಗಳನ್ನು ಮುಸ್ಲಿಮರ ವಿರುದ್ಧ ಸಂಘಟಿಸಿದ್ದರು. ಇಸ್ಲಾಮಿನ ಪ್ರಾರಂಭದಿಂದ ಆ ದಿನದ ವರೆಗೂ ಅವರಿಗೆ ಇಸ್ಲಾಮಿನ ವಿರುದ್ಧದ ಕೋಪ ತಣಿದಿರಲಿಲ್ಲ. ಹಾಗೆಯೇ ಪ್ರವಾದಿವರ್ಯರ(ಸ) ಪಿತೃ ಸಹೋದರಿಯ ಪುತ್ರ ಅಬ್ದುಲ್ಲಾ ಬಿನ್ ಉಮಯ್ಯ ಕೂಡಾ ಇದಕ್ಕೆ ಹೊರತಾಗಿರಲಿಲ್ಲ. ಅವರು ಪ್ರವಾದಿವರ್ಯರ(ಸ) ವಿರುದ್ಧದ ಅಪಪ್ರಚಾರದಲ್ಲಿಯೇ ಹೆಚ್ಚು ಕಾಲ ವ್ಯಯಿಸಿದ್ದರು.

ಪ್ರವಾದಿವರ್ಯರು(ಸ) ಹಾಗೂ ಅವರ ಅನುಯಾಯಿಗಳು ಮರಳಿ ಜನ್ಮನಾಡು ಮಕ್ಕಾದೆಡೆಗೆ ವಿಜಯ ದುಂಧುಬಿ ಮೊಳಗಿಸಿ ಪ್ರಯಾಣಿಸುತ್ತಿದ್ದಾರೆ. ಅವರನ್ನು ವಿರೋಧಿಗಳು ಎದುರಿಸುವ ಸಾಧ್ಯತೆ ತೀರಾ ವಿರಳ. ಯಾಕೆಂದರೆ ಮಕ್ಕಾದ ಹೆಚ್ಚಿನ ನಿವಾಸಿಗಳು ಪ್ರವಾದಿವರ್ಯರ(ಸ) ಪಾಳಯಕ್ಕೆ ಸೇರುವ ತವಕದಲ್ಲಿದ್ದಾರೆ. ಪ್ರವಾದಿವರ್ಯರು(ಸ) ಮಕ್ಕಾದ ಮಣ್ಣಲ್ಲಿ ಕಾಲೂರುವುದರ ನಿರೀಕ್ಷೆಯಲ್ಲಿದ್ದಾರೆ.

ಹಾಗೆಯೇ ಪ್ರವಾದಿವರ್ಯರು(ಸ) ತಮ್ಮ ಅನುಚರರೊಂದಿಗೆ ದಹ್‌ರಾಕ್ಕೆ ಆಗಮಿಸಿದರು. ಇನ್ನು ಮಕ್ಕಾ ನಗರಕ್ಕೆ ಕೇವಲ ಏಳು ಕಿ.ಮೀ. ದೂರದ ಅಂತರವಿದೆ. ಇದನ್ನು ತಿಳಿದ ಅಬೂ ಸುಫ್ಯಾನ್ ಹಾಗೂ ಅಬ್ದುಲ್ಲಾ ಬಿನ್ ಉಮಯ್ಯ ಅಲ್ಲಿಗೆ ಹೊರಟರು. ''ಸಿವಿಲ್ ಊಖಾಬ'' ಎಂಬ ಸ್ಥಳದಲ್ಲಿ ಅವರು ಇಸ್ಲಾಮೀ ಸೇನೆಯನ್ನು ಸಂಧಿಸಿದರು. ಪ್ರವಾದಿವರ್ಯರೊಂದಿಗೆ ಸಂಧಾನಕ್ಕೆಂದು ಅನುಮತಿ ಯಾಚಿಸಿದರು. ಅವರ ಕುರಿತು ಪ್ರವಾದಿವರ್ಯರಿಗೆ(ಸ) ಚೆನ್ನಾಗಿ ತಿಳಿದಿರುವ ಕಾರಣ ತಕ್ಷಣ ಅವರಿಗೆ ಅನುಮತಿ ನೀಡಲಿಲ್ಲ. ಅವರ ಪರವಾಗಿ ಪ್ರವಾದಿವರ್ಯರ(ಸ) ಪತ್ನಿ ಉಮ್ಮುಸಲಮ ಕೂಡಾ ಮಾತನಾಡಿದರು. ಆದರೆ ಅದನ್ನು ಪ್ರವಾದಿವರ್ಯರು(ಸ) ಅಂಗೀಕರಿಸಲಿಲ್ಲ. ಬಳಿಕ ಪ್ರವಾದಿವರ್ಯರು(ಸ), ''ನೋಡಿ ಈ ಅಬೂ ಸುಫ್ಯಾನ್‌ರಿಂದ ನಾನು ಬಹಳ

ಸಂಕಷ್ಟ ಅನುಭವಿಸಿದ್ದೇನೆ. ನನ್ನ ಪಿತೃ ಸಹೋದರಿಯ ಪುತ್ರ ಅಬ್ದುಲ್ಲಾ ಬಿನ ಉಮಯ್ಯ ನನ್ನ ವಿರುದ್ಧ ಮಕ್ಕಾದಾದ್ಯಂತ ಅಪಪ್ರಚಾರ ಹಬ್ಬಿಸಿದ!.'' ಇದನ್ನು ಕೇಳಿ ಅಬೂ ಸುಫ್ಯಾನ್, ''ಪ್ರವಾದಿವರ್ಯರು(ಸ) ನನಗೆ ಅಭಯ ನೀಡದಿದ್ದರೆ ನನ್ನ ಪು ಮಗುವಿನೊಂದಿಗೆ ಮರುಭೂಮಿಯಲ್ಲಿ ಅಲೆದಾಡುತ್ತಾ ಸಂಚರಿಸುವೆನು. ಹಾಗೆಯೆ ಹಸಿವು ದಾಹದಿಂದ ಬಳಲಿ ಸಾಯುವೆನು'' ಎಂದು ಹೇಳಿದರು. ಇದನ್ನು ಕೇಳಿ ಪ್ರವಾದಿವರ್ಯರ(ಸ) ಕೋಮಲ ಮನಸ್ಸು ಕರಗಿತು. ಹೃದಯ ಮಿಡಿಯಿತು ಅವರೀರ್ವರಿಗೂ ತಕ್ಷಣ ಅಭಯ ನೀಡಲು ಅಣಿಯಾದರು.

❖ ❖ ❖

89. ಸುಮಾಮ ಸನ್ಮಾರ್ಗದತ್ತ

ಸುಮಾಮ ಬಿನ್ ಉಸಾಲ್ ಯಮಾಮ ನಿವಾಸಿಗಳ ನಾಯಕನಾಗಿದ್ದರು ಅಲ್ಲಿನ ಆಡಳಿತಗಾರರೂ ಆಗಿದ್ದರು. ಪರಿಸರದ ಗಣ್ಯ ವ್ಯಕ್ತಿಗಳಿಗೆ ಇಸ್ಲಾಮನ ಪರಿಚಯಿಸುವುದರಲ್ಲಿ ನಿರತರಾಗಿದ್ದ ಪ್ರವಾದಿವರ್ಯರು(ಸ), ಅವರಿಗೆ ಪತ್ರ ಮೂಲ ಸಂದೇಶ ಪ್ರಚಾರ ನಡೆಸುತ್ತಿದ್ದರು. ಅವರಲ್ಲಿ ಸುಮಾಮ ಕೂಡಾ ಸೇರಿದ್ದರು. ಆದ ಸುಮಾಮ ಆ ಪತ್ರದೊಂದಿಗೆ ಅನುಚಿತವಾಗಿ ವರ್ತಿಸಿದರು. ಅಲ್ಲಾಹನ ಧರ್ಮ ಆಹ್ವಾನವನ್ನು ತಿರಸ್ಕರಿಸಿದ್ದರು. ಜೊತೆಗೆ ಪ್ರವಾದಿವರ್ಯರನ್ನು(ಸ) ವಧಿಸುವ ಸಿದ್ಧತೆಯ ತೊಡಗಿದರು. ಅದಕ್ಕಾಗಿ ಹೊಸ ಯೋಜನೆಯನ್ನು ರೂಪಿಸಿದರು. ಆ ಯೋಜನೆಯಿಂ ಹಿಂಜರಿಯುವಂತೆ ಅವರ ಪಿತೃ ಸಹೋದರರು ತಡೆದರು.

ಸುಮಾಮ ಮುಸ್ಲಿಮರನ್ನು ಕಠಿಣವಾಗಿ ವಿರೋಧಿಸುತ್ತಿದ್ದರು ಪ್ರವಾದಿವರ್ಯರ(ಸ). ಕೆಲ ಶಿಷ್ಯಂದಿರನ್ನು ವಧಿಸಿದರು. ಆದ್ದರಿಂದ ಅವರು ಎ ಕಾಣ ಸಿಕ್ಕಿದರೂ ತಕ್ಷಣ ಬಂಧಿಸಬೇಕೆಂದು ಪ್ರವಾದಿವರ್ಯರು(ಸ) ಆದೇ ಹೊರಡಿಸಿದರು.

ಈ ಮಧ್ಯೆ ಸುಮಾಮ ಉಮ್ರಾ ಮಾಡಲೆಂದು ಮಕ್ಕಾಗೆ ತೆರಳಿದರು. ದಾ ಮಧ್ಯೆ ಮದೀನದ ಬಳಿ ಒಂದು ಅವಘಡಕ್ಕೆ ಸಿಲುಕಿದರು. ಪ್ರವಾದಿವರ್ಯರ(ಸ ಗಡಿ ಕಾವಲು ಪಡೆಯ ಕಾವಲುಗಾರರು ಸುಮಾಮರನ್ನು ಸೆರೆ ಹಿಡಿದ ಪ್ರವಾದಿವರ್ಯರ(ಸ) ಮುಂದೆ ಹಾಜರು ಪಡಿಸಿದರು. ಅದು ಯಾರೆಂದು ಅವರಿ ತಿಳಿದಿರಲಿಲ್ಲ. ಆದರೂ ಪ್ರವಾದಿವರ್ಯರು(ಸ) ಕೂಡಲೇ ಅವರ ಗುರುತು ಹಿಡಿದರು ಅವರೊಡನೆ ತುಂಬಾ ಗೌರವದಿಂದ ವರ್ತಿಸಬೇಕೆಂದು ತಮ್ಮ ಅನುಯಾಯಿಗಳಿ

ಸೂಚಿಸಿದರು.

ಪ್ರವಾದಿವರ್ಯರು(ಸ) ಮನೆಗೆ ತೆರಳಿ ಅಲ್ಲಿದ್ದ ಆಹಾರವನ್ನು ತಂದು ಸುಮಾಮರಿಗೆ ನೀಡಿದರು. ಸ್ವತಃ ತನ್ನ ಒಂಟೆಯಿಂದ ಹಾಲು ಕರೆದು ಅವರಿಗೆ ಕುಡಿಯಲು ನೀಡಿದರು. ಬಳಿಕ ಶಾಂತಚಿತ್ತರಾಗಿ ಅವರ ಬಳಿ ಸಮೀಪಿಸಿದ ಪ್ರವಾದಿವರ್ಯರು(ಸ) ''ಸುಮಾಮ ನೀವು ಏನು ಹೇಳಬಯಸುತ್ತೀರಿ'' ಎಂದು ಪ್ರಶ್ನಿಸಿದರು.

''ಸರಿ ನೀವು ನನ್ನನ್ನು ವಧಿಸಲು ತೀರ್ಮಾನಿಸಿರುವಿರಿ ಎಂದಾದರೆ ಅದು ನ್ಯಾಯವಾಗಿದೆ. ಯಾಕೆಂದರೆ ನಾನು ಕೊಲ್ಲಲ್ಪಡಲು ಅರ್ಹ ವ್ಯಕ್ತಿಯಾಗಿದ್ದೇನೆ. ಇನ್ನು ನೀವು ನನಗೆ ಕ್ಷಮೆ ನೀಡುವುದಾದರೆ ನಿಮಗೆ ಕೃತಜ್ಞನಾಗಿರುತ್ತೇನೆ ಅಥವಾ ಅದಕ್ಕೆ ಬದಲಾಗಿ ಹಣ ಬೇಕೆಂದಾದರೆ ಅದಕ್ಕೂ ನಾನು ಸಿದ್ಧವಾಗಿರುವೆನು'' ಎಂದು ಹೇಳಿದರು.

ಎರಡು ಮೂರು ದಿನಗಳ ಕಾಲ ಪ್ರವಾದಿವರ್ಯರು(ಸ) ಅತ್ತ ಹೋಗಿರಲಿಲ್ಲ, ಆದರೆ ಅವರಿಗೆ ಆಹಾರ ಪಾನೀಯಗಳನ್ನು ತಲುಪಿಸುತ್ತಿದ್ದರು. ಮರುದಿನ ಆತನೊಂದಿಗೆ ಅದೇ ಪ್ರಶ್ನೆ ಯನ್ನು ಮತ್ತೆ ಕೇಳಿದರು. ಸುಮಾಮ ಹಳೆಯ ಉತ್ತರವನ್ನೇ ಪುನರಾವರ್ತಿಸಿದರು. ಪ್ರವಾದಿ ವರ್ಯರು(ಸ) ವಿಶೇಷವಾಗಿ ಏನೂ ಹೇಳದೆ ಮರಳಿದರು. ಮರುದಿನ ಪುನಃ ಅಲ್ಲಿಗೆ ತೆರಳಿ ಮತ್ತೆ ಅದೇ ಪ್ರಶ್ನೆ ಕೇಳಿದರು. ಸುಮಾಮ ತನ್ನ ಹಳೆಯ ಉತ್ತರವನ್ನೇ ಪುನರಾವರ್ತಿಸಿದರು. ಬಳಿಕ ಪ್ರವಾದಿವರ್ಯರು(ಸ) ಸುಮಾಮರನ್ನು ಬಂಧಮುಕ್ತ ಗೊಳಿಸುವಂತೆ ಆದೇಶಿಸಿದರು.

ಸ್ವತಂತ್ರನಾದ ಸುಮಾಮ ಏನೂ ಹೇಳದೆ ಅಲ್ಲಿಂದ ತೆರಳಿದರು. ಸ್ವಲ್ಪ ಸಮಯ ಕಳೆದ ಬಳಿಕ ಮರಳಿ ಬಂದರು. ಅವರು ಸ್ವಲ್ಪ ದೂರದಲ್ಲಿದ್ದ ನೀರಿನ ತೊರೆಯೊಂದರಲ್ಲಿ ಸ್ನಾನ ಮಾಡಲು ತೆರಳಿದರು. ಪ್ರವಾದಿವರ್ಯರ(ಸ) ಸನ್ನಿಧಿಗೆ ಮರಳಿದ ಸುಮಾಮ ತಕ್ಷಣ ಇಸ್ಲಾಮ್ ಸ್ವೀಕರಿಸಿದರು. ಬಳಿಕ ಈ ರೀತಿ ಹೇಳಿದರು ''ಅಲ್ಲಾಹನ ಪ್ರವಾದಿಗಳೇ, ನಾನು ಈ ಭೂಮಂಡಲದಲ್ಲಿ ತಮ್ಮನ್ನು ದ್ವೇಷಿಸುವಷ್ಟು ಯಾರನ್ನೂ ದ್ವೇಷಿಸುತ್ತಿರಲಿಲ್ಲ, ಆದರೆ ಈಗ ತಮ್ಮ ಮೇಲಿರುವಷ್ಟು ಪ್ರೀತಿ ನನಗೆ ಈ ಜಗತ್ತಿನ ಯಾವ ವ್ಯಕ್ತಿಯ ಮೇಲೂ ಇಲ್ಲ, ಈ ಧರ್ಮದ ಮೇಲೆ ನನಗೆ ತೀವ್ರ ದ್ವೇಷವಿತ್ತು. ಆದರೆ ಈ ಧರ್ಮ ಇಂದು ನನಗೆ ಅತ್ಯಂತ ಪ್ರೀತಿಯ ಧರ್ಮವಾಗಿದೆ. ಈ ಊರಿನ ಕುರಿತೂ ನನಗೆ ತೀವ್ರ ದ್ವೇಷವಿತ್ತು. ಆದರೆ ಈಗ ತಮ್ಮನ್ನು, ತಮ್ಮ ಧರ್ಮವನ್ನು, ತಮ್ಮ ಈ ನಾಡನ್ನು ಇತರೆಲ್ಲವುಗಳಿಗಿಂತ ಹೆಚ್ಚು ಪ್ರೀತಿಸುತ್ತೇನೆ.''

ಬಳಿಕ ಸುಮಾಮ ಮೆಲು ದನಿಯಲ್ಲಿ ''ನಾನು ತಮ್ಮ ಕೆಲ ಅನುಚರರನ್ನು ವಧಿಸಿರುತ್ತೇನೆ. ಅದರ ತೀರ್ಪು ಏನೆಂದು ತಿಳಿಸುವಿರಾ?''

''ತಾವು ಈಗ ಅಪರಾಧಿಯಲ್ಲ, ಇಸ್ಲಾಮ್ ಹಳೆಯ ಪಾಪಗಳನ್ನು ಅಳಿಸಿದೆ'' ಎಂದು ಪ್ರವಾದಿ(ಸ) ಹೇಳಿದರು.

❖ ❖ ❖

90. ಶತ್ರುಗಳಿಗೆ ನೆರವು

ಮಕ್ಕಾದ ನಿವಾಸಿಗಳು ಆಹಾರ ಪದಾರ್ಥಗಳಿಗೆ ಹೆಚ್ಚಾಗಿ ಯಮಾಮ ದೇಶವನ್ನು ಅವಲಂಬಿಸಿದ್ದರು. ಯಮಾಮದ ಆಡಳಿತಗಾರ ಸುಮಾಮ ಇಸ್ಲಾಮ್ ಸ್ವೀಕರಿಸಿದರು. ಪ್ರವಾದಿವರ್ಯರನ್ನು(ಸ) ಅವರ ಸಂಗಾತಿಗಳನ್ನು ಹಿಂಸಿಸಿದ್ದ ಮಕ್ಕಾದ ನಿವಾಸಿಗಳ ಮೇಲೆ ಪ್ರತೀಕಾರಕ್ಕೆ ಸುಮಾಮ ಸಿದ್ಧರಾದರು. ತನ್ನ ಜನರನ್ನು ಕರೆದು ''ಇನ್ನು ಮುಂದೆ ಮಕ್ಕಾಗೆ ಒಂದು ಬಿಡಿಧಾನ್ಯವನ್ನೂ ಕಳುಹಿಸಬಾರದೆಂದು ಆಜ್ಞಾಪಿಸಿದರು.

ಮಕ್ಕಾ ನಿವಾಸಿಗಳಿಗೆ ಆಹಾರ ಪದಾರ್ಥಗಳ ಕೊರತೆ ಕಾಡಲಾರಂಭಿಸಿತು. ಅವರು ಹಸಿವಿನಿಂದ ಕಂಗಾಲಾದರು. ಈ ಮಧ್ಯೆ ಮಕ್ಕಾ ಪವಿತ್ರ ಯಾತ್ರೆಗೆಂದು ಸುಮಾಮ ಹೊರಟರು. ಆಗ ಕುರೈಶ್ ಪ್ರಮುಖರು ಅವರನ್ನು ಭೇಟಿಯಾಗಿ ತಮಗೆ ಆಹಾರ ಪದಾರ್ಥಗಳನ್ನು ಕಳುಹಿಸಬೇಕೆಂದೂ ತಾವು ತಮ್ಮ ನಿಲುವಿನಿಂದ ಹಿಂದೆ ಸರಿಯಬೇಕೆಂದೂ ಮನವಿ ಮಾಡಿದರು. ಜೊತೆಗೆ ತಾವು ನಮ್ಮ ಧರ್ಮವನ್ನೂ ತೊರೆದು ಬಿಟ್ಟಿರಲ್ಲವೇ ಎಂದು ವಿಷಾದದಿಂದ ಹೇಳಿದರು.

''ಹೌದು! ಅದರಲ್ಲೇಕೆ ಅನುಮಾನ? ವಿಶ್ವದ ಶ್ರೇಷ್ಠ ಧರ್ಮ ಇಸ್ಲಾಮ್ ಆಗಿದೆ. ನಾನು ಅದನ್ನು ಅಂಗೀಕರಿಸಿರುವೆನು. ಇನ್ನು ಸತ್ಯದಿಂದ ಅಸತ್ಯದೆಡೆಗೆ ಮರಳುವ ಪ್ರಶ್ನೆಯೇ ಇಲ್ಲ, ನಿಮಗೆ ಒಂದು ಬಿಡಿ ಧಾನ್ಯ ಕೂಡಾ ನೀಡಲಾರೆ'' ಎಂದು ಸುಮಾಮ ಹೇಳಿದರು.

ಮುಹಮ್ಮದ್‌ರ(ಸ) ನಿರ್ದೇಶನವಿಲ್ಲದೆ ಇವರು ತಮ್ಮ ನಿಲುವಿನಿಂದ ಹಿಂದೆ ಸರಿಯ ಲಾರರು ಎಂಬುದು ಅವರಿಗೆ ಖಾತ್ರಿಯಾಯಿತು. ಆದರೆ ಮುಹಮ್ಮದ್‌ರು(ಸ) ನಮ್ಮ ಮೇಲೆ ಕರುಣೆ ತೋರಿಸಬಹುದೇ? ನೀರು ಕೂಡಾ ನೀಡದೆ ನಾವು ಅವರನ್ನು ನಿರಂತರ ಮೂರು ವರ್ಷಗಳ ಕಾಲ ಸತಾಯಿಸಲಿಲ್ಲವೇ? ಸಾಮೂಹಿಕವಾಗಿ ಬಹಿಷ್ಕರಿಸುವ ಮುಖಾಂತರ ಅವರನ್ನು, ಅವರ ಸಂಗಡಿಗರನ್ನು ಹಸಿ ಎಲೆಯನ್ನು ತಿನ್ನುವಂತೆ ನಾವು ಮಾಡಿಲ್ಲವೇ? ಈಗ ನಾವು ಆಹಾರ ಪದಾರ್ಥಗಳು ಸಿಗದೆ

ನರಳುತ್ತಿರುವುದನ್ನು ತಿಳಿದರೆ ಮುಹಮ್ಮದ್(ಸ) ಸಂತೋಷದಿಂದ ನಕ್ಕು ನಲಿಯಬಹುದು ಮುಂತಾದ ಆಲೋಚನೆಗಳು ಅವರ ತಲೆಯಲ್ಲಿ ಸುಳಿದಾಡಿದರೂ ಏನೇ ಆಗಲಿ, ಒಮ್ಮೆ ಕೇಳಿ ನೋಡುವಾ ಎಂದು ತೀರ್ಮಾನಿಸಿ ಪ್ರವಾದಿವರ್ಯರಿಗೆ(ಸ) ಪತ್ರವೊಂದನ್ನು ಬರೆದರು.

''ನಮಗೆ ಆಹಾರ ಪದಾರ್ಥಗಳನ್ನು ನೀಡಲಾರೆವೆಂದು ತಾಕೀತು ಮಾಡಿದ ಯಮಾಮದ ಆಡಳಿತಗಾರ ಸುಮಾಮರನ್ನು ತನ್ನ ನಿಲುವಿನಿಂದ ಹಿಂದೆ ಸರಿಯುವಂತೆ ರಕ್ತ ಸಂಬಂಧವನ್ನು ಸ್ಮರಿಸಿಯಾದರೂ ತಾವು ನಮ್ಮನ್ನು ಈ ಸಂಕಷ್ಟದಿಂದ ಪಾರುಗೊಳಿಸಬೇಕೆಂಬುದು ಆ ಪತ್ರದ ಸಾರಾಂಶವಾಗಿತ್ತು.''

ಪತ್ರ ಓದಿದ ಪ್ರವಾದಿವರ್ಯರು(ಸ), ಸುಮಾಮರಿಗೆ ಕಳುಹಿಸಿದ ಪತ್ರದ ಸಾರಾಂಶ ಹೀಗಿತ್ತು. ''ದೇವನು ತನ್ನನ್ನು ನಿಂದಿಸುವವರೂ ತನಗೆ ಭಾಗೀದಾರರನ್ನಾಗಿ ಕಲ್ಪಿಸುವವರಿಗೂ ಕರುಣೆ ತೋರುವವನಾಗಿದ್ದಾನೆ. ನಾವು ಕೂಡಾ ಅದನ್ನೇ ಅನುಸರಿಸಬೇಕಾಗಿದೆ. ಆದ್ದರಿಂದ ಮಕ್ಕಾಗೆ ಕಳುಹಿಸುವ ಧಾನ್ಯಗಳ ರಫ್ತನ್ನು ಮುಂದುವರಿಸಿರಿ.''

❖ ❖ ❖

91. ಸನ್ಮಾರ್ಗಕ್ಕೆ ಸೆಳೆದ ಸಂವಾದ

ತಮೀಮ್ ಗೋತ್ರದವರು ಪ್ರವಾದಿವರ್ಯರೊಡನೆ ಸಂವಾದ ನಡೆಸಲು ತಂಡವೊಂದನ್ನು ಕಳುಹಿಸಿದರು. ತರ್ಕಿಸಿ ವಾದ ಮಾಡಿ ಸೋಲಿಸಬಹುದೆಂಬ ನಿರೀಕ್ಷೆಯಲ್ಲಿ ಮದೀನಕ್ಕೆ ಆಗಮಿಸಿದ ತಂಡವು ಮಸೀದಿಯನ್ನು ಪ್ರವೇಶಿಸಿತು. ಆಗ ಪ್ರವಾದಿವರ್ಯರು(ಸ) ತನ್ನ ಮನೆಯಲ್ಲಿ ವಿಶ್ರಾಂತಿ ಪಡೆಯುತ್ತಿದ್ದರು. ಅವರ ಮನೆಯ ಬಳಿಗೆ ತೆರಳಿ ''ಮುಹಮ್ಮದ್(ಸ) ಇಳಿದು ಬಾ'' ಎಂದು ಅವರು ಕರೆದರು.

ಅವರ ಈ ಅಗೌರವಯುತವಾದ ವರ್ತನೆ ಪ್ರವಾದಿವರ್ಯರಿಗೆ(ಸ) ಇಷ್ಟವಾಗಲಿಲ್ಲ. ಆದರೂ ಅದನ್ನು ತೋರ್ಪಡಿಸದೆ ಅವರ ಬಳಿಗೆ ಬಂದರು. ಬಂದವರು ಪ್ರವಾದಿವರ್ಯರೊಂದಿಗೆ(ಸ) ಮುಸ್ಲಿಮರ ವಿರುದ್ಧ ಅನೇಕ ದೂರುಗಳನ್ನು ನೀಡಿದರು. ಜೊತೆಗೆ ತಾವು ಅವರಿಗೆ ಅನೇಕ ರೀತಿಯಲ್ಲಿ ನೆರವಾಗಿರುವುದನ್ನು ಪ್ರಸ್ತಾಪಿಸಿದರು. ಬಳಿಕ ನಾವು ನಿಮ್ಮೊಂದಿಗೆ ಸಂವಾದ ನಡೆಸಲು ಬಂದಿರುತ್ತೇವೆ. ನೀವು ನಮಗೆ ಮಾತನಾಡಲು ಅವಕಾಶ ನೀಡಬೇಕೆಂದರು.

ಪ್ರವಾದಿವರ್ಯರು(ಸ) ಅವರಿಗೆ ಮಾತನಾಡಲು ಅನುಮತಿಸಿದರು. ''ಅವರಲ್ಲಿ

ಹೆಚ್ಚು ವಾಕ್ಚತುರರಾದ ಉತ್‌ವಾರ ಬಿನ್ ಹಾಜಿಬ್ ಎಂಬವರು ಮಾತನಾಡಲು ಎದ್ದು ನಿಂತು ತನ್ನ ಸಾಮರ್ಥ್ಯವೆಲ್ಲಾ ಉಪಯೋಗಿಸಿ ಭಾಷಣ ಮಾಡಿದರು. ಅದು ಮುಗಿದ ಕೂಡಲೇ ಪ್ರವಾದಿವರ್ಯರು(ಸ) ಸಾಬಿತ್ ಬಿನ್ ಖೈಸ್‌ರೊಂದಿಗೆ ಅವರಿಗೆ ಉತ್ತರಿಸಲು ಆದೇಶಿಸಿದರು. ಕುರ್‌ಆನ್ ಸೂಕ್ತಗಳ ಮೂಲಕ ಅವರು ಸಮರ್ಥವಾಗಿ ಉತ್ತರಿಸಿದರು.

ಬಳಿಕ ತಮೀಮ್ ಗೋತ್ರದ ಪ್ರಸಿದ್ಧ ಕವಿ ಸಿಬ್‌ರಿಖಾನ್ ಇಬ್ನು ಬದರ್ ಎದ್ದು ನಿಂತು ತನ್ನ ಕವನ ಮಂಡಿಸಿದರು. ಪ್ರವಾದಿವರ್ಯರ(ಸ) ಆದೇಶದಂತೆ ಹಸ್ಸಾನ್ ಬಿನ್ ಸಾಬಿತ್ ರವರು ತನ್ನ ಕವನದ ಮೂಲಕ ಅದಕ್ಕೆ ಉತ್ತರಿಸಿದರು. ಇದು ಶ್ರೋತೃಗಳನ್ನು ಆಶ್ಚರ್ಯ ಚಕಿತರನ್ನಾಗಿಸಿತು. ಆಗ ತಮೀಮ್ ಗೋತ್ರದಲ್ಲಿ ಪ್ರಮುಖರಾದ ಅಖ್‌ರತ್ ಬಿನ್ ಸಾಹಿಬ್ ಎದ್ದು ನಿಂತು. ''ನನ್ನ ತಂದೆಯಾಣೆ! ಈ ವ್ಯಕ್ತಿಯ ಬಳಿ ಇರುವುದು ಅಸಾಮಾನ್ಯ ಹಾಗೂ ಅತ್ಯಂತ ಅದ್ಭುತವಾದುದಾಗಿದೆ. ಅವರಲ್ಲಿರುವ ವಾಗ್ಮಿಗಳು ನಮ್ಮಲ್ಲಿರುವ ವಾಗ್ಮಿಗಳಿಗಿಂತ ಶ್ರೇಷ್ಠರಾಗಿದ್ದಾರೆ. ಅವರಲ್ಲಿರುವ ಕವಿಗಳೂ ನಮಲ್ಲಿರುವ ಕವಿಗಳಿಗಿಂತಲೂ ಶ್ರೇಷ್ಠರಾಗಿದ್ದಾರೆ. ಅವರ ಧ್ವನಿಯು ನಮ್ಮ ಧ್ವನಿಗಿಂತ ಉತ್ತಮವೂ ಉಜ್ವಲವೂ ಆಗಿದೆ ಎಂದು ಹೇಳಿದರು.

ಹಾಗೆ ಅವರು ಸೋಲನ್ನು ಒಪ್ಪಿಕೊಂಡು ಪ್ರವಾದಿವರ್ಯರ(ಸ) ಹಾದಿಯತ್ತ ಧಾವಿಸಿದರು. ಅದರೊಂದಿಗೆ ಅವರ ತಂಡದಲ್ಲಿದ್ದವರೆಲ್ಲಾ ಅವರನ್ನು ಅನುಸರಿಸಿದರು. ಸಂವಾದ ನಡೆಸಲು ಬಂದವರು ಸನ್ಮಾರ್ಗವನ್ನು ಅವಲಂಬಿಸಿದರು.

❖ ❖ ❖

92. ಅಪಪ್ರಚಾರ ಮಾಡಿದವನಿಗೆ ಕ್ಷಮೆ

ಬನೂ ಮುಸ್ತಲಿಕ್ ಯುದ್ಧದ ಬಳಿಕ ಪ್ರವಾದಿ(ಸ) ಮತ್ತವರ ಅನುಚರರು ಬಹಳ ವೇಗವಾಗಿ ಹಿಂದಿರುಗುತ್ತಿದ್ದರು. ಈ ಪ್ರಯಾಣದ ಮಧ್ಯೆ ವಿಶ್ರಾಂತಿಗಾಗಿ ಒಂದೆಡೆ ತಂಗಿದರು. ಈ ಮಧ್ಯೆ ಪ್ರವಾದಿವರ್ಯರ(ಸ) ಪತ್ನಿ ಆಯಿಶಾ(ರ) ತನ್ನ ನೈಸರ್ಗಿಕ ಅಗತ್ಯ ಪೂರೈಸಲು ಸ್ವಲ್ಪ ದೂರ ಹೋಗಿದ್ದರು. ಅಲ್ಲಿಂದ ಹಿಂದಿರುಗುವಾಗ ಅವರ ಅತ್ಯಂತ ಪ್ರಿಯವಾದ ಸರವೊಂದು ಕಳಚಿ ಬಿತ್ತು. ಅದನ್ನು ಹುಡುಕುತ್ತಾ ಹಿಂದೆ ಪುನಃ ಹೊರಟರು. ಹೀಗೆ ಹುಡುಕುತ್ತಾ ಹೋದಂತೆ ಸಮಯ ಕಳೆದದ್ದು ಅವರಿಗೆ ಗೊತ್ತೇ ಆಗಲಿಲ್ಲ. ಅವರು ಹಿಂದಿರುಗಿ ಬರುವಷ್ಟರಲ್ಲಿ ಅಲ್ಲಿದ್ದ ತಂಡವು ಅಲ್ಲಿಂದ ಹೊರಟು ಹೋಗಿತ್ತು. ಪ್ರವಾದಿ ಪತ್ನಿ ಆಯಿಶಾ(ರ) ಎಂದಿನಂತೆ

ಪಲ್ಲಕ್ಕಿಯಲ್ಲಿದ್ದಾರೆಂದೇ ಎಲ್ಲರೂ ಭಾವಿಸಿ ಅಲ್ಲಿಂದ ಹೊರಟಿದ್ದರು. ಯಾಕೆಂದರೆ ಅವರ ದೇಹವೂ ಕೃಶವಾಗಿತ್ತು.

ಸಹಯಾತ್ರಿಕರೆಲ್ಲಾ ಹೊರಟು ಹೋದುದರಿಂದ ಅಲ್ಲಾಹನ ಮೇಲೆ ಭರವಸೆಯಿರಿಸಿ ಅಲ್ಲಿಯೇ ವಿಶ್ರಮಿಸಿದರು. ಸ್ವಲ್ಪ ಸಮಯ ಕಳೆಯುವಷ್ಟರಲ್ಲಿ ಅವರು ನಿದ್ದೆ ಹೋದರು. ಆಷ್ಟಾಗುವಾಗ ಅಲ್ಲಿಗೆ ಸಫ್‌ವಾನ್ ಬಿನ್ ಮುಅತ್ತಲ್‌ರ ಆಗಮನವಾಯಿತು. ಸೇನೆಯ ಸುರಕ್ಷತೆಯನ್ನು ಗಮನದಲ್ಲಿರಿಸಿ ಪ್ರವಾದಿವರ್ಯರು(ಸ) ಅವರನ್ನು ಈ ರೀತಿ ಹಿಂಬಾಲಿಸಲು ಆದೇಶಿಸಿದ್ದರು. ಆಯಿಶಾರನ್ನು(ರ) ಕಂಡ ಕೂಡಲೇ ಅವರನ್ನು ವಾಹನದ ಮೇಲೇರಿಸಿ ವೇಗವಾಗಿ ಯಾತ್ರಾ ತಂಡವನ್ನು ಸೇರಿದರು.

ಈ ಘಟನೆಯು ಕೆಲವು ಅಪಾರ್ಥಗಳಿಗೆ ಗುರಿಯಾಯಿತು. ಕಪಟ ವಿಶ್ವಾಸಿಗಳು ಆಯಿಶಾರ ಬೀವಿಯ ವಿರುದ್ಧ ಅಪಪ್ರಚಾರದಲ್ಲಿ ತೊಡಗಿದರು. ಅದರಲ್ಲಿ ಮಿಸ್ತಹ್ ಎಂಬವರೂ ಭಾಗಿಯಾಗಿದ್ದರು. ಅವರು ಆಯಿಶಾರ(ರ) ತಂದೆ ಅಬೂಬಕರ್ ಸಿದ್ದೀಕ್‌ರ ಸಂಬಂಧಿಕರಾಗಿದ್ದರು. ತುಂಬಾ ದರಿದ್ರರಾಗಿದ್ದ ಮಿಸ್ತಹ್‌ಗೆ ಅಬೂಬಕರ್ ಸಿದ್ದೀಕ್‌ರು ಜೀವನಾಧಾರವಾಗಿ ಸಹಾಯ ಮಾಡುತ್ತಿದ್ದರು.

ಅಲ್ಲಾಹನು ಕುರ್‌ಆನ್ ಸೂಕ್ತಗಳ ಮುಖಾಂತರ ಆಯಿಶಾರ(ರ) ನಿರಪರಾಧಿತ್ವವನ್ನು ಸಾರಿದನು. ಅದು ಅಪವಾದ ಹೊರಿಸಿದವರನ್ನು ತೀಕ್ಷ್ಣವಾಗಿ ಖಂಡಿಸಿತು. ಅಬೂಬಕರ್‌ರು(ರ) ಮಿಸ್ತಹ್‌ರಿಗೆ ನೀಡುತ್ತಿದ್ದ ನೆರವನ್ನು ರದ್ದುಗೊಳಿಸಿರುವುದಾಗಿ ಬಹಿರಂಗವಾಗಿ ಸಾರಿದರು. ಮಗಳ ಮೇಲೆ ಹೊರಿಸಿದ ಅಪವಾದದಿಂದ ನೊಂದು ಕ್ರುದ್ಧರಾದ ಅಬೂಬಕರ್ ಈ ರೀತಿ ಹೇಳಿದ್ದರು. ಆದರೆ ಇದು ಪ್ರವಾದಿವರ್ಯರಿಗೆ(ಸ) ಸಹ್ಯವಾಗಲಿಲ್ಲ. ಅದು ಅಲ್ಲಾಹನೂ ಇಷ್ಟಪಡದ ಕಾರ್ಯವಾಗಿತ್ತು. ಆ ಕೂಡಲೇ ಸಿದ್ದೀಕ್‌ರ ವರ್ತನೆಯನ್ನು ವಿಮರ್ಶಿಸುತ್ತಾ ಕುರ್‌ಆನ್ ಸೂಕ್ತ ಅವತೀರ್ಣಗೊಂಡಿತು.

''ನಿಮ್ಮಲ್ಲಿ ಅನುಗ್ರಹೀತರು ಮತ್ತು ಸಾಮರ್ಥ್ಯವುಳ್ಳವರು ತಮ್ಮ ಸಂಬಂಧಿಕರಿಗೂ ದರಿದ್ರರಿಗೂ ಅಲ್ಲಾಹನ ಮಾರ್ಗದಲ್ಲಿ ವಲಸೆ ಹೋಗುವವರಿಗೂ ಸಹಾಯ ಮಾಡಲಿಕ್ಕಿಲ್ಲವೆಂದು ಪ್ರತಿಜ್ಞೆ ಮಾಡಿ ಬಿಡಬಾರದು. ಅವರನ್ನು ಕ್ಷಮಿಸಿ ಬಿಡಬೇಕು ಮತ್ತು ಮನ್ನಿಸಬೇಕು. ಅಲ್ಲಾಹನು ನಿಮ್ಮನ್ನು ಕ್ಷಮಿಸಬೇಕೆಂದು ನೀವು ಇಚ್ಛಿಸುವುದಿಲ್ಲವೇ? ಅಲ್ಲಾಹನು ಅತ್ಯಂತ ಕ್ಷಮಾಶೀಲನೂ ಕರುಣಾನಿಧಿಯೂ ಆಗಿರುತ್ತಾನೆ. (ಅನ್ನೂರ್: 22)

ಈ ಕುರ್‌ಆನ್ ಸೂಕ್ತಗಳು ಅವತೀರ್ಣವಾಗುವುದರೊಂದಿಗೆ ಅಬೂಬಕರ್ ಸಿದ್ದೀಖ್ ಪ್ರವಾದಿವರ್ಯರನ್ನು(ಸ) ಭೇಟಿಯಾಗಿ ''ಅಲ್ಲಾಹನ ಸಂದೇಶವಾಹಕರೇ ಅಲ್ಲಾಹನು ನನ್ನನ್ನು ಕ್ಷಮಿಸಬೇಕೆಂಬುದನ್ನು ಖಂಡಿತವಾಗಿಯೂ ನಾನು ಬಯಸುತ್ತೇನೆ.'' ಎಂದು ಹೇಳಿದರು.

ಬಳಿಕ ತನ್ನ ಶಪಥದಿಂದ ಹಿಂದೆ ಸರಿದು ಅಲ್ಲಾಹನಲ್ಲಿ ಕ್ಷಮೆಯಾಚಿಸಿದರು. ಮಿಸ್ತಹ್ ಜೊತೆ ಉದಾರವಾಗಿ ವರ್ತಿಸಿದರು. ಆತನಿಗೆ ಕ್ಷಮೆ ನೀಡಿ ನೆರವನ್ನು ಪುನರಾರಂಭಿಸಿದರು. ಇದರಿಂದ ಪ್ರವಾದಿವರ್ಯರು(ಸ) ಸಂತೋಷಭರಿತರಾಗಿ ಅಬೂಬಕರ್‌ರನ್ನು ಆಲಂಗಿಸಿದರು. ಸ್ವತಃ ತನ್ನ ಪತ್ನಿಯ ಮೇಲೆ ಅಪವಾದ ಹೊರಿಸಿದ ವ್ಯಕ್ತಿಯೊಡನೆ ಕೂಡಾ ಉದಾರತೆಯನ್ನು ತೊರೆಯಬಾರದೆಂಬುದು ಪ್ರವಾದಿವರ್ಯರ(ಸ) ನಿಲುವಾಗಿತ್ತು. ಕುರ್‌ಆನ್ ಅದನ್ನು ಇನ್ನಷ್ಟು ಪುಷ್ಟೀಕರಿಸಿತ್ತು.

❖ ❖ ❖

93. ಕಪಟ ವಿಶ್ವಾಸಿಗಳಿಗೂ ಕ್ಷಮೆ ನೀಡಿದರು

ಪ್ರವಾದಿವರ್ಯರ(ಸ) ಶಿಷ್ಯಂದಿರು ಮುರೈಸಿಅ್ ಎಂಬ ಪ್ರದೇಶದಿಂದ ಮದೀನಕ್ಕೆ ಹಿಂದಿರುಗುತ್ತಿದ್ದರು. ಈ ನಡುವೆ ಒಂದು ಜಲಾಶಯದ ಬಳಿ ಉಮರ್ ಫಾರೂಕ್‌ರ ಕುದುರೆಯವನ ಮತ್ತು ಓರ್ವ ಖಝ್ರಜ್ ಗೋತ್ರದವನ ಮಧ್ಯೆ ಜಗಳವುಂಟಾಯಿತು. ಇದನ್ನು ಕಪಟ ವಿಶ್ವಾಸಿಗಳ ನಾಯಕ ಅಬ್ದುಲ್ಲಾ ಬಿನ್ ಉಬಯ್ಯ್ ನೋಡಿದನು. ಪ್ರವಾದಿವರ್ಯರೊಂದಿಗೂ ಮಕ್ಕಾದಿಂದ ಬಂದ ಮುಹಾಜಿರ್‌ರೊಡನೆಯೂ ತೀವ್ರ ದ್ವೇಷವನ್ನು ಬಗಲಲ್ಲಿ ಇಟ್ಟುಕೊಂಡಿದ್ದ ಆತ ಈ ಸಂದರ್ಭವನ್ನು ದುರುಪಯೋಗಿಸಲು ಸಾಕಷ್ಟು ಪ್ರಯತ್ನಿಸಿದನು. ಆತ ತನ್ನ ಸ್ನೇಹಿತನೊಂದಿಗೆ, ನಮ್ಮ ಈ ನಾಡಿನಲ್ಲಿ ಕೂಡಾ ಮುಹಾಜಿರರು ನಮ್ಮನ್ನು ಹಿಂದಿಕ್ಕುತ್ತಿದ್ದಾರೆ. ಅವರು ಹಾಲು ನೀಡಿದ ಕೈಗೆ ಕಡಿಯುವ ಹಾವಿನಂತಿದ್ದಾರೆ. ಆದ್ದರಿಂದ ಮದೀನಕ್ಕೆ ತಲುಪಿದ ಕೂಡಲೆ ಆ ದುರ್ಬಲರನ್ನು ಖಂಡಿತವಾಗಿಯೂ ನಮ್ಮ ಪ್ರಬಲರು ನಿರ್ಮೂಲನ ಮಾಡುವರು.'' ಇನ್ನೂ ಕೋಪ ತಣಿಯದ ಆತ ಮುಂದುವರಿಯುತ್ತಾ ''ಇಷ್ಟೆಲ್ಲಾ ಆಗಿರುವುದು ನಿಮ್ಮ ಮೂರ್ಖತನದ ನಿರ್ಧಾರದಿಂದಾಗಿದೆ. ನೀವು ಅವರಿಗೆ ನಿಮ್ಮ ನಾಡಿನ ಅರ್ಧ ಭಾಗವನ್ನೇ ನೀಡಿದ್ದೀರಿ, ನಿಮ್ಮ ಸೊತ್ತನ್ನು ಹಂಚಿದಿರಿ. ನೀವೇ ಅವರಿಗೆ ನಿಮ್ಮ ಸೊತ್ತು-ವಿತ್ತಗಳನ್ನು ಹಂಚದೆ ಇದ್ದಿದ್ದರೆ ಅವರು ಎಲ್ಲಿಗೋ ಹೋಗುತ್ತಿದ್ದರು. ನಮಗೆ ಅವರ ಕಿರುಕುಳದಿಂದ ಮುಕ್ತಿಯಾಗಬಹುದಿತ್ತು.''

ಅಬ್ದುಲ್ಲಾ ಬಿನ್ ಉಬಯ್ಯ್‌ನ ಈ ಮಾತುಗಳನ್ನು ಕೇಳಿದ ಪ್ರವಾದಿವರ್ಯರ(ಸ) ಅನುಚರರಲ್ಲಿ ಓರ್ವರು ಈ ವಿಷಯವನ್ನು ಪ್ರವಾದಿವರ್ಯರಿಗೆ(ಸ) ತಲುಪಿಸಿದರು. ಆಗ ಸ್ಥಳದಲ್ಲಿ ಉಮರುಲ್ ಫಾರೂಕ್ ಹಾಜರಿದ್ದರು. ವಿವರ ಅರಿತ ಉಮರ್ ಕೆಂಡಾಮಂಡಲವಾದರು. ಎದುರಿಗಿರುವ ಶತ್ರುಗಿಂತ ಒಳಗಿರುವ ಶತ್ರು ಅಪಾಯಕಾರಿ ಎಂದು ಕಪಟ ವಿಶ್ವಾಸಿಗಳ ಕುರಿತು ಭಾವಿಸಿದ ಅವರು, ''ಪ್ರವಾದಿವರ್ಯರೇ! ಅವರನ್ನು ಕೊಂದು ಬಿಡಲು ಬಿಲಾಲ್‌ರಿಗೆ ಆದೇಶಿಸಿರಿ'' ಎಂದು ಹೇಳಿದರು.

ಆದರೆ ಪ್ರವಾದಿವರ್ಯರ(ಸ) ನಡೆಯೇ ವ್ಯತಿರಿಕ್ತವಾಗಿತ್ತು. ಕಾಪಟ್ಯಕ್ಕೆ ಶಿಕ್ಷೆ ನೀಡುವವನು ಅಲ್ಲಾಹನಾಗಿದ್ದಾನೆ. ಜೊತೆಗಿರುವವರನ್ನು ಕೊಲ್ಲುವುದು ಸರಿಯಲ್ಲ ಎಂದು ಹೇಳುತ್ತಾ ಉಮರ್‌ರ(ರ) ಅಭಿಪ್ರಾಯವನ್ನು ಒಪ್ಪಲಿಲ್ಲ. ಬಳಿಕ ಆತನನ್ನು ಕೊಲ್ಲಲು ನಾವು ಬಯಸುವುದಿಲ್ಲ, ನಾವು ಆತನ ಮೇಲೆ ಕರುಣೆ ತೋರುವೆವು. ಆತ ನಮ್ಮ ಜೊತೆ ಇರುವ ತನಕ ಆತನೊಂದಿಗೆ ಸೌಹಾರ್ದದಿಂದಲೇ ವರ್ತಿಸುವೆವು ಎಂದು ಹೇಳಿದರು.

❖ ❖ ❖

94. ಶಾಂತಿಯೇ ಪ್ರಧಾನ

ಪ್ರವಾದಿ(ಸ) ಮತ್ತವರ ಅನುಯಾಯಿಗಳು ಮಕ್ಕಾಗೆ ಜಾಥಾ ನಡೆಸುತ್ತಿದ್ದರು. ಏಳು ವರ್ಷದ ಹಿಂದೆ ಅವರು ಬಹಳ ರಹಸ್ಯವಾಗಿ ಮಕ್ಕಾ ತೊರೆದಿದ್ದರು. ಆದರೆ ಹಿಂದಿರುಗಿ ಬರುವಾಗ ಸಹಸ್ರಾರು ಜನರಿದ್ದರು. ಬಹಳ ಬಹಿರಂಗವಾಗಿಯೇ ಬಂದಿದ್ದರು. ವಿಜಯ ದುಂದುಭಿ ಮೊಳಗಿಸಿ ಪ್ರಬಲ ಸೇನೆಯೊಂದಿಗೆ ಗಾಂಭೀರ್ಯದಿಂದ ಅವರು ಆಗಮಿಸುತ್ತಿದ್ದರು. ಇಸ್ಲಾಮೀ ಸಮಾಜಕ್ಕೆ ಹರ್ಷೋಲ್ಲಾಸವಾಯಿತು. ಈ ಮಧ್ಯೆ ಅನ್ಸಾರರಿಗೆ ನೇತೃತ್ವ ನೀಡುತ್ತಿದ್ದ ಸಅದ್ ಬಿನ್ ಉಬಾದ ಉಚ್ಚ ಸ್ವರದಲ್ಲಿ ಈ ರೀತಿ ಕೂಗಿ ಹೇಳಿದರು ''ಇದು ಯುದ್ಧದ ದಿನವಾಗಿದೆ. ಇಂದು ಪಾವಿತ್ರ್ಯತೆಗೆ ಬೆಲೆ ಕಲ್ಪಿಸಲಾಗದ ದಿನವಾಗಿದೆ.'' ಇದು ಪ್ರವಾದಿವರ್ಯರ(ಸ) ಇಚ್ಛೆಗೆ, ನಿರ್ದೇಶಗಳಿಗೆ ವಿರುದ್ಧವಾಗಿತ್ತು. ಮಕ್ಕಾದ ಮಣ್ಣು ಕಲುಷಿತಗೊಳ್ಳದೇ ಅಧೀನಕ್ಕೊಳ ಪಡಬೇಕೆಂದಲ್ಲವೇ ನಾವೆಲ್ಲರೂ ಬಯಸಿರುವುದು. ನಮ್ಮ ಅನುಚರರೊಂದಿಗೆ ನಿರ್ದೇಶಿಸಿರುವುದು ಕೂಡಾ ಇದನ್ನೇ ಅಲ್ಲದೇ ಬೇರೆ ಏನನ್ನೂ ಅಲ್ಲ, ಆದ್ದರಿಂದ ಪ್ರವಾದಿವರ್ಯರು(ಸ) ಸಅದ್‌ರ ಮಾತುಗಳಿಂದ ಕಳವಳಗೊಂಡರು. ಸಅದ್ ಹೇಳಿರುವುದು ಸರಿಯಲ್ಲ, ಕಅಬಾಲಯವು ಗೌರವಿಸಲ್ಪಡುವ ದಿನವಿದು.

ಬಳಿಕ ಸಲಿದ್‌ರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲು ಅವರನ್ನು ಅನ್ಸಾರಿಗಳ ನೇತೃ ಸ್ಥಾನದಿಂದ ಕೆಳಗಿಳಿಸಲಾಯಿತು. ಧ್ವಜವನ್ನು ಅವರಿಂದ ಕಸಿದು ಪುತ್ರ ಕೈಸ್‌ ನೀಡಲಾಯಿತು.

❖ ❖ ❖

95. ವಿಜಯದ ಘೋಷಣೆ

ಮೂಢ ನಂಬಿಕೆಗಳು ಸಾಂಕ್ರಾಮಿಕ ರೋಗದಂತೆ ಬಹಳ ಬೇಗ ಧರ್ಮದೊಳ ಪ್ರವೇಶಿಸುತ್ತದೆ.

ಅನೇಕರು ಆ ಮಾರಕ ಖಾಯಿಲೆಗೆ ಬಲಿಯಾಗುತ್ತಾರೆ. ಬುದ್ಧಿ, ವಿವೇಕ ಯುಕ್ತಿ, ಜ್ಞಾನವು ಕೂಡಾ ಅದರ ಮುಂದೆ ಕಾಲೂರುವುದಿದೆ. ಆದ ದೃಢವಿಶ್ವಾಸಿಗಳಲ್ಲದೆ ಇತರರಿಗೆ ಅದರಿಂದ ಪಾರಾಗಲು ಸಾಧ್ಯವಿಲ್ಲ.

ಪ್ರವಾದಿ ಇಬ್ರಾಹೀಮರು ತನ್ನ ಸಂಪೂರ್ಣ ಜೀವನವನ್ನು ಏಕದೇವತ್ವದ ಸಂದೇ ಪ್ರಚಾರಕ್ಕೆ ವಿನಿಯೋಗಿಸಿದ್ದರು. ಅದೇ ಕಾರಣದಿಂದ ಅವರಿಗೆ ಸ್ವಂತ ಹುಟ್ಟಿದ ನಾಡನ್ನೆ ತೊರೆಯಬೇಕಾಗಿ ಬಂತು. ಅಗ್ನಿ ಕುಂಡಕ್ಕೂ ಎಸೆಯಲ್ಪಡಬೇಕಾಯಿತು. ಆ ಒ ಮರುಭೂಮಿಯಲ್ಲಿ ಏಕಾಂಗಿಯಾಗಿ ಅಲೆದಾಡಬೇಕಾಯಿತು. ತನ್ನ ಮ ಇಸ್ಮಾಈಲ್‌ರೊಂದಿಗೆ ಸೇರಿ ಏಕದೇವತ್ವದ ಸಂಕೇತದ ಆರಾಧನಾ ಕೇಂದ್ರವಾ ಕಅಬಾಲಯದ ನಿರ್ಮಾಣದ ಉದ್ದೇಶವೂ ಅದೇ ಆಗಿತ್ತು. ಆದರೂ ಅದು ಕೆಲ ಕಾಲದ ಬಳಿಕ ವಿಗ್ರಹಾಲಯವಾಯಿತು. ಮೂಢನಂಬಿಕೆ ಹಾಗೂ ಕಂದಾಚಾರ ಕೇಂದ್ರವಾಯಿತು.

ಪ್ರವಾದಿವರ್ಯರ(ಸ) ನಿಯೋಗವು ಆ ಪವಿತ್ರ ದೇವಮಂದಿರವನ್ನು ಅದ ಪೂರ್ವ ಸ್ಥಿತಿಗೆ ತರಲು ಶ್ರಮಿಸಿದರು. ಅದರೊಳಗಿದ್ದ ಮಾಲಿನ್ಯವನ್ನೆಲ್ಲಾ ತೆಗೆದು ಶು ಗೊಳಿಸಲಾರಂಭಿಸಿದರು. ಆದರೆ ಜನರ ಮನಸ್ಸಿನಲ್ಲಿರುವ ಮಾಲಿನ್ಯವನ್ನು ತೊಡೆದ ಹಾಕದೆ ಇದು ಶುದ್ಧಿಯಾಗದು ಎಂಬುದನ್ನು ಪ್ರವಾದಿವರ್ಯರು(ಸ) ಮನಗಂಡಿದ್ದರು ಅದಕ್ಕಾಗಿ ಮೊದಲು ಜನ ಮಾನಸವನ್ನು ಶುದ್ಧೀಕರಿಸಲು ಪ್ರಯತ್ನಿಸಿದರು. ಅವ ಮನಸ್ಸಿನಲ್ಲಿ ನುಸುಳಿದ ಕಂದಾಚಾರ, ಮೂಢನಂಬಿಕೆಗಳನ್ನು ನಿರ್ಮೂಲನೆಗೊಳಿಸಲು ಪ್ರಯತ್ನಿಸಿದರು. ತಲೆತಲಾಂತರಗಳಿಂದ ಅಲ್ಲಿ ಸಂಗ್ರಹಿಸಲಾದ ವಿಗ್ರಹಗಳನ್ನು ಹೊ ಹಾಕುವ ಕಾಲ ಕೂಡಿಬಂತು. ಆ ಮೂಲಕ ಕಅಬಾಲಯದ ಶುಚೀಕರಣ ಸಮಯವಾಯಿತು.

ಪ್ರವಾದಿವರ್ಯರು(ಸ) ಕಅಬಾಲಯದ ಬಾಗಿಲು ತೆರೆದು ಒಳಗೆ ಪ್ರವೇಶಿಸಿದರು. ಏಕದೇವಾರಾಧನೆಗೆ ತನ್ನ ಜೀವನವನ್ನೇ ಮುಡುಪಾಗಿಟ್ಟ ಪ್ರವಾದಿ ಇಬ್ರಾಹೀಮ್(ಅ) ಹಾಗೂ ಇಸ್ಮಾಈಲ್(ಅ) ಭವಿಷ್ಯ ಹೇಳುವ ದಂಡಗಳನ್ನು ಹಿಡಿದ ಪ್ರತಿರೂಪಗಳಾಗಿ ಪ್ರವಾದಿವರ್ಯರ(ಸ) ಕಣ್ಣಿಗೆ ಬಿದ್ದವು. ಪ್ರವಾದಿವರ್ಯರ(ಸ) ಮುಖಭಾವವೇ ಬದಲಾಯಿತು. ಅವರು ಇದನ್ನು ನೋಡಿ ''ನಮ್ಮ ಗುರುವನ್ನು ಅವರು ಜ್ಯೋತಿಷಿಯಂತೆ ಚಿತ್ರಿಸಿದ್ದಾರೆ. ಈ ಜ್ಯೋತಿಷ್ಯಕ್ಕೂ(ಕಣಿ ಹೇಳುವುದು) ಪ್ರವಾದಿ ಇಬ್ರಾಹೀಮರಿಗೂ ಮಧ್ಯೆ ಯಾವ ಸಂಬಂಧ? ಇಬ್ರಾಹೀಮರು ಓರ್ವ ಕ್ರೈಸ್ತನೋ ಯಹೂದಿಯೋ ಆಗಿರಲಿಲ್ಲ. ಅನುಸರಣಶೀಲರಾದ ಮುಸ್ಲಿಮರಾಗಿದ್ದಾರೆ. ಅವರು ಬಹುದೇವಾರಾಧಕರಲ್ಲಿ ಸೇರಿದವರಾಗಿರಲಿಲ್ಲ'' ಎಂದು ಹೇಳಿದರು.

ಬಳಿಕ ಅಲ್ಲಿರುವ ವಿಗ್ರಹಗಳನ್ನೆಲ್ಲಾ ತೆಗೆದು ಕಅಬಾಲಯವನ್ನು ಶುಚಿಗೊಳಿಸಲು ನಿರ್ದೇಶನ ನೀಡುತ್ತಾ, ''ಹೇಳಿರಿ ಸತ್ಯವು ಬೆಳಗಿತು, ಅಸತ್ಯವು ಮಸುಕಾಯಿತು. ಅಸತ್ಯವು ಅಳಿಯಲೇಬೇಕು'' ಎಂದು ಘೋಷಿಸಿದರು.

ಆ ದೇವ ಮಂದಿರವು ಶುದ್ಧೀಕರಣಗೊಂಡ ಬಳಿಕ ಪ್ರವಾದಿವರ್ಯರು(ಸ) ಅಲ್ಲಿ ನಮಾಝ್ ನಿರ್ವಹಿಸಿದರು. ಬಳಿಕ ಅದರ ದ್ವಾರದ ಬಳಿ ಏರಿ ನಿಂತು ''ಅಲ್ಲಾಹನಲ್ಲದೆ ಅನ್ಯ ಆರಾಧ್ಯರಿಲ್ಲ, ಅವನಿಗೆ ಯಾರೂ ಭಾಗೀದಾರರಿಲ್ಲ, ಅವನು ತನ್ನ ವಾಗ್ದಾನವನ್ನು ಈಡೇರಿಸಿದನು. ತನ್ನ ದಾಸನಿಗೆ ನೆರವಾದನು. ಎಲ್ಲಾ ರೀತಿಯ ಅತ್ಯಾಚಾರ, ಅನಾಚಾರಗಳಿಗೆ ಅಲ್ಲಾಹನು ಇಂದು ಅಂತ್ಯ ಹಾಡಿದನು. ಸಂಪತ್ತು, ಸೊತ್ತು, ಗೋತ್ರ, ಕುಟುಂಬ ಮಹಿಮೆಯಲ್ಲಿ ಅಧಿಷ್ಠಿತರಾದ ಹಳೆಯ ಕಾಲದ ಎಲ್ಲಾ ಅಧಿಕಾರ ಮೋಹಿಗಳು ದುರ್ಬಲರಾದರು. ಇಸ್ಲಾಮಿನ ಪೂರ್ವಕಾಲದಲ್ಲಿದ್ದಂತಹ ಅಹಂಕಾರ, ದುರಭಿಮಾನಕ್ಕೆ ಅಲ್ಲಾಹನು ಅಂತ್ಯ ಹಾಡಿದನು. ಇಂದು ನೀವೆಲ್ಲರೂ ಸಮಾನರಾಗಿದ್ದೀರಿ. ನೀವೆಲ್ಲರೂ ಆದಮರ ಪುತ್ರರು. ಆದಮರನ್ನು ಮಣ್ಣಿನಿಂದ ಸೃಷ್ಟಿಸಲಾಗಿದೆ.

❖ ❖ ❖

96. ಸುಂದರವಾದ ಪ್ರತೀಕಾರ

ಪ್ರವಾದಿವರ್ಯರ(ಸ) ಹೃದಯವು ಸಂತಸದಿಂದ ತುಂಬಿದೆ. 50 ವರ್ಷಗಳ ಕಾಲ ತನ್ನ ಪಾದ ಸಂಚರಿಸಿದ ಮಣ್ಣಿಗೆ ಅವರು ಮತ್ತೆ ಮರಳುತ್ತಿದ್ದಾರೆ. ಆಡು ಮೇಯಿಸಿದ ಆ ಬಾಲ್ಯ ಕಾಲ, ವ್ಯಾಪಾರಿಯಾಗಿ ಕಾಲ ಕಳೆದ ಯೌವನದ ದಿನಗಳು, 'ಅಲ್ ಅಮೀನ್'

ಎಂಬ ಬಿರುದಿನಿಂದ ಗೌರವಿಸಲ್ಪಟ್ಟ ಆ ದಿನಗಳು, ಹಿರಾಗುಹೆಯಿಂದ ಅಲ್ಲಾಹನ ವಚನಗಳನ್ನು ಪಡೆದುಕೊಂಡ ಆ ದಿನಗಳು, ಆಪ್ತ ಸಂಬಂಧಿಕರಿಂದಲೂ ನೆರೆಯವರಿಂದಲೂ ತೀವ್ರವಾದ ದೌರ್ಜನ್ಯಕ್ಕೆ ಗುರಿಯಾದ ಆ ದಿನಗಳು, ತನ್ನ ಅನುಚರರು ಹಿಂಸೆ ಮರ್ದನಗಳಿಂದ ನರಳುತ್ತಿರುವುದನ್ನು ಕಂಡು ಹೃದಯ ಮಿಡಿದ ಆ ದಿನಗಳು, ಅವರ ಸಂಕಷ್ಟದ ಜೀವನಕ್ಕೆ ಸಾಕ್ಷಿಯಾಗಿ ನಿಲ್ಲಬೇಕಾದ ಆ ದಿನಗಳು, ಮೂರು ವರ್ಷಗಳ ಕಾಲ ನಿರಂತರ ಸಾಮಾಜಿಕ ಬಹಿಷ್ಕಾರಕ್ಕೊಳಗಾದ ಆ ದಿನಗಳು– ಹೀಗೆ ಗತ ಕಾಲದ ಒಂದೊಂದೇ ಘಟನೆಗಳು ಅವರ ಹೃದಯದಲ್ಲಿ ಸುಳಿದಾಡಿ ಅವರ ಕಣ್ಣುಗಳು ತೇವಗೊಂಡವು.

ಪವಿತ್ರ ಕಅಬಾ ಭವನ ಅವರ ಕಣ್ಣ ಮುಂದಿದೆ. ಪ್ರವಾದಿಗಳು ''ಕಸ್‌ವಾ'' ಎಂಬ ತನ್ನ ಒಂಟೆಯ ಮೇಲೆ ಕುಳಿತು ಆ ಗೌರವಾರ್ಹ ಭವನವನ್ನು ಏಳು ಬಾರಿ ಸುತ್ತು ಬಂದರು. ಬಳಿಕ ಕಅಬದ ಕೀ ಗೊಂಚಲನ್ನು ಕಾಪಾಡುತ್ತಿದ್ದ ಉಸ್ಮಾನ್ ಬಿನ್ ತಲ್ಹರನ್ನು ಕರೆದರು. ಕಅಬಾದ ಬಾಗಿಲನ್ನು ತೆರೆಯಲು ಅವರಿಗೆ ಆದೇಶಿಸಿದರು. ತಲೆತಲಾಂತರಗಳಿಂದ ಈ ದೇವ ಭವನದ ಕೀ ಗೊಂಚಲನ್ನು ಸಂರಕ್ಷಿಸುವ ಮಹಾ ಗೌರವವನ್ನು ಉಸ್ಮಾನ್‌ರ ಗೋತ್ರವು ಪಡೆದಿತ್ತು.

ಹಿಜ್‌ರಾಗಿಂತ ಮೊದಲು ಪ್ರವಾದಿವರ್ಯರು(ಸ) ಮಕ್ಕಾದಲ್ಲಿ ದೌರ್ಜನ್ಯಕ್ಕೀಡಾದ ಸಂದರ್ಭದಲ್ಲಿ ಕಅಬಾದ ಒಳಗೆ ಪ್ರವೇಶಿಸಿ ಪ್ರಾರ್ಥಿಸಬೇಕೆಂಬುದು ಅವರ ಮಹಾ ಬಯಕೆಯಾಗಿತ್ತು. ಅದಕ್ಕಾಗಿ ಅವರು ಕಅಬಾದ ಕೀ ಗೊಂಚಲು ನೀಡುವಂತೆ ಉಸ್ಮಾನ್ ಬಿನ್ ತಲ್ಹಾರೊಂದಿಗೆ ವಿನಂತಿಸಿದ್ದರು. ಆದರೆ ಅವರು ಕೀ ಗೊಂಚಲನ್ನು ನೀಡಲು ಒಪ್ಪಲಿಲ್ಲ, ಮಾತ್ರವಲ್ಲ, ತೀಕ್ಷ್ಣ ಮಾತುಗಳಿಂದ ಆಕ್ಷೇಪಿಸಿ ಅವಹೇಳನ ಮಾಡಿದ್ದರು. ಅಂದು ಬಹಳವಾಗಿ ನೊಂದ ಪ್ರವಾದಿವರ್ಯರು(ಸ), ''ಉಸ್ಮಾನ್ ಈ ಕೀ ಗೊಂಚಲು ನನ್ನ ಬಳಿ ಸೇರುವ ಒಂದು ದಿನ ಬರುವುದು. ಅಂದು ಅದನ್ನು ಯಾರಿಗೆ ನೀಡಬೇಕೆಂದು ನಿರ್ಧರಿಸುವವನು ನಾನಾಗಿರುವೆ'' ಎಂದು ಹೇಳಿದ್ದರು.

ಇದನ್ನು ಕೇಳಿದ ಉಸ್ಮಾನ್ ಅಪಹಾಸ್ಯ ಮಾಡಿ ನಗುತ್ತಾ ''ಹಾಗೊಂದು ವೇಳೆ ನಡೆದರೆ ಅದು ಕುರೈಶರ ನಾಶದ, ನಿಂದ್ಯತೆಯ ದಿನವಾಗಿರುವುದು'' ಎಂದು ಹೇಳಿದ್ದ.

''ಇಲ್ಲ ಹಾಗಲ್ಲ, ಅವರು ಆ ದಿನ ಗೌರವ ಪೂರ್ಣವಾಗಿ ಜೀವಿಸುವವರಾಗಿರುವರು'' ಎಂದು ಪ್ರವಾದಿವರ್ಯರು(ಸ) ಉತ್ತರಿಸಿದ್ದರು.

ಪ್ರವಾದಿವರ್ಯರ(ಸ) ಆ ಮಾತುಗಳು ಇಂದು ಸಾಕಾರಗೊಂಡಿದೆ. ಪವಿತ್ರ

ಕಅಬಾಲಯದಲ್ಲಿದ್ದ ಎಲ್ಲ ಮಾಲಿನ್ಯಗಳನ್ನು ಕಿತ್ತೆಸೆದು ಶುಚಿಗೊಳಿಸಲಾಯಿತು. ಪ್ರಾರ್ಥನೆ ನಿರ್ವಹಿಸಿದ ಬಳಿಕ ಹೊರ ಬಂದು ಬಾಗಿಲು ಹಾಕಿದರು.

ಎಲ್ಲರೂ ನಿರೀಕ್ಷೆ ಕುತೂಹಲಗಳಿಂದ ಪ್ರವಾದಿವರ್ಯರ(ಸ) ಕೈಗಳನ್ನೇ ದಿಟ್ಟಿಸುತ್ತಿದ್ದರು. ಆ ಕೀ ಗೊಂಚಲನ್ನು ಯಾರ ವಶಕ್ಕೆ ಒಪ್ಪಿಸುವರೆಂಬುದು ಅವರ ಕುತೂಹಲವಾಗಿತ್ತು. ಅದನ್ನು ತನ್ನಲ್ಲಿಯೇ ಇಟ್ಟುಕೊಳ್ಳುತ್ತಾರೆಯೇ? ಅಥವಾ ತನ್ನ ಆಪ್ತ ಸ್ನೇಹಿತ ಅಬೂಬಕರ್‌ರ(ರ) ಕೈಗೆ ನೀಡುವರೋ ಅಥವಾ ಉಮರ್‌ರಿಗೋ(ರ) ಇಲ್ಲ ಅಲಿಯವರ ಕೈಗೆ ನೀಡುತ್ತಾರೋ ಎಂಬ ಕುತೂಹಲ ಅಲ್ಲಿ ಮನೆ ಮಾಡಿತ್ತು. ಜೊತೆಗೆ ಎಲ್ಲರೂ ಈ ಸೌಭಾಗ್ಯ ನಮಗೆ ದೊರಕಲಿ ಎಂದೇ ಭಾವಿಸಿರುವುದು ಅಲ್ಲಿ ಸ್ವಾಭಾವಿಕವಾಗಿತ್ತು. ವಿಶ್ವದ ಪ್ರಸಿದ್ಧ ದೇವ ಭವನದ ಕೀ ಗೊಂಚಲು ತಮ್ಮ ಬಳಿಯಿರುವುದು ಮಹಾಭಾಗ್ಯವೇ ಸರಿ. ಆಗ ಅಲಿ(ರ)ಯವರು ತನ್ನ ಬಯಕೆಯನ್ನು ಪ್ರವಾದಿವರ್ಯರಲ್ಲಿ(ಸ) ಹೇಳಿಯೂ ಬಿಟ್ಟರು. ಅವರು, ''ಅಲ್ಲಾಹನ ಪ್ರವಾದಿಗಳೇ ಅಲ್ಲಾಹನ ಅನುಗ್ರಹಗಳು ನಮ್ಮ ಮೇಲೆ ಸದಾ ವರ್ಷಿಸುತ್ತಿರಲಿ, ಕಅಬಾಲಯವನ್ನು ಸಂದರ್ಶಿಸುವವರಿಗೆ ನೀರು ಸರಬರಾಜು ಮಾಡುವ ಪವಿತ್ರವಾದ ಅವಕಾಶ ಬನೂ ಹಾಶಿಮ್ ಕುಟುಂಬಸ್ಥರಾದ ನಮ್ಮಲ್ಲಿದೆಯಲ್ಲವೇ, ಈಗ ಈ ಮಹಾಭವನದ ಕೀಲಿ ಕೈ ಕೂಡಾ ನಮ್ಮಲ್ಲಿಯೇ ಇದ್ದರೆ?'' ಎಂದು ಕೇಳಿದರು.

ಆದರೆ ಪ್ರವಾದಿವರ್ಯರ(ಸ) ಚಿಂತನೆಯು ಅದಕ್ಕೆ ವ್ಯತಿರಿಕ್ತವಾಗಿತ್ತು. ಆ ಕೀ ಗೊಂಚಲನ್ನು ಉಸ್ಮಾನ್ ಬಿನ್ ತಲ್ಹಾರ ಕೈಯಲ್ಲಿ ನೀಡುತ್ತಾ ಈ ರೀತಿ ಹೇಳಿದರು. ''ಈ ಕೀ ಗೊಂಚಲನ್ನು ಹಿಡಿದುಕೊಳ್ಳಿರಿ, ಇದು ವಚನ ಪಾಲನೆಯ ದಿನವಾಗಿದೆ. ನೀವಿದನ್ನು ಸ್ವೀಕರಿಸಿರಿ. ಇದು ಎಂದೆಂದಿಗೂ ತಮ್ಮ ಕುಟುಂಬದಲ್ಲಿಯೇ ಇರುವುದು. ಇದನ್ನು ನಿಮ್ಮಿಂದ ಅಕ್ರಮಿಯ ಹೊರತು ಇನ್ನಾರೂ ಕಬಳಿಸಲಿಕ್ಕಿಲ್ಲ, ಪ್ರವಾದಿವರ್ಯರು(ಸ) ತನ್ನೊಂದಿಗೆ ಸುಂದರವಾಗಿ ಪ್ರತೀಕಾರ ಕೈಗೊಳ್ಳುವರೆಂದು ಉಸ್ಮಾನ್ ಕನಸ್ಸಿನಲ್ಲಿ ಕೂಡಾ ಭಾವಿಸಿರಲಿಲ್ಲ, ಇಂದಿಗೂ ಅವರ ತಲೆಮಾರು ಆ ಗೌರವವನ್ನು ಕಾಪಾಡುತ್ತಾ ಬಂದಿದೆ.

❖ ❖ ❖

97. ಇತಿಹಾಸ ಪ್ರಸಿದ್ಧವಾದ ಆ ಅದಾನ್

ಮಕ್ಕಾ ವಿಜಯವು ಅಮೂಲ್ಯವಾದುದು. ಮಾನವ ಇತಿಹಾಸದಲ್ಲಿ ಅದಕ್ಕೆ ಸಮಾನಾಂತರ ಘಟನೆ ಇನ್ನೊಂದಿಲ್ಲ. ಆದ್ದರಿಂದ ಅದರ ಯಶಸ್ಸನ್ನು ಈ ಲೋಕದಾದ್ಯಂತ, ಬಹಿರಂಗ ಪಡಿಸಬೇಕಾಗಿದೆ. ಅದಕ್ಕೆ ಯೋಗ್ಯರಾದವರು

ಯಾರಿದ್ದಾರೆ? ಅದಕ್ಕಾಗಿ ಪ್ರವಾದಿವರ್ಯರಿಗೆ(ಸ) ವಿಶೇಷವಾ
ಆಲೋಚಿಸಬೇಕೆಂದೇನೂ ಇಲ್ಲ, ಯಾಕೆಂದರೆ ಇದೊಂದು ಗೆದ್ದ ಸರದಾರ
ಕೆಲಸವಾಗಿತ್ತು. ಸೇನೆಯ ಸರ್ವೋಚ್ಚ ನಾಯಕ ಇದನ್ನು ನಿರ್ವಹಿಸಬೇಕಾಗಿತ್ತು.
ಕಾರಣದಿಂದ ಪ್ರವಾದಿವರ್ಯರೇ ಈ ಕೆಲಸ ಮಾಡಬೇಕು. ಆದರೆ ಸಮಯ
ಸಾಕ್ಷಿಯಾಗಿ ಲೋಕಾಂತ್ಯದ ವರೆಗಿನ ಜನರು ಸ್ಮರಿಸುವಂತಹ ಆಯ್ಕೆಯನ
ಪ್ರವಾದಿವರ್ಯರು(ಸ) ಕೈಗೊಂಡರು. ಈ ವಿಜಯ ದುಂದುಭಿ ಹಾರಿಸಿದ ಸೇನಾನಿಗ
ನೇತಾರರಾಗಿ ಇಥಿಯೋಪಿಯನ್ ನೀಗ್ರೋ ಗುಲಾಮನಾಗಿದ್ದ ಕರಿವರ್ಣದ ಬಿಲಾಲ
ಬಿನ್ ರಬಾಹರನ್ನು ಆರಿಸಿದರು.

ಅಲ್ಲಾಹನ ಮಹತ್ವವನ್ನು ಸಾರಲು, ಅವನ ಏಕತೆಯನ್ನು ಘೋಷಿಸಿದ ಕಾರಣಕ್ಕಾ
ತನ್ನ ಯಜಮಾನನಿಂದ ತೀವ್ರ ದೌರ್ಜನ್ಯ ಹಿಂಸೆಗೆ ತುತ್ತಾದ ಬಿಲಾಲ್‌ರಿಗಿಂತ ಅರ್ಹ ವ್ಯ
ಇನ್ನಾರಿರ ಬಹುದು? ಇತಿಹಾಸದಲ್ಲಿ ಎಲ್ಲ ಕಾಲದಲ್ಲೂ ನಿಂದ್ಯತೆಗೊಳಗಾದ ಗುಲಾಮ
ತಾನೇ, ತನ್ನ ವಿಮೋಚನೆಯನ್ನು ಸಾರಬೇಕಾಗಿರುವುದು? ಸಮಾಜದಲ್ಲಿ ಹೊಡೆತ
ಬಡಿತ, ತೆಗಳಿಕೆ, ಉಗಿಸಿಕೊಳ್ಳುವುದಕ್ಕೆ ಮಾತ್ರ ಜನಿಸಿದಂತಹ ಕರಿ ವರ್ಣದವರು
ವಿಜಯವನ್ನು, ಮಹತ್ವವನ್ನು ಹಾಗೂ ಸಮಾನತೆಯನ್ನು ಸಾಕ್ಷಾತ್ಕರಿಸಲು
ದೇವಾನುಗ್ರಹದಿಂದ ಲಭಿಸಿದ ಕ್ರಾಂತಿಯ ಕಹಳೆಯ ದಿಗ್ವಿಜಯವನ್ನು ಪ್ರಕಟಪಡಿಸಲಿ
ಎಂಬುದು ಪ್ರವಾದಿವರ್ಯರ(ಸ) ನಿರ್ಧಾರವಾಗಿತ್ತು.

ಹಾಗೆಯೇ ಅತ್ಯಂತ ರೋಮಾಂಚನಗೊಳ್ಳುವ ಆ ಕ್ಷಣ ವಿಶ್ವವೇ ಬೆರಗಾಗುವಂತೆ
ಪವಿತ್ರ ಕಅಬಾಲಯದ ಮೇಲೇರಿ ಯುಗಯುಗಾಂತರಗಳ ಕೋಟ್ಯಾನುಕೋಟಿ
ಮನುಷ್ಯರ ದಿಗ್ವಿಜಯ ವನ್ನು ಪ್ರಕಟಿಸುವ ಮಹತ್ತರವಾದ ಸಂದರ್ಭ ಬಿಲಾಲ್‌ರಿಗೆ
ಒಲಿದು ಬಂತು. ಮುಖದಲ್ಲಿ ಯಜಮಾನನ ಚಾಟಿಯೇಟಿನ ಕಲೆಗಳು, ಶರೀರದಲ್ಲಿ
ಹಿಂಸೆ ಅನುಭವಿಸಿದ ಅನೇಕ ಗುರುತು ಗಳಿಂದಾವೃತವಾದ ಶರೀರದೊಂದಿಗೆ
ಇಥಿಯೋಪಿಯನ್ ನೀಗ್ರೋ ಬಿಲಾಲ್ ಎದ್ದು ನಿಂತರು.

ಮಕ್ಕಾದ ಸುತ್ತಮುತ್ತಲಿರುವ ಬೆಟ್ಟಗುಡ್ಡಗಳನ್ನು ನಡು ಮಧ್ಯಾಹ್ನದ
ಸುಡುಬಿಸಿಲಿನಲ್ಲಿ ಉರಿಯುತ್ತಿದ್ದ ಮರಳ ರಾಶಿಗಳಿಗೆ ತನ್ನ ಬೆನ್ನನ್ನು ಕರಟಿಸಿಕೊಂಡ,
ಒಡೆಯನಾದ ಉಮಯ್ಯನ ಆಡಿನ ಮರಿಗಳನ್ನು ಮೇಯಿಸುತ್ತಾ ನಡೆದ ಬತ್ವಾಟ್
ಕಣಿವೆಯನ್ನೂ ತನ್ನಂತೆ ಗುಲಾಮಳಾಗಿ ಕಪ್ಪಗಿನ ಬಣ್ಣದ ಹಾಜಿರಾರ ಕಣ್ಣೀರ ಹನಿಗಳೂ
ಕಾಲಿನ ಹೆಜ್ಜೆ ಗುರುತುಗಳಿಂದ ತುಂಬಿದ ಮರ್ವಾ ಬೆಟ್ಟವನ್ನೂ ಅವರ ಮಗ
ಇಸ್ಮಾಈಲ್‌ರ ಪಾದಗಳು ಬಡಿದಾಗ ಚಿಮ್ಮಿದ ನೀರಿನ ಒರತೆ ಝುಮ್‌ಝುಮ್
ಹಾಗೂ ಈ ವಿಜಯದ ಕ್ರಾಂತಿಗೆ ಶ್ರಮಿಸಿದ ಸಹಸ್ರಾರು ಮಂದಿಯನ್ನೂ ಸರ್ವ

ಲೋಕಗಳ ಪರಿಪಾಲಕ ಅಲ್ಲಾಹನನ್ನೂ ಸಾಕ್ಷಿಯಾಗಿರಿಸಿ ಬಿಲಾಲ್ ಅದಾನ್ ಮೊಳಗಿಸಿದರು. ಕರ್ಣಾನಂದಕರವಾದ ಸುಂದರ ಕಂಠದಲ್ಲಿ ಮೊಳಗಿಸಿದ ಆ ಪವಿತ್ರ ಧ್ವನಿ ಮಕ್ಕಾದೆಲ್ಲೆಡೆ ಹರಡಿ ಇತಿಹಾಸ ಪ್ರಸಿದ್ಧವಾಗಿ ಪ್ರತಿಧ್ವನಿಸಿತು. ಎಲೆಗಳು ಅಲುಗಾಡಿದರೂ ಕೇಳುವಷ್ಟು ನಿಶಬ್ದತೆಯ ಮಧ್ಯೆ ಕೇಳಿದ ಆ ಅದಾನ್ ವಿಜಯದ ಘೋಷಣೆಯಾಗಿತ್ತು. ಅದನ್ನು ಆಲಿಸಿದ ಸಹಸ್ರಾರು ಮಂದಿಯ ಆಹ್ಲಾದಭರಿತ ಹೃದಯಗಳು ಕೃತಜ್ಞತಾಭಾವ ತುಂಬಿ ತುಳುಕಿ ಶಿರವ ಬಾಗಿಸಿ ಸ್ವಾಗತಿಸಿತು.

ಶತಮಾನಗಳು ಕಳೆದರೂ ಕೋಟ್ಯಾಂತರ ಜನ ಮಾನಸಗಳಲ್ಲಿ ಇಂದಿಗೂ ಕಅಬಾ ಭವನದ ಮೇಲೇರಿದ ಕಪ್ಪಗಿನ ಬಿಲಾಲ್‌ರ ಚಿತ್ರ ಅಚ್ಚಳಿಯದೆ ನಿಂತಿದೆ. ಅವರ ಕರ್ಣಗಳಲ್ಲಿ ಆ ಇಂಪಾದ ಸೊಂಪಾದ ಅದಾನ್‌ನ ಸ್ವರವು ನಿಂತಿದೆ. ಈ ಮಹಾಕಾರ್ಯಕ್ಕೆ ಪ್ರವಾದಿವರ್ಯರು(ಸ) ಅರ್ಹರಾದ ವ್ಯಕ್ತಿಯನ್ನೇ ಆರಿಸಿದ್ದರು.

❖ ❖ ❖

98. ಸಾರ್ವತ್ರಿಕ ಕ್ಷಮೆ

ಕ್ರಿಸ್ತ ಶಕ 631 ಇತಿಹಾಸದಲ್ಲಿ ಅಮೂಲ್ಯವಾದ ವರ್ಷವದು. ಮಕ್ಕಾದಲ್ಲಿ ಅತ್ಯಂತ ಪ್ರಮುಖವಾದ ಕ್ರಾಂತಿಯೊಂದು ಅಂದು ಜರುಗಿತು. ದಿವ್ಯ ವಚನಗಳಿಂದ ಸನ್ಮಾರ್ಗದ ಬೆಳಕಿನೆಡೆಗೆ ಸಮಾಜವನ್ನು ಆಹ್ವಾನಿಸಿದ ಕಾರಣಕ್ಕಾಗಿ ಮನೆ ಮಾರುಗಳನ್ನು ತೊರೆಯಬೇಕಾಗಿ ಬಂದ ಪ್ರವಾದಿವರ್ಯರು(ಸ) ಮತ್ತವರ ಅನುಚರರು ವಿಜಯ ಗಾಥೆಯೊಂದಿಗೆ ಮರಳಿ ಬಂದಿದ್ದಾರೆ. ಅದರಂತೆ ಪರಮ ಸತ್ಯವೊಂದು ಬೆಳಗಿತು. ಅಸತ್ಯವು ಮರೆಯಾಯಿತು. ನ್ಯಾಯ ನೆಲೆಯೂರಿತು. ಅನ್ಯಾಯ ತೊಲಗಿತು. ವಿಶ್ವ ಸಹೋದರತೆಯ ಪತಾಕೆ ಉದಯಿಸಿತು. ಪಾಳಯಗಾರರ ಕೋಟೆಗಳು ಉರುಳಿದವು. ಸ್ನೇಹ ಸೌಹಾರ್ದದ ಯುಗಾರಂಭವಾಯಿತು. ಅಕ್ರಮಗಳು ಕೊನೆಗೊಂಡವು. ಸಮಾನತೆಯ ಮಾಧುರ್ಯವನ್ನು ಸಮಾಜ ಅನುಭವಿಸಿತು. ಅಸಮಾನತೆಯು ನಂದಿ ಹೋಯಿತು. ಸಮಾಜವನ್ನು ತಮ್ಮ ಹಿಡಿತದಲ್ಲಿಟ್ಟುಕೊಂಡಿದ್ದ ಕಿರಾತಕರ ನಿರ್ಮೂಲನವಾಯಿತು. ಪರಸ್ಪರ ಶಾಂತಿ, ಕರುಣೆ ಸಮಾಜದೆಲ್ಲೆಡೆ ಪಸರಿಸಿತು. ಹೊಡೆದಾಟ, ಜಗಳ, ಮೇಲ್ಮೆ, ಹಗೆ, ಧಗೆಯ ಲೋಕವು ಇತಿಹಾಸದ ಪುಟಕ್ಕೆ ಸೇರಿತು. ಮಾನವೀಯತೆಗೆ ಗೌರವವಿರುವ, ಮೌಲ್ಯಾಧಾರಿತವಾದ ಸಮಾಜವು ಅಸ್ತಿತ್ವಕ್ಕೆ ಬಂತು. ಈ ಎಲ್ಲಾ ಬದಲಾವಣೆ ಗಳಿಗೆ ಮುಖ್ಯ ಕಾರಣ ಆ ಪವಿತ್ರ ವಚನಗಳು. ಅದರ ಮೂಲಬೇರುಗಳು ಸಮಾಜದ ಅಂತರಾಳಕ್ಕಿಳಿಯಿತು. ಶಿಖರಗಳು ಮಂಟಪವಾದವು.

ಈ ಮೂಲಕ ಬಹು ದೇವಾರಾಧನೆಯ ಮುಳ್ಳಿನ ಬಳ್ಳಿಗಳು ಬಾಡಿದವು. ಸತ್ಯನಿಷೇಧದ ಮೂಲವನ್ನೇ ಕಿತ್ತೆಸೆಯಲಾಯಿತು.

ಕಳೆದ ಕೆಲ ಶತಮಾನಗಳಿಂದ ಅಸ್ತಿತ್ವದಲ್ಲಿದ್ದ ಅಸತ್ಯದ ಶಿಲಾ ಪ್ರತಿಮೆಗಳು ವಿಗ್ರಹಗಳೂ ಅಧರ್ಮದ ಪ್ರತಿಷ್ಠಾಪನೆಗಳನ್ನು ಪವಿತ್ರ ಭವನದಿಂದ ನಿರ್ಮೂಲನಗೊಳಿಸಲ್ಪಟ್ಟಿದ್ದರಲ್ಲಿ ಅವರಲ್ಲಿ ಸಂತೃಪ್ತಿಯ ಭಾವನೆ ಮೂಡಿತು. ಮೂರು ಸಾವಿರ ವರ್ಷಗಳಷ್ಟು ಹಿಂದಿನ ವೈಭವಕ್ಕೆ ಪವಿತ್ರ ಭವನ ಮರಳಿತು. ಮಹಾನ್ ಪ್ರವಾದಿ ಇಬ್ರಾಹೀಮ್‌ರ(ಅ) ಕೈಗಳ ಸ್ಪರ್ಶದಿಂದ ನಿರ್ಮಾಣವಾದ ಕಅಬಾ ಭವನವು ಮಾಲಿನ್ಯದಿಂದ ಮುಕ್ತಿಗೊಳ್ಳುವುದನ್ನು ಕಣ್ತುಂಬ ನೋಡಿ ನಿಂತರು. ಹೀಗೆ ಒಳಿತಿನ ಸಂಸ್ಥಾಪನೆಯು ಮತ್ತೊಮ್ಮೆ ಭೂಮಿಯಲ್ಲಿ ಅಧಿಪತ್ಯ ಸ್ಥಾಪಿಸಿತು. ಸತ್ಯ, ಸಮಾನತೆ, ಸಹೋದರತೆ, ಸೌಹಾರ್ದ, ನ್ಯಾಯ, ಮಾನ್ಯತೆ, ಗೌರವ, ಸತ್ಯವಿಶ್ವಾಸ, ದೇವಭಯ, ಪರಲೋಕ ಪ್ರಜ್ಞೆ, ಪ್ರವಾದಿ ಪ್ರೇಮ ಮುಂತಾದ ಸದ್ಗುಣಗಳಿಗೆ ಅದು ಸಾಕ್ಷಿಯಾಯಿತು.

ಇಷ್ಟೆಲ್ಲಾ ಆದರೂ ಆ ಪ್ರವಾದಿವರ್ಯರಲ್ಲಿ(ಸ) ಯಾವುದೇ ರೀತಿಯ ಬದಲಾವಣೆ ಕಂಡಿರಲಿಲ್ಲ. ಅವರ ಭಾವದಲ್ಲೂ ಯಾವ ವ್ಯತ್ಯಾಸವೂ ಇರಲಿಲ್ಲ. ಗೆಲುವಿನಿಂದ ಅವರು ಬೀಗಲಿಲ್ಲ. ಈ ಮುನ್ನಡೆಯಿಂದ ಮೈಮರೆಯಲಿಲ್ಲ. ಎಲ್ಲವನ್ನೂ ಬಹಳ ಶಾಂತಚಿತ್ತರಾಗಿ ಬಹಳ ದೈನ್ಯತೆಯಿಂದ ನೋಡುತ್ತಿದ್ದರು. ಅಲ್ಲಾಹನಿಗೆ ಅಪಾರವಾದ ಕೃತಜ್ಞತೆ ಸಲ್ಲಿಸುತ್ತಿದ್ದರು.

ಅವರು ಯುದ್ಧ ಕೈದಿಗಳನ್ನೊಮ್ಮೆ ಸೂಕ್ಷ್ಮವಾಗಿ ನೋಡಿದರು. ಇವರಲ್ಲಿ ಯಾರೆಲ್ಲಾ ಇದ್ದಾರೆ? ತನ್ನ ಕೊರಳಿಗೆ ಒಂಟೆಯ ಕರುಳನ್ನು ತಂದು ಹಾಕಿದವರು, ತನ್ನನ್ನು ಬಹಿಷ್ಕಾರಕ್ಕೊಳಪಡಿಸಿದವರು, ಅನೇಕ ಬಾರಿ ತನ್ನನ್ನು ಮುಗಿಸಲು ಶ್ರಮಿಸಿದವರು, ಊರಿಂದ ಹೊರದಬ್ಬಿದವರು, ನಿರ್ದಾಕ್ಷಿಣ್ಯವಾಗಿ ಹಿಂಸಿಸಿದವರು, ಹೊರದೇಶದಲ್ಲೂ ಸ್ವಾಸ್ಥ್ಯದಿಂದ ಜೀವಿಸಲು ಬಿಡಲೊಲ್ಲದವರು, ಬಾಣದಿಂದ ಹಲ್ಲು ಕಿತ್ತವರು-ಹೀಗೆ ಎಲ್ಲರೂ ಆ ಗುಂಪಿನಲ್ಲಿದ್ದಾರೆ. ಎಲ್ಲರೂ ತಮ್ಮ ತಲೆ ತಗ್ಗಿಸಿ ನಿಂತಿದ್ದಾರೆ. ಅವರ ಕಾಲುಗಳು ನಡುಗುತ್ತಿದೆ. ಅವರು ಚಿಂತಿಸದೇ ಇರುವುದಾದರೂ ಹೇಗೆ? ಅವರೊಮ್ಮೆ ತಮ್ಮ ಚಿಂತನೆಯನ್ನು ಹಿಂದಕ್ಕೆ ಓಡಿಸಿರಬಹುದು. ಕಳೆದ ಕಾಲದಲ್ಲಿ ಅವರು ಮಾಡಿದ ಪಾಪಕೃತ್ಯಗಳನ್ನು ಸ್ಮರಿಸಿ ಅವರು ತಲೆ ಎತ್ತುತ್ತಿಲ್ಲ. ಆ ನಿಮಿಷದ ತನಕ ಅವರು ಪ್ರವಾದಿ(ಸ) ಮತ್ತವರ ಅನುಚರರನ್ನು ಸ್ವಸ್ಥವಾಗಿ ಜೀವಿಸಲು ಬಿಟ್ಟಿರಲಿಲ್ಲ. ತಮ್ಮ ಊರನ್ನು ತೊರೆದು ಹೋದರೂ ಅವರನ್ನು ಬೆನ್ನಟ್ಟಿದರು. ಅನೇಕರನ್ನು ಕೊಂದು ಮುಗಿಸಿದರು, ಕೈಕಾಲುಗಳನ್ನು ಕಡಿದರು. ನಡು ಮಧ್ಯಾಹ್ನದ ಸುಡುಬಿಸಿಲಿನಲ್ಲಿ

ಧಗೆಯಿಂದ ಕೂಡಿದ ಮರಳಿನ ಮೇಲೆ ಅವರನ್ನು ಎಳೆದಾಡಿದರು. ಎದೆಯ ಮೇಲೆ ಭಾರವಾದ ಕಲ್ಲನ್ನಿಟ್ಟರು. ಕಬ್ಬಿಣದ ಸುತ್ತಿಗೆಯಿಂದ ಬಡಿದು ಕೊಂದರು. ಕೆಲವರನ್ನು ಬಿಸಿ ನೀರಿನಲ್ಲಿ ಮುಳುಗಿಸಿದರು.

ಆದರೆ ಇಂದು...... ಎಂಟು ವರ್ಷಗಳ ಹಿಂದೆ ಹೊರದಬ್ಬಲ್ಪಟ್ಟ ಪ್ರವಾದಿ ಮುಹಮ್ಮದ್(ಸ) ಮರಳಿ ಬಂದಿದ್ದಾರೆ. ಒಬ್ಬಂಟಿಯಾಗಿ ಅಲ್ಲ, ಸಾವಿರಾರು ಜನರೊಂದಿಗೆ ಅದು ಕೂಡ ಬಂಧಿತನಾಗಿಯಲ್ಲ, ಲಕ್ಷಾಂತರ ಜನರ ನೇತಾರರಾಗಿ. ಇಂದು ಅವರು ಆ ನಾಡಿನ ನಾಯಕ. ಅರೇಬಿಯಾದ ಆಡಳಿತಗಾರ. ಜೊತೆಗೆ ಧರ್ಮದ ನೇತಾರ ಕೂಡಾ. ಜೊತೆಗೆ ಅವರ ಆಜ್ಞೆಗಳನ್ನು ಶಿರಸಾ ಪಾಲಿಸಲು ಸನ್ನದ್ಧರಾದ ಅನುಯಾಯಿಗಳೂ ಇದ್ದಾರೆ. ಆದರೆ ನಾವಿಂದು ಬಂಧಿತರು. ಗಲ್ಲು ಶಿಕ್ಷೆಯ ನಿರೀಕ್ಷೆಯಲ್ಲಿರುವವರು. ಕೇವಲ ಗಲ್ಲು ಶಿಕ್ಷೆ ನೀಡಿ ಈ ಮುಹಮ್ಮದ್(ಸ) ಸಂತೋಷಗೊಳ್ಳಬಹುದೇ ಎಂಬ ಆತಂಕವೂ ಅವರಲ್ಲಿದೆ. ಅಂಗಾಂಗದ ಒಂದೊಂದು ಭಾಗವನ್ನು ಕತ್ತರಿಸಿ ಕೊಂದರೆ ಮಾತ್ರ ನಾವು ಮಾಡಿದ ದುಷ್ಕೃತ್ಯಗಳಿಗೆ ಪರಿಹಾರವಾಗುವುದು.

''ನೀವು ನನ್ನಿಂದ ಏನು ಬಯಸುತ್ತಿದ್ದೀರಿ'' ಎಂದು ಪ್ರವಾದಿವರ್ಯರು(ಸ) ಅವರೊಂದಿಗೆ ಗೌರವಯುತವಾಗಿ ಕೇಳುವ ಮೂಲಕ ಅವರನ್ನು ಚಿಂತೆಯ ಚಿತೆಯಿಂದ ಎಬ್ಬಿಸಿದರು. ಸ್ವಲ್ಪಕಾಲದ ಮೌನದ ಬಳಿಕ ಧೈರ್ಯವನ್ನೆಲ್ಲಾ ಒಟ್ಟುಗೂಡಿಸಿ, ''ತಾವು ಗೌರವಾನ್ವಿತ ಸಹೋದರನ ಗೌರವಾನ್ವಿತ ಪುತ್ರರಾಗಿದ್ದೀರಿ. ತಮ್ಮಿಂದ ನಾವು ಒಳಿತನ್ನಲ್ಲದೆ ಇನ್ನಾವುದನ್ನೂ ನಿರೀಕ್ಷಿಸುತ್ತಿಲ್ಲ.''

ಅವರಿಗೆ ಪ್ರವಾದಿವರ್ಯರ(ಸ) ಮೇಲೆ ಶುಭ ನಿರೀಕ್ಷೆಯಿತ್ತು. ಕಾರಣ ಅವರು ದಯೆಯ ವಿಶ್ವರೂಪವಾಗಿದ್ದರು. ಪ್ರೀತಿಯ ಸೆಲೆಯಾಗಿದ್ದರು. ಆದ್ದರಿಂದ ಫ್ರೆಂಚ್ ಕ್ರಾಂತಿಯ ನಂತರ ವಿಜಯಿಗಳು ಪರಾಜಿತರನ್ನು ಸಾಮೂಹಿಕವಾಗಿ ಕೊಂದಂತೆ ಅವರು ಕೊಂದು ಹಾಕಲಿಲ್ಲ, ರಷ್ಯನ್ ಕ್ರಾಂತಿಯ ಬಳಿಕ ಕಮ್ಯೂನಿಷ್ಟರು ಝಾರ್ ಕುಟುಂಬದ ಮತ್ತು ಬೆಂಬಲಿಗರ ಹತ್ಯಾಕಾಂಡ ನಡೆಸಿದಂತೆ ಅವರು ನಡೆದುಕೊಳ್ಳಲಿಲ್ಲ, ಬದಲಾಗಿ ಆ ಯುದ್ಧ ಕೈದಿಗಳನ್ನೊಮ್ಮೆ ನೋಡಿ ಮುಗುಳ್ನಕ್ಕರು. ''ಇಂದು ನಿಮ್ಮೊಂದಿಗೆ ಯಾವುದೇ ರೀತಿಯ ಪ್ರತೀಕಾರವಿಲ್ಲ, ಇನ್ನು ನೀವು ಹೋಗಿರಿ. ನೀವು ಸ್ವತಂತ್ರರು'' ಎಂದರು.

❖ ❖ ❖

99. ಸಫ್‌ವಾನ್‌ರಿಗೂ ಕ್ಷಮೆ

ಪ್ರವಾದಿವರ್ಯರನ್ನು(ಸ) ವಿರೋಧಿಸುತ್ತಿದ್ದವರಲ್ಲಿ ಸಫ್‌ವಾನ್ ಪ್ರಮುಖನಾಗಿದ್ದ. ಆತನ ತಂದೆ ಉಮಯ್ಯನ ಜೊತೆ ಸೇರಿ ಪ್ರವಾದಿವರ್ಯರನ್ನು(ಸ) ತೀವ್ರವಾಗಿ ವಿಮರ್ಶಿಸಿದ್ದ. ಆಕ್ಷೇಪಿಸಿದ್ದ. ಪ್ರವಾದಿವರ್ಯರ(ಸ) ವಿರುದ್ಧ ತೆಗೆದ ಎಲ್ಲಾ ನಿರ್ಧಾರಗಳಲ್ಲಿಯೂ ಆತನ ಪಾಲು ಇದ್ದೇ ಇತ್ತು. ಅವನು ಪ್ರವಾದಿವರ್ಯರಿಗೆ(ಸ) ಬಾರೀ ಕಿರುಕುಳ ನೀಡಿ ಊರು ಬಿಟ್ಟು ಹೋಗುವಂತೆ ಮಾಡಿದ್ದನು. ಅಲ್ಲಿಯೂ ಸುಮ್ಮನಿರಲು ಬಿಡದೆ ಅನೇಕ ಯುದ್ಧಗಳನ್ನು ಮಾಡಿದನು.

ಕೊನೆಗೆ ವಿಜೇತರಾಗಿ ಪ್ರವಾದಿವರ್ಯರು(ಸ) ಮಕ್ಕಾಗೆ ಮರಳಿದರು. ಅವರ ಜೊತೆಯಲ್ಲಿ ಸಹಸ್ರಾರು ಅನುಚರರಿದ್ದರು. ಅವರೆಲ್ಲರೂ ವೀರರೂ ಶೂರರೂ ಆಗಿದ್ದರು. ಪ್ರವಾದಿವರ್ಯರ(ಸ) ಆಜ್ಞೆಯನ್ನು ಪಾಲಿಸಲು ಸಿದ್ಧರಾದ ಕಟ್ಟಾಳುಗಳಾಗಿದ್ದರು. ವಿರೋಧಿಗಳೆಲ್ಲರೂ ಪರಾಜಿತರಾದರು.

ಸಫ್‌ವಾನ್ ಭಯದಿಂದ ಕಂಪಿಸಿದನು. ಪ್ರವಾದಿ(ಸ) ಮತ್ತವರ ಸಂಗಾತಿಗಳ ಪ್ರತೀಕಾರಕ್ಕೆ ಹೆದರಿ ಊರು ತೊರೆಯಲು ಸನ್ನದ್ಧನಾದ. ಸಮುದ್ರದ ಮೂಲಕ ತಪ್ಪಿಸಲು ಜಿದ್ದಾಕ್ಕೆ ತೆರಳಿದ. ಈ ವಿಚಾರ ತಿಳಿದ ವಹಬ್‌ರ ಪುತ್ರ ಉಮೈರ್ ಪ್ರವಾದಿವರ್ಯರನ್ನು(ಸ) ಭೇಟಿಯಾಗಿ ''ಪ್ರವಾದಿವರ್ಯರೇ(ಸ), ಜನರ ನಾಯಕನಾಗಿದ್ದ ಸಫ್‌ವಾನ್ ತಮ್ಮ ಮೇಲಿನ ಭಯದಿಂದ ಊರು ತೊರೆಯಲು ಸಿದ್ಧನಾಗಿದ್ದಾನೆ, ಅವನಿಗೆ ಅಭಯ ನೀಡಿರಿ.'' ಸರಿ, ಹಾಗಾದರೆ ಆತನಿಗೆ ಅಭಯ ನೀಡಿದ್ದೇನೆಂದು ಪ್ರವಾದಿವರ್ಯರು(ಸ) ಹೇಳಿದರು.

''ಅವನಿಗೆ ತಿಳಿಸಲು ಏನಾದರೂ ಪುರಾವೆ ನೀಡುವಿರಾ? ಎಂದು ಕೇಳಿದರು. ಪ್ರವಾದಿವರ್ಯರು(ಸ) ಶಿರೋವಸ್ತ್ರವನ್ನು ತೆಗೆದು ಅವರಿಗೆ ನೀಡಿದರು. ಅದನ್ನು ಪಡೆದ ಉಮೈರ್ ಕೂಡಲೇ ಸಫ್‌ವಾನ್‌ನನ್ನು ಅರಸುತ್ತಾ ಹೋದರು. ಕಡಲ ಕಿನಾರೆಯಲ್ಲಿ ಈರ್ವರೂ ಪರಸ್ಪರ ಭೇಟಿಯಾದರು. ಉಮೈರ್‌ರು ಸಫ್‌ವಾನ್‌ನನ್ನು ಕೂಗಿ ಕರೆಯುತ್ತಾ'' 'ನೀವು ನಿಮ್ಮನ್ನೇ ನಾಶವಾಗಬೇಡಿರಿ. ಪ್ರವಾದಿವರ್ಯರು(ಸ) ನಿಮಗೆ ಅಭಯ ನೀಡಿರುತ್ತಾರೆ. ನೀವು ನನ್ನೊಂದಿಗೆ ಬನ್ನಿ' ಎಂದು ಕರೆದರು. ''ಅವರು ನನ್ನನ್ನು ಕೊಲ್ಲಬಹುದೇ ಎಂದು ನನಗೆ ಭಯವಾಗುತ್ತದೆ'' ಸಫ್‌ವಾನ್ ಆತಂಕದಿಂದ ನುಡಿದನು. ''ಇಲ್ಲ, ಪ್ರವಾದಿವರ್ಯರು(ಸ) ಬಹಳ ಗೌರವಾನ್ವಿತ ವ್ಯಕ್ತಿಯಾಗಿದ್ದಾರೆ. ಅವರು ವಚನ ತಪ್ಪಲಾರರು. ಪ್ರವಾದಿಗಳು(ಸ) ನಿಮಗೆ ಅಭಯ

ನೀಡಿದ್ದಾರೆ. ಇದೋ ನೋಡಿ ತನ್ನ ಶಿರೋ ವಸ್ತ್ರವನ್ನು ಪುರಾವೆಯಾಗಿ ನೀಡಿದ್ದಾರೆ'' ಎಂದು ಹೇಳಿ ತೋರಿಸಿದರು.

ಹಾಗೆ ಅವರೀರ್ವರೂ ಪ್ರವಾದಿವರ್ಯರ(ಸ) ಬಳಿಗೆ ಧಾವಿಸಿದರು. ಪ್ರವಾದಿವರ್ಯರೊಂದಿಗೆ(ಸ) ಸಫ್ವಾನ್ ''ನೋಡಿರಿ, ನನಗೆ ತಾವು ಅಭಯ ನೀಡಿರುತ್ತೀರಿ ಎಂದು ಇವರು ಹೇಳುತ್ತಿದ್ದಾರೆ. ಸರಿಯೇ?'' ಎಂದು ಕೇಳುತ್ತಾನೆ.

''ಹೌದು. ನಿಮಗೆ ನಾವು ಅಭಯ ನೀಡಿದ್ದೇವೆ'' ಎಂದು ಪ್ರವಾದಿವರ್ಯರು(ಸ) ಉತ್ತರಿಸಿದರು.

''ಹಾಗಾದರೆ ನನಗೆ ನನ್ನ ಮುಂದಿನ ಭವಿಷ್ಯದ ಕುರಿತು ತೀರ್ಮಾನಿಸಲು ಎರಡು ತಿಂಗಳ ಕಾಲಾವಕಾಶ ನೀಡುವಿರಾ?'' ಎಂದು ಕೇಳಿದಾಗ,

''ನಾನು ನಿಮಗೆ ನಾಲ್ಕು ತಿಂಗಳ ಕಾಲಾವಕಾಶ ನೀಡುತ್ತೇನೆ'' ಎಂದು ಪ್ರವಾದಿವರ್ಯರು(ಸ) ಉತ್ತರಿಸಿದರು.

❖ ❖ ❖

100. ವಿಷವಿಕ್ಕಿದ ಯಹೂದಿ ಮಹಿಳೆಗೂ ಕ್ಷಮೆ

ಮದೀನಾದಲ್ಲಿ ಯಹೂದಿಗಳ ನಾಯಕನಾಗಿದ್ದ ಸಲ್ಲಮು ಬಿನ್ ಮಿಶ್ಕಮ್‌ನ ಪತ್ನಿ ಝೈನಬ್ ಒಂದು ಆಡನ್ನು ಕೊಯ್ದು ಸಾರು ಮಾಡಿ ಪ್ರವಾದಿವರ್ಯರಿಗೆ(ಸ) ಕೊಟ್ಟು ಕಳುಹಿಸಿದಳು. ಆಕೆ ಅದರಲ್ಲಿ ವಿಷ ಬೆರೆಸಿದ್ದಳು. ತನ್ನ ತಂದೆ ಹಾಗೂ ಪತಿಯು ಖೈಬರ್‌ನಲ್ಲಿ ಕೊಲ್ಲಲ್ಪಟ್ಟಿದ್ದಕ್ಕೆ ಪ್ರತೀಕಾರವಾಗಿ ಈ ಕುಕೃತ್ಯ ನಡೆಸಿದ್ದಳು.

ಪ್ರವಾದಿವರ್ಯರು(ಸ) ತಮ್ಮ ಅನುಚರರೊಂದಿಗೆ ಆ ಆಡಿನ ಮಾಂಸದ ಪದಾರ್ಥ ಸೇವಿಸಲು ಕುಳಿತರು. ಅದರಿಂದ ಮಾಂಸದ ಸಣ್ಣ ತುಂಡೊಂದನ್ನು ಬಾಯಿಯಲ್ಲಿ ಹಾಕಿದಾಗ ಪ್ರವಾದಿವರ್ಯರಿಗೆ(ಸ) ಇದರಲ್ಲಿ ವಿಷ ಬೆರೆಸಿರುವುದು ಅರಿವಿಗೆ ಬಂತು. ಅವರಿಗೆ ಅವರ ವಂಚನೆ ತಿಳಿಯಿತು. ಕೂಡಲೇ ಅದನ್ನು ಉಗುಳಿದರು. ''ಇದರಲ್ಲಿ ವಿಷ ಬೆರೆಸಲಾಗಿದೆ'' ಎಂದರು. ಪ್ರವಾದಿವರ್ಯರೊಂದಿಗೆ(ಸ) ಊಟಕ್ಕೆ ಕುಳಿತ ಸಹಾಬಿ ಬಿಶ್ರ್ ಬಿನ್ ಬರ್ರಾಅ್ ತಕ್ಷಣ ಸಾವನ್ನಪ್ಪಿದರು. ಪ್ರವಾದಿವರ್ಯರು(ಸ) ಆ ಮಹಿಳೆಯನ್ನು ಕರೆಸಿ ವಿಚಾರಣೆ ನಡೆಸಿದರು. ಅವಳು ತನ್ನ ತಪ್ಪನ್ನು ಒಪ್ಪಿಕೊಂಡಳು. ಬಳಿಕ ತನ್ನ ಹೀನ ಕೃತ್ಯವನ್ನು ಸಮರ್ಥಿಸುತ್ತಾ, ''ನೀವು ದೊರೆಯೆಂದಾದರೆ ವಿಷ ಕುಡಿದು ಸಾಯಿರಿ ಎಂದು

ನಾನು ಭಾವಿಸಿದ್ದೆ. ಇನ್ನು ತಾವು ಪ್ರವಾದಿಯೆಂದಾದರೆ(ಸ) ವಿಷ ಬೆರೆಸಿರುವುದು ನಿಮ್ಮ ಅರಿವಿಗೆ ಬರುತ್ತದೆ ಎಂಬುದಾಗಿ ನಾನು ನಂಬಿದ್ದೆ.'' ಎಂದಳು.

ತಂದೆ ಹಾಗೂ ಪತಿಯನ್ನು ಕಳಕೊಂಡ ಝೈನಬ್‌ರ ಬಗ್ಗೆ ಪ್ರವಾದಿವರ್ಯರಿಗೆ(ಸ) ಅನುಕಂಪ ಮೂಡಿತು. ಅವರು ಏನೂ ಪ್ರತೀಕಾರ ನಡೆಸದೆ ಆಕೆಗೆ ಕ್ಷಮೆ ನೀಡಿದರು.

❖ ❖ ❖

101. ಪ್ರವಾದಿವರ್ಯರು(ಸ) ಬೆಳಗಿಸಿದ ಮಹಾ ಗುಣಗಳು

ಪ್ರವಾದಿವರ್ಯರು(ಸ) ತನ್ನ ಅನುಚರರನ್ನು ಯಾವಾಗಲೂ ಈ ರೀತಿ ಎಚ್ಚರಿಸುತ್ತಿದ್ದರು. ''ಕ್ರೈಸ್ತರು ಈಸಾರನ್ನು(ಅ) ಹೊಗಳಿ ಎತ್ತರಕ್ಕೇರಿಸಿದಂತೆ ನನ್ನನ್ನು ಹೊಗಳಬೇಡಿ. ನಾನು ಕೇವಲ ದೇವನ ದಾಸನಾಗಿರುವೆನು. ಆದ್ದರಿಂದ ನನ್ನನ್ನು ಅಲ್ಲಾಹನ ದಾಸ ಹಾಗೂ ಆತನ ಸಂದೇಶವಾಹಕನೆಂದು ಬಗೆದರೆ ಸಾಕು.''

ಒಮ್ಮೆ ಪ್ರವಾದಿವರ್ಯರು(ಸ) ಒಂದು ಸಭೆಗೆ ಪ್ರವೇಶಿಸಿದಾಗ, ಅಲ್ಲಿದ್ದವರು ಎದ್ದು ನಿಂತು ಗೌರವ ಸೂಚಿಸಿದರು. ತಕ್ಷಣ ಅವರು ''ಈ ರೀತಿ ಮಾಡಬಾರದು. ಇತರ ಪ್ರದೇಶಗಳ ಜನರು ಮಾಡುವಂತೆ ನೀವು ಎದ್ದು ನಿಲ್ಲಬಾರದು'' ಎಂದರು.

ಸತ್ಯವಿಶ್ವಾಸಿಗಳು ತೀವ್ರ ಸಂಕಷ್ಟದಿಂದ ಇರುವಾಗ ಅಲ್ಲಿಂದ ಹಿಜ್‌ರಾ ಹೊರಟವರಿಗೆ ಆಶ್ರಯ ನೀಡಿದ ನಜ್ಜಾಶಿ ದೊರೆಯ ನಿವೇದಕ ತಂಡವು ಮದೀನಕ್ಕೆ ಬಂದಿತು. ಇದನ್ನು ಅರಿತ ಪ್ರವಾದಿವರ್ಯರು(ಸ) ಅವರನ್ನು ಗೌರವಿಸಲು ವಿಶೇಷ ಗಮನ ಹರಿಸಿದ್ದರು. ಇದನ್ನು ನೋಡಿದ ಅನುಚರರು ಇದೆಲ್ಲಾ ನಾವೇ ಮಾಡುತ್ತೇವೆಂದು ಪ್ರವಾದಿವರ್ಯರೊಂದಿಗೆ(ಸ) ಹೇಳಿದರು. ಪ್ರವಾದಿವರ್ಯರು(ಸ) ಅದಕ್ಕೆ ಅನುಮತಿಸಲಿಲ್ಲ. ಎಲ್ಲಾ ಕೆಲಸಗಳನ್ನು ತಾನೇ ಸ್ವತಃ ಮಾಡುತ್ತಾ ಈ ರೀತಿ ಹೇಳಿದರು. ''ನಮ್ಮ ಸಹೋದರರೊಂದಿಗೆ ಆಶ್ಚರ್ಯ ಚಕಿತರಾಗುವಂತೆ ಇವರು ವ್ಯವಹರಿಸಿದ್ದಾರೆ. ಅವರ ಆ ಸೇವೆಗೆ ಕೃತಜ್ಞತೆಯಾಗಿ ಪ್ರತ್ಯುಪಕಾರ ನಿರ್ವಹಿಸಲು ನಾವು ಬಾಧ್ಯಸ್ತರಾಗಿದ್ದೇವೆ'' ಎಂದರು.

ಇದನ್ನು ಪುಷ್ಟೀಕರಿಸುತ್ತಾ ಮತ್ತೊಮ್ಮೆ. ಪ್ರವಾದಿಯವರು ಅಲಿಯವರ(ರ) ಪ್ರಶ್ನೆಗೆ ಉತ್ತರಿಸುತ್ತಾ ''ಜ್ಞಾನವೇ ನನ್ನ ಬಂಡವಾಳ, ವಿವೇಕವೇ ನನ್ನ ದೌತ್ಯದ ಒರೆಗಲ್ಲು, ಸ್ನೇಹವೇ ನನ್ನ ಮೌಲ್ಯ, ಶುಭ ನಿರೀಕ್ಷೆಯೇ ನನ್ನ ವಾಹನ. ದೇವ

ಸ್ಮರಣೆಯೇ ನನ್ನ ಸಹಯಾತ್ರಿಕ, ಪ್ರಾಮಾಣಿಕತೆಯೇ ನನ್ನ ಆಹಾರ ದುಃಖ ನನ್ನ ಸ್ನೇಹಿತ, ಅಂತರಾಳದ ನೋಟವೇ ನನ್ನ ಆಯುಧ, ಕ್ಷಮೆಯೇ ನನ್ನ ವಸ್ತ್ರವಾಗಿದೆ. ಸಂತೃಪ್ತಿಯೇ ನನ್ನ ಮೂಲಧನ, ದಾರಿದ್ರ್ಯವೇ ನನ್ನ ಸ್ವಾಭಿಮಾನ. ವಿರಕ್ತಿಯೇ ನನ್ನ ಚರ್ಯೆ, ದೃಢ ವಿಶ್ವಾಸವೇ ನನ್ನ ಇಂಧನ. ಸತ್ಯಸಂಧತೆಯೇ ನನ್ನ ಶಿಫಾರಸುದಾರ. ಸ್ಮರಣೆಯೇ ನನ್ನ ಮನೆತನ. ತ್ಯಾಗವೇ ನನ್ನ ಶಕ್ತಿ. ಪ್ರಾರ್ಥನೆಯೇ ನನ್ನ ಸಂತಸ'' ಎಂದು ಹೇಳಿದ್ದರು.

❖ ❖ ❖

102. ಪ್ರವಾದಿವರ್ಯರ(ಸ) ಸಹನೆಗೆ ಬದಲಾದ ಝೈದ್

ಪ್ರವಾದಿವರ್ಯರು(ಸ) ತನ್ನ ಪುತ್ರಿಯ ಪತಿ ಅಲಿಯವರೊಡನೆ(ರ) ಮನೆಯಿಂದ ಹೊರಗಡೆ ಹೋಗಿದ್ದರು. ಆಗ ಓರ್ವ ಗ್ರಾಮೀಣನು ಬಂದು ಒಂದು ತಂಡವು ಇಸ್ಲಾಮ್ ಸ್ವೀಕರಿಸಿರುವುದಾಗಿ ಹೇಳಿದನು. ಜೊತೆಗೆ ಅವರಿಗೆ ಆರ್ಥಿಕವಾಗಿ ನೆರವಾಗುವಂತೆಯೂ ಹೇಳಿದನು. ಆಗ ಪ್ರವಾದಿವರ್ಯರಲ್ಲಾಗಲೀ ಅಲಿಯವರ(ರ) ಬಳಿಯಲ್ಲಾಗಲೀ ಕೊಡಲು ಏನೂ ಇರಲಿಲ್ಲ. ದೂರದಿಂದ ಇದನ್ನು ಆಲಿಸುತ್ತಿದ್ದ ಯಹೂದಿ ಪುರೋಹಿತ ಝೈದ್ ಬಿನ್ ಸಅ್‌ನ ಪ್ರವಾದಿವರ್ಯರ(ಸ) ಬಳಿ ಬಂದು ''ಮುಹಮ್ಮದರೇ(ಸ) ತಮ್ಮ ಬಳಿಯಿರುವ ಖರ್ಜೂರ ಕೊಡುತ್ತೀರಾ? ನಾನು ನಿಮಗೆ ಹಣ ನೀಡುತ್ತೇನೆ. ಖರ್ಜೂರ ಈಗಲೇ ಕೊಡಬೇಕೆಂದಿಲ್ಲ, ನಂತರ ಕೊಟ್ಟರೆ ಸಾಕು ಎಂದು ಹೇಳಿದನು.

ಪ್ರವಾದಿವರ್ಯರು(ಸ) ಒಂದು ಬೆಲೆ ನಿರ್ಧರಿಸಿ ಖರ್ಜೂರ ಮಾರಿದರು. ಅದರ ಬದಲಿಗೆ 80 ನಾಣ್ಯಗಳನ್ನು ಪಡೆದರು, ಅದನ್ನು ಆ ಗ್ರಾಮೀಣನಿಗೆ ನೀಡಿ ಅಗತ್ಯವಿರುವವರಿಗೆ ಹಂಚಲು ಆದೇಶಿಸಿದರು.

ಖರ್ಜೂರ ಕೊಡಬೇಕಾದುದಕ್ಕಿಂತ ಎರಡ್ಮೂರು ದಿನ ಮುಂಚೆ ಒಂದು ಮರಣದ ಅಂತ್ಯಕ್ರಿಯೆಯಲ್ಲಿ ಪ್ರವಾದಿವರ್ಯರು(ಸ) ಭಾಗವಹಿಸಿದ್ದರು. ಜೊತೆಗೆ ಅಬೂಬಕರ್, ಉಮರ್, ಉಸ್ಮಾನ್‌ರಂತಹ ಪ್ರಮುಖರೂ ಇದ್ದರು. ಮೃತ ವ್ಯಕ್ತಿಗೆ ಪ್ರಾರ್ಥಿಸಿದ ಬಳಿಕ ಪ್ರವಾದಿವರ್ಯರು(ಸ) ಒಂದೆಡೆ ವಿರಮಿಸುತ್ತಿದ್ದರು. ಈ ಸಂದರ್ಭದಲ್ಲಿ ಅಲ್ಲಿಗೆ ಬಂದ ಝೈದ್ ಬಿನ್ ಸಅ್‌ನ ಪ್ರವಾದಿವರ್ಯರ(ಸ) ಬಟ್ಟೆ ಹಾಗೂ ಶಿರೋವಸ್ತ್ರವನ್ನು ಹಿಡಿದೆಳೆದು ದುರುಗುಟ್ಟಿ ನೋಡುತ್ತಾ ಉಚ್ಚಸ್ವರದಲ್ಲಿ ''ಮುಹಮ್ಮದ್(ಸ), ನನಗೆ ನೀಡಬೇಕಾದ ಖರ್ಜೂರ ಎಲ್ಲಿದೆ? ನೀವು ಅಬ್ದುಲ್

ಮುತ್ತಲಿಬ್ ಕುಟುಂಬದವರು, ಕೊಟ್ಟ ಸಾಲವನ್ನು ಮರಳಿಸುವವರಲ್ಲ ಎಂಬುದ
ನನಗೆ ತಿಳಿದಿದೆ'' ಎಂದು ಹೇಳಿದನು.

ಇದನ್ನು ನೋಡಿದ ಉಮರ್‌ರಿಗೆ ಕೋಪ ಬಂತು, ಅವರು ಝೈದ್‌ನನ್ನು ತೀವ್ರವಾ ತರಾಟೆಗೆ ತೆಗೆದುಕೊಂಡರು. ಹೆಚ್ಚು ಮಾತನಾಡಿದರೆ ಇಲ್ಲೇ ಮುಗಿಸುವೆನೆಂದು ಗದರಿಸಿದರು. ಆದರೆ ಪ್ರವಾದಿವರ್ಯರ(ಸ) ನಿಲುವು ತೀರಾ ವ್ಯತ್ಯಸ್ತವಾಗಿತ್ತು. ಅವರ ಉಮರ್‌ರನ್ನು(ರ) ಶಾಂತರಾಗಿರುವಂತೆ ಸಮಾಧಾನಿಸಿದರು. ಬಳಿಕ ಅವನಿ ನೀಡಬೇಕಾದ ಖರ್ಜೂರವನ್ನು ಅಳೆದು ಕೊಡುವಂತೆ ವಿನಂತಿಸಿದರು. ಅವರಿಗೆ ಕೊಡಲ ಇರುವುದಕ್ಕಿಂತ ಸ್ವಲ್ಪ ಹೆಚ್ಚೇ ಕೊಡು ವಂತೆಯೂ ಹೇಳಿದರು. ಉಮರ್‌ರು(ರ) ಅವ ಮಾತನ್ನು ಪಾಲಿಸಿ ಆತನೊಂದಿಗೆ ಗೌರವಯುತ ವಾಗಿ ವರ್ತಿಸಿದರು ಪ್ರವಾದಿವರ್ಯರ(ಸ) ಈ ಅಸಾಮಾನ್ಯ ಸಹನೆಯಿಂದ ಪ್ರಭಾವಿತನಾದ ಯಹೂ ಪುರೋಹಿತ ಝೈದ್ ಕೂಡಲೇ ಇಸ್ಲಾಮ್ ಸ್ವೀಕರಿಸಿ ಪ್ರವಾದಿವರ್ಯರ(ಸ ಅನುಯಾಯಿಯಾದರು.

❖ ❖ ❖

103. ಕಠಿಣ ದುಡಿಮೆಯ ಮಹತ್ವ

ಪ್ರವಾದಿವರ್ಯರು(ಸ) ತಮ್ಮ ಅನುಚರರೊಂದಿಗೆ ಮಸೀದಿಯಲ್ಲಿ ತಂಗಿದ್ದರು ಈ ಮಧ್ಯೆ ಓರ್ವರು ಅವಸರದಿಂದ ನಡೆದುಕೊಂಡು ಹೋಗುತ್ತಿರುವುದನ್ನು ಅವರು ಗಮನಿಸಿದರು. ಆಗ ಈ ಗುಂಪಿನಲ್ಲಿದ್ದವರಲ್ಲಿ ಓರ್ವರು, ''ಈ ವ್ಯಕ್ತಿ ಇಷ್ಟ ಅವಸರವಾಗಿ ದೇವಧರ್ಮದ ವಿಚಾರದಲ್ಲಿ ಹೋಗುತ್ತಿದ್ದರೆ ಅದೆಷ್ಟು ಚೆನ್ನಾಗಿತ್ತು' ಎಂದರು.

ಧರ್ಮದ ಕುರಿತು ಇರುವ ತಪ್ಪುಕಲ್ಪನೆಗಳೇ ಈ ಪ್ರಸ್ತಾಪಕ್ಕೆ ಕಾರಣವೆಂಬುದು ಪ್ರವಾದಿವರ್ಯರ(ಸ) ಅರಿವಿಗೆ ಬಂತು. ಆಗ ಅವರು ''ನೋಡಿ, ಆ ವ್ಯಕ್ತಿ ತನ್ನ ವೃದ್ಧ ಮಾತಾಪಿತರಿಗೆ ಆಹಾರವುಣಿಸಲು ದುಡಿಯಲು ಹೋಗುತ್ತಿದ್ದಾರೆಂದಾದರ ಅದು ಅಲ್ಲಾಹನ ಮಾರ್ಗದ ದುಡಿಮೆಯಾಗಿದೆ. ಇನ್ನು ತನ್ನ ಪತ್ನಿ ಮಕ್ಕಳ ಜೀವನ ನಿರ್ವಹಣೆಗಾಗಿ ಅವರು ಕಾರ್ಯ ಪ್ರವೃತ್ತರಾಗಿದ್ದಾರೆಂದಾದರೆ ಅದು ಕೂಡಾ ಅಲ್ಲಾಹನ ಮಾರ್ಗದ ಕಾರ್ಯವಾಗಿದೆ. ಇನ್ನು ತನ್ನ ಜೀವನ ನಿರ್ವಹಣೆಗಾಗಿ ದುಡಿಯಲು ಅವಸರದಿಂದ ಹೋದರೂ ಅದು ಕೂಡಾ ಧರ್ಮದ ಕಾರ್ಯವಾಗಿದೆ. ಇನ್ನು ತನ್ನ ಹಿರಿಮೆಯನ್ನು ಪ್ರದರ್ಶಿಸಲು ಅಹಂಕಾರದಿಂದ ಹೋಗುತ್ತಿರುವುದಾದರೆ ಅದು

ಶೈತಾನನ ಮಾರ್ಗದ ಕಾರ್ಯವಾಗಿದೆ.

ಮತ್ತೊಂದು ಸಂದರ್ಭದಲ್ಲಿ ಪ್ರವಾದಿವರ್ಯರು(ಸ) ತನ್ನ ಅನುಚರರೋರ್ವರಿಗೆ ಹಸ್ತದಾನ ಮಾಡಿದರು. ಅವರ ಕೈಗಳು ದೊರಗಾಗಿತ್ತು. ಪ್ರವಾದಿವರ್ಯರು(ಸ), ನಿಮ್ಮ ಕೈಗಳಿಗೆ ಏನಾಯಿತೆಂದು ಪ್ರಶ್ನಿಸಿದಾಗ, "ಇದು ದುಡಿಮೆಯಿಂದ ಸವೆದುದಾಗಿದೆ." ಎಂದುತ್ತರಿಸಿ ದರು. ಆಗ ಅವರ ಎರಡೂ ಕೈಗಳನ್ನು ಪ್ರವಾದಿವರ್ಯರು(ಸ) ಚುಂಬಿಸಿದರು. ಬಳಿಕ ಆ ಎರಡು ಕೈಗಳನ್ನು ಎತ್ತಿ ಹಿಡಿದು ಪತಾಕೆ ಹಾರಿಸುವಂತೆ ಅಲ್ಲಾಡಿಸುತ್ತಾ ಎಲ್ಲರಿಗೂ ಕೇಳಿಸುವಂತೆ ಈ ರೀತಿ ಹೇಳಿದರು, ಅಲ್ಲಾಹನಿಗೆ ಮತ್ತು ಅವನ ಪ್ರವಾದಿಗಳಿಗೆ ಅತ್ಯಂತ ಪ್ರಿಯವಾದ ಕೈಗಳನ್ನು ನೋಡಬೇಕೆಂದಿದ್ದರೆ ನೀವು ಈ ಎರಡು ಕೈಗಳನ್ನು ನೋಡಿರಿ. ಧರ್ಮವು ಯಾವತ್ತೂ ಮನುಷ್ಯನನ್ನು ಆಲಸ್ಯ, ಉದಾಸೀನತೆಯಿಂದ ಇರಲು ಬಯಸುವುದಿಲ್ಲ, ಅದು ನಿರಂತರ ಸಕ್ರಿಯತೆಯನ್ನು ಬಯಸುತ್ತದೆ, ಪ್ರೇರೇಪಿಸುತ್ತದೆ, ಮತ್ತು ಉಪದೇಶಿಸುತ್ತದೆ ಎಂಬುದನ್ನು ಪ್ರವಾದಿವರ್ಯರು(ಸ) ಸಾರಿದರು. ಕಷ್ಟಪಟ್ಟು ದುಡಿದು ಅದರ ಗುರುತುಗಳು ಕಾಣಿಸುವ ಕೈಗಳು ಅತ್ಯಂತ ಶ್ರೇಷ್ಠವಾದವುಗಳು ಎಂಬುದನ್ನು ಪ್ರವಾದಿವರ್ಯರು(ಸ) ನಿರೂಪಿಸಿದರು.

❖ ❖ ❖

104. ಮಹಿಳಾ ಸ್ವಾತಂತ್ರ್ಯ

ಪ್ರವಾದಿವರ್ಯರ(ಸ) ಆಗಮನಕ್ಕಿಂತ ಮುಂಚೆ ಅರೇಬಿಯಾದಲ್ಲಿ ಮಹಿಳೆಯರನ್ನು ಅತ್ಯಂತ ಹೀನಾಯವಾಗಿ ಕಾಣಲಾಗುತ್ತಿತ್ತು. ಪ್ರಮುಖ ಸಮಸ್ಯೆಗಳ ಕುರಿತು ಅವರೊಂದಿಗೆ ಸೇರಿ ಸಮಾಲೋಚನೆ ನಡೆಸುತ್ತಿರಲಿಲ್ಲ, ಅವರ ಸೂಚನೆಗಳನ್ನು ಪಾಲಿಸಿ ಅನುಸರಿಸಿದರೆ ಅಪಾಯವನ್ನು ಆಹ್ವಾನಿಸಿದಂತೆ ಎಂಬ ನಂಬಿಕೆ ಅಲ್ಲಿ ಬಲವಾಗಿತ್ತು.

ಇಸ್ಲಾಮ್ ಇದನ್ನು ಬದಲಾಯಿಸಿತು. ಅದು ಮಹಿಳೆಯರಿಗೆ ಉನ್ನತ ಸ್ಥಾನಮಾನವನ್ನು ನೀಡಿತು. ಕುಟುಂಬದ ಸ್ತ್ರೀಯರೊಂದಿಗೆ ಸಮಾಲೋಚನೆ ನಡೆಸುವ ಸಂಪ್ರದಾಯಕ್ಕೆ ನಾಂದಿ ಹಾಡಿತು. ಇದನ್ನು ಮೊದಲು ಪ್ರವಾದಿವರ್ಯರೇ(ಸ) ಸ್ವತಃ ಅನುಷ್ಠಾನಕ್ಕೆ ತಂದರು. ಆಗ ಈ ಸದ್ಗುಣ ಅಲ್ಲಿ ಬಹಳ ಅಪರೂಪವಾಗಿತ್ತು.

ಒಮ್ಮೆ ಉಮರುಲ್ ಫಾರೂಕ್‌ರ(ರ) ಪತ್ನಿ ಮಾತಿನ ಮಧ್ಯೆ "ನಿಮಗೆ ಈ ರೀತಿ ಮಾಡಬಾರದೇ?'' ಎಂದು ಕೇಳಿದಾಗ ಕೋಪಗೊಂಡ ಅವರು ''ಏನು

ಮಾಡಬೇಕೆಂಬುದು ನನಗೆ ತಿಳಿದಿದೆ. ಈ ವಿಷಯದಲ್ಲಿ ನೀನು ತಲೆ ಹಾಕಬೇಡ'' ಎಂದು ಹೇಳಿದರು.

ಇದರಿಂದ ನೊಂದ ಉಮರುಲ್ ಫಾರೂಕ್‌ರ(ರ) ಪತ್ನಿ ಈ ರೀತಿ ಹೇಳಿದರು, ''ಇಬ್ನುಲ್ ಖತ್ತಾಬ್ ನಿಮ್ಮ ವರ್ತನೆ ವಿಚಿತ್ರವಾಗಿದೆ. ತಮ್ಮನ್ನು ವಿಮರ್ಶಿಸಲು ತಾವು ನನಗೆ ಅನುಮತಿಸುವುದಿಲ್ಲ, ಆದರೆ ನಿಮ್ಮ ಮಗಳು ಹಫ್ಸಾ ಅವಳ ಪತಿ ಪ್ರವಾದಿವರ್ಯರನ್ನು(ಸ) ವಿಮರ್ಶಿಸುತ್ತಾಳೆ.''

ಇದನ್ನು ಕೇಳಿದ ಉಮರ್(ರ) ಕೂಡಲೇ ಹಫ್ಸಾರ ಮನೆಗೆ ತೆರಳಿ, ''ಮಗಳೇ ನೀನು ಪ್ರವಾದಿವರ್ಯರನ್ನು(ಸ) ಕೋಪ ಬರುವಷ್ಟು ವಿಮರ್ಶಿಸುತ್ತಿಯಾ'' ಎಂದು ಕೇಳಿದರು.

''ಹೌದು, ನಿಜವಾಗಿಯೂ ನಾವು ಅವರನ್ನು ವಿಮರ್ಶಿಸುತ್ತಿದ್ದೇವೆ'' ಎಂದು ಹಫ್ಸಾ ಉತ್ತರಿಸಿದರು.

''ಹಾಗಾದರೆ ಅಲ್ಲಾಹನ ಶಿಕ್ಷೆ ಹಾಗೂ ಪ್ರವಾದಿವರ್ಯರ(ಸ) ಕೋಪದ ಕುರಿತು ಭಯ ಪಡಿರಿ'' ಎಂದು ಮಗಳನ್ನು ಎಚ್ಚರಿಸಿದರು. ಬಳಿಕ ಪ್ರವಾದಿವರ್ಯರ(ಸ) ಪತ್ನಿ ಉಮ್ಮು ಸಲಮರ ಬಳಿಗೆ ತೆರಳಿ ಈ ಕುರಿತು ಕೇಳಿದರು. ಆಗ ಅವರು ''ಖತ್ತಾಬರ ಪುತ್ರರೇ ತಮ್ಮ ವಿಚಾರ ಅದ್ಭುತವಾಗಿದೆ. ಎಲ್ಲಾ ವಿಷಯಗಳಲ್ಲೂ ಭಾಗಿಯಾಗುವ ತಾವು ಈಗ ಪ್ರವಾದಿ(ಸ) ಮತ್ತವರ ಪತ್ನಿಯರ ವಿಷಯದಲ್ಲೂ ನೀವು ಭಾಗಿಯಾಗುತ್ತೀರಾ?'' ಎಂದು ಕೇಳಿದರು.

ಉಮರ್‌ರಿಗೆ ತನ್ನ ತಪ್ಪಿನ ಅರಿವಾಯ್ತು. ಕೂಡಲೇ ಅಲ್ಲಿಂದ ತೆರಳಿದರು.

❖ ❖ ❖

105. ಪ್ರವಾದಿವರ್ಯರನ್ನು(ಸ) ಪುಳಕಿತಗೊಳಿಸಿದ ಕವಿತೆ

ಪ್ರವಾದಿವರ್ಯರನ್ನು(ಸ) ವಿರೋಧಿಸುತ್ತಿದ್ದವರಲ್ಲಿ ಝುಹೈರ್‌ರ ಮಗ ಕಅಬ್ ಕೂಡಾ ಸೇರಿದ್ದನು. ಆತನ ನಾಲಗೆಯು ಖಡ್ಗಕ್ಕಿಂತಲೂ ಹರಿತವಾಗಿತ್ತು. ಆಶು ಕವಿಯಾಗಿದ್ದ ಆತ ತನ್ನ ಕವನಗಳನ್ನು ಹೆಚ್ಚಾಗಿ ಪ್ರವಾದಿವರ್ಯರನ್ನು(ಸ) ನಿಂದಿಸಲು ಅವಮಾನಿಸಲು ಬಳಸುತ್ತಿದ್ದ, ಆ ವ್ಯಕ್ತಿಯ ನಾಲಗೆಯಿಂದ ಹೊರಡುವ ಮಾತುಗಳು ವಿಷಪೂರಿತವಾಗಿದ್ದವು. ಪ್ರವಾದಿವರ್ಯರ(ಸ) ಸ್ವಾಭಿಮಾನಕ್ಕೆ ಧಕ್ಕೆಯುಂಟು ಮಾಡುವಂತಹದ್ದೂ ದ್ವೇಷಿಸುವವರನ್ನು ಪ್ರಚೋದಿಸುವಂತಹದ್ದೂ ಆಗಿತ್ತು.

ಆದ್ದರಿಂದ ಪ್ರವಾದಿವರ್ಯರು(ಸ) ಹಾಗೂ ಅವರ ಅನುಚರರು ಅವನನ್ನು ತೀವ್ರವಾಗಿ ವಿರೋಧಿಸುತ್ತಿದ್ದರು. ಯಾರಿಗೆ ಬೇಕಾದರೂ ಕ್ಷಮೆ ನೀಡಿದರೂ ಪರವಾಗಿಲ್ಲ, ಕಅಬ್‌ನಿಗೆ ಮಾತ್ರ ಕ್ಷಮೆ ನೀಡಬಾರದೆಂಬುದು ಅವರೆಲ್ಲರ ನಿಲುವಾಗಿತ್ತು. ಯಾಕೆಂದರೆ ಅವನು ಮಾಡಿದ ದ್ರೋಹವು ಅಷ್ಟೊಂದು ಕೀಳುಮಟ್ಟದಲ್ಲಿತ್ತು.

ಮಕ್ಕಾ ವಿಜಯದ ಸಂದರ್ಭದಲ್ಲಿ ಪ್ರವಾದಿವರ್ಯರು(ಸ) ತನ್ನ ಎಲ್ಲಾ ಎದುರಾಳಿಗಳಿಗೆ ಕ್ಷಮೆ ನೀಡಿದರು. ಅವರು ಮಾಡಿದ ಕಠಿಣ ದ್ರೋಹ, ಹಿಂಸೆ, ದೌರ್ಜನ್ಯಗಳನ್ನೆಲ್ಲಾ ಮರೆತು ಕ್ಷಮಿಸಬೇಕೆಂದು ತನ್ನ ಅನುಯಾಯಿಗಳಿಗೆ ಸೂಚಿಸಿದರು. ಆಗಲೂ ಕೂಡಾ ಕೆಲವರನ್ನು ಕ್ಷಮಿಸದೆ ಪ್ರತ್ಯೇಕ ನಿಲ್ಲಿಸಲಾಯಿತು. ಅವರು ಮರಣದಂಡನೆಗೆ ಅರ್ಹರೆಂದು ತೀರ್ಮಾನಿಸಲಾಯಿತು. ಅವರಲ್ಲಿ ಕಅಬ್ ಕೂಡಾ ಸೇರಿದ್ದ.

ಇನ್ನು ಬಚಾವಾಗಲು ಸಾಧ್ಯವಿಲ್ಲವೆಂದರಿತ ಕಅಬ್ ವೇಷ ಬದಲಿಸಿ ಮದೀನಕ್ಕೆ ತಲುಪಿದ. ತನ್ನನ್ನು ಯಾರೂ ಕೂಡಾ ಗುರುತು ಹಿಡಿಯದಂತೆ ತೀವ್ರ ಎಚ್ಚರಿಕೆ ವಹಿಸಿದ. ಪ್ರವಾದಿವರ್ಯರು(ಸ) ಇರುವ ಮಸೀದಿಗೆ ಹೋಗಿ ಪ್ರವಾದಿವರ್ಯರಿಗೆ(ಸ) ಸಲಾಮ್ ಹೇಳಿದ.

ಪ್ರವಾದಿವರ್ಯರ(ಸ) ಸುತ್ತಲೂ ಅನುಚರರು ಕುಳಿತಿದ್ದರೂ ಅವರಾರಿಗೂ ಕಅಬ್‌ನ ಗುರುತು ಹಿಡಿಯಲಾಗಲಿಲ್ಲ. ಪ್ರವಾದಿವರ್ಯರೊಂದಿಗೆ(ಸ) ಮಾತನಾಡುತ್ತಾ ಕಅಬ್ ಸಹಜ ಸ್ವಾಭಾವಿಕ ಎಂಬಂತೆ ''ಝುಹೈರ್‌ರ ಪುತ್ರ ಕಅಬ್ ಏನಾದರೂ ನಿಮ್ಮ ಬಳಿ ಬಂದು ಅಭಯ ಯಾಚಿಸಿದರೆ ನೀವು ಅವನಿಗೆ ಕ್ಷಮೆ ನೀಡುವಿರಾ?'' ಎಂದು ಕೇಳಿದನು.

''ಖಂಡಿತವಾಗಿಯೂ ನೀಡುತ್ತೇನೆ'' ಎಂದು ಪ್ರವಾದಿವರ್ಯರು(ಸ) ಉತ್ತರಿಸಿದರು.

''ಹಾಗಾದರೆ ಝುಹೈರ್‌ರ ಮಗ ಕಅಬ್ ನಾನಾಗಿದ್ದೇನೆ'' ಎಂದು ತನ್ನನ್ನು ಪರಿಚಯಿಸಿದ್ದರು. ಇದನ್ನು ಕಂಡ ಪ್ರವಾದಿವರ್ಯರ(ಸ) ಸಂಗಾತಿಗಳು ತಮ್ಮ ಕೋಪವನ್ನು ಅದುಮಿಡಲು ಸಾಹಸ ಪಟ್ಟರು. ಈ ವರೆಗೆ ನಮಗೆ ಚಳ್ಳೆಹಣ್ಣು ತಿನ್ನಿಸಿ ತಪ್ಪಿಸಿಕೊಂಡು ಅಡಗಿ ಕುಳಿತಿದ್ದ ಶತ್ರು ಅವರ ಕಣ್ಮುಂದೆಯೇ ನಿಂತಿದ್ದಾನೆ. ಅವರು ಆತನ ಕತೆ ಮುಗಿಸಲು ಸಿದ್ಧರಾದರು. ಆದರೆ ಪ್ರವಾದಿವರ್ಯರು(ಸ) ಅವರಿಗೆ ಅನುಮತಿ ನೀಡಲಿಲ್ಲ. ಅವರನ್ನು ಮನತುಂಬಿ ಕ್ಷಮಿಸಿದರು. ಇದು ಸ್ವತಃ ಕಅಬ್‌ರನ್ನೇ ವಿಸ್ಮಯಗೊಳಿಸಿತು. ಪ್ರವಾದಿವರ್ಯರ(ಸ) ಹೃದಯ ವೈಶಾಲ್ಯತೆ ಕಂಡು ಪ್ರಭಾವಿತರಾದ

ಅವರು ತಕ್ಷಣ ಅತ್ಯಾಕರ್ಷಕ ಕವನದ ಮುಖಾಂತರ ಕ್ಷಮಾಪಣೆಯನ್ನು ಕೇಳಿದನು. ತನ್ನ ಪ್ರಾಣಸಖಿ ''ಸುಆದ''ರ ವಿರಹ ವೇದನೆಯ ದುಃಖದಲ್ಲಿ ನಲುಗಿ ತನ್ನ ಪ್ರೇಮ ಸಂಗಮದ ಕನಸನ್ನು ಕಾಲ್ಪನಿಕವಾಗಿ ರಚಿಸುವ ಶೈಲಿಯಲ್ಲಿ ಬರೆದು ಕಅಬ್ ತನ್ನ ಕ್ಷಮಾಪಣಾ ಪತ್ರವನ್ನು ನೀಡಿದರು.

ಸುಆದಾ ನೀನು ನನ್ನಿಂದ ದೂರ ಇರುವೆ. ಆದರೂ ನನ್ನ ಹೃದಯದಲ್ಲಿ ನೆಲೆ ನಿಂತಿರುವೆ ಎಂದು ಪ್ರಾರಂಭಿಸುವ ಕವನ ಓದಿ ಮುಗಿಸುವಾಗ ಪ್ರವಾದಿವರ್ಯರು(ಸ) ತುಂಬಾ ಸಂತುಷ್ಟರಾದರು. ಪ್ರವಾದಿವರ್ಯರು(ಸ) ಉಡುಗೊರೆಯನ್ನು ನೀಡಿದರು. ಹೃದಯಂಗಮವಾಗಿ ಅವರನ್ನು ಗೌರವಿಸಿದರು. ಹದಿನಾಲ್ಕು ಶತಮಾನ ಕಳೆದರೂ ಇಂದಿಗೂ ಆ ಕವನ ವಿಶ್ವದ ಸತ್ಯವಿಶ್ವಾಸಿಗಳು ಕಅಬ್‌ರ ಆ ಕವನವನ್ನು ಗುನುಗುನಿಸುತ್ತಿದ್ದಾರೆ.

❖ ❖ ❖

106. ಸಂಪೂರ್ಣ ಸಮಾನತೆ

ಪ್ರವಾದಿವರ್ಯರ(ಸ) ಅತ್ಯಂತ ಆಪ್ತರಲ್ಲಿ ಅಬೂದರ್ರ್ ಗಿಫ್ಫಾರಿ ಕೂಡಾ ಸೇರಿದ್ದರು. ಪ್ರವಾದಿತ್ವದ ಪ್ರಾರಂಭ ಘಟ್ಟದಲ್ಲಿಯೇ ಅವರು ಇಸ್ಲಾಮ್ ಸ್ವೀಕರಿಸಿದ್ದರು. ಅವರ ಮುಖಾಂತರ 70ಕ್ಕಿಂತಲೂ ಹೆಚ್ಚು ಮಂದಿ ಇಸ್ಲಾಮ್ ಸ್ವೀಕರಿಸಿದ್ದರು.

ಇಥಿಯೋಪಿಯನ್ ಗುಲಾಮರಾದ ಬಿಲಾಲ್ ಬಿನ್ ರಬಾಹ ಕಡು ಕರಿಬಣ್ಣದವರಾಗಿದ್ದರು. ಅಬೂದರ್ರ್ ಗಿಫ್ಫಾರಿ ಹಾಗೂ ಬಿಲಾಲ್‌ರ ಮಧ್ಯೆ ವಿಸವುಂಟಾಗಿ ಮಾತಿಗೆ ಮಾತು ಬೆಳೆಯಿತು. ಈ ಮಧ್ಯೆ ಗಿಫ್ಫಾರಿಯವರು ಬಿಲಾಲ್‌ರನ್ನು 'ಕರಿಯನ ಮಗನೇ' ಎಂದು ಕರೆದರು. ಇದರಿಂದ ನೊಂದ ಬಿಲಾಲ್‌ರು ಪ್ರವಾದಿವರ್ಯರಿಗೆ(ಸ) ದೂರು ನೀಡಿದರು. ಪ್ರವಾದಿವರ್ಯರು(ಸ) ಈರ್ವರನ್ನೂ ಕರೆದು ಘಟನೆಯ ಕುರಿತು ವಿಚಾರಣೆ ನಡೆಸಿದರು. ಅಬೂದರ್ರ್ ಗಿಫ್ಫಾರಿಯವರು ತಪ್ಪು ಮಾಡಿದ್ದಾರೆಂಬುದು ಪ್ರವಾದಿವರ್ಯರಿಗೆ(ಸ) ತಿಳಿಯಿತು. ಅವರು ಅಬೂದರ್ರ್ ಗಿಫ್ಫಾರಿಯನ್ನು ಕರೆದು ತೀವ್ರವಾಗಿ ವಿಮರ್ಶಿಸುತ್ತಾ, ''ಅವರ ಚರ್ಮದ ಬಣ್ಣದ ಹೆಸರೆತ್ತಿ ನೀವು ಅವರನ್ನು ನಿಂದಿಸಿದ ನೀವು ಇನ್ನೂ ಅಜ್ಞಾನದಿಂದ ಹೊರಬಂದಿಲ್ಲ. ನಿಮ್ಮಿಂದ ಘೋರ ಅಪರಾಧ ಸಂಭವಿಸಿದೆ. ಆದ್ದರಿಂದ ನೀವು ಆ ಸಹೋದರನನ್ನು ಸಂತೃಪ್ತಿ ಪಡಿಸಿರಿ'' ಎಂದು ಹೇಳಿದರು.

ಇದರಿಂದ ಪಶ್ಚಾತ್ತಾಪ ಭಾವದಿಂದ ಕನಲಿದ ಅಬೂದರ್ರ್ ಗಿಫ್ಫಾರಿಯವರು ತನ್ನ

ತಲೆಯನ್ನು ನೆಲದ ಮೇಲಿಡುತ್ತಾ ಬಿಲಾಲ್‌ರೊಂದಿಗೆ ತನ್ನ ಮುಖಕ್ಕೆ ತುಳಿಯಲು ಹೇಳಿದರು. ಆದರೆ ಬಿಲಾಲ್ ಅವರನ್ನು ಎತ್ತಿಕೊಂಡು ತಬ್ಬಿ ಆಲಿಂಗಿಸಿದರು.

❖ ❖ ❖

107. ಅನ್ಸಾರಿಗಳ ಸಂತೃಪ್ತಿ

ಹುನೈನ್ ಯುದ್ಧದಲ್ಲಿ ದೊರೆತ ಸಮರಾರ್ಜಿತ ಸೊತ್ತನ್ನು ಪ್ರವಾದಿವರ್ಯರು(ಸ) ಆಗ ತಾನೇ ಇಸ್ಲಾಮ್ ಸ್ವೀಕರಿಸಿದ ನವ ಮುಸ್ಲಿಮರ ಮಧ್ಯೆ ಹಂಚಿದರು. ಇಸ್ಲಾಮಿನ ಗೆಲುವು ಹಾಗೂ ಮುಸ್ಲಿಮರ ಬದ್ಧತೆಯೇ ಅವರ ಉದ್ದೇಶವಾಗಿತ್ತು. ಅನ್ಸಾರಿಗಳಿಗೆ ಅದರಿಂದ ಏನೂ ಸಿಗಲಿಲ್ಲ. ಇದರಿಂದ ಅವರು ಅಸಂತೃಪ್ತರಾದರು. ಅವರು ಅದನ್ನು ಈ ರೀತಿ ಬಹಿರಂಗ ಪಡಿಸಿದರು, ''ಪ್ರವಾದಿವರ್ಯರನ್ನು(ಸ) ಅಲ್ಲಾಹನು ಕ್ಷಮಿಸಲಿ. ಅವರು ನಮ್ಮನ್ನು ಕಡೆಗಣಿಸಿ ಎಲ್ಲವನ್ನೂ ಕುರೈಶರಿಗೆ ನೀಡಿದರು. ಆದರೆ ಯುದ್ಧದ ಸಂದರ್ಭದಲ್ಲಿ ನಮ್ಮ ಶಸ್ತ್ರಾಸ್ತ್ರಗಳೂ ಸಕ್ರಿಯವಾಗಿದ್ದವು.''

ಅನ್ಸಾರಿಗಳು ಅಸಂತೃಪ್ತಿಗೊಂಡ ವಿಚಾರ ಪ್ರವಾದಿವರ್ಯರ(ಸ) ಕಿವಿಗೂ ತಲುಪಿತು. ಅವರೆಲ್ಲರನ್ನೂ ಅವರು ತಮ್ಮ ಬಳಿಗೆ ಕರೆದರು. ಎಲ್ಲರೂ ಸೇರಿದಾಗ ಅವರ ದೂರಿನ ಕುರಿತು ವಿಚಾರಿಸಿದರು. ಆಗ ಅವರು ''ಕೆಲ ಯುವಕರಲ್ಲಿ ಆ ರೀತಿಯ ಅಸಂತೃಪ್ತಿಯಿತ್ತು. ಆದರೆ ಹಿರಿಯ ನೇತಾರರಲ್ಲಿ ಯಾರಿಗೂ ಆ ಕುರಿತು ದೂರುಗಳಿರಲಿಲ್ಲ'' ಎಂದು ಹೇಳಿದರು.

ಸಂದರ್ಭಕ್ಕನುಸಾರವಾಗಿ ಪ್ರವಾದಿವರ್ಯರು(ಸ) ಕಿರು ಉಪನ್ಯಾಸವೊಂದನ್ನು ನೀಡಿದರು. ''ಅನ್ಸಾರ್‌ಗಳೇ ಸಮರಾರ್ಜಿತ ಸೊತ್ತಿನ ವಿತರಣೆಯ ಕುರಿತು ಅಸಂತೃಪ್ತರಾಗಿದ್ದೀರಿ ಎಂಬುದು ನನಗೆ ತಿಳಿದು ಬಂತು. ನೀವು ಅಧರ್ಮದಲ್ಲಿ ಮುಳುಗಿದ್ದಾಗ ನನ್ನ ಆಗಮನವಾಯಿತು. ಹಾಗೆಯೇ ಅಲ್ಲಾಹನು ನಿಮ್ಮನ್ನು ನನ್ನ ಮೂಲಕ ಸನ್ಮಾರ್ಗಕ್ಕೆ ಕರೆತಂದನು. ದಾರಿದ್ರ್ಯದಿಂದ ಇದ್ದ ನಿಮ್ಮನ್ನು ಆತ ಸಂಪನ್ನಗೊಳಿಸಿದ ಅಲ್ಲವೇ? ಪರಸ್ಪರ ಹಗೆ, ಧಗೆಯಿಂದ ಕಾಲ ಕಳೆಯುತ್ತಿದ್ದ ನಿಮ್ಮ ನಡುವೆ ನನ್ನ ಮೂಲಕ ಅಲ್ಲಾಹನು ಐಕ್ಯತೆ, ಮಮತೆ, ಸೌಹಾರ್ದತೆ, ಸಹೋದರತೆಯನ್ನು ಸ್ಥಾಪಿಸಲಿಲ್ಲವೇ ಎಂದು ಕೇಳಿದರು. ''ಖಂಡಿತವಾಗಿಯೂ ಅಲ್ಲಾಹನು ಮತ್ತು ಆತನ ಸಂದೇಶವಾಹಕರು ತೋರಿದ ಉದಾರತೆಗೆ ನಾವು ಎಂದೆಂದಿಗೂ ಕೃತಜ್ಞರು'' ಎಂದು ಒಕ್ಕೊರಳಿನಿಂದ ಅನ್ಸಾರಿಗಳು ಹೇಳಿದರು.

ಸ್ವಲ್ಪ ಸಮಯದ ಮೌನದ ಬಳಿಕ ಅವರೊಂದಿಗೆ ಪ್ರವಾದಿವರ್ಯರು(ಸ) ಈ

ರೀತಿ ಕೇಳಿದರು. ನೀವ್ಯಾಕೆ ಈ ರೀತಿ ನನ್ನಲ್ಲಿ ಕೇಳುವುದಿಲ್ಲ, ಮುಹಮ್ಮದ್! ನಿಮ್ಮನ್ನು ನಿಮ್ಮ ಜನತೆಯೇ ಹೊರದಬ್ಬಿದಾಗ ನೀವು ನಮ್ಮ ಬಳಿಗೆ ಬಂದಿರಿ. ನಾವು ನಿಮಗೆ ಅಭಯ ನೀಡಲಿಲ್ಲವೇ? ನಿಮ್ಮಲ್ಲಿ ವಿಶ್ವಾಸ ಇರಿಸಲಿಲ್ಲವೇ? ನಿಮಗ್ಯಾರೂ ಸಹಾಯಕರಿಲ್ಲದ ಸಂದರ್ಭ ಸರ್ವವನ್ನೂ ಸಮರ್ಪಿಸಿ ನಿಮಗೆ ನಾವು ನೆರವಾಗಲಿಲ್ಲವೇ. ನಿಮ್ಮನ್ನು ಮನೆಯಿಂದ ಹೊರ ಹಾಕಿದಾಗಲೂ ನಿಮಗೆ ವಾಸಕ್ಕೆ ನಾವು ಮನೆ ನೀಡಲಿಲ್ಲವೇ? ನಿಮಗೆ ರಕ್ಷಣೆ ಬೇಕಾದಾಗ ನಾವು ಭದ್ರತೆಯೊದಗಿಸಲಿಲ್ಲವೇ, ಬಳಿಕ ಮುಂದುವರಿಯುತ್ತಾ ಅವರ ಸಂಶಯಗಳನ್ನು ನಿವಾರಿಸುತ್ತಾ ''ಜನರು ಜಾನುವಾರುಗಳೊಂದಿಗೆ ಮರಳಿ ಹೋಗುವಾಗ ನಿಮಗೆ ಅಲ್ಲಾಹನ ಪ್ರವಾದಿಗಳೊಂದಿಗೆ(ಸ) ಮರಳಿ ಹೋಗುವುದು ಹಿತವಲ್ಲವೇ? ಖಂಡಿತವಾಗಿಯೂ ಅಲ್ಲಿರುವ ಎಲ್ಲರಿಗೂ ಸಿಕ್ಕಿರುವುದಕ್ಕಿಂತ ಉತ್ತಮವಾದುದು ನಿಮಗೆ ಲಭಿಸಿದೆ'' ಎಂದರು.

''ಅಲ್ಲಾಹನ ಪ್ರವಾದಿಗಳೇ ನಾವು ಈಗ ಸಂಪೂರ್ಣ ಸಂತೃಪ್ತರಾಗಿದ್ದೇವೆ'' ಎಂದು ಅನ್ಸಾರಿಗಳು ಒಕ್ಕೊರಳಿನಿಂದ ನುಡಿದರು.

❖ ❖ ❖

108. ಪ್ರವಾದಿವರ್ಯರ(ಸ) ಮಸೀದಿಯಲ್ಲಿ ಕ್ರೈಸ್ತರ ಪ್ರಾರ್ಥನೆ

ನಜ್ರಾನ್‌ನಿಂದ ಕ್ರೈಸ್ತರ ಒಂದು ತಂಡವು ಪ್ರವಾದಿವರ್ಯರ(ಸ) ಬಳಿಗೆ ಬಂತು. ಆಡಳಿತಗಾರನಾಗಿರುವ ಪ್ರವಾದಿವರ್ಯರೊಂದಿಗೆ(ಸ) ಪರಸ್ಪರ ರಾಜತಾಂತ್ರಿಕ ಸಂಬಂಧ ಗಳನ್ನಿರಿಸುವ ಉದ್ದೇಶದಿಂದ ಬಂದಿದ್ದರು. ಪ್ರವಾದಿವರ್ಯರು(ಸ) ಅವರನ್ನು ಸ್ವಾಗತಿಸಿ ಮಸೀದಿಗೆ ಕರೆದರು. ಅವರಿಗೆ ವಿಶ್ರಾಂತಿ ಪಡೆಯಲು ಮಸೀದಿಯಲ್ಲಿಯೇ ವ್ಯವಸ್ಥೆ ಕಲ್ಪಿಸಿದರು. ಅವರ ಪ್ರಾರ್ಥನಾ ಸಮಯವಾದಾಗ ಪ್ರಾರ್ಥನೆ ಸಲ್ಲಿಸಲು ಮಸೀದಿಯಲ್ಲಿಯೇ ಅವರಿಗೆ ವ್ಯವಸ್ಥೆಯನ್ನೂ ಕಲ್ಪಿಸಿದರು. ಅವರು ತಮ್ಮ ಧರ್ಮದ ಆಚಾರಗಳನ್ನು ಮಸೀದಿಯಲ್ಲಿಯೇ ನಿರ್ವಹಿಸಿದರು.

ಆ ಕ್ರೈಸ್ತ ಸಹೋದರರು ಪ್ರವಾದಿವರ್ಯರೊಂದಿಗೆ(ಸ) ಸುದೀರ್ಘ ಮಾತುಕತೆ ನಡೆಸಿದರು. ಜೊತೆಗೆ ಅವರಿಗೆ ಇಸ್ಲಾಮಿನ ಸಂದೇಶವನ್ನು ಹೇಳಿ ವಿವರಿಸಿದರು. ಅವರಿಗೆ ಸತ್ಯಧರ್ಮದ ವಾಸ್ತವಿಕತೆಯ ಕುರಿತು ಮನವರಿಕೆಯಾದರೂ ಅವರು ಧರ್ಮವನ್ನು

ಸ್ವೀಕರಿಸಲು ಒಪ್ಪಲಿಲ್ಲ, ಅವರ ಪ್ರಮುಖ ನೇತಾರ ಅಬೂ ಹಾರಿಸ್‌ರ ನಿಲುವು ಅದಕ್ಕೆ ಕಾರಣವಾಗಿತ್ತು. ಅವರು ಪ್ರಮುಖ ಪುರೋಹಿತರೂ ನೇತಾರರೂ ಚಾಣಾಕ್ಷರೂ ಆಗಿದ್ದರು. ಅವರಿಗೆ ಪ್ರವಾದಿವರ್ಯರು(ಸ) ಹೇಳಿದುದೆಲ್ಲವೂ ಸತ್ಯ ಎಂಬುದು ಮನವರಿಕೆಯಾಗಿತ್ತು. ಆದರೂ ಯಾಕೆ ತಾವು ಇಸ್ಲಾಮ್ ಸ್ವೀಕರಿಸುವುದಿಲ್ಲ ಎಂದು ಕೇಳಿದ್ದಕ್ಕೆ ಅವರ ಉತ್ತರ ಹೀಗಿತ್ತು. ''ಈ ಜನತೆ ನನಗೆ ಉನ್ನತ ಸ್ಥಾನಮಾನಗಳನ್ನು ನೀಡಿರುವುದೇ ನನಗೆ ಸಮಸ್ಯೆಯಾಗಿದೆ. ಅವರು ನನ್ನನ್ನು ನಾಯಕನಾಗಿ ಮಾಡಿ ಧಾರಾಳ ಸಂಪತ್ತು ನೀಡಿದರು. ಗೌರವಾನ್ವಿತ ಸ್ಥಾನವನ್ನೂ ನೀಡಿದರು. ನಾನು ಈಗ ಪ್ರವಾದಿವರ್ಯರ(ಸ) ಹಾದಿಯನ್ನು ಸ್ವೀಕರಿಸಿದರೆ ಅವರು ನನ್ನನ್ನು ತಿರಸ್ಕರಿಸುವರು, ನನಗೆ ನೀಡಿದ ಎಲ್ಲ ಸಂಪತ್ತುಗಳನ್ನು ಹಿಂಪಡೆಯುವರು. ನಾನು ಪ್ರವಾದಿವರ್ಯರನ್ನು(ಸ) ಸುಳ್ಳಾಗಿಸಲು ಬಾಧ್ಯಸ್ತನಾಗಿದ್ದೇನೆ.''

ಸತ್ಯವನ್ನು ಅರಿತೂ ಅದಕ್ಕೆ ಬೆನ್ನು ತಿರುಗಿಸಿದ ಅಬೂ ಹಾರಿಸ್ ಮತ್ತು ತಂಡದ ಜೊತೆ ಪ್ರವಾದಿವರ್ಯರು(ಸ) ಅನಿಷ್ಟದಿಂದ ವರ್ತಿಸಲಿಲ್ಲ, ಅವರೊಂದಿಗೆ ಉದಾರತೆಯಿಂದ ವರ್ತಿಸಿ ಗೌರವಯುತವಾಗಿ ಬೀಳ್ಕೊಟ್ಟರು.

❖ ❖ ❖

109. ಯೌವನ ನೀಡಿದ ಮಹತ್ವ

ಸೆಬಾಸ್ಟಿಯನ್ ಎಂಬವರು ಅರೇಬಿಯದ ಗಡಿಯಲ್ಲಿ ಸೇನೆಯನ್ನು ಸಜ್ಜುಗೊಳಿಸುತ್ತಿರುವ ವಿವರ ಪ್ರವಾದಿವರ್ಯರಿಗೆ(ಸ) ತಿಳಿಯಿತು. ಅದನ್ನು ತಡೆಗಟ್ಟಬೇಕೆಂದಾದರೆ ಸಿರಿಯಾದ ಗಡಿಭಾಗದಲ್ಲಿ ಸುರಕ್ಷಿತತೆ ಇರಬೇಕು. ಅದು ಸಾಧ್ಯವಾಗಬೇಕೆಂದಾದರೆ ಒಂದು ಪ್ರಬಲ ಸೇನೆಯನ್ನು ಸಜ್ಜುಗೊಳಿಸಬೇಕು. ಪ್ರವಾದಿವರ್ಯರು(ಸ) ತನ್ನ ಅನುಚರರನ್ನೆಲ್ಲಾ ಒಟ್ಟು ಸೇರಿಸಿದರು. ಸೇನೆಯನ್ನು ಸಜ್ಜುಗೊಳಿಸಲು ಆದೇಶಿಸಿದರು.

ಅಂತೆಯೇ ಸೇನೆಯು ಸಿದ್ಧಗೊಂಡಿತು. ಅವರು ಪ್ರಯಾಣಕ್ಕೆ ಸಜ್ಜುಗೊಂಡರು. ಅಬೂಬಕರ್, ಉಮರ್ ಮುಂತಾದ ದಿಗ್ಗಜರೂ ಮಹಾನ್ ವ್ಯಕ್ತಿಗಳೂ ಆ ಕೂಟದಲ್ಲಿದ್ದರು. ಆದರೂ ಈ ಸೇನೆಯ ನೇತೃತ್ವವನ್ನು 20ರ ಹರೆಯ ಪೂರ್ತಿಯಾಗದ ಓರ್ವ ಯುವಕನಿಗೆ ಪ್ರವಾದಿವರ್ಯರು(ಸ) ವಹಿಸಿಕೊಟ್ಟರು. ಅವರು ಝೈದ್ ಬಿನ್ ಹಾರಿಸರ ಪುತ್ರ ಉಸಾಮ ಆಗಿದ್ದರು. ಅವರ ತಂದೆ ಅದಕ್ಕಿಂತ ಮೊದಲು ನಡೆದ ಯುದ್ಧವೊಂದರಲ್ಲಿ ಹುತಾತ್ಮರಾಗಿದ್ದರು. ಹಿರಿಯ ಪ್ರಾಯದವರೂ ಮಹಾಪರಂಪರೆಯಿರುವವರೂ ಇರುವಾಗ ಈ ಎಳೆಯ ಯುವಕನಿಗೆ ಪ್ರವಾದಿವರ್ಯರು(ಸ)

ನೇತೃತ್ವ ವಹಿಸಿಕೊಟ್ಟಿರುವುದು ಎಲ್ಲರಲ್ಲೂ ಅಚ್ಚರಿಯುಂಟು ಮಾಡಿತು. ಅದು ಸ್ವಾಭಾವಿಕವಾಗಿದ್ದರೂ ಕೆಲವರಿಗೆ ಅಸಂತೃಪ್ತಿಯುಂಟು ಮಾಡಿತು. ಯಾರೂ ಬಹಿರಂಗ ಪಡಿಸಲಿಲ್ಲ, ವಿರೋಧವೂ ವ್ಯಕ್ತ ಪಡಿಸಲಿಲ್ಲ. ಆದರೆ ಪ್ರವಾದಿವರ್ಯರು(ಸ) ಈ ವಿಚಾರವನ್ನು ಅವರ ಮುಖಭಾವದಿಂದಲೇ ಗಮನಿಸಿದರು. ಅಂತಹ ಒಂದು ಪ್ರತಿಕ್ರಿಯೆಯ ನಿರೀಕ್ಷೆಯಲ್ಲಿ ಅವರಿದ್ದರು.

ಯೌವನಕ್ಕೆ ಹೆಚ್ಚಿನ ಮಹತ್ವ ನೀಡಬೇಕೆಂಬುದು ಪ್ರವಾದಿವರ್ಯರ(ಸ) ಇಂಗಿತವಾಗಿತ್ತು. ಅವರನ್ನು ಹೆಚ್ಚಾಗಿ ಪ್ರೋತ್ಸಾಹಿಸಬೇಕೆಂದೂ ಅವರು ಭಾವಿಸಿದ್ದರು. ಅದರಂತೆ ನನ್ನ ನಂತರ ಬರುವವರು ಯೌವನಕ್ಕೆ ಹೆಚ್ಚಿನ ಮಹತ್ವ ನೀಡಿ ಯುವಕರನ್ನು ಪ್ರೋತ್ಸಾಹಿಸಬೇಕೆಂದು ಆದೇಶಿಸಿದರು. ಸೇನೆ ಹೊರಡಲನುವಾದಂತೆ ಪ್ರವಾದಿವರ್ಯರು(ಸ) ರೋಗ ಪೀಡಿತರಾದರು. ಆದರೂ ತನ್ನ ಅನುಚರರ ಅನುಮಾನ ನಿವಾರಿಸಲು ಪ್ರಯತ್ನಿಸಿದರು.

ಮಸೀದಿಯಲ್ಲಿ ಎಲ್ಲರನ್ನೂ ಸೇರಿಸಿ ಅವರೊಂದಿಗೆ ''ಉಸಾಮರ ನೇತೃತ್ವವನ್ನು ಅಂಗೀಕರಿಸಿ ಸೇನೆಯ ಕರ್ತವ್ಯವನ್ನು ಪೂರ್ತೀಕರಿಸಿರಿ. ಅವರ ನೇತೃತ್ವದ ಕುರಿತು ಯಾರಿಗಾದರೂ ಅಸಂತೃಪ್ತಿಯಿದ್ದರೆ ಕೇಳಿರಿ. ಅವರ ತಂದೆ ನೇತೃತ್ವ ವಹಿಸಿದಾಗಲೂ ದೂರುಗಳಿದ್ದುವು. ಅವರು ತಂದೆಯಂತೆ ನೇತೃತ್ವ ವಹಿಸಲು ಸಮರ್ಥರಾಗಿದ್ದಾರೆ.

ಪ್ರವಾದಿವರ್ಯರ(ಸ) ರೋಗವು ಉಲ್ಬಣಿಸಿತು. ಬಳಿಕ ಇಹಲೋಕ ತ್ಯಜಿಸಿದರು. ಆ ಬಳಿಕ ಅಬೂಬಕರ್ ಸಿದ್ದೀಕ್‌ರು ಖಲೀಫರಾಗಿ ನಿಯೋಜಿತಗೊಂಡ ಬಳಿಕ ಸೇನೆ ಹಿಂದಿರುಗಿತ್ತು. ಪ್ರಥಮ ಖಲೀಫರು ಕೂಡಾ ಉಸಾಮರಿಗೇ ನೇತೃತ್ವ ನೀಡಿದರು. ಅವರು ಪ್ರವಾದಿವರ್ಯರ(ಸ) ಚರ್ಯೆ ಅನುಸರಿಸಲು ಬದ್ಧರಾಗಿದ್ದರು.

ತನ್ನ ಪ್ರಾಯ ಕ್ಕಿಂತ ಮೂರರಲ್ಲಿ ಒಂದಂಶದಷ್ಟು ಪ್ರಾಯವಾಗದ ಸೇನಾನಾಯಕ ಉಸಾಮ ವಾಹನದ ಮೇಲೆ ಸಂಚರಿಸುತ್ತಿರುವಾಗ ಆಡಳಿತಾಧಿಕಾರಿಯಾಗಿರುವ ಅಬೂಬಕರ್‌ರವರು ಕಾಲ್ನಡಿಗೆಯಲ್ಲಿ ಬಹುದೂರದ ವರೆಗೆ ಬಂದು ಅವರನ್ನು ಬೀಳ್ಕೊಟ್ಟರು. ಇತಿಹಾಸದಲ್ಲಿ ಎಲ್ಲಿಯೂ ಯೌವನಕ್ಕೆ ಈ ರೀತಿಯ ಮಹತ್ವ ನೀಡಿರುವುದು ಕಾಣಸಿಗದು. ಪ್ರವಾದಿ ವರ್ಯರ(ಸ) ಅಮೋಘವಾದ ನಡೆಯೇ ಇದಕ್ಕೆ ಪ್ರೇರಕವಾಗಿದೆ.

❖ ❖ ❖

110. ಪ್ರವಾದಿವರ್ಯರು(ಸ) ವಿದಾಯ ಹೇಳುತ್ತಿದ್ದಾರೆ!

ಹ. ಆಯಿಶಾರ(ರ) ಮಡಿಲಲ್ಲಿ ತಲೆಯಿಟ್ಟು ಪ್ರವಾದಿವರ್ಯರು(ಸ) ಪರಲೋಕ ಯಾತ್ರೆಗೈದರು. ಮಸೀದಿ ತುಂಬಾ ಸೇರಿದ್ದ ಸತ್ಯವಿಶ್ವಾಸಿಗಳು ಪ್ರವಾದಿವರ್ಯರ(ಸ) ನಿಧನದ ವಾರ್ತೆ ಕೇಳಿ ಬೆಚ್ಚಿದ್ದರು. ಆದರೆ ಅಲ್ಲಿಗೆ ಲಗುಬಗನೆ ಧಾವಿಸಿ ಬಂದ ಉಮರ್‌ರು(ರ) ಇದನ್ನು ನಂಬಲಿಲ್ಲ, ಪಾರ್ಥಿವ ಶರೀರವನ್ನು ಕಣ್ಣಾರೆ ಕಂಡರೂ ಅವರು ಸ್ಮೃತಿ ತಪ್ಪಿರಬಹುದೆಂಬ ವಿಶ್ವಾಸದಲ್ಲಿದ್ದರು. ಅವರ ನಿಧನದ ಕುರಿತು ಅವರಿಗೆ ಎಷ್ಟೇ ಮನವರಿಕೆ ಮಾಡಿದರೂ ಉಮರ್ ಮಾತ್ರ ಒಪ್ಪಲು ಸಿದ್ಧರಿರಲಿಲ್ಲ, ಬಳಿಕ ಉಮರ್‌ರವರು ಮುಗೀರರನ್ನು ಮಸೀದಿಗೆ ಕರೆ ತಂದರು. ಅಲ್ಲಿ ಜನರು ಸೇರಿ ಪ್ರವಾದಿವರ್ಯರ(ಸ) ನಿಧನದ ಕುರಿತು ಮಾತನಾಡುತ್ತಿದ್ದರು. ಅವರ ಮುಂದೆ ನಿಂತ ಉಮರ್ ಉಚ್ಚಸ್ವರದಲ್ಲಿ ''ಪ್ರವಾದಿವರ್ಯರು(ಸ) ಇಹಲೋಕ ತ್ಯಜಿಸಿದರೆಂದು ಕೆಲ ಕಪಟವಿಶ್ವಾಸಿಗಳು ವಾದಿಸುತ್ತಿದ್ದಾರೆ. ಅಲ್ಲಾಹನಾಣೆ! ಅವರು ಖಂಡಿತವಾಗಿಯೂ ನಿಧನರಾಗಿಲ್ಲ, ಇಮ್ರಾನರ ಪುತ್ರ ಮೂಸಾ ದೇವನ ಸನ್ನಿಧಿಗೆ ತೆರಳಿದಂತೆ ಅವರೂ ದೇವನ ಸನ್ನಿಧಿಗೆ ಹೋಗಿದ್ದಾರೆ. ಜನರು ಅವರು ನಿಧನರಾಗಿದ್ದಾರೆಂದು ಸುದ್ದಿ ಹಬ್ಬಿಸಲಿಲ್ಲವೇ! ಆದರೂ ಅವರು ಮರಳಿ ಬಂದಿಲ್ಲವೇ? ಅದೇ ರೀತಿ ಮೂಸಾರು ಬಂದಂತೆ ನಮ್ಮ ಪ್ರವಾದಿವರ್ಯರೂ ನಮ್ಮೆಡೆಗೆ ಮರಳಿ ಬರಲಿದ್ದಾರೆ. ಹಾಗೆಯೇ ಅವರು ಮರಳಿ ಬಂದರೆ ಅವರು ನಿಧನರಾದರೆಂದು ಪ್ರಚಾರ ಪಡಿಸಿದವರ ವಿರುದ್ಧ ಪ್ರತೀಕಾರ ಪಡೆದೇ ತೀರುವೆ'' ಎಂದು ಸಾರಿದರು. ಉಮರ್ ದುಃಖ ತಾಳಲಾರದೆ ತನ್ನ ನಿಯಂತ್ರಣವನ್ನೇ ಕಳಕೊಂಡಿದ್ದರು ಎಂಬುದನ್ನು ಅವರ ಮಾತುಗಳೇ ಸ್ಪಷ್ಟ ಪಡಿಸುತ್ತಿದ್ದವು.

ಮಸೀದಿಯಲ್ಲಿ ಸೇರಿದ ಸತ್ಯವಿಶ್ವಾಸಿಗಳೂ ಕೂಡಾ ಉಮರ್‌ರ ಮಾತುಗಳಲ್ಲಿ ವಿಶ್ವಾಸವಿಡಲು ಉತ್ಸುಕರಾಗಿದ್ದರು. ಈ ದಿನ ಬೆಳಿಗ್ಗೆ ನಮ್ಮೊಂದಿಗಿದ್ದ ಪ್ರವಾದಿವರ್ಯರು(ಸ) ನಿಧನರಾಗದಿರಲಿ. ಉಮರ್(ರ) ಹೇಳಿದ್ದು ಸತ್ಯವಾಗಲಿ ಎಂದು ಅವರು ಪ್ರಾಮಾಣಿಕವಾಗಿ ಬಯಸಿದರು. ತಮ್ಮ ಹೃದಯ ತೆರೆದು ಪ್ರಾರ್ಥಿಸಿದರು.

ಪ್ರವಾದಿವರ್ಯರ(ಸ) ನಿಧನದ ವಾರ್ತೆ ಅರಿತ ಅಬೂಬಕರ್ ಸಿದ್ದೀಕ್‌ರು(ರ) ಮಗಳು ಆಯಿಶಾರ ಮನೆಯತ್ತ ತಲುಪಿದರು. ಪ್ರವಾದಿವರ್ಯರ(ಸ) ಪಾರ್ಥಿವ ಶರೀರದ ಮುಖದ ಬಟ್ಟೆ ಸರಿಸಿ ಅವರ ಪಾವನ ಮುಖಾರವಿಂದವನ್ನು ಚುಂಬಿಸುತ್ತಾ

''ಜೀವನದಲ್ಲೂ, ಮರಣದಲ್ಲೂ ತಾವೆಷ್ಟು ಪರಿಶುದ್ಧರು'' ಎಂದು ಹೇಳಿದರು.

ಬಳಿಕ ಪ್ರವಾದಿವರ್ಯರ(ಸ) ಮುಖವನ್ನು ಸೂಕ್ಷ್ಮವಾಗಿ ನೋಡುತ್ತಾ ಅಲ್ಲಾಹನು ನಿರ್ಣಯಿಸಿದ ಮರಣದ ರುಚಿಯನ್ನು ತಾವು ಆಸ್ವಾದಿಸಿದಿರಿ. ಇನ್ನು ತಮಗೆ ಮರಣವೆಂಬುದಿಲ್ಲ.'' ಬಳಿಕ ಮೃತ ದೇಹದ ಮುಖವನ್ನು ಬಟ್ಟೆಯಿಂದ ಮುಚ್ಚಿ ಮಸೀದಿಯತ್ತ ತೆರಳಿದರು. ಆಗಲೂ ಉಮರುಲ್ ಫಾರೂಕ್ ಆಕ್ರೋಶ ಭರಿತರಾಗಿದ್ದರು. ಆದರೆ ಅಬೂಬಕರ್‌ರ ಆಗಮನದೊಂದಿಗೆ ಜನರ ಗಮನ ಅತ್ತ ಹರಿಯಿತು. ಯಾಕೆಂದರೆ ಪ್ರವಾದಿವರ್ಯರ(ಸ) ಕುರಿತು ಯಾರಿಗಾದರೂ ಏನಾದರೂ ಅಧಿಕೃತವಾಗಿ ಹೇಳುವ ಅರ್ಹತೆಯಿದ್ದರೆ, ಅದು ಅಬೂಬಕರ್‌ರಿಗೆ ಮಾತ್ರ ಎಂಬುದು ಅವರಿಗೆ ತಿಳಿದಿತ್ತು. ಪ್ರಸಕ್ತ ಸಂದರ್ಭದ ಕುರಿತು ಚೆನ್ನಾಗಿ ತಿಳಿದ ಅಬೂಬಕರ್‌ರವರು ಅಲ್ಲಾಹನನ್ನು ಸ್ತುತಿಸುತ್ತಾ ಸೇರಿದ ಜನರನ್ನುದ್ದೇಶಿಸಿ ''ತಿಳಿಯಿರಿ, ಯಾರಾದರೂ ಪ್ರವಾದಿವರ್ಯರನ್ನು(ಸ) ಆರಾಧಿಸುವಿರಿ ಎಂದಾದರೆ ಇದೋ ಪ್ರವಾದಿವರ್ಯರು(ಸ) ನಿಧನರಾಗಿದ್ದಾರೆ. ಇನ್ನು ಅಲ್ಲಾಹನನ್ನು ಆರಾಧಿಸುತ್ತೀರಿ ಎಂದಾದರೆ ಆತನು ಸಾವಿಲ್ಲದವನೂ ಎಂದೆಂದಿಗೂ ನೆಲೆನಿಲ್ಲುವವನೂ ಆಗಿರುವನು'' ಎಂದರು. ಬಳಿಕ ಈ ಕೆಳಗಿನ ಕುರ್‌ಆನ್ ಸೂಕ್ತಗಳನ್ನು ಪಠಿಸಿದರು.

''ಮುಹಮ್ಮದರು(ಸ) ಸಂದೇಶವಾಹಕರೇ ವಿನಾ ಇನ್ನೇನೂ ಆಗಿರುವುದಿಲ್ಲ, ಅವರಿಗಿಂತ ಮುಂಚೆ ಇತರ ಸಂದೇಶವಾಹಕರೂ ಗತಿಸಿ ಹೋಗಿದ್ದಾರೆ. ಹಾಗಿರುವಾಗ ಅವರು ಮರಣ ಹೊಂದಿದರೆ ಅಥವಾ ವಧಿಸಲ್ಪಟ್ಟರೆ ನೀವು ಮರಳಿ ಹೋಗುವಿರಾ? ನೆನಪಿಡಿರಿ. ಹಿಂದಕ್ಕೆ ಮರಳುವವನು ಅಲ್ಲಾಹನಿಗೇನೂ ನಷ್ಟವುಂಟು ಮಾಡಲಾರ. ಅಲ್ಲಾಹನ ಕೃತಜ್ಞ ದಾಸರಾಗಿರುವವರಿಗೆ ಅವನು ಅದರ ಪ್ರತಿಫಲ ನೀಡುವನು.'' (ಆಲ್ ಇಮ್ರಾನ್: 144)

ಉಮರ್‌ರ ಸಹಿತ ಅಲ್ಲಿದ್ದವರು ಈ ಪವಿತ್ರ ವಚನವನ್ನು ಮೊತ್ತ ಮೊದಲು ಕೇಳುತ್ತಿರುವಂತೆ ಕಂಡು ಬಂದರು.

ಪ್ರವಾದಿವರ್ಯರ(ಸ) ವಿಯೋಗದ ಸುದ್ದಿಯಿಂದ ಅವರ ಮನಸ್ಸು ಕೋಲಾಹಲ ಗೊಂಡಿತ್ತು. ಪವಿತ್ರ ವಚನ ಕೇಳುವುದರೊಂದಿಗೆ ನಮ್ಮ ಪ್ರಿಯ ಪ್ರವಾದಿವರ್ಯರು(ಸ) ಇಹಲೋಕ ತ್ಯಜಿಸಿದರು ಎಂಬ ಸತ್ಯವನ್ನು ಮನಗಂಡರು. ಅದರೊಂದಿಗೆ ಅಲ್ಲಿ ದುಃಖ ಸಾಗರವೇ ಹರಿಯಿತು. ಅದು ಹಣೆಯಲ್ಲಿ ಬೆವರ ಹನಿಯಾಗಿಯೂ ಕಣ್ಣೀರ ಧಾರೆಯಾಗಿಯೂ ಹರಿಯಿತು.

❖ ❖ ❖

111. ಪ್ರವಾದಿವರ್ಯರ(ಸ) ವಿದಾಯ ಭಾಷಣ

ಹಿಜರಿ ಶಕ 10ನೇ ವರ್ಷದಲ್ಲಿ ಪ್ರವಾದಿವರ್ಯರು(ಸ) ಹಜ್ಜ್ ಕರ್ಮ ನಿರ್ವಹಿಸಿದರು. ಆಗ ಒಂದು ಲಕ್ಷಕ್ಕಿಂತಲೂ ಅಧಿಕ ಅನುಯಾಯಿಗಳು ಅವರ ಜೊತೆಯಲ್ಲಿದ್ದರು. ಪ್ರವಾದಿವರ್ಯರ(ಸ) ಜೀವನದ ಮೊದಲ ಹಾಗೂ ಅಂತಿಮ ಹಜ್ಜ್ ಆದಾಗಿತ್ತು. ಅರಫಾ ಬೆಟ್ಟದ ತಪ್ಪಲಿನ 'ಉರ್‌ನಾ' ಎಂಬ ಕಣಿವೆಯಲ್ಲಿ ಪ್ರವಾದಿವರ್ಯರು(ಸ) ಸೇರಿದ ಜನಸಾಗರವನ್ನುದ್ದೇಶಿಸಿ ಭಾಷಣ ಮಾಡಲು ಆರಂಭಿಸಿದರು. 'ಕಸ್‌ವಾ' ಎಂಬ ತನ್ನ ಒಂಟೆಯ ಮೇಲೆ ಕುಳಿತು ಇತಿಹಾಸ ಪ್ರಸಿದ್ಧವಾದ ಭಾಷಣ ಮಾಡಿದರು. ಅದು ಜನರಿಗೆ ಕೇಳಿಸಲು ರಾಬಿಅ ಬಿನ್ ಉಮಯ್ಯ ಅತ್ಯುಚ್ಚ ಸ್ವರದಲ್ಲಿ ಅದನ್ನು ಪುನರುಚ್ಚರಿಸುತ್ತಿದ್ದರು. ''ವಿದಾಯ ಭಾಷಣ'ವೆಂದೇ ಈ ಅರಫಾದ ಭಾಷಣವು ಇತಿಹಾಸ ಪ್ರಸಿದ್ಧವಾಗಿದೆ.

ಈ ಭಾಷಣದಲ್ಲಿ ಅವರು ''ಜನರೇ ನನ್ನ ಮಾತುಗಳನ್ನು ಗಮನವಿಟ್ಟು ಆಲಿಸಿರಿ. ಈ ವರ್ಷದ ಬಳಿಕ ಮತ್ತೆ ನಾವು ಇಲ್ಲಿ ಪರಸ್ಪರ ಭೇಟಿಯಾಗುತ್ತೇವೆಯೋ ಇಲ್ಲವೋ ಎಂಬುದು ನನಗೆ ತಿಳಿಯದು. ಜನರೇ, ನಿಮ್ಮ ರಕ್ತ, ಸಂಪತ್ತು, ಅಂತಿಮ ದಿನದ ತನಕ ಪವಿತ್ರವಾಗಿರುವುದು. ಈ ತಿಂಗಳು ಹಾಗೂ ಈ ದಿನ ಪವಿತ್ರವಾದಂತೆ. ನೀವು ನಿಮ್ಮ ಪ್ರಭುವನ್ನು ಭೇಟಿಯಾಗಲಿರುವಿರಿ. ಆಗ ಅವನು ನಿಮ್ಮ ಕರ್ಮಗಳ ಕುರಿತು ವಿಚಾರಿಸುವನು. ಈ ಸಂದೇಶವನ್ನು ನಿಮಗೆ ತಲುಪಿಸಬೇಕೆಂಬ ನನ್ನ ಹೊಣೆಗಾರಿಕೆಯನ್ನು ನಾನು ಪೂರ್ತಿಗೊಳಿಸಿದ್ದೇನೆ. ಅಲ್ಲಾಹನೇ ನೀನು ಇದಕ್ಕೆ ಸಾಕ್ಷಿಯಾಗಿರುವೆ.''

ಆದ್ದರಿಂದ ಯಾರದೇ ವಶದಲ್ಲಿ ಯಾವುದೇ ಅಮಾನತ್(ವಿಶ್ವಸ್ಥನಿಧಿ) ಇದ್ದರೆ ಅದನ್ನು ಅವರ ಒಡೆಯನಿಗೆ ತಲುಪಿಸಲಿ. ಎಲ್ಲಾ ಬಡ್ಡಿ ವ್ಯವಹಾರಗಳನ್ನು ಇಂದಿನಿಂದ ಮನ್ನಾ ಮಾಡಲಾಗಿದೆ. ಆದರೆ ಮೂಲಬಂಡವಾಳದಲ್ಲಿ ನಿಮಗೆ ಹಕ್ಕಿದೆ. ಅದರಿಂದ ನಿಮಗೆ ನಷ್ಟವುಂಟಾಗದು. ಬಡ್ಡಿಯನ್ನು ಅಲ್ಲಾಹನು ನಿಷಿದ್ಧಗೊಳಿಸಿಯಾಗಿದೆ.

ಮೊತ್ತ ಮೊದಲಾಗಿ ನನ್ನ ಚಿಕ್ಕಪ್ಪ ಅಬ್ಬಾಸ್‌ರಿಗೆ ಸಿಗಲಿರುವ ಬಡ್ಡಿಯನ್ನು ಮನ್ನಾಗೊಳಿಸಿರುವುದಾಗಿ ಘೋಷಿಸುತ್ತೇನೆ. ಅಜ್ಞಾನ ಕಾಲದ ಎಲ್ಲಾ ಹಗೆ-ಧಗೆಯು ಇಂದಿಗೆ ಕೊನೆಗೊಂಡಿತು. ಅಜ್ಞಾನ ಕಾಲದ ಕುಲಗೋತ್ರದ ಮಹಿಮೆಗಳೂ ಪದವಿಗಳೂ ಇಂದಿನಿಂದ ಅವಸಾನಗೊಂಡಿತು.

''ಜನರೇ ನಿಮಗೆ ನಿಮ್ಮ ಪತ್ನಿಯರ ಮೇಲೆ ಕೆಲವು ಹಕ್ಕುಗಳಿವೆ. ನಿಮ್ಮ

ಪತ್ನಿಯರಿಗೆ ನಿಮ್ಮ ಮೇಲೂ ಕೆಲವು ಹಕ್ಕುಗಳಿವೆ- ನಿಮ್ಮ ದಾಂಪತ್ಯ ಸಂಬಂಧ ಪಾವಿತ್ರ್ಯತೆಯನ್ನು ಕಾಪಾಡಿರಿ. ನಿಮ್ಮ ಹೊರತು ಯಾರನ್ನೂ ನಿಮ್ಮ ಹಾಸಿಗೆ ಬರಗೊಡದಿರುವುದು ಹಾಗೂ ನೀವು ಮೆಚ್ಚದ ಯಾವ ವ್ಯಕ್ತಿಯನ್ನೂ ನಿಮ ಅನುಮತಿಯಿಲ್ಲದೆ ಮನೆಗೆ ಪ್ರವೇಶಿಸಲು ಅನುಮತಿಸದಿರುವುದು. ಯಾವುದೆ ಅಶ್ಲೀಲ ಕಾರ್ಯ ಎಸಗದಿರುವುದು ಅವರ ಮೇಲೆ ನಿಮ್ಮ ಹಕ್ಕಾಗಿದೆ. ನಿಮ ಮಹಿಳೆಯರೊಂದಿಗೆ ಕರುಣೆಯಿಂದ ವರ್ತಿಸಿರಿ. ಅವರು ನಿಮ್ಮ ಜೀವನದ ಭಾಗವಾ ನಿಮಗೆ ಅಧೀನವಾಗಿ ಇರುವವರಾಗಿದ್ದಾರೆ. ಅಲ್ಲಾಹನ ರಕ್ಷಣೆಯೊಂದಿಗೆ ನೀವು ಅವರನ್ನು ವಿವಾಹವಾಗಿರುವಿರಿ. ಓ ಜನರೇ! ಸತ್ಯವಿಶ್ವಾಸಿಗಳು ಪರಸ್ಪರ ಸಹೋದರರು ತನ್ನ ಸಹೋದರನು ಮನಸಂತೃಪ್ತಿಯಿಂದ ನೀಡಿದುದರ ಹೊರತು ಇನ್ನಾವುದೂ ಧರ್ಮಸಮ್ಮತವಲ್ಲ, ಆದ್ದರಿಂದ ಪರಸ್ಪರ ಹೊಡೆದಾಡಬೇಡಿರಿ. ಹಾಗೊಂದು ವೇಳ ನೀವು ವರ್ತಿಸಿದರೆ ಸತ್ಯನಿಷೇಧಿಗಳಲ್ಲಿ ಸೇರುವಿರಿ.

"ಓ ಜನರೇ, ನೀವು ನನ್ನ ಮಾತುಗಳನ್ನು ಗಮನವಿಟ್ಟು ಆಲಿಸಿರಿ. ಬಹಳ ಸುವ್ಯಕ್ತವಾದ ಎರಡು ವಿಷಯಗಳನ್ನು ನಾನು ಬಿಟ್ಟಗಲುತ್ತಿದ್ದೇನೆ. ಅವು ಅಲ್ಲಾಹನ ಗ್ರಂಥ ಹಾಗೂ ಆತನ ಪ್ರವಾದಿಯ ಚರ್ಯೆಯಾಗಿದೆ. ಹೇ ಜನರೇ ನಿಮ್ಮ ಪ್ರಭು ಏಕನು, ನೀವೆಲ್ಲರೂ ಒಂದೇ ತಂದೆಯ ಮಕ್ಕಳಾಗಿದ್ದೀರಿ. ನೀವೆಲ್ಲರೂ ಆದಮರ ಸಂತತಿಯಾಗಿದ್ದೀರಿ. ಆದಮರನ್ನು ಮಣ್ಣಿನಿಂದ ಸೃಷ್ಟಿಸಲಾಗಿದೆ. ಆದ್ದರಿಂದ ಅರಬನಿಗೆ ಅರಬೇತರನ ಮೇಲೂ ಅರಬೇತರನಿಗೆ ಅರಬನ ಮೇಲೂ ಯಾವುದೇ ಮೇಲ್ಮೆ ಇಲ್ಲ, ದೇವಭಕ್ತಿಯ ಹೊರತು."

ಅಲ್ಲಾಹನೇ ನಾನು ಈ ಸಂದೇಶವನ್ನು ಜನರಿಗೆ ತಲುಪಿಸಿದ್ದೇನೆ. ಓ ಅಲ್ಲಾಹ್ ಇದಕ್ಕೆ ನೀನೇ ಸಾಕ್ಷಿಯಾಗಿರು. ಈ ಸಂದೇಶವನ್ನು ಇಲ್ಲಿ ಹಾಜರಿದ್ದವರು ಹಾಜರಿಲ್ಲದವರಿಗೆ ತಲುಪಿಸಬೇಕು.

❖ ❖ ❖